ಯುಗದರಿವು

ಜಿ. ರಾಮಕೃಷ್ಣ

26-12-2004

ಜಿ. ರಾಮಕೃಷ್ಣ

ಸಂಸ್ಕೃತದಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಎಂ.ಎ. ಮತ್ತು ಪಿಎಚ್.ಡಿ. ಪದವಿಗಳನ್ನೂ, ಪುಣೆ ಹಾಗೂ ವೇಲ್ಸ್ ವಿಶ್ವವಿದ್ಯಾನಿಲಯಗಳಿಂದ ಇಂಗ್ಲಿಷ್‌ನಲ್ಲಿ ಎಂ.ಎ. ಪದವಿಗಳನ್ನೂ ಪಡೆದಿದ್ದಾರೆ. ಮಹಾಡಿನ ಡಾ|| ಅಂಬೇಡ್ಕರ್ ಕಾಲೇಜು ಮತ್ತು ಬೆಂಗಳೂರಿನ ಬಸವನಗುಡಿ ನ್ಯಾಷನಲ್ ಕಾಲೇಜುಗಳಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ ಸುಮಾರು ಮೂವತ್ತು ವರ್ಷ ಕೆಲಸ ಮಾಡಿದ್ದಾರೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಸಂದರ್ಶಕ ಪ್ರಾಧ್ಯಾಪಕರಾಗಿದ್ದುಕೊಂಡು "ಭಾರತೀಯ ವಿಜ್ಞಾನದ ಹಾದಿ" ಎಂಬ ಮೌಲಿಕ ಕೃತಿಯನ್ನು ರಚಿಸಿದ್ದಾರೆ. ಇವರ "ಮುನ್ನೋಟ" ಹಾಗೂ "ಆಯತನ" ಗ್ರಂಥಗಳಿಗೆ ಕರ್ನಾಟಕ ಸಾಹಿತ್ಯ ಅಕಾದೆಮಿಯ ಬಹುಮಾನ ಲಭ್ಯವಾಗಿದೆ. ಮಾರ್ಕ್ಸ್‌ವಾದಿ ಅಧ್ಯಯನಗಳಲ್ಲಿ ವಿಶೇಷ ಆಸಕ್ತಿ ಹೊಂದಿದ್ದಾರೆ. ಭಗತ್‌ಸಿಂಗ್, ಚೆ ಗೆವಾರಾ, ವೈಚಾರಿಕ ಜಾಗೃತಿ, ಯೋಗಪ್ರವೇಶ, ದೇವಿಪ್ರಸಾದ್ ಮತ್ತು ಲೋಕಾಯತ ದರ್ಶನ, **Phtosophy in China,** ಮುಂತಾದ ಹಲವು ಗ್ರಂಥಗಳಲ್ಲಿ ಪ್ರಕಟಗೊಂಡಿವೆ. ಅನೇಕ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವಿಚಾರಗೋಷ್ಠಿಗಳಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಪಾಂಡಿತ್ಯಪೂರ್ಣವಾದ ಪ್ರಬಂಧಗಳನ್ನು ಮಂಡಿಸಿದ್ದಾರೆ. ಇವರು **Studies in Indian Culture, Eneyclopardia of South Indian Culture** ಮತ್ತು **Towards a Redefintion of the Education Policy.** ಕಾಲೇಜು ಶಿಕ್ಷಕರಾಗಿ ಜಿ.ಆರ್. ಬೆಂಗಳೂರು ವಿಶ್ವವಿದ್ಯಾನಿಲಯದ ಸೆನೆಟ್ ಮತ್ತು ಅಕೆಡೆಮಿಕ್ ಕೌನ್ಸಿಲ್‌ಗಳಲ್ಲಿ ಹತ್ತು ವರ್ಷಗಳ ಕಾಲ ಶಿಕ್ಷಕರ ಚುನಾಯಿತ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸಿದ್ದಾರೆ.

ಯುಗದರಿವು

ಶ್ರೀಕುವೆಂಪು ನೂರು ನಮನ

ಯುಗದರಿವು

ಜಿ. ರಾಮಕೃಷ್ಣ

ಸಿವಿಜಿ ಪಬ್ಲಿಕೇಷನ್ಸ್
ಬೆಂಗಳೂರು

SRIKUVEMPU NOORU NAMANA

UGADARIU

Writer
Dr. G. Ramakrishna
2-F, 'Pavana Paramjyothi'
22/1, 4th Cross, Kaverinagara
Bangalore-560 085
Phone : 26793951

Publisher
CVG Publications
No. 70, 2nd Main Road,
Jabbar Block, Vyalikaval
Bangalore-560 003
Phone : 080-23313400

Pages :xvi+120=136 First Print : 2004
Price : Rs. **100/-**

D.T.P.
Chandragiri Graphics
Bangalore
Phone: 22712299

Printed
Shakthi Printers & Publishers,
No. 277, 5th Cross,
Vidhana Soudha Extn.,
Kavidhama Nagar, Laggere
Bangalore-560 058.
Phone: 080-22712264

ನಾಡಿನ ಪುಣ್ಯದ ಪೂರ್ವದಿಗಂತದಿ
ನವ ಅರುಣೋದಯ ಹೊಮ್ಮುತಿದೆ!
ಚಿರ ನೂತನ ಚೇತನದುತ್ಸಾಹದಿ
ನವೀನ ಜೀವನ ಚಿಮ್ಮುತಿದೆ!

ಕುವೆಂಪು

ಸಂಪಾದಕರು

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಅಗ್ರಹಾರ ಕೃಷ್ಣಮೂರ್ತಿ
ಡಾ. ಕೆ.ಸಿ. ಶಿವಾರೆಡ್ಡಿ
ರಾಮಲಿಂಗಪ್ಪ ಟಿ. ಬೇಗೂರು

ಸಂಚಾಲಕರು

ಸಿವಿಜಿ ಚಂದ್ರು

ಶ್ರೀಕುವೆಂಪು
ನೂರು ನಮನ

ಇಪ್ಪತ್ತನೆಯ ಶತಮಾನದ ಪ್ರಾರಂಭದ ದಶಕಗಳಿಂದಲೂ ಕನ್ನಡ ಶ್ರೀಸಾಮಾನ್ಯನನ್ನು ವಿಶ್ವಮಾನವ ಚೈತನ್ಯವನ್ನಾಗಿ ಪರಿವರ್ತಿಸುವ ಮಹಾಕಾಯಕದಲ್ಲಿ ತೊಡಗಿಕೊಂಡು ದೊಡ್ಡ ಕನಸು ಕಂಡವರು ಶ್ರೀಕುವೆಂಪು ಅವರು. ಅವರ ಅಂದಿನ ಆಂತರ್ಯದ ಅಭೀಪ್ಸೆ ಕೈಗೂಡದಿರಲಿಲ್ಲ. ಕನ್ನಡಿಗರು ಈ ಶತಮಾನವನ್ನು ಕುವೆಂಪು ಶತಮಾನವೆಂದೇ ಗುರುತಿಸತೊಡಗಿರುವುದು ಅದಕ್ಕೆ ಸಾಕ್ಷಿಯಾಗಿದೆ. ಅನೇಕ ಕ್ಷೇತ್ರಗಳಲ್ಲಿ ಜಾಗತಿಕ ಮಟ್ಟದಲ್ಲಿ ಕನ್ನಡದ ಚೈತನ್ಯ ತನ್ನ ಹೆಜ್ಜೆಗುರುತುಗಳನ್ನು ಮೂಡಿಸಿದೆಯೆಂಬ ಹೆಮ್ಮೆ ಶ್ರೀಕುವೆಂಪು ಅವರ ಚೇತನಕ್ಕೆ ಸಲ್ಲಬೇಕು. ಇಷ್ಟಾದರೂ ಇಂದು ಮಹಾಕವಿ ಶ್ರೀಕುವೆಂಪು ತಮ್ಮ ಎದೆಗೂಡಲ್ಲಿಟ್ಟು ಕಾಪಾಡಿದ ಕನ್ನಡಕ್ಕೆ ಅನೇಕ ಆತಂಕಗಳು ಎದುರಾಗಿರುವುದು ಸುಳ್ಳಲ್ಲ. ಕನ್ನಡ ಶ್ರೀಸಾಮಾನ್ಯನ ದಿನನಿತ್ಯದ ಬದುಕು ಗುಣಾತ್ಮಕವಾದ ಬದಲಾವಣೆಯನ್ನು ಕಾಣದೆ ದಿಕ್ಕೆಟ್ಟಿರುವ ಪರಿಸ್ಥಿತಿಗೆ ನಮ್ಮ ರಾಜಕಾರಣ, ಸಾಮಾಜಿಕ ವ್ಯವಸ್ಥೆ ಎಷ್ಟರಮಟ್ಟಿಗೆ ಕಾರಣವೊ ಅಷ್ಟರಮಟ್ಟಿಗೆ ಕವಿ, ಕಾದಂಬರಿಕಾರ, ಲೇಖಕರಾದ ನಾವೂ ಕಾರಣರೆಂಬುದನ್ನು ಮರೆಯಲಾಗದು. ಶ್ರೀಕುವೆಂಪು ಅವರ ಶತಮಾನೋತ್ಸವವನ್ನು ಆಚರಿಸುತ್ತಿರುವ ನಾವು ಈಗ ಹೊಸ ಸಂಕಲ್ಪವನ್ನು ಕೈಗೊಳ್ಳುವುದರ ಮೂಲಕ ಅವರು ಕಂಡಿದ್ದ ಕನಸುಗಳನ್ನು ಪೂರೈಸಬೇಕಾಗಿದೆ. ಮನಸ್ಸು ಮಾಡಿದರೆ ಅದಕ್ಕೆ ಸಿದ್ಧ ಎಂಬುದನ್ನು ಸಾಧಿಸಿ ತೋರಿಸಿರುವುದೇ ಇಲ್ಲಿ ನೂರು ಮಂದಿ ಲೇಖಕರು ಸೇರಿ ಶ್ರೀಕುವೆಂಪು ಅವರಿಗೆ ಅರ್ಪಿಸಿರುವ ಗ್ರಂಥ ಕುಸುಮಗಳು. ಎಳೆಯ ಬರಹಗಾರರಿಂದ ಮೊದಲ್ಗೊಂಡು ಹಿರಿಯ ಬರಹಗಾರರ ವರೆಗೆ ತಮ್ಮ ತಮ್ಮ ಸಾಹಿತ್ಯ ಪ್ರಕಾರಗಳಲ್ಲಿ ಪರಿಣತಿಯನ್ನು ಪಡೆದಿರುವ, ಪಡೆಯುತ್ತಿರುವ ಎಲ್ಲರೂ ಸಂತೋಷದಿಂದ ಈ ಕೆಲಸದಲ್ಲಿ ಒಂದಾಗಿದ್ದಾರೆ. ಇದೇ ಕಾಲಘಟ್ಟದ ಮತ್ತೊಬ್ಬ ಮಹಾಕವಿ ದಾರ್ಶನಿಕ ಶ್ರೀ ಬೇಂದ್ರೆಯವರ 'ನೂರು ಮರ ನೂರು ಸ್ವರ' ಎಂಬ ಮಾತು ಈ ಗ್ರಂಥಾರ್ಪಣದ ಸಂದರ್ಭದಲ್ಲಿ ನಮಗೆ ನೆನಪಾಗುತ್ತಿದೆ. ತೀರಾ ಎಳೆಯರನ್ನು ಬಿಟ್ಟರೆ ಉಳಿದೆಲ್ಲ ಲೇಖಕರು ಮಹಾಕವಿ ಕುವೆಂಪು ಅವರ

ಕಾಲಘಟ್ಟದಲ್ಲೇ ಈ ನಾಡಿನಲ್ಲಿ ಬದುಕುತ್ತ ಅವರು ಉಸಿರಾಡಿದ ಗಾಳಿಯನ್ನು ಇವರೂ ಉಸಿರಾಡಿದ್ದಾರೆ. ಅವರ ಚೈತನ್ಯದಾಯಕ ಉತ್ಸಾಹ, ಶಕ್ತಿ, ಸಂಕಲ್ಪಗುಣ ಎಲ್ಲವೂ ನಮ್ಮಲ್ಲಿ ವೃದ್ಧಿಸಿ ಕನ್ನಡಬದುಕನ್ನು ಶ್ರೀಮಂತಗೊಳಿಸುವ ಕೆಲಸದಲ್ಲಿ ತೊಡಗಿಕೊಳ್ಳುವುದಕ್ಕೆ ಪ್ರೇರಕವಾಗಲಿ ಎಂಬುದು ಈ ಸಾಹಸದ ಹಿಂದಿರುವ ಸದಾಶಯ.

ಕನ್ನಡ ಪ್ರಕಟಣಾ ಪ್ರಪಂಚದಲ್ಲಿ ಇದೊಂದು ಮಹಾ ಸಾಹಸ. ಸರ್ಕಾರಿ ಸಂಸ್ಥೆಗಳು, ಸರ್ಕಾರ ಇಂಥ ಸಾಹಸಗಳನ್ನು ಮಾಡಿವೆಯಾದರೂ, ಒಂದು ಖಾಸಗಿ ಪ್ರಕಟಣಾ ಸಂಸ್ಥೆ ಏಕಕಾಲಕ್ಕೆ ನೂರು ಲೇಖಕರ ನೂರು ಪುಸ್ತಕಗಳನ್ನು ಪ್ರಕಟಿಸಿ ಬಿಡುಗಡೆ ಮಾಡುತ್ತಿರುವುದನ್ನು ಮಹಾಸಾಹಸವೆನ್ನದೆ ಮತ್ತೇನೆನ್ನಬೇಕು? ಸಿವಿಜಿ ಪಬ್ಲಿಕೇಷನ್ಸ್ ಇಂಥ ಸಾಹಸವನ್ನು ಕನ್ನಡದ ಮೇರು ಲೇಖಕರಾದ ಶ್ರೀಕುವೆಂಪು ಅವರ ಜನ್ಮಶತಮಾನೋತ್ಸವದ ಸಂದರ್ಭದಲ್ಲಿ ಕೈಗೊಂಡಿದೆ. ಶ್ರೀಕುವೆಂಪು ಅವರಿಗೆ ಕನ್ನಡದ ನೂರು ಮಂದಿ ಲೇಖಕರು ತಮ್ಮ ಗ್ರಂಥಗಳ ಮೂಲಕ ಇಲ್ಲಿ ನಮನ ಸಲ್ಲಿಸಿದ್ದಾರೆ. ಸಿವಿಜಿ ಪಬ್ಲಿಕೇಷನ್ಸ್ ಇಂಥ ವಿಶಿಷ್ಟ ಪ್ರಯೋಗದ ಮೂಲಕ ಮೇರು ಕವಿಯೊಬ್ಬನಿಗೆ ತನ್ನ ಸಮುದಾಯ ಸಲ್ಲಿಸುತ್ತಿರುವ ಗೌರವ ಕಾರ್ಯಕ್ಕೆ ಕೈಜೋಡಿಸುವ ಮೂಲಕ ತಮ್ಮ ಪ್ರಕಾಶನ ಸಂಸ್ಥೆಯ ಅಸ್ತಿತ್ವವನ್ನು ಕನ್ನಡ ಸಾಂಸ್ಕೃತಿಕ ಸಂದರ್ಭದಲ್ಲಿ ಅರ್ಥಪೂರ್ಣಗೊಳಿಸಿಕೊಳ್ಳುತ್ತಿದೆ. ಪ್ರಕಾಶಕ ಮಿತ್ರರಾದ ಶ್ರೀ ಸಿವಿಜಿ ಚಂದ್ರು, ಅವರ ಮಡದಿ ಶ್ರೀಮತಿ ಗಿರಿಜಾ ಚಂದ್ರು ಅವರಿಗೆ ನಾವು ವಿಶೇಷ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

ಡಾ. ಜಿ. ರಾಮಕೃಷ್ಣ ಅವರು ನಮ್ಮ ನಡುವಿನ ಹಿರಿಯ ಚಿಂತಕರು. ಅವರು ಸಾಹಿತ್ಯ, ಸಂಸ್ಕೃತಿ, ರಾಜಕಾರಣದ ಹಲವು ನೆಲೆಗಳನ್ನು ಕುರಿತು ಕಳೆದ ನಾಲ್ಕು ದಶಕಗಳಿಗೂ ಮೀರಿ ಚಿಂತಿಸುತ್ತಿದ್ದಾರೆ. ಸಾತ್ವಿಕ ಪ್ರತಿಭಟನೆ ಮತ್ತು ಪ್ರಬುದ್ಧ ವೈಚಾರಿಕತೆಯು ಅವರ ಬರೆಹಗಳ ಮೂಲನಾಡಿಯಾಗಿರುವುದು ಸಂಸ್ಕೃತಿಯ ಸೌಭಾಗ್ಯವೇ ಸರಿ. 'ಕುವೆಂಪು ನೂರರ ನಮನ' ಮಾಲಿಕೆಕ್ಕಾಗಿ ಅಂದು ಅರ್ಥಪೂರ್ಣ ಕಟ್ಟೊಂದನ್ನು ನೀಡಿದ್ದಾರೆ. ಇಲ್ಲಿಯ ಬರೆಹಗಳು ಧರ್ಮ, ಮತಧರ್ಮ ರಾಜಕೀಯ ಅಪರಾಧೀಕರಣಗಳ ಬಗೆಗೆ ಆಳವಾದ ಚಿಂತನಾತ್ಮಕ ಬರೆಹಗಳನ್ನು ಒಳಗೊಂಡಿವೆ. ಇವು ಕೇವಲ ಬರೆಹಗಳಲ್ಲ. ಈ ಬರೆಹಗಳ ಹಿಂದೆ ಆಳವಾದ ತಾತ್ವಿಕತೆ ನೆಲೆಯೂರಿದೆ. ಚಲನಶೀಲ ನೆಲೆಯೇ ಇಲ್ಲಿಯ ಪ್ರಧಾನ ಆಶಯವಾಗಿದೆ. ಇಂಥ ವೈಚಾರಿಕ ಕೃತಿಯೊಂದನ್ನು ನೀಡಿದ ಹಿರಿಯ ಚಿಂತಕರಾದ ಡಾ. ಜಿ. ರಾಮಕೃಷ್ಣ ಅವರಿಗೆ ನಮ್ಮ ನಮಸ್ಕಾರಗಳು ಸಲ್ಲುತ್ತವೆ.

ಸಂಪಾದಕರು

ಅರ್ಪಣೆ

ಪ್ರಜ್ಞಾಪೂರ್ವಕವಾಗಿ ಸಾಮುದಾಯಿಕ ಮಧ್ಯಪ್ರವೇಶ
ಮಾಡುತ್ತಾ ಗುಣಾತ್ಮಕ ಬದಲಾವಣೆಗಾಗಿ
ಹೋರಾಟ ನಡೆಸುವ ಎಲ್ಲ ವೈಜ್ಞಾನಿಕ
ಸಮಾಜವಾದಿಗಳಿಗೆ.

ಓದುಗರೊಂದಿಗೆ

ಈ ಸಂಕಲನದಲ್ಲಿರುವ ಲೇಖನಗಳು ಈಗಾಗಲೇ ಅಲ್ಲಲ್ಲಿ ಪ್ರಕಟವಾಗಿವೆ. ಒಂದೆರಡು ಅಪ್ರಕಟಿತ ಲೇಖನಗಳೂ ಸೇರಿವೆ. ನನ್ನ ಮುನ್ನೋಟ ಮತ್ತು ಆಯತನ ಸಹ ಇಂತಹ ಸಂಕಲನಗಳೇ ಆಗಿದ್ದವು. ವಿವಿಧೆಡೆ ಪ್ರಕಟವಾಗಿದ್ದ ಲೇಖನಗಳನ್ನು ಒಂದೆಡೆ ಕೂಡಿಸಿ ಪುಸ್ತಕವೊಂದನ್ನು ಹೊರತರಲು ಅವಕಾಶ ಕಲ್ಪಿಸಿಕೊಟ್ಟ ಸಿವಿಜಿ ಪಬ್ಲಿಕೇಷನ್ಸ್‌ನವರಿಗೆ ನಾನು ಕೃತಜ್ಞ. ಇದನ್ನು ಸಿದ್ಧಗೊಳಿಸಬೇಕೆಂದು ಸೂಚಿಸಿ, ನಂತರ ಹಲವು ರೀತಿಗಳಲ್ಲಿ ಸಹಕರಿಸಿರುವ ನನ್ನ ಆತ್ಮೀಯರಾದ ಶ್ರೀ. ರಾಮಲಿಂಗಪ್ಪ ಟಿ. ಬೇಗೂರು ಅವರಿಗೆ ನನ್ನ ವಂದನೆಗಳು ಸಲ್ಲುತ್ತವೆ. ಓದುಗರಿಗೆ ಹಾಗೂ ಸಾಮಾಜಿಕ ಕಾರ್ಯಕರ್ತರಿಗೆ ಈ ಸಂಕಲನವು ಯಾವುದೇ ರೀತಿಯಲ್ಲಾದರೂ ಉಪಯುಕ್ತವೆಂದೆನಿಸಿದರೆ ಪ್ರಕಾಶಕರು ಧನ್ಯರಾಗುತ್ತಾರೆಂದು ನನ್ನ ಭಾವನೆ. ಇದನ್ನು 'ಕುವೆಂಪು ನೂರರ ನಮನ' ಮಾಲೆಯಲ್ಲಿ ಸೇರಿಸಿಕೊಂಡಿರುವುದಕ್ಕೆ ಸಂಪಾದಕರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಅಗ್ರಹಾರ ಕೃಷ್ಣಮೂರ್ತಿ, ಡಾ. ಕೆ.ಸಿ. ಶಿವಾರೆಡ್ಡಿ, ಶ್ರೀ ರಾಮಲಿಂಗಪ್ಪ ಟಿ. ಬೇಗೂರು ಅವರಿಗೆ ಮತ್ತೊಮ್ಮೆ ನನ್ನ ನಮನ ಸಲ್ಲಿಸುತ್ತೇನೆ. ಹಿರಿಯ ಚಿಂತಕರಾಗಿ ಅನೇಕ ವಿಧಗಳಲ್ಲಿ ನನ್ನ ಆಸಕ್ತಿಯನ್ನು ವಿಸ್ತರಿಸಿಕೊಳ್ಳಲು ಪ್ರೇರಕರಾಗಿದ್ದ ಶ್ರೀ ಸಿ.ಬಿ. ಮೋಟಯ್ಯ ಅವರನ್ನು ಈ ಸಂದರ್ಭದಲ್ಲಿ ಗೌರವದಿಂದ ನೆನೆಯುತ್ತೇನೆ.

ಜಿ. ರಾಮಕೃಷ್ಣ

ಬೆಂಗಳೂರು
ನವೆಂಬರ್ ೧, ೨೦೦೪

ಪರಿವಿಡಿ

೧. ಪ್ರಜಾಪ್ರಭುತ್ವ ಮತ್ತು ರಾಜಕೀಯ ಅಪರಾಧೀಕರಣ

ನ್ಯಾಯಾಲಯಗಳ ಮಧ್ಯಪ್ರವೇಶದಿಂದ ಈಚಿನ ದಿನಗಳಲ್ಲಿ ರಾಜಕೀಯ ಅಪರಾಧೀಕರಣದ ಬಗ್ಗೆ ಬೇಕಾದಷ್ಟು ಚರ್ಚೆಗಳು ನಡೆಯುತ್ತಾ ಬಂದಿವೆ. ಶಾಸಕರಾಗಿ ಆಯ್ಕೆಯಾಗುವವರಿಗೆ ಕನಿಷ್ಠ ವಿದ್ಯಾರ್ಹತೆ ಏನಿರಬೇಕೆಂಬುದು ಕೂಡ ವಿವಾದಗಳಿಗೆ ಎಡೆಮಾಡಿಕೊಟ್ಟಿದೆ. ವಿದ್ಯೆ ಪಡೆಯಲು ಎಲ್ಲರಿಗೂ ಸಮಾನ ಅವಕಾಶಗಳು ಇಲ್ಲದಿರುವಾಗ ಜನರ ಪ್ರತಿನಿಧಿಯಾಗಲು ವಿದ್ಯಾರ್ಹತೆಯನ್ನು ನಿಗದಿಗೊಳಿಸಿದರೆ ವಂಚಿತ ಜನ ಹಾಗೇ ಉಳಿಯಬೇಕೆಂದು ವಿಧಿಸಿದಂತಾಗುತ್ತದೆ. ಒಂದು ಪದವಿ ಪಡೆದುಬಿಟ್ಟರೆ ಒಬ್ಬ ವ್ಯಕ್ತಿ ಅದನ್ನು ಪಡೆಯದಿದ್ದವರಿಗಿಂತಲೂ ಭಿನ್ನ ಎಂಬುದು ನಿಜ; ಆದರೆ ಅದರಿಂದಾಗಿ ಆ ವ್ಯಕ್ತಿ ಬೇರೆಯವರಿಗಿಂತಲೂ ಉತ್ತಮನೆಂದಾಗಲಿ, ಜನರ ಪ್ರತಿನಿಧಿಯಾಗಲು ಹೆಚ್ಚಿನ ಅರ್ಹತೆ ಗಳಿಸಿರುವವನೆಂದು ಗುರುತಿಸುವುದಾಗಲಿ ಸಾಧ್ಯವಿಲ್ಲದ ಮಾತು. ಕಳೆದ ಒಂದು ಶತಮಾನದಲ್ಲಿ ಇದಕ್ಕೆ ಹಲವು ನಿದರ್ಶನಗಳು ಸಿಗುತ್ತವೆ. ವಿದ್ಯಾವಂತರೇ ನಮ್ಮ ಆಡಳಿತದ ಚುಕ್ಕಾಣಿ ಹಿಡಿದಿರುವುದು; ಆದರೆ ಆಡಳಿತವು ಎಷ್ಟು ನಿರಾಶಾದಾಯಕವಾಗಿದೆ, ಎಷ್ಟು ಭ್ರಷ್ಟತೆಯಿಂದ ತುಂಬಿದೆ ಎಂಬುದು ಎಲ್ಲರಿಗೂ ತಿಳಿದ ವಿಷಯ. ಸ್ವಾತಂತ್ರ್ಯ ಹೋರಾಟದಲ್ಲಿ ಮತ್ತು ಜನಪರ ಚಳುವಳಿಯಲ್ಲಿ ಅಸಂಖ್ಯ ಅನಕ್ಷರಸ್ಥರು ಭಾಗವಹಿಸಿದ್ದಾರೆ ಮತ್ತು ಮಹತ್ವದ ಕೊಡುಗೆ ನೀಡಿದ್ದಾರೆ. ಅನಕ್ಷರಸ್ಥರೆಲ್ಲರೂ ಅವಿದ್ಯಾವಂತರಲ್ಲ ಎಂಬುದನ್ನು ಗ್ರಹಿಸಿದರೆ ಸಾಕು. ಅಕ್ಷರಸ್ಥರಾಗುವುದು ಸ್ವಾಗತಾರ್ಹ; ಆದರೆ ಅದರ ಅವಕಾಶವಿಲ್ಲದೆ ಉಳಿದಿರುವವರು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನೇರವಾಗಿ ಪಾಲುದಾರರಾಗಕೂಡದೆಂಬ ನಿಯಮವೇನಾದರೂ ಬಂದರೆ ಅದು ಗಾಯದ ಮೇಲೆ ಬರೆ ಎಳೆದಂತಾಗುತ್ತದೆ. ಶ್ರೀಮಂತರೇ ಆಳ್ವಿಕೆ ನಡೆಸಬೇಕೆಂಬ ಪದ್ಧತಿಯಿಂದ ಪದವೀಧರರೇ ನಡೆಸಬೇಕೆಂಬ ನಿಯಮಕ್ಕೆ ಜಾರಿಕೊಂಡರೆ ಪ್ರಜಾಪ್ರಭುತ್ವವು ಹೆಚ್ಚು ಹಸನಾಗುವುದಿಲ್ಲ, ಅದರ ಸೀಮಾರೇಖೆ ಇನ್ನೂ ಕುಬ್ಜವಾಗುತ್ತದೆ.

ಚರ್ಚೆಗೆ ಸಾಮಗ್ರಿ ಒದಗಿಸಿರುವ ಇನ್ನೊಂದು ನಿಯಮ ಅಪರಾಧಗಳಿಗೆ ಸಂಬಂಧಿಸಿದ್ದು. ಅಪರಾಧಗಳನ್ನು ಮಾಡಿರುವವರು ಮತ್ತು ಮಾಡುವ ಸಾಧ್ಯತೆ ಇರುವವರು ಜನರ ಪ್ರತಿನಿಧಿಗಳಾಗಿ ಶಾಸನ ಸಭೆಗಳಲ್ಲಾಗಲೀ ಲೋಕಸಭೆಯಲ್ಲಾಗಲೀ ಇರಕೂಡದು ಎಂಬುದು ಇದರ ಸಾರಂಶ.

ಅದನ್ನು ಪ್ರತಿಪಾದಿಸುವಾಗ ಚುನಾವಣಾ ಆಯೋಗದ ಆಶಯ, ನ್ಯಾಯಾಲಯದ ತೀರ್ಮಾನ ಹಾಗೂ ನಿರ್ದೇಶನ, ಕೇಂದ್ರ ಸರ್ಕಾರವು ಈ ನಿರ್ದೇಶನವನ್ನು ನಿಸ್ಸಾರಗೊಳಿಸುವಂತಹ ತುರ್ತು ಸುಗ್ರೀವಾಜ್ಞೆಯನ್ನು ಹೊರಡಿಸುವುದು, ಮುಂತಾದುವನ್ನೆಲ್ಲಾ ಚರ್ಚೆಗೆ ಒಡ್ಡಲಾಗುತ್ತಿದೆ. ಮತದಾರನು ಅಭ್ಯರ್ಥಿಗಳ ಪೂರ್ವಾಪರಗಳನ್ನು ಕುರಿತಂತೆ ಸಂಪೂರ್ಣ ಮಾಹಿತಿ ಪಡೆಯುವ ಹಕ್ಕನ್ನು ಹೊಂದಿದ್ದಾನಾದ್ದರಿಂದ ಎಲ್ಲ ಅಭ್ಯರ್ಥಿಗಳೂ ಅವರವರ ಪೂರ್ವೇತಿಹಾಸವನ್ನು ಸಂಪೂರ್ಣವಾಗಿ ಒದಗಿಸಬೇಕೆಂದು ಹೇಳಲಾಗುತ್ತಿದೆ. ಅಂದರೆ, ಅವನು ಅಥವಾ ಅವಳು ಯಾವುದಾದರೂ ಅಪರಾಧವೆಸಗಿದ್ದರೆ, ಮೊಕದ್ದಮೆಯಲ್ಲಿ ಅವರಿಗೆ ಶಿಕ್ಷೆ ವಿಧಿಸಲಾಗಿದ್ದಿತೆ, ಅವರು ಎಷ್ಟು ಆಸ್ತಿಯನ್ನು ಯಾವಯಾವ ರೂಪದಲ್ಲಿ ಹೊಂದಿದ್ದಾರೆ, ಮುಂತಾದ ವಿಷಯಗಳು ಇದರಲ್ಲಿ ಅಡಕಗೊಂಡಿವೆ. ನ್ಯಾಯಾಲಯದ ನಿರ್ದೇಶನವನ್ನು ಅಪ್ರಸ್ತುತಗೊಳಿಸುವಂತಹ ವಿಧೇಯಕಗಳನ್ನು ಸರ್ಕಾರವು ತನ್ನ ಸುಗ್ರೀವಾಜ್ಞೆಯಲ್ಲಿ ಸೇರಿಸಿದೆಯೆಂದೂ, ಅದಕ್ಕೆ ಎಲ್ಲ ರಾಜಕೀಯ ಪಕ್ಷಗಳೂ ಶಾಮೀಲಾಗಿದ್ದುವೆಂದೂ ಆಪಾದನೆ ಕೇಳಿಬಂದಿದೆ. ಎಲ್ಲ ರಾಜಕಾರಣಿಗಳೂ ಪಕ್ಷ ಭೇದವನ್ನು ಮರೆತು ಈ ಒಂದು ವಿಷಯದಲ್ಲಿ ವಿಶೇಷವಾದ ಐಕ್ಯತೆ ಪ್ರದರ್ಶಿಸಿದ್ದಾರೆ, ಅದರಲ್ಲಿ ಸ್ವಾರ್ಥ ಅಡಗಿದೆಯೆಂದು ಅನೇಕ ಪತ್ರಿಕೆಗಳು ಸಂಪಾದಕೀಯಗಳನ್ನು ಪ್ರಕಟಿಸಿವೆ.

ನಮ್ಮ ಇಂದಿನ ವ್ಯವಸ್ಥೆಯಲ್ಲಿ ಅನೇಕ ರಾಜಕಾರಣಿಗಳು ಕಪ್ಪು ವ್ಯಕ್ತಿತ್ವವನ್ನು ಬೆಳೆಸಿಕೊಂಡಿದ್ದಾರೆಂಬುದು ಇಡೀ ವಿಶ್ವಕ್ಕೆ ತಿಳಿದ ವಿಷಯ. ಅಂತಹವರನ್ನು ದಂಡಿಸುವುದರಲ್ಲಿ ಎಷ್ಟು ಕಟುವಾದ ಶಬ್ದ ಪ್ರಯೋಗ ಮಾಡಿದರೂ ಅಪಚಾರ ಮಾಡಿದಂತಾಗುವುದಿಲ್ಲ. ಅಪರಾಧಗಳನ್ನೆಸಗಿರುವವರು ಮತ್ತು ಆಸ್ತಿಯ ವಿವರಗಳನ್ನು ಮುಚ್ಚಿಡುವವರು ಜನಪ್ರತಿನಿಧಿಗಳಾಗಲು ಅನರ್ಹರೆಂಬುದರ ಬಗ್ಗೆ ಎರಡು ಮಾತಿರಲು ಸಾಧ್ಯವಿಲ್ಲ. ಪ್ರಸ್ತುತ ಸನ್ನಿವೇಶದಲ್ಲಿ ಉದ್ಭವಿಸಿರುವ ಪ್ರಶ್ನೆ ಮೂಲತಃ ಸರ್ಕಾರದ ಹಾಗೂ ಶಾಸಕರ ಧೋರಣೆಯು ಈ ನಿಲುವನ್ನು ಸಮರ್ಥಿಸುತ್ತದೆಯೆ ಅಥವಾ ಗೌಣವಾಗಿಸುತ್ತದೆಯೆ ಎಂಬುದೇ ಆಗಿದೆ.

ರಾಜಕಾರಣಿಗಳಲ್ಲನೇಕರು ಅಪ್ರಾಮಾಣಿಕರೆಂಬ ಕಾರಣದಿಂದ ಸಧ್ಯದ ಕೇಂದ್ರ ಸರ್ಕಾರದ ನಿಲುವಿನಲ್ಲಿ ಏನೋ ವಂಚನೆ ಇದೆಯೆಂದು ಶಂಕಿಸುವುದು ಸಹಜವೆಂಬಂತೆ ತೋರುತ್ತದೆ. ಆ ನಿಟ್ಟಿನಲ್ಲಿ ಅಪರಾಧೀಕರಣವನ್ನು ವ್ಯಾಖ್ಯಾನಿಸಿಕೊಳ್ಳಬೇಕಾದ್ದು ಸಮಂಜಸವೇ ಆಗಿದೆ. ಪ್ರಜಾಪ್ರಭುತ್ವದ ಬಗ್ಗೆ ಕಾಳಜಿ ಇರುವವರೆಲ್ಲ ನ್ಯಾಯಾಲಯದ ನಿಲುವನ್ನು ಸಮರ್ಥಿಸಬೇಕು ಮತ್ತು ಸರ್ಕಾರದ ಸುಗ್ರೀವಾಜ್ಞೆಯನ್ನು ಖಂಡಿಸಬೇಕು ಎಂಬ ರೀತಿಯಲ್ಲಿ ವಾದಗಳನ್ನು ಮುಂದಿಡುವುದು ಎಷ್ಟು ಆರೋಗ್ಯಕರ ಎಂಬುದನ್ನು ಭಾವೋದ್ರೇಕಕ್ಕೆ ಒಳಗಾಗದೆ ಪರಾಮರ್ಶಿಸುವುದು ಸೂಕ್ತ. ನ್ಯಾಯಾಲಯಗಳಲ್ಲಿ ಪ್ರಾಮಾಣಿಕತೆ ಎಂಬುದು ಘನೀಭೂತವಾಗಿದೆಯೆಂಬ ಐತಿಹ್ಯವನ್ನು ಕುರಿತು ವ್ಯಾಖ್ಯಾನಿಸಹೊರಟರೆ ಅದು ನ್ಯಾಯಾಲಯದ ನಿಂದೆ ಎನಿಸಿಕೊಂಡುಬಿಡುತ್ತದೇನೋ ಎಂಬ ಭಯದಿಂದ ಯಾರೂ ಅದರ ಚರ್ಚೆಗೆ

ಹೋಗದಿರುವುದು ವಾಸ್ತವ. ರಾಜಕಾರಣಿಗಳನ್ನು ಸಾರಾಸಗಟಾಗಿ ಸಮರ್ಥಿಸುವ ದುಸ್ಸಾಹಸಕ್ಕೆ ಯಾರೂ ಕೈಹಾಕುವುದಿಲ್ಲವೆಂಬುದು ಅನುಭವದ ಸಂಗತಿ. ಆದರೆ ನಾವು ಹಾಕಿಕೊಳ್ಳದ ಪ್ರಶ್ನೆಯೊಂದಿದೆ: ಹೀಗೆ ರಾಜಕಾರಣಿಗಳನ್ನು ಬೊಟ್ಟು ಮಾಡಿ ದೂಷಿಸುವ ಮಂದಿ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಏನಾಗಿದ್ದಾರೆ ಮತ್ತು ಯಾವ ಮಟ್ಟದಲ್ಲಿ ಪ್ರಾಮಾಣಿಕತೆಯನ್ನು ತುಂಬಿಕೊಂಡಿದ್ದಾರೆ? ಮಾಧ್ಯಮದ ದೊರೆಗಳ ಕೈ ಮತ್ತು ಮನಸ್ಸು ಅತಿಶುಭ್ರವೆಂಬುದಕ್ಕೆ ಪುರಾವೆಗಳೇನೂ ಇಲ್ಲ; ಅಂತೆಯೇ, ಮಾಧ್ಯಮಗಳಲ್ಲಿ ನೌಕರಿ ಮಾಡುತ್ತಿರುವವರೆಲ್ಲಾ ಸ್ಫಟಿಕದ ಮೂರ್ತಿಗಳೂ ಅಲ್ಲ. ಬೇರೆ ವ್ಯಾಪಾರಿಗಳು, ಉದ್ದಿಮೆದಾರರು, ಶಿಕ್ಷಕರು, ವಕೀಲರು, ವೈದ್ಯರು, ಹೀಗೆ ವಿವಿಧ ಕ್ಷೇತ್ರಗಳವರನ್ನು ನೋಡಿದರೆ ಅಲ್ಲೆಲ್ಲಾ ಕರಿ ಕುರಿಗಳು ಇಲ್ಲವೇ ಇಲ್ಲವೆಂದು ಹೇಳುವ ಧೈರ್ಯ ಯಾರಿಗಿದೆ? ರಾಜಕಾರಣಿಗಳ ಭ್ರಷ್ಟತೆಯು ನಮ್ಮ ಬೇರೆಲ್ಲ ವೃತ್ತಿಗಳಲ್ಲಿರುವ ಭ್ರಷ್ಟತೆಗಿಂತ ಹೆಚ್ಚು ಅಥವಾ ಕಡಿಮೆ ಎಂದು ಹೇಳುವುದು ನಿರರ್ಥಕ. ಬೇರೆಲ್ಲ ವೃತ್ತಿಗಳು ಭ್ರಷ್ಟತೆಯಿಂದ ಮುಕ್ತರಾದರೆ ರಾಜಕಾರಣಿಗಳಿಗೆ ಭ್ರಷ್ಟರಾಗುವ ಅವಕಾಶವೇ ಇರುವುದಿಲ್ಲ. ಎಲ್ಲ ಕ್ಷೇತ್ರಗಳ ಭ್ರಷ್ಟತೆಯ ತುಣುಕುಗಳೂ ಒಬ್ಬ ರಾಜಕಾರಣಿಯಲ್ಲಿ ಒಂದಾಗಿ ಬೃಹದ್ರೂಪ ತಾಳಿರುತ್ತವೆಂದು ಹೇಳಿದರೆ ಅದು ಸರಿಯಾದ ವಿಶ್ಲೇಷಣೆ ಆಗುತ್ತದೆಂದು ತೋರುತ್ತದೆ. ಆರೋಗ್ಯ, ಶಿಕ್ಷಣ, ಉದ್ಯಮ, ಕೃಷಿ, ಬ್ಯಾಂಕಿಂಗ್, ಹೀಗೆ ಎಲ್ಲ ಕ್ಷೇತ್ರದವರೂ ಅಷ್ಟಷ್ಟು ಭ್ರಷ್ಟತೆಯನ್ನು ಮೈಗೂಡಿಸಿಕೊಂಡಿರದಿದ್ದರೆ ರಾಜಕಾರಣಿಯು ಅವರೆಲ್ಲರಿಂದಲೂ ಸ್ವಲ್ಪಸ್ವಲ್ಪ ಕಸಿದುಕೊಂಡು ಹೆಮ್ಮರವಾಗಿ ಬೆಳೆಯಲು ಹೇಗೆ ತಾನೆ ಸಾಧ್ಯವಾಗುತ್ತಿತ್ತು? ಅವನಿಂದ ಏನೋ ಕೆಲಸ ಮಾಡಿಸಿಕೊಂಡು ವೈಯ್ಯಕ್ತಿಕ ಲಾಭ ಹೆಚ್ಚಿಸಿಕೊಳ್ಳಲು ಹಾತೊರೆಯುವ ದೊಡ್ಡ ಉದ್ಯಮಪತಿಗಳು ಇರದಿದ್ದರೆ ಪ್ರಮೋದ್ ಮಹಾಜನ್ ಎಂಬ ಕೇಂದ್ರ ಮಂತ್ರಿ ಹಣ ಸಂಗ್ರಹದಲ್ಲಿ ಅಗ್ರಸ್ಥಾನ ಪಡೆಯಲು ಸಾಧ್ಯವಾಗುತ್ತಿರಲಿಲ್ಲ. ಅಂದರೆ, ರಾಜಕಾರಣಿಗಳ ಭ್ರಷ್ಟತೆಗೆ ಸಮರ್ಥನೆ ಇದೆಯೆಂದು ಇದರರ್ಥವಲ್ಲ; ಅವನೊಬ್ಬನನ್ನೇ ದೂಷಿಸಲು ಸಾಧ್ಯವಿಲ್ಲವೆಂದಷ್ಟೇ ಇಲ್ಲಿರುವ ಸೂಚನೆ.

ಯಾವುದೇ ಶಾಸನ ಸಭೆಯ ಅಥವಾ ಲೋಕಸಭೆಯ ಕ್ಷೇತ್ರದಲ್ಲಿ ಚುನಾವಣೆಯಲ್ಲಿ ಅಭ್ಯರ್ಥಿಯಾಗುವವರ ಪೂರ್ವಾಪರಗಳು ಮತದಾರರಿಗೆ ಪೂರ್ಣಪ್ರಮಾಣದಲ್ಲಿ ಗೊತ್ತಿರದಿದ್ದರೂ ಅವರ ನೈತಿಕ ತಳಹದಿ ಎಂಥದು, ಅವರ ವ್ಯಕ್ತಿತ್ವ ಎಷ್ಟು ಶುಭ್ರವಾದದ್ದು ಎಂಬುದು ಸ್ಥೂಲವಾಗಿ ತಿಳಿದೇ ಇರುತ್ತದೆ ಎನ್ನಬಹುದು. ಅಲೆಕ್ಸಾಂಡರ್ ಎಂಬ ಮಾಜಿ ಐ.ಎ.ಎಸ್. ಅಧಿಕಾರಿ ಬೆಂಗಳೂರಿನ ಭಾರತೀನಗರ ಕ್ಷೇತ್ರದಲ್ಲಿ ಅಭ್ಯರ್ಥಿಯಾಗಿದ್ದಾಗ ಅಲ್ಲಿಯ ಮತದಾರರಿಗೆ ಇವರ ಪೂರ್ವೇತಿಹಾಸ ಚೆನ್ನಾಗಿ ತಿಳಿದಿರಲು ಅಶಕ್ಯವಾಗಿದ್ದಿತು ಎಂದಿಟ್ಟುಕೊಳ್ಳೋಣ; ಅವರ ಪ್ರತಿಸ್ಪರ್ಧಿಗಳಿಗೆ ಈತ ಹಣಕಾಸು ಇಲಾಖೆಯ ಕಾರ್ಯದರ್ಶಿಯಾಗಿ ಎಷ್ಟು ಅವ್ಯವಹಾರಗಳಲ್ಲಿ ಭಾಗಿಯಾಗಿದ್ದರೆಂದು ತಿಳಿದಿರಲಿಲ್ಲವೆ? ಚುನಾವಣೆಯ ಸಂದರ್ಭದಲ್ಲಿ ಮತದಾರರೊಂದಿಗೆ ಈ ತಿಳಿವನ್ನು ಹಂಚಿಕೊಳ್ಳಲು ಅವರಿಗೆ

ಅವಕಾಶವಿತ್ತು. ಆದರೆ ಅವರು ಅದಕ್ಕೆ ಒತ್ತುಕೊಡದೆ ಆತ ಮಲಯಾಳಿ ಎಂಬುದನ್ನು ಮುಖ್ಯ ಪ್ರಚಾರದ ಅಂಶವನ್ನಾಗಿ ಮಾಡಿದರು! ಸೋನಿಯಾ ಮತ್ತು ಸುಷ್ಮಾ ಬಳ್ಳಾರಿಯಲ್ಲಿ ಅಭ್ಯರ್ಥಿಗಳಾದಾಗಲೂ ಅವರ ನೈತಿಕ ವ್ಯಕ್ತಿತ್ವಗಳನ್ನು ಬಿಡಿಸಿ ನೋಡಲು ಪ್ರಚಾರಕರು ಮುಂದಾಗಲಿಲ್ಲ: ಬೋಫೋರ್ಸ್ ಹಗರಣದ ಬಗ್ಗೆ ನಿಮ್ಮ ಅಭಿಪ್ರಾಯವೇನೆಂದು ಸೋನಿಯಾಗೆ ಪ್ರಶ್ನೆ ಹಾಕಲಿಲ್ಲ ಮತ್ತು ಅಯೋಧ್ಯೆಯಲ್ಲಿ ಮಸೀದಿ ಉರುಳಿಸಿದ ಘಟನೆಯಲ್ಲಿ ನಿಮ್ಮ ಪಾತ್ರವೇನು ಎಂದು ಸುಷ್ಮಾಗೆ ಪ್ರಶ್ನೆ ಹಾಕಲಿಲ್ಲ. ಮತದಾರರಿಗೆ ಅಭ್ಯರ್ಥಿಗಳ ಭ್ರಷ್ಟತೆಯ ಪರಿಚಯವೇ ಇಲ್ಲದಂತಹ ಸಂದರ್ಭಗಳು ಬಹಳ ಕಡಿಮೆ. ಜನರ ಮನಸ್ಸಿನ ಆಳದಲ್ಲಿ ಭ್ರಷ್ಟತೆಯೊಂದು ಪಿಡುಗು ಎಂಬ ಭಾವನೆ ಬೇರೂರಿಲ್ಲ. ಬದಲಾಗಿ, ಭ್ರಷ್ಟನೊಬ್ಬ ಹೇಗೆ ಅನತಿಕಾಲದಲ್ಲಿ ಮೇಲೇರಿದ ಎಂಬುದನ್ನು ನೋಡಿ ತಾವೂ ಅವನಂತಾಗಬಹುದೇ ಎಂಬ ಕನಸನ್ನು ಗುಟ್ಟಾಗಿಯೇ ಕಾಣುತ್ತಾರೆ. ಭ್ರಷ್ಟ ರಾಜಕಾರಣಿಯನ್ನು ಚುನಾವಣೆಯ ಕಣದಿಂದ ದೂರವಿಡುವುದರ ಜೊತೆಗೆ ಮತದಾರರ ಮಾನಸಿಕ ಕಶ್ಮಲವನ್ನು ತೊಳೆದುಹಾಕುವ ಕೆಲಸವೂ ಆಗಬೇಕಾಗಿದೆ. ಅದನ್ನು ಮಾಡದೆ ಭ್ರಷ್ಟ ರಾಜಕಾರಣಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ತಪ್ಪಿಸುವುದರಿಂದ ಮಾತ್ರವೇ ಎಲ್ಲಾ ನೆಟ್ಟಗಾಗುತ್ತದೆ ಎಂದು ಭಾವಿಸಿದರೆ ಅದೊಂದು ಭ್ರಮೆ. ಹಿಂದೆ ಇದ್ದ ಭ್ರಷ್ಟ ಹೋಗಿ ಅವನ ಜಾಗದಲ್ಲಿ ಬರುವ ಇನ್ನೊಬ್ಬನಿಗೆ ಭ್ರಷ್ಟತನದ ಸೋಂಕನ್ನು ಅಂಟಿಸುವುದಷ್ಟೇ ಇದರಿಂದಾಗುವ ಪರಿಣಾಮ.

ಇನ್ನೊಂದು ವಿಷಯದತ್ತ ಗಮನ ಹರಿಸೋಣ: ಷೇರು ಮಾರುಕಟ್ಟೆಯಲ್ಲಿ ಬುದ್ಧಿವಂತಿಕೆಯ ಆಟವಾಡಿ ಆಸ್ತಿಯನ್ನು ಹತ್ತು ಪಟ್ಟು, ನೂರು ಪಟ್ಟು ಹೆಚ್ಚಿಸಿಕೊಳ್ಳುವುದು ನೈತಿಕವಾಗಿ ಸಮರ್ಥನೀಯವೇ ಅಥವಾ ಅದರಲ್ಲೂ ಭ್ರಷ್ಟತನದ ಕ್ರಿಮಿ ಅಡಗಿದೆಯೆ? ಸಾರ್ವಜನಿಕ ಸಂಪತ್ತನ್ನು ಬೇಕಾಬಿಟ್ಟಿಯಾಗಿ ಖಾಸಗೀಕರಣಕ್ಕೆ ತುತ್ತಾಗಿಸಿ ಯಾರದೋ ಜೇಬನ್ನು ಹಿಗ್ಗಾಮುಗ್ಗಾ ತುಂಬುವುದು ರಾಜಕೀಯ ಅಪರಾಧವಲ್ಲವೆ? ವೆಂಕಯ್ಯ ನಾಯ್ಡು ಅಂಥವರು ಭೂಮಿಯನ್ನು ಕಬಳಿಸಿ, ಅದನ್ನು ಹಲವು ವರ್ಷ ಅನುಭೋಗಿಸಿ, ಹಗರಣ ಬಯಲಾದಾಗ ಅದನ್ನು ಮೊದಲ ಮಾಲಿಕರಿಗೆ ಹಿಂದಿರುಗಿಸುವ ನಾಟಕ ಆಡಿದಾಗ ಅದು ರಾಜಕೀಯ ಅಪರಾಧವೆ ಅಥವಾ ನೈತಿಕ ಉದಾತ್ತತೆಯೆ? ಸ್ವಂತದ ಲಾಭಕ್ಕೆ ಒಬ್ಬ ವ್ಯಕ್ತಿಯನ್ನು ಕೊಂದಿರುವವನನ್ನು ಅಪರಾಧಿಯೆಂದು ಪರಿಗಣಿಸಿ, ಇಡೀ ದೇಶದ ಆರ್ಥಿಕತೆಯನ್ನು ಅಥವಾ ಸಮುದಾಯದ ಹಿತವನ್ನು ಕೊಲ್ಲುವವರನ್ನು ನಿರಾಪರಾಧಿಗಳೆಂದು ಸಾರಲು ಬರುತ್ತದೆಯೆ?

ಕಡೆಯದಾಗಿ, ಇತ್ತೀಚೆಗೆ ಹೊರಡಿಸಲಾಗಿರುವ ಆಜ್ಞೆಯತ್ತ ಇನ್ನೊಮ್ಮೆ ಕಣ್ಣುಹಾಯಿಸಿ ಅದರ ಸೂಕ್ಷ್ಮಗಳನ್ನು ವಿವೇಚಿಸೋಣ: ಅಪರಾಧಿಯೆಂಬ ಆಪಾದನೆ ಹೊತ್ತು ಮೊಕದ್ದಮೆ ಎದುರಿಸುತ್ತಿರುವವರನ್ನು ಚುನಾವಣೆಯ ಕಣದಿಂದ ಹೊರತಾಗಿಸಬೇಕೆಂಬ ವಾದವೊಂದಿದೆ; ಅದಕ್ಕೆ ಪರ್ಯಾಯವಾಗಿ, ಅಪರಾಧ ಸಾಬೀತಾಗಿ ಶಿಕ್ಷೆಗೆ ಗುರಿಯಾಗಿರುವವರನ್ನು ಮಾತ್ರವೇ ದೂರವಿಡಬೇಕೆಂಬ ಇಂಗಿತ ಈಗಿನ ಆಜ್ಞೆಯಲ್ಲಿದೆ. ಆಪಾದನೆಯೇ ಸಾಕೆಂದಾದರೆ,

ಅಧಿಕಾರದಲ್ಲಿರುವ ಪಕ್ಷದವರು ಬೇರೆ ಪಕ್ಷಗಳವರ ಮೇಲೆ ನಾಲ್ಕಾರು ಆಪಾದನೆಗಳನ್ನು ಹೊರಿಸಿ ಮೊಕದ್ದಮೆಗಳಿಗೆ ಗುರಿಯಾಗುವಂತೆ ಮಾಡುವುದು ಅಸಂಭವವಲ್ಲ. ಅಲ್ಲದೆ, ಆಪಾದನೆ ಎದುರಿಸಬೇಕಾದವರನ್ನು ಖುಲಾಸೆ ಮಾಡುವುದೂ ಸಾಧ್ಯ. ಈಗ ಮಾಯಾವತಿಯ ಕೃಪೆಯಿಂದ ಲಾಲ ಕೃಷ್ಣ ಅದ್ವಾನಿ, ಮುರಳಿ ಮನೋಹರ ಜೋಶಿ ಮತ್ತು ಉಮಾ ಭಾರತಿ ಅಪರಾಧವನ್ನು ಎದುರಿಸದೆ ತಪ್ಪಿಸಿಕೊಳ್ಳುವ ರಾಜಕೀಯ ಚಾಣಾಕ್ಷತನ ತೋರಿರುವುದು ಎಲ್ಲರಿಗೂ ತಿಳಿದ ವಿಷಯ. ಆದರೆ ನ್ಯಾಯಾಲಯವಾಗಲಿ, ಚುನಾವಣಾ ಆಯೋಗವಾಗಲಿ, ರಾಷ್ಟ್ರಾಧ್ಯಕ್ಷರಾಗಲಿ ಈ ಮೂವರನ್ನು ಜನಪ್ರತಿನಿಧಿಗಳಾಗದಂತೆ ತಡೆಯುತ್ತಾರೆಯೆ? ಇವರಿಗೆ ಆಪಾದನೆಯಿಂದ ಸಹ ಮುಕ್ತಿ ದೊರಕಿದೆ. ಆದರೆ ಅವರು ಬೇರೆಯವರ ಮೇಲೆ ಆಪಾದನೆ ಹೊರಿಸಲು ಅವಕಾಶವಿದೆ. ಇದರಲ್ಲಿ ಪ್ರಜಾಪ್ರಭುತ್ವದ ಪರವಾದ ಅಂಗೀಕಾರಾರ್ಹ ಕ್ರಮ ಯಾವುದು? ಸಹಜವಾಗಿಯೆ, ಆಪಾದನೆಯು ಸಾಬೀತಾಗಿರಬೇಕು ಎಂದು ನಿಗದಿಗೊಳಿಸುವುದು ಸಮಂಜಸವಾಗಿರುತ್ತದೆ. ಎಲ್ಲ ರಾಜಕೀಯ ಪಕ್ಷಗಳೂ ಭೇದ ಮರೆತು ಒಗ್ಗಟ್ಟಾಗಿ ಪ್ರಜಾಪ್ರಭುತ್ವದ ಕತ್ತು ಹಿಚುಕಿದರು ಎಂಬುದು ಉತ್ಪ್ರೇಕ್ಷೆಯಾಗುತ್ತದೆ, ಅವಾಸ್ತವವಾಗುತ್ತದೆ. ಅಪರಾಧಿಯೆಂದು ಸಾಬೀತಾಗಿದ್ದರೆ ಅಂತಹವರನ್ನು ಸದಾಕಾಲಕ್ಕೆ ಚುನಾವಣೆಯ ರಂಗದಿಂದ ಹೊರಗಟ್ಟುವುದು ಅತ್ಯಂತ ಸೂಕ್ತವಾದ ತೀರ್ಮಾನ.

ಇನ್ನು, ಎಂತಹ ಅಪರಾಧಗಳನ್ನು ಇಲ್ಲಿ ಗಣನೆಗೆ ತೆಗೆದುಕೊಳ್ಳಬೇಕು ಎಂಬ ಪ್ರಶ್ನೆ ಇದೆ. ಟಾಟಾ ಕಂಪನಿಯು ಸಾರ್ವಜನಿಕ ವಲಯದಲ್ಲಿದ್ದ ದೂರಸಂಪರ್ಕ ಜಾಲವನ್ನು ತನ್ನ ವಶಕ್ಕೆ ತೆಗೆದುಕೊಂಡಾದ ನಂತರ ಅಲ್ಲಿದ್ದ ಹಣವನ್ನು ತನ್ನ ಖಾಸಗಿ ವ್ಯವಹಾರಗಳಿಗಾಗಿ ಬಳಸಲಾರಂಭಿಸಿತು. ಅದನ್ನು ವಿರೋಧಿಸಿ ಒಂದು ಚಳುವಳಿ ನಡೆಯುತ್ತದೆ ಎನ್ನೋಣ; ಅದರಲ್ಲಿ ಭಾಗಿಯಾದವನಿಗೆ ಅದ್ವಾನಿ ಗೃಹಖಾತೆಯು ಎಂಥದೋ ಶಿಕ್ಷೆ ವಿಧಿಸುತ್ತದೆ ಮತ್ತು ನ್ಯಾಯಾಲಯ ಅದಕ್ಕೆ ಸಮ್ಮತಿಸುತ್ತದೆ. ಅಂತಹ "ಅಪರಾಧಿಯು" ಮುಂದೆಂದೂ ಜನಪ್ರತಿನಿಧಿಯಾಗಬಾರದೆಂದು ಹೇಳಬಹುದೆ? ಹಾಗೆ ನೋಡಿದರೆ, ಅವನು ಬೇರೆಲ್ಲರಿಗಿಂತಲೂ ಶ್ರೇಷ್ಠ ಜನಪ್ರತಿನಿಧಿ ಎನಿಸಿಕೊಳ್ಳಬೇಕು. ಅಂದರೆ, ಈ ರೀತಿಯ "ಅಪರಾಧ"ಗಳನ್ನು ದರೋಡೆ, ಸುಲಿಗೆ, ಕೊಲೆ, ಅತ್ಯಾಚಾರ, ವಂಚನೆ ಮುಂತಾದ ಅಪರಾಧಗಳೊಡನೆ ಸಮೀಕರಿಸಬಾರದು. ನರ್ಮದಾ, ಕಾವೇರಿ, ಕುದುರೆಮುಖ, ಮುಂತಾದ ಚಳುವಳಿಗಳಲ್ಲಿ ಸಾರ್ವಜನಿಕ ಆಸ್ತಿಯನ್ನು ನಾಶಮಾಡುವುದು ಅಪರಾಧ, ಆದರೆ ಸಾವಿರ ಜನರನ್ನು ಚಳುವಳಿಯಲ್ಲಿ ತೊಡಗಿಸಿ ಕೆಲವು ಅಂಗೀಕೃತ ಕಾನೂನಿನ ನಿಯಮಗಳನ್ನು ಭಂಗಗೊಳಿಸುವುದು ಅಪರಾಧವಲ್ಲ. ಮಸೀದಿ ಉರುಳಿಸುವುದು ಅಪರಾಧ, ಆದರೆ ಅದಕ್ಕೆ ಪ್ರತಿರೋಧ ಒಡ್ಡುವುದು ಅಥವಾ ಅದನ್ನು ಪ್ರತಿಭಟಿಸುವುದು ಅಪರಾಧವಲ್ಲ. ಭಯೋತ್ಪಾದನೆಯು ಅಪರಾಧವಾದರೆ ಸರ್ಕಾರಿ ಭಯೋತ್ಪಾದನೆಯೂ ಅಪರಾಧವೇ ಅಲ್ಲವೆ? ಆದ್ದರಿಂದ ಖಾಸಗಿ ಭಯೋತ್ಪಾದಕನಿಗೆ ಜೈಲು, ಸರ್ಕಾರಿ ಭಯೋತ್ಪಾದಕನಿಗೆ ಪದಕ, ಎಂಬ ನೀತಿ ಹೇಯವಾದದ್ದು.

ಆಸ್ತಿಯ ವಿವರಗಳ ಘೋಷಣೆ ಬಗ್ಗೆ ಹೇಳಬೇಕೆಂದರೆ, ಅದು ಚುನಾವಣೆಯಲ್ಲಿ ಅಭ್ಯರ್ಥಿಗಳಾಗುವವರಿಗೆ, ಆಗದವರಿಗೆ, ಎಲ್ಲರಿಗೂ ಅನ್ವಯವಾಗಬೇಕಾದ ಸಂಗತಿ. ನಾನು ಚುನಾವಣೆಗೆ ನಿಲ್ಲುವುದಿಲ್ಲ; ಆದ್ದರಿಂದ ನಾನು ಎಷ್ಟು ಸಾರ್ವಜನಿಕ ಸಂಪತ್ತನ್ನು ಲೂಟಿ ಮಾಡಿದರೂ ಪರವಾಗಿಲ್ಲ, ಎಂಬ ಮಾತೇ ಹಾಸ್ಯಾಸ್ಪದವಾದ್ದು. ಒಟ್ಟಿನಲ್ಲಿ ಹೇಳುವುದಾದರೆ, ಪ್ರಜೆಗಳು ಪ್ರಭುತ್ವ ನಡೆಸಲು ಅಡ್ಡಿಯುಂಟುಮಾಡುವಂತಹ ಎಲ್ಲ ಚಿಂತನೆ ಹಾಗೂ ಕ್ರಿಯೆಗಳು ಅಪರಾಧೀಕರಣದ ಪಟ್ಟಿಗೆ ಸೇರಬೇಕಾದ್ದು ಸೂಕ್ತವಾಗಿದೆ. ಉದಾಹರಣೆಗೆ, ಇತಿಹಾಸವನ್ನು ತಿರುಚಿ ಬರೆದು ಮಕ್ಕಳ ಮನಸ್ಸಿಗೆ ವಿಷ ತುಂಬುವುದು ಸಹ ರಾಜಕೀಯ ಅಪರಾಧ ಎನಿಸಿಕೊಳ್ಳಬೇಕು.

◆

೨. ರಾಜಕೀಯ - ಧರ್ಮ

ಸಾಮಾನ್ಯಾರ್ಥದಲ್ಲಿ ನಾವು ಬಳಸುವ 'ಧರ್ಮ' ಎಂಬ ಪದಕ್ಕೂ ಮತಧರ್ಮಕ್ಕೂ ವ್ಯತ್ಯಾಸವಿದೆ. ಯಾವುದೇ ವಸ್ತುವಿನ ಮೂಲ ಲಕ್ಷಣಗಳನ್ನು 'ಧರ್ಮ' ಎಂದು ಕರೆಯುವುದು ವಾಡಿಕೆ. ಅಂತೆಯೇ ಯಾವುದು ಸಮಾಜಕ್ಕೆ ಧಾರಣ ಸಾಮರ್ಥ್ಯವನ್ನು ನೀಡುತ್ತದೋ ಅದನ್ನು ಧರ್ಮವೆಂದು ಕರೆಯುತ್ತಾರೆ. ''ಧಾರಣಾದ್ಧರ್ಮಂ ಇತ್ಯಾಹುಃ'' ಎನ್ನುವಾಗ ಇದೇ ಅರ್ಥ ಸೂಚಿತವಾಗಿರುವುದು. ಒಂದು ಸಮೂಹವನ್ನು ಯಾವುದೋ ಎಲ್ಲೆಯಲ್ಲಿ ಅಥವಾ ಕಟ್ಟುಪಾಡಿನಲ್ಲಿ ಇಡುವ ಉದ್ದೇಶವನ್ನು ಧರ್ಮವು ಹೊಂದಿದೆಯೆಂಬುದು ಇಲ್ಲಿ ಗ್ರಹಿಸಬೇಕಾದ ಅಂಶ. ಆದರೆ ಅದು ನಿರಂತರ ಅಥವಾ ಸಾರ್ವಕಾಲಿಕವಾದುದಲ್ಲ. ಏಕೆಂದರೆ, ಸಮಾಜವು ಸಾರ್ವಕಾಲಿಕವಾಗಿ ಒಂದೇ ತೆರನಾಗಿ ಉಳಿಯುವಂತಹ ಘಟಕವಲ್ಲ. ಅನೇಕ ಸಾಮಗ್ರಿಗಳ ಆಧಾರದ ಮೇಲೆ ನಿಂತಿರುವ ಸಮಾಜವು ಆಯಾ ಮೂಲಭೂತ ವಸ್ತುಗಳಲ್ಲಿ ಉಂಟಾಗುವ ವ್ಯತ್ಯಾಸಗಳಿಂದಾಗಿ ತಾನೂ ಬದಲಾಗುತ್ತಿರುತ್ತದೆ. ಸಮಾಜದ ಆಂತರಿಕ ಸಂಬಧಗಳಲ್ಲಿ, ಮತ್ತು ಇಡಿಯಾಗಿ ಅದರ ವ್ಯವಸ್ಥೆಯಲ್ಲಿ ಸಹ, ಕಾಲದಿಂದ ಕಾಲಕ್ಕೆ ಇಂತಹ ಬದಲಾವಣೆಗಳು ಉಂಟಾಗಿರುವುದನ್ನು ಸುಲಭವಾಗಿ ಗಮನಿಸಬಹುದು. ಧರ್ಮದ ಆಯಾಮದಲ್ಲಿ ಕೆಲವು ಮೌಲ್ಯಗಳು ಸಾರ್ವತ್ರಿಕವಾಗಿ ಮತ್ತು ಸಾರ್ವಕಾಲಿಕವಾಗಿ ಎತ್ತಿಹಿಡಿಯಲ್ಪಟ್ಟಿವೆ ಎಂಬರ್ಥದಲ್ಲಿ ಧರ್ಮವು ಚಿರಂತನವೆಂಬ ವಿವರಣೆಯು ಸರಿಯಾಗಿದೆ.

ಅನೇಕ ಮತಧರ್ಮಗಳು ವ್ಯಾಖ್ಯಾನಿಸುವಂತೆ ಧರ್ಮವು ಮಾನವ ನಿರ್ಮಿತವಾದುದಲ್ಲ; ಅದು ಶ್ರುತಿವಾಕ್ಯಗಳನ್ನಾಧರಿಸಿದ ತತ್ತ್ವ, ಸಮುದಾಯವನ್ನು ಸಲಹುವ ಸಿದ್ಧಾಂತ. ಹೀಗೆ ಹೇಳಿದಾಗ ಧರ್ಮವು ಸಂಸ್ಥೀಕರಣಗೊಂಡಿರುವ ಅಂಶವನ್ನು ಗುರುತಿಸಿದಂತಾಗುತ್ತದೆ. ಆದರೆ ಇಲ್ಲಿಯ ತೊಡಕೇನೆಂದರೆ ಅದು ಸದಾ ಕಾಲ ಹೀಗೆ ಸಂಸ್ಥೀಕರಣಗೊಂಡೇ ಇದ್ದಿತು ಎಂಬ ತಪ್ಪುಕಲ್ಪನೆಗೆ ಆಸ್ಪದವನ್ನುಂಟುಮಾಡುತ್ತದೆ. ಶ್ರುತಿವಾಕ್ಯವೇ ಧರ್ಮದ ಉಗಮಸ್ಥಾನವೆಂದು ಬಗೆದಾಗ ಅದು ಏಕಸ್ವರೂಪದ್ದಾಗಿರಬೇಕಾದ್ದು ಸಹಜ; ಅದಕ್ಕೆ ಮಾನವನ ಸನ್ನಿವೇಶ ಕಾರಣವಾಗುವುದಿಲ್ಲ, ವಿಕಾಸಕ್ಕೆ ಅವಕಾಶವಿರುವುದಿಲ್ಲ. ಧಾರ್ಮಿಕ ಕಟ್ಟುಪಾಡುಗಳ ನಿರ್ಬಂಧದಲ್ಲಿ ಸಮಾಜವಿರುವುದಾದರೆ ಅದಕ್ಕೆ ಚಲನೆ ಇಲ್ಲದಂತಾಗಿ ಸ್ಥಗಿತತೆ ಆವರಿಸುತ್ತದೆ.

ಇಂತಹ ಪರಿಸ್ಥಿತಿಯ ಆತಂಕವಿಲ್ಲ. ಏಕೆಂದರೆ, ಸಮಾಜವು ಸ್ಥಗಿತವಲ್ಲ ಹಾಗೂ ಸಮಾಜದ ಬಹುರೂಪಿ ಸಂಬಂಧಗಳನ್ನು ಪ್ರತಿಪಾದಿಸುವ ಧರ್ಮವೂ ಸ್ಥಗಿತವಲ್ಲ. ವಿಶ್ವದಲ್ಲಿ ಧರ್ಮವು ಏಕಪ್ರಕಾರವಾಗಿಲ್ಲ; ಬೇರೆಬೇರೆ ಹಂತಗಳಲ್ಲಿ ಆಯಾ ಕಾಲದ ಹಿನ್ನೆಲೆಗಳಿಗನುಸಾರವಾಗಿ ಧರ್ಮವು ವಿವಿಧರೂಪಗಳನ್ನು ತಳೆದಿರುವುದು ಇದಕ್ಕೆ ನಿದರ್ಶನವಾಗಿದೆ.

ಸ್ವತಃ ಶ್ರುತಿವಾಕ್ಯಗಳು ಕೂಡ ಅವುಗಳು ಹುಟ್ಟಿಕೊಂಡ ಹಿನ್ನೆಲೆಗಳಿಂದ ಪ್ರಭಾವಿತವಾಗಿದ್ದರೆ ಆಶ್ಚರ್ಯವಿಲ್ಲ. ಉದಾಹರಣೆಗೆ, ಆಡಂ ಮತ್ತು ಈವ್‌ಗಳ ಕತೆಯನ್ನು ನೋಡಬಹುದು. ಕೆಟ್ಟದ್ದು ಎಂಬುದರ ಲವಲೇಶದ ಲೇಪವೂ ಇಲ್ಲದ ಭಗವಂತನಿಂದ ಸೃಷ್ಟಿಸಲ್ಪಟ್ಟ ಮಾನವನಲ್ಲಿ ಕೆಟ್ಟದ್ದು ಹೇಗೆ ಮನೆಮಾಡಿಕೊಂಡಿತು? ದಯಾಮಯನಾದ ಸೃಷ್ಟಿಕರ್ತನು ಒಳಿತು-ಕೆಡಕುಗಳನ್ನು ಒಟ್ಟೊಟ್ಟಾಗಿರಿಸಿ ಮಾನವನಿಗೇಕೆ ತೊಂದರೆಯುಂಟು ಮಾಡಿದ? ಇದಕ್ಕೆ ಉತ್ತರವಾಗಿ ಕ್ರೈಸ್ತಧರ್ಮದ ಪುರಾಣ ಕಲ್ಪನೆಯು ಆಡಂ ಮತ್ತು ಈವರಿಗೆ ಜನ್ಮವಿತ್ತಿದೆ. ಅದು ಎಲ್ಲಿ ಮೊದಲಿಗೆ ವ್ಯಾಪಕವಾಗಿದ್ದಿತೋ ಅದೇ ಪ್ರದೇಶದಲ್ಲಿ ಇಸ್ಲಾಂ ಮತಧರ್ಮವು ಆವಿರ್ಭಾವವಾದ್ದರಿಂದ ಅದರ ಪುರಾಣಕಲ್ಪನೆಯಲ್ಲೂ ಆದಮು ಮತ್ತು ಈವ್ ಕಾಣಿಸಿಕೊಂಡಿದ್ದಾರೆ. ದಕ್ಷಿಣ ಅಮೆರಿಕಾದಲ್ಲಿ ಪ್ರಚಾರಕ್ಕೆ ಬಂದ ಪುರಾಣ ಕಲ್ಪನೆಗಳಲ್ಲಿ ಈ ಮೊದಲ ಮಾನವ ದಂಪತಿಗಳಿಗೆ ಸ್ಥಾನವಿಲ್ಲ! ಅಥವಾ, ಭಾರತದಲ್ಲಿ ಕಾಣಿಸಿಕೊಂಡ ಮತಧರ್ಮಗಳಲ್ಲೂ ಅವರಿಗೆ ಸೂರಿಲ್ಲವೆಂಬುದನ್ನು ನೋಡಬಹುದು. ಈ ಧರ್ಮಗಳ ವಿವಿಧ ನಂಬಿಕೆಗಳು ಹೇಗೆ ಬೆಳೆದುವೆಂಬುದು ಬೇರೆ ಪ್ರಶ್ನೆ; ಅದನ್ನಿಲ್ಲಿ ಚರ್ಚಿಸುವುದು ಪ್ರಸ್ತುತವಲ್ಲ. ಕಾಲ ಮತ್ತು ಪ್ರದೇಶದ ಮಿತಿಗಳನ್ನು ಮೀರಿ ಮತಧರ್ಮಗಳು ನಿಂತಿಲ್ಲವೆಂಬುದು ಮಾತ್ರ ಇಲ್ಲಿಯ ಸೂಚನೆ.

ಇನ್ನೊಂದು ಉದಾಹರಣೆಯನ್ನು ನೋಡೋಣ: ಶಾಕ್ಯ ಬುಡಕಟ್ಟು ಕಾರಣಾಂತರಗಳಿಂದ ಒಡೆದು ಛಿದ್ರವಾಗುತ್ತಿದ್ದ ಕಾಲಕ್ಕೆ ಗೌತಮನು ಅದಕ್ಕೆ ಪ್ರತಿಕ್ರಿಯಿಸುವ ಪ್ರಕ್ರಿಯೆಯಲ್ಲಿ ಬುದ್ಧನಾದ. ಆಗ್ಗೆ ಪ್ರಚಲಿತವಾಗಿದ್ದ ಮತಧರ್ಮದ ನಂಬಿಕೆ ಮತ್ತು ಆಚರಣೆಗಳನ್ನು ಅವನು ಪ್ರಶ್ನಿಸಿ ಬೇರೊಂದು ಪರ್ಯಾಯ ಪಂಥದ ಹರಿಕಾರನಾದ. (ಇದೇ ಮಾತನ್ನು ಬಸವಣ್ಣನವರ ಬಗೆಗೂ ಹೇಳುವುದು ಸಮಂಜಸವಾಗಿದೆ.) ಬುದ್ಧನ ಕಾಲಕ್ಕೂ ಅಶೋಕನ ಕಾಲಕ್ಕೂ ಎರಡು ಶತಮಾನಗಳ ಅಂತರವಿದೆ. ಆ ಶತಮಾನಗಳಲ್ಲಿ ಬೌದ್ಧಮತವು ಎಷ್ಟು ವ್ಯಾಪಕವಾಗಿತ್ತು ಮತ್ತು ಪ್ರಭಾವಶಾಲಿಯಾಗಿತ್ತು? ಅಶೋಕನು ಆ ಮತವನ್ನು ಅವಲಂಬಿಸಿದನಂತರ ಅದಕ್ಕೆ ದೊರೆತ ಪ್ರಾಶಸ್ತ್ಯವನ್ನಂತೂ ಅವನಿಗೆ ಮುಂಚಿನ ಎರಡು ಶತಮಾನಗಳಲ್ಲಿ ನಾವು ಕಾಣುವುದಿಲ್ಲ. ಅಂದರೆ, ಬೌದ್ಧಧರ್ಮವು ಜನರನ್ನು ರಂಜಿಸಲು ಅಶೋಕನು ಬರಬೇಕಾಯಿತು ಮತ್ತು ಅವನು ಆ ಮತವನ್ನು ತನ್ನದೆಂದು ಸ್ವೀಕರಿಸಬೇಕಾಯಿತು. ಅದಕ್ಕೆ ಮುಂಚೆ ಬುದ್ಧನ ದಾರ್ಶನಿಕ ದೃಷ್ಟಿಗೆ ಅಂತಸ್ಸತ್ವವಿರಲಿಲ್ಲವೆಂದು ಇದರಿಂದ ಊಹಿಸುವಂತಿಲ್ಲ. ಏಕೆಂದರೆ, ಅಶೋಕನು ಹೊಸದಾಗಿ ಆ ಮತಕ್ಕೆ ಯಾವ ದಾರ್ಶನಿಕ ತತ್ತ್ವವನ್ನೂ ಸೇರಿಸಲಿಲ್ಲ.

ಈಗ ಇನ್ನೊಂದು ಪ್ರಶ್ನೆ ನಮ್ಮ ಮುಂದೆ ಬರುತ್ತದೆ: ಯುದ್ಧವೊಂದನ್ನು ಪ್ರಾರಂಭಿಸುವ ಮೊದಲೇ ಯುದ್ಧದ ಭೀಕರತೆಯನ್ನು ಮನಗಂಡು ಯುದ್ಧದಿಂದ ಹಿಂದೆಗೆಯಬೇಕೆಂದು ಅರ್ಜುನನು ಬಯಸಿದ್ದನೆಂದು ಗೀತೆಯಲ್ಲಿ ಹೇಳಲಾಗಿದೆ. ಅದಕ್ಕೆ ಅವನ ಭಯವು ಕಾರಣವೋ ಬೇರೆಯವರ ಮೇಲಿನ ಕರುಣೆ ಕಾರಣವೋ ಎಂಬುದನ್ನು ಭಗವಾನ್ ಶ್ರೀ ಕೃಷ್ಣ ಅರಿತಿದ್ದಿರಬೇಕು; ಅಂತೂ ಅವನಿಗೆ ಉಪದೇಶ ನೀಡಿ ಯುದ್ಧಕ್ಕೆ ಅಣಿಗೊಳಿಸಿದ. ಸಾವೆಂಬುದೇ ಅಸತ್ಯವಾದ್ದರಿಂದ ಸಾಯಿಸುವ ಕ್ರಿಯೆಯಿಂದ ವಿಚಲಿತರಾಗಬೇಕಿಲ್ಲ ಎಂಬುದು ಕೃಷ್ಣನ ಉಪದೇಶಸಾರ. ಆತ್ಮನು ನಿತ್ಯನಾದ್ದರಿಂದ ಸಾವು ಎಂಬುದಿಲ್ಲ. (ಸಾವು ಅಸತ್ಯವಾದ್ದರಿಂದ ಸಾಯಿಸುವ ಕ್ರಿಯೆಯಲ್ಲಿ ತೊಡಗದಿರುವುದು ಅರ್ಜುನನಿಗೆ ಶ್ರೇಯಸ್ಕರವಾಗಬೇಕಿತ್ತು; ಆದರೆ ಕೃಷ್ಣನ ಪ್ರಕಾರ ಅರ್ಜುನನ 'ಸ್ವಧರ್ಮ' ಸಾಯಿಸುವ ಕ್ರಿಯೆಯಲ್ಲಿ ತೊಡಗುವುದೇ ಆಗಿತ್ತು. "ಸ್ವಧರ್ಮೇ ನಿಧನಂ ಶ್ರೇಯಃ"; ಆದ್ದರಿಂದ ಅರ್ಜುನ ಯುದ್ಧ ಮಾಡಬೇಕು).

ಅಶೋಕನ ಹೃದಯ ಅರ್ಜುನನ ಹೃದಯದಷ್ಟು ಮಾರ್ದವವಾದುದಲ್ಲ. ಆದ್ದರಿಂದ ಯುದ್ಧದ ಭೀಕರತೆಯು ಅವನಿಗೆ ತಿಳಿಯುವುದು ಯುದ್ಧ ಮುಗಿದನಂತರವೇ; ಯುದ್ಧದಲ್ಲಿ ವಿಜಯವನ್ನು ಸಾಧಿಸಿದನಂತರವೇ, ಎಂದು ಹೇಳುವುದು ಇನ್ನೂ ಉಚಿತವಾದ್ದು. ಕಳಿಂಗರು ಅವನನ್ನು ಸದೆಬಡಿದು ಅಟ್ಟಲು ಸಮರ್ಥರಾಗಿದ್ದಿದ್ದರೆ ಅಶೋಕನನ್ನು ಕರುಣೆಯು ಆವರಿಸುತ್ತಿತ್ತೋ, ಸೇಡಿನ ಭಾವನೆಯು ಆವರಿಸುತ್ತಿತ್ತೋ, ಹೇಗೆ ಹೇಳುವುದು! ಯುದ್ಧದ ಮೊದಲ ದಿನದಂದು ಸಂಭವಿಸಿದ್ದ ಸಾವುನೋವುಗಳನ್ನು ಅಶೋಕನು ನೋಡಲಿಲ್ಲವೆ? ಹಾಗಿದ್ದರೆ, ಅಂದೇ ಯುದ್ಧವನ್ನು ನಿಲ್ಲಿಸುವ ಘೋಷಣೆಯನ್ನೇಕೆ ಅವನು ಮೊಳಗಿಸಲಿಲ್ಲ? ಹಾಗೇನಾದರೂ ಅವನು ಮಾಡಿದ್ದಿದ್ದರೆ ಅಶೋಕನ ಶಿಲಾಶಾಸನಗಳು ಕಳಿಂಗದ ಭುವನೇಶ್ವರದ ಬಳಿ ಇರುತ್ತಿರಲಿಲ್ಲ, ಬಿಹಾರದ ಪಾಟ್ನಾದ (ಅಂದರೆ, ಮಗಧರ ಪಾಟಲೀಪುತ್ರದ) ಬಳಿ ಇರಬೇಕಾಗುತ್ತಿತ್ತು. ಇನ್ನೂ ಒಂದು ವಿಶೇಷವಿದೆ: ಕಳಿಂಗವನ್ನು ಗೆದ್ದಾದ ಮೇಲೆ ಅಶೋಕನ ಚಕ್ರಾಧಿಪತ್ಯದ ವಿಸ್ತರಣೆ ನಿಂತುಹೋಯಿತೆ? ಅಥವಾ, ಅವನ ಸೈನ್ಯವನ್ನು ಚದುರಿಸಿ ಹಾಕಲಾಯಿತೆ?

ಇದಕ್ಕೆ ಎರಡು ರೀತಿಯ ಉತ್ತರ ಸಾಧ್ಯವಿದೆ:(ಅ) ಬೌದ್ಧಮತದ ತತ್ತ್ವಗಳ ಬಲದಿಂದ ವಿಸ್ತರಣೆ ಮುಂದುವರಿಯಿತು; ಅಥವಾ, (ಆ)ಕಳಿಂಗದ ಅಪಜಯವನ್ನು ಕಂಡಿದ್ದವರೆಲ್ಲಾ ಅಶೋಕನಿಗೆ ತಾವಾಗಿಯೇ ಶರಣಾಗತರಾದರು.

ಇವುಗಳಲ್ಲಿ ಮೊದಲನೆಯದು ನಿಜವಾದರೆ ನಾವು ಇನ್ನೊಂದು ತೀರ್ಮಾನಕ್ಕೆ ಬರಬಹುದೇನೋ. ಅದೇನೆಂದರೆ, ಅಶೋಕನಿಗೆ ತನ್ನ ಅಗಾಧ ಸೈನ್ಯವನ್ನು ಪೋಷಿಸಿ ಅದರ ಬಲದಿಂದ ರಾಜ್ಯವನ್ನು ವಿಸ್ತರಿಸಿಕೊಳ್ಳುವುದಕ್ಕಿಂತಲೂ ಮತಧರ್ಮದ ಬಲದಿಂದ ಅದನ್ನು ಆಗುಮಾಡಿಕೊಳ್ಳುವುದು ಕಡಿಮೆ ವೆಚ್ಚ ಮತ್ತು ಶ್ರಮಗಳಿಂದ ಸಾಧ್ಯವಾಗುವಂತಿತ್ತು. ಭುವನೇಶ್ವರದ ಬಳಿಯ ದೊಡ್ಡ ಬಂಡೆಗಳ ಮೇಲೆ ಕೆತ್ತಲಾಗಿರುವ ಶಾಸನಗಳನ್ನು ಓದಲು

ಕಷ್ಟವಾಗುತ್ತದೆ. ಆ ಲಿಪಿ ಬಲ್ಲವರು ಸಹ ಅಷ್ಟು ಎತ್ತರದಲ್ಲಿರುವುದನ್ನು ಓದುವುದು ಕಷ್ಟವೆಂದು ಅನುಭವದಿಂದ ತಿಳಿಸಿದ್ದಾರೆ. ಅಶೋಕನ ಕಾಲದಲ್ಲಿ ಜನಸಾಮಾನ್ಯರೆಲ್ಲಾ ಅಕ್ಷರಸ್ಥರಾಗಿದ್ದರೆಂದು ವಾದಿಸುವುದು ಸಾಧ್ಯವಿಲ್ಲ. ಶಾಸನಗಳನ್ನೇನೋ ಜನರ ಆಡುಭಾಷೆಯಾದ ಪಾಲಿಯಲ್ಲಿ ಬರೆಯಲಾಗಿದೆ; ಆದರೆ ಆ ಭಾಷೆಯನ್ನು ತಿಳಿದಿದ್ದವರಿಗೆ ಓದಲು ಬಾರದಿರುತ್ತಿದ್ದರೆ ಶಾಸನಗಳ ಪ್ರಯೋಜನವೇನಾಗಿದ್ದಿರಬಹುದು? ಅದರಲ್ಲಿದ್ದ ವಿಚಾರಗಳು ಬಾಯಿಂದ ಬಾಯಿಗೆ ಮುಟ್ಟಲು ಶಾಸನಗಳು ಪ್ರೇರಣೆ ನೀಡಿದ್ದುವೆಂದು ಭಾವಿಸಬೇಕಾಗಿದೆ.

ಇದೆಲ್ಲದರ ಸಾರಾಂಶವಿಷ್ಟೆ: ಅಶೋಕನು ಬೌದ್ಧಮತವನ್ನು ಸ್ವೀಕರಸಿದಾಗ ಅದು ವೈಯಕ್ತಿಕ ನೆಲೆಯಲ್ಲಿ ಮಾತ್ರವೇ ನಿಲ್ಲದೆ ಅದಕ್ಕೊಂದು ಸಾರ್ವಜನಿಕ ಆಯಾಮವನ್ನು ಕೊಡಲಾಯಿತು. ಹಾಗೆ ಮಾಡಿದಾಗ ಕೇವಲ ಮತಧರ್ಮದ ಮೌಲ್ಯಗಳ ಪ್ರಚಾರವಷ್ಟೇ ಉದ್ದೇಶವಾಗಿರಲಿಲ್ಲ. ಅಪೇಕ್ಷಿತವೋ, ಅಲ್ಲವೋ, ಅಂತೂ ಮತಧರ್ಮವು ಒಂದು ರಾಜಕೀಯ ಹೊಣೆಗಾರಿಕೆಯನ್ನು ನಿರ್ವಹಿಸುವ ಸನ್ನಿವೇಶ ಒದಗಿ ಬಂದಿತ್ತು. ನಮ್ಮ ಚರಿತ್ರೆಯಲ್ಲಿ ಇಂತಹ ಪ್ರಸಂಗಗಳಲ್ಲಿ ಇದು ಮೊದಲನೆಯದೋ ಅಲ್ಲವೋ ನಿಖರವಾಗಿ ಹೇಳಬರುವುದಿಲ್ಲ; ಆದರೆ ಅದು ಕಡೆಯದಂತೂ ಅಲ್ಲ. ನಂತರದ ಶತಮಾನಗಳಲ್ಲಿ ಜೈನ, ಶೈವ, ವೈಷ್ಣವ, ಇತ್ಯಾದಿ ಮತೀಯ-ಧಾರ್ಮಿಕ ಪಂಥಗಳು ತಮ್ಮ ತತ್ತ್ವಗಳ ಬಲವನ್ನು ರಾಜಕೀಯ ಆಸಕ್ತಿಗಳ ವರ್ಧನೆಗೆ ಬಳಸಿರುವುದು ಸ್ಪಷ್ಟವಾಗಿದೆ. ಯೂರೋಪಿನಲ್ಲಿ ಮತೀಯ ಘರ್ಷಣೆಗಳು ಮೂಲತಃ ಕ್ರೈಸ್ತ ಧರ್ಮದ ಪ್ರಾಬಲ್ಯವನ್ನು ಸಾರಲು ಹಾಗೂ ಇಸ್ಲಾಮಿನ ಪ್ರಭಾವವನ್ನು ತಡೆಗಟ್ಟಲು ನಡೆದಿದ್ದವು. ನಮ್ಮಲ್ಲಿ ಈ ರೀತಿಯ ಘರ್ಷಣೆಗಳು ಅನೇಕ ಶತಮಾನಗಳಲ್ಲಿ ನಡೆದಿವೆ. ಅವುಗಳ ಪರಿಣಾಮವಾಗಿ ಜೈನ ಬಸದಿಗಳು ಶಿವಾಲಯಗಳಾಗಿವೆ, ಶಿವಾಲಯಗಳು ವಿಷ್ಣುವಿನ ದೇವಸ್ಥಾನಗಳಾಗಿವೆ ಮತ್ತು ಈ ಪರಿಪಾಠ ವಿವಿಧರೂಪಗಳಲ್ಲಿ ಜಾರಿಗೆ ಬಂದಿದೆ. ಒಬ್ಬ ರಾಜನು ಯಾವುದೋ ಒಂದು ಮತಧರ್ಮದವನಾದರೆ ಆ ಮತಧರ್ಮಕ್ಕೆ ಪ್ರಾಶಸ್ತ್ಯ ಸಿಗುವುದು, ಆಮೇಲೆ ಅದು ಬದಲಾಗುವುದು, ಇದೆಲ್ಲಾ ಅನೂಚಾನವಾಗಿ ನಡೆದುಬಂದಿದೆ. ರಾಜನು ಆಯ್ಕೆ ಮಾಡಿಕೊಂಡ ಮತಧರ್ಮದಿಂದಾಗಿ ಜನಸಾಮಾನ್ಯರಲ್ಲಿ ಆ ಮತದ ಬಗ್ಗೆ ಆಸಕ್ತಿ ವಿಶೇಷವಾಗಿ ಕೆರಳುತ್ತಿತ್ತೆಂದು ಹೇಳಲಾಗುವುದಿಲ್ಲ. ಆದಾಗ್ಯೂ ಮತಧರ್ಮವು ರಾಜಕೀಯ ಉದ್ದೇಶಗಳಿಗೆ ಸಾಧನವಾಗಿದ್ದುದಂತೂ ನಿಜ. ನಮ್ಮ ರಾಷ್ಟ್ರದಲ್ಲಿ 1992ರ ಡಿಸೆಂಬರ್ 6ರಂದು ಜರುಗಿದ ಘಟನೆಗೆ ಇತಿಹಾಸದ ಪುಟಗಳಲ್ಲಿ ಬೇರೆಷ್ಟೋ ಸಮಾನ ಸಂಗತಿಗಳಿವೆಯೆಂದು ಇದರರ್ಥ. ಹಿಂದೆ ಹಾಗಾಗಿತ್ತು, ಆದ್ದರಿಂದ ಇಂದೂ ಹಾಗಾಗಲಿ, ಎಂಬುದು ಇದರ ಸೂಚನೆಯಲ್ಲ, ಹೀಗೆ ಆಗುತ್ತಲೇ ಇರಬಹುದಾದ ವಿದ್ಯಮಾನವನ್ನು ತಡೆಗಟ್ಟಲು ಸಮಕಾಲೀನ ಸಮಾಜವು ಕರೆ ಕೊಡುತ್ತದೆ; ಅದಕ್ಕೆ ಓಗೊಡದಿದ್ದರೆ ಧರ್ಮಕಾರಣದ ರಾಜಕಾರಣವು ಬಹುಬೇಗನೆ ಉಲ್ಬಣಗೊಂಡು ಬೇರೆಲ್ಲ ಸಾಮಾಜಿಕ ಅಗತ್ಯಗಳೂ ಆದ್ಯತೆಯನ್ನು ಕಳೆದುಕೊಳ್ಳುವ ದುರಂತ ನಮ್ಮ ಮುಂದಿದೆ. ವಿಕಾಸ ಹೊಂದುವ ಸಮಾಜದಲ್ಲಿ ಬೇರೆಲ್ಲ ಕ್ಷೇತ್ರಗಳಲ್ಲಿ ಬದಲಾವಣೆಗಳನ್ನು

ಸ್ವಾಗತಿಸುವ ಜನ ಮತಧರ್ಮದ ಜಡ್ಡು ಸಂಪ್ರದಾಯಗಳು ಮಾತ್ರ ಬದಲಾಗದೆ ಹಾಗೇ ಉಳಿಯಬೇಕೆಂದು ಆಗ್ರಹಪಡಿಸುವುದು ಸೋಜಿಗದ ವಿಷಯ.

ವಸಾಹತುಶಾಹಿಯು ಕಳೆದ ಎರಡು ಶತಮಾನಗಳಲ್ಲಿ ಭಯಂಕರವಾಗಿ ತನ್ನ ದರ್ಪವನ್ನು ಮೆರೆದಿದೆ ಮತ್ತು ಅದು ಅಂತ್ಯಗೊಳ್ಳುವ ಸಂದರ್ಭ ಬಂದಾಗ ಏನಾದರೊಂದು ನೆಪವೊಡ್ಡಿ ಹೊಸ ದೌರ್ಜನ್ಯದ ವಿಷಬೀಜವನ್ನು ಬಿತ್ತಿ ನಿರ್ಗಮಿಸಿದೆ. ಭಾರತ, ಕಾಂಗೊ, ನೈಜೀರಿಯಾ, ಇತ್ಯಾದಿಗಳು ಈಚಿನ ದಶಕಗಳ ಉದಾಹರಣೆಗಳು. ಇಲ್ಲೆಲ್ಲಾ ಆಯಾ ರಾಷ್ಟ್ರಗಳನ್ನು ಮತೀಯ ಅಥವಾ ಬುಡಕಟ್ಟುಗಳ ಭಿನ್ನತೆಯ ಆಧಾರದ ಮೇಲೆ ವಿಭಜನೆ ಮಾಡಿರುವುದು ಇಲ್ಲವೇ ಮಾಡಯತ್ನಿಸಿದ್ದು ಗೋಚರಿಸುತ್ತದೆ. ಐರ್ಲೆಂಡಿನ ಸನ್ನಿವೇಶವು ಇವೆಲ್ಲದರ ಪೂರ್ವದಲ್ಲೇ ಸೃಷ್ಟಿಯಾಗಿತ್ತು. ಆ ದೇಶವನ್ನು ಇಂಗ್ಲೆಂಡ್ ಆಕ್ರಮಿಸಿದ್ದು ಸುಮಾರು ಮೂರು ಶತಮಾನಗಳ ಹಿಂದೆ. ರಾಜರ ಆಳ್ವಿಕೆಗೆ ವಿರುದ್ಧವಾಗಿ ಜನರ ಆಳ್ವಿಕೆಯನ್ನು ಸ್ಥಾಪಿಸಲು ತನ್ನ ಇಂಗ್ಲೆಂಡಿನಲ್ಲಿ ಹೋರಾಡಿದ್ದ ಆಲಿವರ್ ಕ್ರಾಮ್‌ವೆಲ್ ಐರ್ಲೆಂಡಿನಲ್ಲಿ ಮಾತ್ರ ಅಂತಹ ಪ್ರಕ್ರಿಯೆಯ ಪರವಾಗಿರಲಿಲ್ಲ. ಅಲ್ಲಿ ಇಂಗ್ಲೆಂಡಿನ ದುರಾಕ್ರಮಣವನ್ನು ಬೆಂಬಲಿಸಿದ್ದೇ ಅಲ್ಲದೆ ತಾನೇ ಸ್ವತಃ ಅದನ್ನು ಇಮ್ಮಡಿಗೊಳಿಸಿದವನು ಅವನು. ಅತಿ ದೈವಭಕ್ತನೂ ವೈಯಕ್ತಿಕ ಸ್ವಾತಂತ್ರ್ಯದ ಸಮರ್ಥಕನೂ ಆಗಿದ್ದ ಜಾನ್ ಮಿಲ್ಟನ್ ಈ ಆಕ್ರಮಣವನ್ನು ದೂಷಿಸಲಿಲ್ಲ; ಇನ್ನೊಬ್ಬ ಕವಿ ಆಂಡ್ರ್ಯೂ ಮಾರ್ವೆಲ್ ಎಂಬುವವನು ಈ ಆಕ್ರಮಣವನ್ನು ಶ್ಲಾಘಿಸಿ ಕವನವೊಂದನ್ನು ಬರೆದ! ಆ ಕವನವನ್ನು ಇಂದಿಗೂ ನಮ್ಮ ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಅಭಿಮಾನದಿಂದ ವ್ಯಾಸಂಗ ಮಾಡಲಾಗುತ್ತದೆ. ಆ ಮಾತಂತಿರಲಿ, ಕ್ರಾಮ್‌ವೆಲ್ ಐರ್ಲೆಂಡಿನಲ್ಲಿ ಮಾಡಿದ್ದೇನು? ಸಂಪತ್ತನ್ನು ಸೂರೆ ಮಾಡುವುದು, ಜನರನ್ನು ಪರಾಧೀನಗೊಳಿಸುವುದು, ಮತ್ತು ಅವರ ಮತಧರ್ಮವನ್ನು ಹೀಯಾಳಿಸುವುದು. ಐರ್ಲೆಂಡ್ ಗಣರಾಜ್ಯದ ಕಾರ್ಕ್ ನಗರದ ಬಳಿ ಪುರಾತನವಾದ ಒಂದು ದೊಡ್ಡ ಮನೆ ಇದೆ. ಅದರ ಸುತ್ತಲೂ ಕೋಟೆ, ಕಂದುಕಗಳಿವೆ. ಅದನ್ನು ಬ್ಲಾರ್ನೆ ಕೋಟೆಮನೆಯೆಂದು ಕರೆಯುತ್ತಾರೆ. ಅದರ ಭಾಗವಾಗಿ ಒಂದು ಸುಂದರವಾದ ಚರ್ಚ್ ಇದೆ. ಐರ್ಲೆಂಡಿನ ಆಕ್ರಮಣ ನಡೆಸಿದ ಕ್ರಾಮ್‌ವೆಲ್ ಈ ತಾಣವನ್ನು ತನ್ನ ಸೈನ್ಯದ ಕುದುರೆಗಳಿಗೆ ಲಾಯವನ್ನಾಗಿ ಬಳಸಿದ್ದ. ಹಾಗೆಂದು ತಿಳಿಸುವ ಫಲಕವು ಆ ಚರ್ಚಿನ ಬಾಗಿಲನ್ನು ಈಗಲೂ ಅಲಂಕರಿಸಿದೆ! ಕ್ರಾಮ್‌ವೆಲ್ ಕೂಡ ಒಬ್ಬ ಕ್ರೈಸ್ತ ಮತೀಯ. ಆದರೆ ಅವನೊಬ್ಬ ಪ್ರಾಟೆಸ್ಟೆಂಟ್ ಆಗಿದ್ದ. ಆದ್ದರಿಂದ ರೋಮನ್ ಕ್ಯಾಥೋಲಿಕ್ ಬಣಕ್ಕೆ ಸೇರಿದ್ದ ಐರ್ಲೆಂಡಿನ ಒಂದು ಚರ್ಚನ್ನು ಲಾಯವನ್ನಾಗಿ ಪರಿವರ್ತಿಸಲು ಅವನು ಅಳುಕಲಿಲ್ಲ. ಅಲ್ಲೂ ಒಂದು ಕ್ರಿಸ್ತನ ಶಿಲುಬೆಗೆ ಸ್ಥಾನವಿತ್ತೆಂಬುದು ಅವನಿಗೆ ಗೌಣವಾಗಿ ಕಂಡಿತು. ಮತಧರ್ಮದ ಮತ್ತು ಎಷ್ಟು ಗಾಢವಾಗಿರಬಹುದೆಂಬುದಕ್ಕೆ ಇದೊಂದು ನಿದರ್ಶನ, ಅಷ್ಟೆ. ಮಸೀದಿ ಮತ್ತು ಮನಸ್ಸುಗಳನ್ನು ಭಗ್ನಗೊಳಿಸುವ ದುಷ್ಟತನ ಈ ಪರಂಪರೆಗೆ ಸೇರುತ್ತದೆ.

ಗಾಂಧೀಜಿಯವರು ತಮ್ಮ ಪ್ರಾರಂಭಿಕ ದೆಸೆಯಲ್ಲಿ ಮೈಗೂಡಿಸಿಕೊಂಡ ಕೆಲವು ಮಾರ್ಗಗಳನ್ನಿಲ್ಲಿ ನೆನೆಯಬೇಕು. ಅವರಿಗೆ ಭಾವನಾತ್ಮಕ ಪರಿಹಾರಗಳು ರುಚಿಸಲಿಲ್ಲ. ಸುಲಭದ ಡೊಂಕು ಹಾದಿಗಳು ಆಕರ್ಷಕವಾಗಲಿಲ್ಲ. ಚಂಪಾರಣ್ಯದ ಗೇಣಿದಾರರ ಮೇಲೆ ಹೇರಲಾಗಿದ್ದ ನೀಲಿ ಬೆಳೆಯ ಕಡ್ಡಾಯದತ್ತ ಅವರು ಗಮನ ಹರಿಸಿ ಹಲವಾರು ತಿಂಗಳುಗಳ ಕಾಲ ಅಲ್ಲಿಯ ಹಳ್ಳಿಗಳಲ್ಲಿ ತಂಗಿ, ಆರೋಗ್ಯ, ಶಿಕ್ಷಣ, ಇತ್ಯಾದಿಗಳ ಬಗ್ಗೆ ವಿಶೇಷ ಆಸ್ಥೆ ವಹಿಸಿದರು. ನಂತರ ಗುಜರಾತಿನ ಖೇಡಾದಲ್ಲಿ ರೈತರಿಂದ ಬರಗಾಲದಲ್ಲಿ ಕಂದಾಯ ವಸೂಲು ಮಾಡುತ್ತಿದ್ದುದರ ವಿರುದ್ಧ ಹೋರಾಟವನ್ನು ಅಣಿಗೊಳಿಸಿದರು. ಆಮೇಲೆ ಅಹಮ್ಮದಾಬಾದಿನಲ್ಲಿ ಗಿರಣಿ ಕಾರ್ಮಿಕರಿಗೆ ನೀಡಲಾಗುತ್ತಿದ್ದ ಪ್ಲೇಗ್ ಭತ್ಯೆಯನ್ನು ಹಿಂತೆಗೆದುಕೊಂಡಾಗ ಅದಕ್ಕೆ ಸರಿದೂಗುವಂತಹ ವೇತನದ ಹೆಚ್ಚಳಕ್ಕಾಗಿ ಸಂಪು ಹೂಡುವುದನ್ನು ಸಮರ್ಥಿಸಿ ಕಣಕ್ಕಿಳಿದರು. ಹೀಗೆಯೇ ಮುಂದುವರಿದಿತ್ತು ಅವರ ಹೋರಾಟ ಪದ್ಧತಿ. ಒಂದು ಕಡೆ ವಸಾಹತು ದೌರ್ಜನ್ಯದ ವಿರುದ್ಧ ಸೆಣಸಾಟ, ಇನ್ನೊಂದು ಕಡೆ ಸಾಮಾಜಿಕ ಪಿಡುಗುಗಳನ್ನು ತೊಡೆದುಹಾಕಲು ಕ್ರಿಯಾಶೀಲ ಕಾರ್ಯಕ್ರಮಗಳು,–ಹೀಗೆ ಸಾಗಿತ್ತು ಅವರ ಚಿಂತನೆ ಮತ್ತು ಕ್ರಿಯೆ. ಜನಸಾಮಾನ್ಯರ ಸಮಸ್ಯೆಗಳು ಹಾಗೂ ಹೋರಾಟಗಳು ಗಾಂಧೀಜಿಯವರಿಗೆ ರಾಜಕೀಯ ಪ್ರಶ್ನೆಗಳಾದವು, ಪರಿಹಾರಕ್ಕೆ ಸಾಧನಗಳಾದುವು. ಸಾರ್ವಜನಿಕರ ಮನಸೆಳೆಯಲು ಅವರ ಅವ್ಯಕ್ತ ಭಾವನೆಗಳ ಉದ್ರೇಕವನ್ನು ತಮ್ಮ ಅಸ್ತ್ರವನ್ನಾಗಿಸಿಕೊಳ್ಳಬಹುದೆಂಬ ಯೋಚನೆಯೇ ಅವರಿಗೆ ಬರಲಿಲ್ಲ. ಎಷ್ಟೇ ದೀರ್ಘವಾದ ಹೋರಾಟವಾದರೂ ಸಹನೆಯನ್ನು ಕಳೆದುಕೊಳ್ಳದೆ ಕೆಲವು ಆರೋಗ್ಯಕರ ನಿಯಮಗಳಿಗೆ ಬದ್ಧರಾಗಿರುವುದು ಅವರ ಕ್ರಮವಾಗಿತ್ತು.

ಅವರ ನಂತರದ ಕಾಲದಲ್ಲಿ ಅಧಿಕಾರ ವಹಿಸಿಕೊಂಡ ಕೆಲವರು ಹಾಗೂ ಅಧಿಕಾರಕ್ಕೆ ಹಾತೊರೆದ ಕೆಲವರು ಅಷ್ಟೊಂದು ಸಹನೆಯನ್ನಾಗಲಿ ಹೋರಾಟದ ನಿಯಮಗಳನ್ನಾಗಲಿ ಸಾರ್ವಜನಿಕರ ಐಕ್ಯತೆ ಮತ್ತು ಹಿತವನ್ನಾಗಲಿ ಪ್ರಮುಖ ಅಂಶಗಳೆಂದು ಬಗೆಯದೆ ಬೇಗನೆ ಸುಲಭವಾಗಿ ಎತ್ತರಕ್ಕೇರಲು ಅಥವಾ ದೆಹಲಿಯ ಸಿಂಹಾಸನವನ್ನೇರಲು ಉತ್ಸುಕರಾದರು. ಸಾರ್ವಜನಿಕ ಸಂಪತ್ತನ್ನು ಖಾಸಗಿ ಅನುಭೋಗಕ್ಕೆ ಪರಿವರ್ತಿಸಿಕೊಳ್ಳುವುದು ಅಧಿಕಾರದಲ್ಲಿದ್ದಾಗ ಸಾಧ್ಯವೆಂಬುದನ್ನು ಅರಿತ ಮಂದಿ ಹೇಗಾದರೂ ಅದನ್ನು ಪಡೆಯಬೇಕೆಂಬ ಒಂದೇ ಉದ್ದೇಶದ ದಾಸರಾಗಿ ಎಲ್ಲ ಪ್ರಜಾಪ್ರಭುತ್ವವಾದಿ ನಿಯಮಗಳನ್ನು ಗಾಳಿಗೆ ತೂರಲು ಸಿದ್ಧರಾದರು. "ನೀನ್ಯಾಕೋ ನಿನ್ನ ಹಂಗ್ಯಾಕೋ ನಿನ್ನ ನಾಮದ ಬಲವೊಂದಿದ್ದರೆ ಸಾಕೋ", ಎನ್ನುವುದು ಅವರ ಮಂತ್ರ. ಅದು ರಾಮನ ನಾಮವಾಗಬಹುದು, ಗಾಂಧೀಜಿಯವರದಾಗಬಹುದು, ಜಾತಿ-ಕೋಮುಗಳದ್ದಾಗಬಹುದು, ಬಸವ-ಅಂಬೇಡ್ಕರರದಾಗಬಹುದು, 'ಗರೀಬಿ' ಜನರದ್ದಾಗಬಹುದು, ಸಮಗ್ರ ಕ್ರಾಂತಿಯದೂ ಆಗಬಹುದು. ಇವುಗಳ ಪೈಕಿ ಮತಧರ್ಮದ ಭಾವನೆಯನ್ನು ಕೆರಳಿಸುವುದು ಭಾರಿ ರಾಜಕೀಯ ಸರಕಾಗಿ ಪರಿಣಮಿಸಿರುವುದು ಎಲ್ಲರಿಗೂ ಅನುಭವಕ್ಕೆ ಬಂದಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ವಸಾಹತು ಯಜಮಾನನು ಅನುಸರಿಸಿದ

ಕುತಂತ್ರವನ್ನು ಸ್ವಾತಂತ್ರ್ಯಾನಂತರದಲ್ಲಿ ನಮ್ಮ ಕೆಲವು ರಾಜಕೀಯ ಮುತ್ಸದ್ದಿಗಳು ಅನುಸರಿಸಲು ಹೊರಟಿದ್ದು ಈಗ ಒಂದು ಜ್ವಾಲೆಯಾಗಿ ಹಬ್ಬಿದೆ. ರಾಜಕೀಯವೆಂದರೆ ಸಾಮಾಜಿಕ-ಆರ್ಥಿಕ ಸಿದ್ಧಾಂತಗಳ ಬುನಾದಿಯ ಮೇಲೆ ಇಡೀ ಸಮುದಾಯದ ಏಳಿಗೆಗಾಗಿ ಕೆಲವು ಕಟ್ಟುನಿಟ್ಟಾದ ನೀತಿಗಳನ್ನು ಪ್ರತಿಪಾದಿಸಿ ಅವನ್ನು ಕಾರ್ಯತಃ ಆಗುಮಾಡುವ ಸಂಗ್ರಾಮ ಎಂಬ ಮೂಲತತ್ತ್ವವನ್ನು ಪರಿತ್ಯಜಿಸಿ ಜನರನ್ನು ವಿಭಾಗಗಳನ್ನಾಗಿ ಪ್ರತ್ಯೇಕಗೊಳಿಸುವುದು, ಅವರನ್ನು ದಿಕ್ಕು ತಪ್ಪಿಸಿ ಭಾವೋದ್ರೇಕಗಳಿಗೆ ಗುರಿ ಮಾಡುವುದು ಮತ್ತು ಅವರ ಮೇಲೆ ಸವಾರಿ ಮಾಡುತ್ತಾ ಅಧಿಕಾರಕ್ಕೇರುವುದು ರಾಜಕೀಯವೆಂದು ಗಣನೆಗೆ ಬಂದಿದೆ. ಇದು ಕ್ಷುದ್ರ ರಾಜಕೀಯ, ಜನವಿರೋಧಿ ರಾಜಕೀಯ, ಸಂಸ್ಕೃತಿ ವಿರೋಧಿ ರಾಜಕೀಯ ಮತ್ತು ದೇಶದ್ರೋಹೀ ರಾಜಕೀಯ. ಇದಕ್ಕೂ ಮತಧರ್ಮದ ಮೌಲ್ಯಗಳಿಗೂ ಅರ್ಥಾತ್ ಸಂಬಂಧವಿಲ್ಲ; ಆದರೆ ಅದರ ಹೆಸರಿನಲ್ಲಿ ಇದೆಲ್ಲಾ ಜರುಗುತ್ತದೆ.

ಒಂದೆರಡು ಚಿಕ್ಕ ಉದಾಹರಣೆಗಳನ್ನು ನೋಡೋಣ:(ಅ)ಸಾರ್ವಜನಿಕ ಆಸ್ತಿಯನ್ನು ಕಬಳಿಸಲು ಚರಂಡಿಯ ಹಾಸುಗಲ್ಲುಗಳ ಮೇಲೆ ಗಣೇಶನ ಗುಡಿಯ ನಿರ್ಮಾಣ ಮತ್ತು ಅದಕ್ಕೆ ಆತುಗೊಂಡಂತೆ ಮೂರು ಅಂತಸ್ತುಗಳ ಭವ್ಯ ಕಟ್ಟಡ ತಲೆಯೆತ್ತುವುದು.–ಗಣೇಶನನ್ನು ಮುಂದಿಟ್ಟುಕೊಂಡು ನಗರಪಾಲಿಕೆಯ ಆಸ್ತಿಯನ್ನು ಸ್ವಕೀಯವಾಗಿಸಿಕೊಳ್ಳುವುದು ಇಲ್ಲಿಯ ನಿಜವಾದ ಉದ್ದೇಶ. ಯಾವ ನಾಗರಿಕ ನಿಯಮವೂ ಇಂತಹ ಚೌರ್ಯವನ್ನು ಸಮರ್ಥಿಸುವುದಿಲ್ಲ. ವಿಪರ್ಯಾಸವೇನೆಂದರೆ ಅದನ್ನು ಮಾಡಿದವರು ಸಂಭಾವಿತರಂತೆ ಕಾಣಿಸಿಕೊಳ್ಳುತ್ತಾರೆ ಮತ್ತು ಅವರ ಕ್ರಿಯೆಗೆ ಬೇರೆ 'ನಾಗರಿಕರು', ಅಂಗಡಿ ಮಾಲಿಕರು ಮತ್ತು ಮೇಲಧಿಕಾರಿಗಳು ಬೆಂಬಲ ನೀಡುತ್ತಾರೆ. ಮತಧರ್ಮದ ಸಂಕೇತಗಳಲ್ಲಿ ಒಂದಾದ ಗಣೇಶನನ್ನು ಇದಕ್ಕಿಂತಲೂ ಕೆಟ್ಟ ಮುಖವಾಡವನ್ನಾಗಿ ಮಾಡಿಕೊಳ್ಳಬಹುದಾದ ರಾಜಕೀಯ ಇನ್ನಾವುದಿದೆಯೋ ತಿಳಿಯುವುದಿಲ್ಲ. (ಆ)ಯಾವುದೂ ಜನ್ಮ ಮಾತ್ರದಿಂದಲೇ ಸಿದ್ಧಿಸುವುದಿಲ್ಲವೆಂಬ ಧೋರಣೆಯನ್ನು ಕಾರ್ಯತಃ ತೋರಿಸಿದ ಬಸವಣ್ಣ ತನ್ನನ್ನು ಅತ್ಯಂತ ಕೆಳಜಾತಿಗಳ ಜನರೊಂದಿಗೆ ಗುರುತಿಸಿಕೊಳ್ಳುತ್ತಾನೆ. ಅವರು ಆ ಜಾತಿಗಳಿಗೆ ಸೇರಿದ್ದು ಅಪರಾಧವಲ್ಲ, ಅವರೂ ಶ್ರೇಷ್ಠರೇ, ಅವರೂ ಸುಸಂಸ್ಕೃತರೇ ಎಂಬ ಸಾಮಾಜಿಕ ಸಮಾನತೆಗಾಗಿ ಹಂಬಲಿಸಿ ದುಡಿದವರು, ಅವರೊಡನೆ ಸಮೀಕರಿಸಿಕೊಂಡವರು ಬಸವಣ್ಣನವರು. ಅದನ್ನೆಲ್ಲ ಗಾಳಿಗೆ ತೂರಿ ಉಗ್ರವಾದ ನಡತೆಯನ್ನು ತೋರಿಸುವ ಅನೇಕರು ಅವರ ಅನುಯಾಯಿಗಳೆಂದು ಕರೆದುಕೊಳ್ಳುವ ಪ್ರಹಸನ ನಮ್ಮ ನಡುವೆ ಇದೆ. "ಧರ್ಮಕಾರಣವನ್ನು ಬರೆದ ಅವನನ್ನು ಇನ್ನೂ ಬದುಕಗೊಡಲಾಗಿದೆಯೇ" ಎಂದು ಗುಡುಗುವ ಶಾಸಕರು ಸಹ ನಮ್ಮಲ್ಲಿದ್ದಾರೆ. ಬಸವಣ್ಣನವರ ಸೌಜನ್ಯಕ್ಕೂ ಈ ಶಾಸಕರ ಆರ್ಭಟಕ್ಕೂ ಎಲ್ಲಿಯ ಸಂಬಂಧ! ಮತಧರ್ಮವನ್ನು ಅಹಿತಕರ ರಾಜಕೀಯಕ್ಕೆ ಅಸ್ತ್ರವನ್ನಾಗಿಸಿಕೊಳ್ಳುವ ವೈಪರೀತ್ಯ ಇದರಲ್ಲಿದೆ. (ಇ) ಒಂದು ಇಂಗ್ಲಿಷ್ ವಾರಪತ್ರಿಕೆಯ ಪುರವಣಿಯಲ್ಲಿ ಕೆಲವು ವರ್ಷಗಳ ಹಿಂದೆ ಒಂದು ಕತೆ ಪ್ರಕಟವಾಗಿತ್ತು. ಅದು ಮುಂಚೆ ಮಲಯಾಳಂ ಭಾಷೆಯಲ್ಲಿ

ಕೇರಳದ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದ್ದಿತಂತೆ. ಆಗ ಅಸಮಾಧಾನದ ಹೊಗೆ ಅಲ್ಲಿ ಆವರಿಸಲಿಲ್ಲ. ಕತೆಯಲ್ಲಿ ಮುಹಮ್ಮದ್ ಎಂಬುವವನೊಬ್ಬ ಏನೋ ಹೀನಾಯ ಕೃತ್ಯದಲ್ಲಿ ತೊಡಗಿದ್ದಂತೆ ಚಿತ್ರಿಸಲಾಗಿದ್ದಿತೆಂದು ತೋರುತ್ತದೆ. ಅದನ್ನು ಓದಲು ಬಾರದ ಸಹಸ್ರ ಸಂಖ್ಯೆಯ ಮುಸಲ್ಮಾನರನ್ನು ಯಾರೋ ಕುಸಂಸ್ಕೃತ ರಾಜಕಾರಣಿ ಪ್ರೇರೇಪಿಸಿ ಪತ್ರಿಕೆಯ ಕಚೇರಿಯೆದುರು ನಿಲ್ಲಿಸಿ ಗೊಂದಲ ಆರಂಭಿಸಿದ. ಸಂಜೆಯ ವೇಳೆಗೆ ಮೂರು ಮಂದಿ ಹತರಾಗಿದ್ದರು, ನೂರಾರು ಚಪ್ಪಲಿಗಳು ರಸ್ತೆಯಲ್ಲಿ ಚೆಲ್ಲಾಪಿಲ್ಲಿಯಾಗಿದ್ದವು.–ಇಲ್ಲಿ ಹತ್ತಾರು ಪ್ರಶ್ನೆಗಳು ನಮ್ಮ ಮುಂದೆ ಬರುತ್ತವೆ: ರಾಮನೆಂದು ಹೆಸರಿಟ್ಟುಕೊಂಡವನೊಬ್ಬ ದರೋಡೆಕೋರನಾದರೆ ಶ್ರೀರಾಮಚಂದ್ರನಿಗೆ ಹೇಗೆ ಅಪಚಾರವಾಗುತ್ತದೆ? ಹಾಗಿದ್ದರೆ ಅಂತಹ ಹೆಸರುಗಳನ್ನಿಟ್ಟುಕೊಳ್ಳುವ ಪದ್ಧತಿಯನ್ನು ಕೈಬಿಡಬೇಕು. ಮುಹಮ್ಮದ್ ಎಂಬ ಹೆಸರಿರುವವರು ಯಾರೂ ದುಷ್ಕೃತ್ಯಗಳಲ್ಲಿ ತೊಡಗಿಲ್ಲವೆ? ಕತೆಯಲ್ಲಿ ಹಾಗೆ ಚಿತ್ರಿಸಿದರೆ ಪ್ರವಾದಿ ಮುಹಮ್ಮದನಿಗೆ ಅಗೌರವ ಹೇಗೆ ಉಂಟಾಗುತ್ತದೆ? ಇದನ್ನೆಲ್ಲಾ ಮೂಲೆಗೊತ್ತಿ ರಾಜಕಾರಣಿಯೊಬ್ಬ ಮತ ಧರ್ಮದ ಮುಸುಕಿನಲ್ಲಿ ತನ್ನ ಬೇಳೆ ಬೇಯಿಸಿಕೊಳ್ಳಲು ಅಮಾಯಕರನ್ನು ಬಲಿಗೀಡುಮಾಡಿದ. ಜನರನ್ನು ಭಾವೋದ್ರೇಕಕ್ಕೆ ಗುರಿಮಾಡಿ ತನ್ನ ಪ್ರಾಮುಖ್ಯತೆಯನ್ನು ಪ್ರದರ್ಶಿಸಿಕೊಳ್ಳುವ ಇಂತಹ ನಾಯಕ ಶಿಖಾಮಣಿಗಳ ಮುಖಕ್ಕೆ ಇನ್ನೆಷ್ಟು ಮಂಗಳಾರತಿ ಎತ್ತಬೇಕು?

ನಿಜಕ್ಕೂ ಮತಧರ್ಮದ ಮೌಲ್ಯಗಳಿಂದ ಪ್ರೇರಿತವಾದ ಸಜ್ಜನರು ಜನಸಮುದಾಯದ ಬಗೆಗೆ ತಾಳುವ ನಿಲುವೇ ಬೇರೆ. ಅವರನ್ನು ಬಲಿಪಶುಗಳನ್ನಾಗಿ ಮಾಡುವ ಬದಲು ತಾವೇ ತಮ್ಮ ಪ್ರಾಣವನ್ನು ಬಲಿಕೊಡುವುದಕ್ಕೆ ಅವರು ಹಿಂಜರಿಯುವುದಿಲ್ಲ. ಒಂದು ಉದಾಹರಣೆಯಾಗಿ ಚೈತನ್ಯ ಮಹಾಪ್ರಭುಗಳ ಜೀವನವನ್ನು ನೋಡಬಹುದು. ಸಂಮರ್ದಿತ ರೈತಾಪಿ ಜನಗಳನ್ನು ಸಂಘಟಿಸಿ ಭೂಮಾಲಿಕರನ್ನು ಛೇಡಿಸುತ್ತಾ ಅವರು ಲಕ್ಷಗಟ್ಟಲೆ ರೈತರೊಡನೆ ಪುರಿ ಜಗನ್ನಾಥನ ಬಳಿಗೆ ಬಂದರು. ಭೂಮಾಲಿಕರ ಮತ್ತು ಪುಂಡಪಂಡರ ಕುತಂತ್ರಗಳಿಗೆ ಬಲಿಯಾಗಿ ಅಸುನೀಗಿದರು. ಶ್ರೀಮಂತರೊಡನೆ ಸಖ್ಯ ಬೆಳೆಸುವುದು ಅವರಿಗೆ ಸುಲಭವಾಗಿರುತ್ತಿತ್ತು; ಅವರ ಜೀವನವೂ ಸುಗಮವಾಗುತ್ತಿತ್ತು. ಇದಕ್ಕೆ ದೊಡ್ಡ ಪುರಾವೆ, ತರ್ಕಗಳ ಅಗತ್ಯವಿಲ್ಲ. ನಮ್ಮ ಸುತ್ತಮುತ್ತ ಬಲಿಷ್ಠವಾಗಿ ರಾರಾಜಿಸುತ್ತಿರುವ ಮಹಾಂತರು, ಸ್ವಾಮಿಗಳು, ಬಾಬಾಗಳು ಇರುವಂತೆ ಅಂದು ಚೈತನ್ಯ ಮಹಾಪ್ರಭುಗಳು ಇರಬಹುದಿತ್ತು. ಹಾಗಿದ್ದಿದ್ದರೆ ನಮಗಿಂದು ಅವರ ಹೆಸರೇ ಗೊತ್ತಿರುತ್ತಿರಲಿಲ್ಲ. ಅವರು ಆಯ್ದುಕೊಂಡ ಮೌಲ್ಯಗಳು ಹಾಗೂ ಹಾದಿ ಜನಪರವಾಗಿದ್ದುವು. ಅದೇ ಮತಧರ್ಮದ ಶ್ರೇಷ್ಠಮಟ್ಟದ ಪಾಲನೆಯೆಂದು ಅವರು ಭಾವಿಸಿ ಅದರಂತೆ ನಡೆದರು. ಇಂತಹ ಸದ್ಗುಣಿಗಳು ಮಾನವನ ಚರಿತ್ರೆಯಲ್ಲಿ ನೂರಾರು ಮಂದಿ ಆಗಿಹೋಗಿದ್ದಾರೆ. ಚೈತನ್ಯರಂತೆಯೇ ರೈತಾಪಿ ಜನರೊಡನೆ ಬೆರೆತು ಹೋರಾಡಿ ಮರಣದಂಡನೆಗೆ ಗುರಿಯಾದ ಒಬ್ಬ ಕ್ರೈಸ್ತ ಪಾದ್ರಿ ಜರ್ಮನಿಯಲ್ಲಿದ್ದ. ಅವನ ಹೆಸರು ಥಾಮಸ್ ಮುನ್ಸರ್. ಅವನು ಹೆಚ್ಚು ಕಡಿಮೆ ಚೈತನ್ಯರ ಸಮಕಾಲೀನನೇ ಆಗಿದ್ದ.

ಈಚಿನ ದಶಕಗಳಲ್ಲಿ ದಕ್ಷಿಣ ಅಮೆರಿಕಾದ ಕೆಲವು ದೇಶಗಳಲ್ಲಿ ಹತ್ತಾರು ಮಂದಿ ಕ್ರೈಸ್ತಪಾದ್ರಿಗಳು ಇದೇ ಪರಂಪರೆಯಲ್ಲಿ ಕ್ರಿಯಾಶೀಲರಾಗಿ ಪ್ರಸಿದ್ಧಿ ಪಡೆದಿದ್ದಾರೆ. ಅವರು "ವಿಮೋಚನಾ ಮತಧರ್ಮ ಸಿದ್ಧಾಂತ"ವೆಂದು ತಮ್ಮ ಚಿಂತನೆ ಹಾಗೂ ಕ್ರಿಯೆಗಳನ್ನು ವ್ಯಾಖ್ಯಾನಿಸಿಕೊಂಡಿದ್ದಾರೆ. ಅವರೆಲ್ಲಾ ರಾಜಕೀಯವಾಗಿ ಸಕ್ರಿಯರಾಗಿರುವ ಜನ. ಆದರೆ ಮತಧರ್ಮದ ಗುಂಗಿನಲ್ಲಿ ಶೋಷಿತ ಜನರು ಭಾವೋದ್ರೇಕಗಳಿಂದ ಅಸಹ್ಯ ಪ್ರವೃತ್ತಿಗಳಿಗೆ ಬಲಿಯಾಗದಂತೆ ಅವರನ್ನು ಸಂಘಟಿಸುವ ರಾಜಕಾರಣ ಇವರದು. ಕ್ರೈಸ್ತಮತದ ಮೌಲ್ಯಗಳು ಜೀವಂತವಾಗಿ ಅರ್ಥ ಪಡೆದುಕೊಳ್ಳಬೇಕೆಂಬ ಆಸಕ್ತಿ ಇವರಲ್ಲಿ ವಿಶೇಷವಾಗಿದೆ.

ಇದಕ್ಕೆ ಸಂಪೂರ್ಣವಾಗಿ ವ್ಯತಿರಿಕ್ತವಾದದ್ದು ಮತಧರ್ಮದ ಜಡ್ಡು ಸಂಪ್ರದಾಯದ ಅಧಿಕೃತ ವಕ್ತಾರರ ನಡತೆ. ಇದಕ್ಕೆ ಒಂದು ಉದಾಹರಣೆಯೆಂದರೆ ಇಸ್ಲಾಂನ ಹೆಸರಿನಲ್ಲಿ ಅತ್ಯಂತ ಅಮಾನವೀಯ ಕೃತ್ಯಗಳಲ್ಲಿ ತೊಡಗಿರುವ ತಾಲಿಬಾನ್ ತಂಡಗಳದ್ದು; ಇದು ಖೊಮೇನಿ ಸಂಪ್ರದಾಯ. ಮತಧರ್ಮದ ರಕ್ಷಣೆಯ ಹೆಸರಿನಲ್ಲಿ ಜನರನ್ನು ಹಿಂಸಿಸುವ, ಕೊಲ್ಲುವ, ಅಪಮಾನಿಸುವ ಬೀಭತ್ಸ ಲಕ್ಷಣ ಇದರಲ್ಲಿದೆ. ಮಹಿಳೆಯರನ್ನು ತುಚ್ಛವಾಗಿಸುವುದಂತೂ ಇದರ ಮೂಲಭೂತ ಗುಣ. ಅದೂ ರಾಜಕೀಯವೇ, ಇತಿಹಾಸ ವಿರೋಧಿ ರಾಜಕೀಯ. ಇಂತಹ ಉದಾಹರಣೆಗಳು ಬೇರೆ ಮತಗಳ ಮೂಸೆಯಲ್ಲೂ ದೊರೆಯುತ್ತವೆಂಬುದು ವ್ಯಾವಹಾರಿಕ ಸತ್ಯ.

ಇಂತಹ ಪರಿಸ್ಥಿತಿಯು ಉದ್ಭವವಾಗುವುದಾದರೂ ಏಕೆಂಬುದು ಒಂದು ಸೈದ್ಧಾಂತಿಕ ಪ್ರಶ್ನೆ. ಅದರ ವಿಶ್ಲೇಷಣೆ ಮಾಡಿ ಪರಿಹಾರ ಕಂಡುಕೊಳ್ಳದೆ ಸುಮ್ಮನೆ ಮುಲ್ಲಾ - ಮಠಾಧ್ಯಕ್ಷ-ಪಾದ್ರಿಗಳನ್ನು ದೂಷಿಸಿ, ವಿಡಂಬನೆ ಮಾಡಿ, ಇದು ಹೀಗೇ ಇರುತ್ತದೆಂದು ಅಸಹಾಯಕತೆಯನ್ನು ಪ್ರದರ್ಶಿಸುವುದು ನಿರರ್ಥಕ. ಹಿಟ್ಲರನಂತಹ ವ್ಯಕ್ತಿಯೊಬ್ಬ ಎಂತಹ ಹಿನ್ನೆಲೆಯಿಂದ ಪ್ರವರ್ಧಮಾನಕ್ಕೆ ಬಂದ, ಯಾರ ಹಿತಾಸಕ್ತಿಗಳನ್ನು ರಕ್ಷಿಸುವುದು ಅವನ ಉದ್ದೇಶವಾಯಿತು ಮತ್ತು ಇದಕ್ಕಾಗಿ ಯಾರು ಅಪಾರ ಕಷ್ಟ-ನಷ್ಟಗಳನ್ನು ಅನುಭವಿಸಿದರು ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಂಡರೆ ಈ ಸೈದ್ಧಾಂತಿಕ ಪ್ರಶ್ನೆಯು ಜಟಿಲವಾಗಿ ಉಳಿಯುವುದಿಲ್ಲ. ಸಂಕ್ಷೇಪವಾಗಿ ಹೇಳುವುದಾದರೆ ಇದರ ತಾತ್ಪರ್ಯ ಹೀಗಿದೆ: ನಮ್ಮದು ಅಭಿವೃದ್ಧಿ ಹೊಂದಬೇಕಾದ ಹಿಂದುಳಿದ ದೇಶ. ನಮ್ಮ ನೈಸರ್ಗಿಕ ಮತ್ತು ಮಾನವ ಸಂಪನ್ಮೂಲಗಳ ಅಪವ್ಯಯ ಮತ್ತು ದುರ್ಬಳಕೆ ದಿನನಿತ್ಯದ ಅನುಭವಕ್ಕೆ ಬರುವ ಸಂಗತಿ. ಅವನ್ನು ರೂಢಿಸಿಕೊಂಡು ಇಡೀ ಜನಸಮುದಾಯದ ಆಕಾಂಕ್ಷೆ ಮತ್ತು ಕ್ರಿಯಾಶಕ್ತಿಯನ್ನು ಋಜುಮಾರ್ಗದಲ್ಲಿ ಕೊಂಡೊಯ್ಯುವ ಸವಾಲು ನಮ್ಮ ಮುಂದಿದೆ. ಅದನ್ನು ಫಲಕಾರಿಯಾಗುವಂತೆ ಎದುರಿಸುವ ಸಾಮೂಹಿಕ ಶಕ್ತಿಯನ್ನು ದುಡಿಯುವ ಜನ ಸಂಘಟಿತರಾಗಿ ಪಡೆಯಬೇಕು; ಅಂತಹ ಮುನ್ನೋಟವಿರುವ ರಾಜಕೀಯ ಸಿದ್ಧಾಂತ ಮತ್ತು ಅದರ ಕಾರ್ಯಕರ್ತನೆನಿಸಿಕೊಳ್ಳುವ ರಾಜಕೀಯ ಪಕ್ಷ ಅಂತಹ ಸಂಘಟನೆಯನ್ನು ರಚಿಸಬೇಕು. ಎಲ್ಲ

ರೀತಿಯ ಅಸಮತೋಲನ ನಮ್ಮಲ್ಲಿದೆ. ಪ್ರಾದೇಶಿಕ, ಭಾಷಿಕ, ಮತೀಯ, ವರ್ಗೀಯ, ಲಿಂಗಭೇದದ ಹಾಗೂ ಇನ್ನಿತರ ಅಸಮತೋಲನಗಳ ಮಧ್ಯೆ ವೈಯಕ್ತಿಕ ಮತ್ತು ಸಾಮೂಹಿಕ ಆಕಾಂಕ್ಷೆಗಳು ಬಲವತ್ತರವಾಗಿ ಪ್ರಕಟವಾಗುತ್ತಿವೆ. ಅವುಗಳನ್ನೆಲ್ಲಾ ಒಂದು ಸ್ಪಷ್ಟವಾದ ದಿಕ್ಕಿನಲ್ಲಿ ಚಲಿಸುವಂತೆ ಮಾಡುವ ಸನ್ನಿವೇಶವನ್ನು ನಾವು ರಚಿಸಿಕೊಂಡಿಲ್ಲ ಮತ್ತು ಒಂದು ಗುರಿಯತ್ತ ಸಾಗಲು ಪ್ರೇರೇಪಿಸುವಂತಹ ಒಂದು ಗಾರೆಯಿಂದ ಅವನ್ನು ಒಟ್ಟಾಗಿಸುವ ಯತ್ನವೂ ನಮ್ಮಲ್ಲಿ ಅಷ್ಟಾಗಿ ನಡೆದಿಲ್ಲ. ಹತಾಶೆ, ಅಸ್ಥಿರತೆ, ವಿಭಜನೆಯ ಮನೋಭಾವ, ಇತರರನ್ನು ಆಕ್ರಮಣ ಮಾಡುವಂತಹ ದೃಷ್ಟಿ, ಅಸ್ಮಿತೆಯ ಪ್ರದರ್ಶನ, ಇವುಗಳೆಲ್ಲಾ ಅದರ ಫಲ. ಉತ್ಪಾದನೆಯ ಸಲಕರಣೆಗಳನ್ನು ಹತೋಟಿಯಲ್ಲಿಟ್ಟುಕೊಂಡಿರುವವರಿಗೆ ಲಾಭಗಳಿಕೆಗೆ ಇಂತಹ ಬಿಕ್ಕಟ್ಟಿನ ಸನ್ನಿವೇಶವು ಪ್ರಶಸ್ತವಾಗಿದೆ. ಆದ್ದರಿಂದ ಅದಕ್ಕೆ ಸೊಪ್ಪು ಹಾಕುವುದು ಅವರಿಗೆ ಸಹಜವಾಗಿದೆ. ಈ ಕೊಂಡಿಯಿಂದ ಬಿಡಿಸಿಕೊಳ್ಳಲು ನಮಗೆ ಇಂದಿನ ಸಾಮಾಜಿಕ-ಆರ್ಥಿಕ ಸಂರಚನೆಗೆ ಪರ್ಯಾಯವಾದ ಬೇರೊಂದು ಸಂರಚನೆಯ ಅಗತ್ಯವಿದೆ. ಅದರ ಪ್ರಜ್ಞೆಯೇ ಮೂಡದಿರುವಂತೆ ದಿಗ್ಬಂಧನ ವಿಧಿಸುವ ಸಂಚು ನಮ್ಮಲ್ಲಿ ನಡೆದಿದೆ, ನಡೆಯುತ್ತಿದೆ. ಅದರಿಂದಾಗಿ ಅಮೂರ್ತವಾದ ಮತ್ತು ಅಧ್ರುವವಾದ ಆಶಯಗಳಿಗೆ ಪ್ರಾಮುಖ್ಯತೆ ದೊರೆತು ನಿಜಕ್ಕೂ ಪ್ರಸ್ತುತವಾದ ವಿಷಯಗಳು ಪ್ರಕಾಶಕ್ಕೆ ಬರುತ್ತಿಲ್ಲ. ಶಿಕ್ಷಣ ದೊರೆತೋ ದೊರೆಯದೆಯೋ ಇರುವ ವ್ಯಕ್ತಿ ನಿರುದ್ಯೋಗಿಯಾಗಿ ತನ್ನ ವ್ಯಕ್ತಿತ್ವದ ಪ್ರಕಟಣೆಗೆ ಅವಕಾಶಗಳನ್ನು ಕಳೆದುಕೊಂಡಾಗ ಯಾವುದೋ ಅಮೂರ್ತವಾದ ಆಶಯಕ್ಕೆ ಜೋತುಬೀಳುವುದು ಅಸ್ವಾಭಾವಿಕವಲ್ಲ. ಆಗ ಅವನಿಗೆ ಇಟ್ಟಿಗೆ, ರಥಯಾತ್ರೆ, ಧರ್ಮಕಾರಣ, ಮಸೀದಿ, ಮಂದಿರ, ಇವೇ ಬೌದ್ಧಿಕ ಆಹಾರ ಒದಗಿಸಲಾರಂಭಿಸುತ್ತವೆ.

ಮತಧರ್ಮವು ರಾಜಕೀಯವನ್ನು ಆವರಿಸುವಾಗ ಎಂತಹ ಪ್ರಕ್ರಿಯೆಯನ್ನು ಆರಂಭಿಸಬಾರದೋ ಅದನ್ನು ಆರಂಭಿಸುವುದು ಇಂತಹ ಆಯಕಟ್ಟಿನಲ್ಲಿ. ಇತರರ ಅಜ್ಞಾನವು ನನ್ನ ರಾಜಕೀಯ ಬಂಡವಾಳವಾದಾಗ ದಾಳಗಳನ್ನು ಎಸೆಯುವವನು ನಾನು, ಅವರು ಕೇವಲ ಪೇದೆಗಳಾಗಿ ಬಿಡುತ್ತಾರೆ. ಆಕಾಶದಲ್ಲೆಲ್ಲೋ ಕಂಗೊಳಿಸುವ ಸಂಪತ್ತನ್ನು ತಮಗೆ ಕೊಡಿಸಲಾಗುತ್ತದೆಯೆಂಬ ಭ್ರಮೆ ಅವರನ್ನು ಹುಚ್ಚೆಬ್ಬಿಸುತ್ತದೆ. ಈ ಚದುರಂಗದಾಟದಲ್ಲಿ ಯಾರೋ ಕುತಂತ್ರಿಯು ಸಂಪತ್ತನ್ನು ದೋಚಿ ಸವಿಯುತ್ತಾನೆ.

ಪಾಪ ಪ್ರಜ್ಞೆಯನ್ನು ಹಗುರ ಮಾಡಿಕೊಳ್ಳಲು ನಮ್ಮಲ್ಲಿ ವಿಪುಲವಾದ ಸಾಮಗ್ರಿಗಳಿವೆ. ಪೂಜೆ, ಪುರಸ್ಕಾರ, ಭಜನೆ, ಯಜ್ಞ, ಸಂಕೀರ್ತನೆ, ದಕ್ಷಿಣೆ, ತೀರ್ಥಯಾತ್ರೆ, ಇವುಗಳು ಅಂತಹ ಕೆಲವು ಸಾಮಗ್ರಿಗಳು ಮಾತ್ರ. ಶಿಕ್ಷಣ ಸಂಸ್ಥೆಯೊಂದನ್ನು ನಡೆಸುವ ಕ್ರೈಸ್ತ ಸಂಪ್ರದಾಯದ ಒಂದು ಗುಂಪು ಹಿಂದೊಮ್ಮೆ ಕೇರಳ ಮತ್ತು ಕರ್ನಾಟಕಗಳಲ್ಲಿ ದೊಡ್ಡ ದೊಡ್ಡ ಪ್ರತಿಭಟನಾ ಮೆರವಣಿಗೆಗಳನ್ನು ನಡೆಸಿತ್ತು. ಕಾರಣ ಸ್ವಾರಸ್ಯವಾಗಿತ್ತು. ಆ ಸಂಸ್ಥೆಯ ನಿಯಮ ಬಾಹಿರ ದುಷ್ಕೃತ್ಯಗಳನ್ನು ಬಹಿರಂಗಗೊಳಿಸಿ ಅವನ್ನು ಮಾಡಬಾರದೆಂದು ವಿಶ್ವವಿದ್ಯಾನಿಲಯವೊಂದು ಸಂಸ್ಥೆಗೆ ನಿರ್ದೇಶನ ನೀಡಿದ್ದು ಅವರ ಧರ್ಮಪ್ರಜ್ಞೆಯನ್ನು ಹೊಡೆದೆಬ್ಬಿಸಿತ್ತು. ಪ್ರತಿ ಭಾನುವಾರ

ಇಗರ್ಜಿಗೆ ಹೋಗುವವನು ಯಾವ ನಿಯಮ ಉಲ್ಲಂಘಿಸಿದರೇನು, ಪರಮಾತ್ಮನ ರಕ್ಷಣೆ ಅವನಿಗೆ ಇದೆಯಲ್ಲವೆ? ಅಂತೆಯೇ ದಿನಕ್ಕೆ ಐದು ಬಾರಿ, ಅಥವಾ ಶುಕ್ರವಾರದಂದು ಒಮ್ಮೆ, ಮಸೀದಿಗೆ ಹೋಗಿ ಸೊಂಟ ಬಗ್ಗಿಸಿದವನಿಗೂ ಅಲ್ಲಾಹನ ರಕ್ಷಣೆ ಇದೆ. ಇನ್ನು ಕಪ್ಪು ಹಣದ ಒಂದು ಭಾಗವನ್ನು ತಿರುಪತಿಯ ತಿಮ್ಮಪ್ಪನಿಗೆ ಲಂಚವಾಗಿ ಕೊಡುವವನಿಗೆ ಯಾವ ಜುಡಿಷಿಯಲ್ ಆಕ್ಟಿವಿಸಂ ತಾನೆ ಏನು ಮಾಡೀತು! ಬಾಯಿಗೆ ಬಟ್ಟೆ ಕಟ್ಟಿಕೊಂಡ ಜೈನ ಮುನಿಗಳು ಯಾವುದೇ ವ್ಯಾಪಾರಿಯ ಮಾನವನ್ನು ಕಾಯಬಲ್ಲರು. ಅಂದರೆ, ಮತಧರ್ಮವು ಇವರಿಗೆಲ್ಲಾ ಅಭೇದ್ಯವಾದ ಗುರಾಣಿಯಾಗಿದೆ. ಆದ್ದರಿಂದ ಮತಧರ್ಮದ ಕಕ್ಷೆಯಲ್ಲಿ ನಡೆಯುವ ರಾಜಕೀಯದಲ್ಲಿ ಅವರೆಲ್ಲಾ ಪಾಲುದಾರರು.

ಚೈತನ್ಯ ಮಹಾಪ್ರಭುಗಳಂತಹವರ ಮತಧರ್ಮದ ಮೌಲ್ಯಪ್ರಜ್ಞೆಯ ಬದಲಾಗಿ ಪೋಪ್ ಪಾಲರಂತಹವರ ಮತಧರ್ಮದ ಲಾಭ ಪ್ರಜ್ಞೆ ಇಂದು ನಮಗೆ ಹಲವು ಸಂದರ್ಭಗಳಲ್ಲಿ ಕಾಣಬರುತ್ತಿದೆ. ಜೊತೆಗೆ ಖೊಮೇನಿಯಂತಹವರ ಮೌಢ್ಯ ಪ್ರಜ್ಞೆಯೂ ಸೇರಿ ಮತಧರ್ಮವು ಅಪಾಯಕಾರಿ ಆಯಾಮಗಳಿಂದ ಕಲುಷಿತಗೊಂಡಿದೆ. ರಾಜಕೀಯದಲ್ಲಿ ಮತಧರ್ಮದ ಕೆಲವು ಘನಾತ್ಮಕ ಮೌಲ್ಯಗಳನ್ನು ಮೇಳೈಸಿಕೊಳ್ಳುವುದು ಸಾರ್ಥಕವಾಗಿರುತ್ತದೆ. ಅವು ಸಾರ್ವತ್ರಿಕ ಮತ್ತು ಸಾಮುದಾಯಿಕ ಆಶಯಗಳ ಪ್ರತಿಫಲನವಾಗಿರಬೇಕು, ಅಷ್ಟೆ. ಆದರೆ, ಅನ್ಯಮತ ದ್ವೇಷವೂ ಸೇರಿದಂತೆ ಕೆಲವು ತ್ಯಾಜ್ಯ ಮನೋಭಾವಗಳನ್ನು ಮತಧರ್ಮದ ಕಪ್ಪು ಛಾಯೆಯಡಿ ರಾಜಕೀಯಕ್ಕೆ ಆರೋಪಿಸಿದಾಗ ಅತಂತ್ರದ ಸ್ಥಿತಿ ಅನಿವಾರ್ಯ. ಅಲ್ಲದೆ, ಮತಧರ್ಮದ ಆಚರಣೆಯು ಸ್ವಕೀಯವಾದದ್ದು, ಖಾಸಗಿಯಾದದ್ದು; ಅದನ್ನು ಸಮೂಹಸನ್ನಿಗೆ ತಿರುಗುವಂತೆ ಬಳಸುವ ರಾಜಕೀಯವು ಸರ್ವಥಾ ಅಸಮರ್ಥನೀಯ.

ಈಗ ಸುಮಾರು ಮೂವತ್ತೈದು ವರ್ಷಗಳ ಹಿಂದೆ ಆಗ್ಗೆ ಲೋಕಸಭಾ ಸದಸ್ಯರಾಗಿದ್ದ ಶ್ರೀ. ಎಚ್.ವಿ. ಕಾಮತ್ ಲೋನಾವ್ಲಾದ ಕೈವಲ್ಯಧಾಮಕ್ಕೆ ಭೇಟಿ ನೀಡಿದ್ದರು. ಒಂದು ಚಿಕ್ಕ ಗೋಷ್ಠಿಯಲ್ಲಿ ಮಾತನಾಡುತ್ತಾ ಅವರೆಂದರು: ''ನಮ್ಮ ರಾಜಕೀಯ ಚಿಂತನೆ ಮತ್ತು ನಡತೆಯಲ್ಲಿ ಯೋಗದ ಅಂಶಗಳನ್ನು ಅಳವಡಿಸಿಕೊಳ್ಳಬೇಕು.'' ಸಭೆಯಲ್ಲಿ ಉಪಸ್ಥಿತರಿದ್ದ ಸ್ವಾಮಿ ಕುವಲಯಾನಂದರು ತಕ್ಷಣ ಹೇಳಿದರು: ''ಹಾಗೇ ಮಾಡಿ, ಆದರೆ ಯೋಗದ ಚಿಂತನೆ ಮತ್ತು ನಡತೆಯೊಳಕ್ಕೆ ನಿಮ್ಮ ರಾಜಕೀಯದ ಪ್ರವೇಶವನ್ನು ಮಾಡಿಸಬೇಡಿ.''

◆

೩. ಧರ್ಮಾಂಧತೆಯ ದೈತ್ಯ ವಿತರ್ಕಕ್ಕೆ ಪರ್ಯಾಯ

ನಮ್ಮ ತರ್ಕಶಾಸ್ತ್ರ ಗ್ರಂಥಗಳಲ್ಲಿ ನ್ಯಾಯಕುಸುಮಾಂಜಲಿಗೆ ಒಂದು ಪ್ರಶಸ್ತ ಸ್ಥಾನವಿದೆ. ಅದನ್ನು ಬರೆದವನು ಉದಯನಾಚಾರ್ಯ. ನಾಲ್ಕು ಅಧ್ಯಾಯಗಳಲ್ಲಿರುವ ಈ ಗ್ರಂಥ ದೇವರ ಅಸ್ತಿತ್ವವನ್ನು ತರ್ಕಶಾಸ್ತ್ರದ ಪ್ರಮಾಣಗಳ ಆಧಾರದ ಮೇಲೆ ಪ್ರತಿಷ್ಠಾಪಿಸುತ್ತದೆ. ಆ ತರ್ಕ ಎಷ್ಟು ಶುದ್ಧವಾದದ್ದು ಅಥವಾ ಕಲುಷಿತವಾದದ್ದು ಎಂಬುದು ಇಲ್ಲಿ ಅಪ್ರಸ್ತುತ. ಉದಯನನು ಬರೆದನೆಂದು ಹೇಳಲಾದ ಒಂದು ಶ್ಲೋಕ ಹೀಗಿದೆ:

ಐಶ್ವರ್ಯಮದಮತ್ತೋऽಸಿ ಮಾಮವಜ್ಞಾಯ ವರ್ತಸೇ|
ಉಪಸ್ಥಿತೇಷು ಬೌದ್ಧೇಷು ಮದಧೀನಾ ತವ ಸ್ಥಿತಿಃ||

ಬಹುಶಃ ಉದಯನ ಬಡವನಾಗಿದ್ದಿರಬಹುದು. ದೇವರಲ್ಲಿ ಹೇಳಿದ: ಅಯ್ಯಾ ದೇವರೇ, ಐಶ್ವರ್ಯದ ಮದದಿಂದಾಗಿ ನನ್ನನ್ನು ಉಪೇಕ್ಷಿಸುತ್ತಾ ಇದ್ದೀಯೆ. ಆಗಲಿ, ತಾಳು; ಆ ಬೌದ್ಧರು ಬಂದು ನಿನ್ನನ್ನು ನಿರ್ನಾಮ ಮಾಡಹೊರಟಾಗ ನಿನ್ನ ಅಸ್ತಿತ್ವವೇ ನನ್ನ ಅಧೀನದಲ್ಲಿರುತ್ತದೆ!

ಒಂದು ದಾರ್ಶನಿಕ ದೃಷ್ಟಿಯವರಿಗೆ ದೇವರಿಲ್ಲ, ಇನ್ನೊಂದು ದೃಷ್ಟಿಯವರಿಗೆ ಅವನಿದ್ದಾನೆ. ಇದ್ದಾನೆಂದು ಕಲ್ಪಿಸಿಕೊಂಡವರಲ್ಲಿ ನೂರಾರು ಭೇದಗಳು. ಅವನ ತಥಾಕಥಿತ ಸ್ವರೂಪದ ಬಗ್ಗೆ ಅನೇಕ ನಿರೂಪಣೆಗಳು. ಅವನ ಆರಾಧನಾ ವಿಧಾನಗಳಲ್ಲಿ ಅಸಂಖ್ಯ ವ್ಯತ್ಯಾಸಗಳು. ಅವನ ಸೇವೆ ಮಾಡಿ ಗಳಿಸಿಕೊಳ್ಳಬೇಕಾದ್ದೇನು ಎಂಬುದರ ಬಗ್ಗೆ ಹತ್ತಾರು ವಿಧದ ವ್ಯಾಖ್ಯಾನಗಳು. ಅವನಿಲ್ಲವೆಂದು ತಿಳಿಯುವವರ ವಿರುದ್ಧ ಹರಿಹಾಯುವುದು ಅವನಿದ್ದಾನೆಂದು ಭಾವಿಸಿಕೊಂಡಿರುವವರ ಒಂದು ಉಗ್ರ ಸಂಪ್ರದಾಯ. ಅವನನ್ನು ಭಜಿಸುವುದರಲ್ಲಿರುವ ಆಸಕ್ತಿಯ ಹತ್ತು ಪಟ್ಟು ಆಸಕ್ತಿ ಅವನಿಲ್ಲವೆನ್ನುವವರನ್ನು ಸದೆಬಡಿಯುವುದರಲ್ಲಿ ಇರುವುದನ್ನು ಇತಿಹಾಸದ ಪುಟಗಳಲ್ಲಿ ಕಾಣುತ್ತೇವೆ. ನಮ್ಮ ದೇವರಲ್ಲಿ ನಂಬಿಕೆ ಮೂಡುವಂತೆ ಮಾಡುವುದು ಅತಿಮುಖ್ಯ; ಅದಕ್ಕಾಗಿ ಅವರ ದೇವರನ್ನು ಹಳಿಯಬೇಕು, ತುಳಿಯಬೇಕು.

ಉದಯನಾಚಾರ್ಯನು ದೇವರ ಅಸ್ತಿತ್ವವನ್ನು ಸ್ಥಿರೀಕರಿಸಿದ, ಆದರೆ ದೇವರು ಅವನಿಗೆ ಒಲಿಯಲಿಲ್ಲ. ಬೌದ್ಧ ದರ್ಶನದಲ್ಲಿ ದೇವರಿಗೆ ಸ್ಥಾನವಿಲ್ಲ; ಆದ್ದರಿಂದ ಆ ದರ್ಶನದ ಹುಳುಕುಗಳನ್ನು ಎತ್ತಿ ತೋರಿಸಿ ಅದನ್ನು ಖಂಡಿಸಿಸುವುದು ಉದಯನಾಚಾರ್ಯನ ಬೌದ್ಧಿಕ

ಶಿಸ್ತಾಯಿತು. ಆದರೆ ಅವನ ನೈಯಾಯಿಕ ದರ್ಶನದಲ್ಲಿ ದೇವರನ್ನು ಒಲೈಸಿ ಅವನಿಂದ ಏನೆಲ್ಲಾ ಪಡೆಯಬಹುದೆಂಬುದರ ಪ್ರಸ್ತಾಪವಿಲ್ಲ. ದೇವರಿದ್ದಾನೆ, ಅಷ್ಟೆ; ಅದಕ್ಕೆ ನೀವೇನೂ ಮಾಡಬೇಕಾಗಿಲ್ಲ. ಮೋಕ್ಷಕ್ಕೆ ಸಮಾನವಾದ ಅಪವರ್ಗವೆಂಬುದನ್ನು ಪಡೆಯಲು ವಸ್ತುನಿಷ್ಠ ಸತ್ಯದ ಅರಿವು ಪಡೆಯಬೇಕು; ಅದಕ್ಕೆ ಪ್ರಮಾಣಜ್ಞಾನವು ಸಾಧನೆ. ದೇವರಿಗೆ ಪೂಜೆ, ಅಭಿಷೇಕ, ಮಂಗಳಾರತಿ, ಯಾವುದೂ ಇಲ್ಲ. ಪಾಪ, ಆ ದೇವರು ಇದ್ದರೂ ಒಂದೇ, ಇಲ್ಲದಿದ್ದರೂ ಒಂದೇ. ಅವನಿಗೆ ಭಕ್ತಮಂಡಲಿ ಇಲ್ಲ, ಮಂದಿರ ಕಟ್ಟಬೇಕೆನ್ನುವವರಿಲ್ಲ, ಹದಿನಾರು ಸಹಸ್ರ ಹೆಂಡಂದಿರೂ ಇಲ್ಲ. ಅಂತಹವನನ್ನು ಕಲ್ಪಿಸಿಕೊಳ್ಳುವುದು ದಂಡವೆಂದೋ ಏನೋ, ಬೌದ್ಧರಾದಿಯಾಗಿ ಅನೇಕ ಭಾರತೀಯ ದರ್ಶನಗಳು ಅವನನ್ನು ಬುಟ್ಟಿಯಲ್ಲಿಟ್ಟು ತೇಲಿಬಿಟ್ಟು ಪ್ರಪಾತಕ್ಕೆ ಕಳಿಸಿಬಿಟ್ಟರು.

ಬುದ್ಧನನ್ನು ಅವನ ಶಿಷ್ಯರು ಒಮ್ಮೆ ಪ್ರಶ್ನಿಸಲು ಹೋದರು. ಆಗ ಬುದ್ಧ ಒಂದು ಆಲದ ಮರದ ಕೆಳಗೆ ಕುಳಿತಿದ್ದ. ಶಿಷ್ಯರು ಆತ್ಮ, ಪರಮಾತ್ಮ, ಪುನರ್ಜನ್ಮ, ಇತ್ಯಾದಿಗಳಿಗೆ ಸಂಬಂಧಿಸಿದ ಅವರ ಅನುಮಾನಗಳನ್ನು ಬಗೆಹರಿಸಬೇಕೆಂದು ಕೇಳಿಕೊಂಡರು. ಬುದ್ಧ ಅವನ ಸುತ್ತ ಬಿದ್ದಿದ್ದ ಒಂದಷ್ಟು ಒಣಗಿದ ಎಲೆಗಳನ್ನು ಕೈಯಲ್ಲಿ ಹಿಡಿದು ಕೇಳಿದ: ನನ್ನ ಕೈಯಲ್ಲಿ ಈಗ ಎಷ್ಟು ಎಲೆಗಳಿವೆ ಹೇಳಬಲ್ಲಿರಾ? ಶಿಷ್ಯರು ಗೊತ್ತಿಲ್ಲವೆಂದರು. ಆಗ ಅವನು ಹೇಳಿದ: ಇವನ್ನು ಎಣಿಸದೆಯೇ ನಾನು ಹೇಳಬಲ್ಲೆ ಎಂದಿಟ್ಟುಕೊಳ್ಳಿ. ಜೊತೆಗೆ, ಮರದಡಿ ಎಷ್ಟು ಬಿದ್ದಿವೆ, ಬೀಳದೆ ಮರದ ಮೇಲೆ ಇನ್ನೆಷ್ಟು ಉಳಿದಿವೆ, ಎಂಬುದನ್ನೂ ಹೇಳಬಲ್ಲೆ ಎಂದಿಟ್ಟುಕೊಳ್ಳಿ. ಅದರಿಂದ ನಿಮಗೇನು ಲಾಭ? ಆ ನನ್ನ ತಿಳಿವಳಿಕೆಯಿಂದ ನನಗಾದರೂ ಏನು ಲಾಭ?

ಬುದ್ಧನ ಇಂಗಿತ ಸ್ಪಷ್ಟವಾಗಿದೆ: ಮೂರ್ತವಾದ ಮತ್ತು ಉಪಯುಕ್ತವಾದ ಜ್ಞಾನಕ್ಕೆ ಹಾತೊರೆಯುವುದರ ಬದಲು ಏನೇನೋ ಬುದ್ಧಿವಂತಿಕೆಯ ಕಸರತ್ತುಗಳಿಂದ ಏಕೆ ದಣಿಯುತ್ತೀರಿ? ದೇವರಿದ್ದಾನೆ ಅಥವಾ ಇಲ್ಲವೆಂದು ಬಗೆಯಬಹುದೇ ವಿನಾ ತಿಳಿಯಲಾಗುವುದಿಲ್ಲ. ಅವನಿರಲಿ, ಇಲ್ಲದಿರಲಿ, ನಾವಿದ್ದೇವೆ; ನಮ್ಮ ಸುತ್ತ ಜನರಿದ್ದಾರೆ, ಅವರೊಡನೆ ನಮ್ಮ ಸಂಬಂಧಗಳಿವೆ; ಆ ಸಂಬಂಧಗಳನ್ನು ನಿರ್ದೇಶಿಸುವ ನೈತಿಕ ಸೂತ್ರ ಮುಖ್ಯವಾದ್ದು, ಉಪಯುಕ್ತವಾದ್ದು. ಅದು ಅಮೂರ್ತವಲ್ಲ, ವಾಸ್ತವಿಕವಾದ್ದು. ಆದ್ದರಿಂದ ಅದರ ಬಗೆಗೆ ಆಸಕ್ತಿ ವಹಿಸಿ, ವ್ಯಕ್ತಿತ್ವ ಬೆಳೆಸಿಕೊಳ್ಳಿ.

ಬುದ್ಧನು ಸ್ಥಾಪಿಸಿದ ಸಂಘವು ಇದನ್ನು ಎಷ್ಟರಮಟ್ಟಿಗೆ ಸಾಧಿಸಿತು ಅಥವಾ ಇಲ್ಲವೆಂಬುದು ಚರಿತ್ರೆಯ ಪ್ರಶ್ನೆ; ಆದರೆ ಅದನ್ನು ನಾವು ಸಾಧಿಸುತ್ತೇವೆಯೇ ಎಂಬುದು ಸಮಕಾಲೀನ ಸವಾಲು. ಬುದ್ಧನಿಗೆ ವಿಶ್ವದ ಬಗ್ಗೆ ಕುತೂಹಲ, ವಿಸ್ಮಯಗಳಿರಲಿಲ್ಲವೆ? ಯಾವುದೇ ದಾರ್ಶನಿಕನಿಗೆ ಇದ್ದುದಕ್ಕಿಂತ ವಿಪುಲವಾಗಿಯೇ ಇತ್ತು. ಆದರೆ ಅದನ್ನೇ ದೊಡ್ಡದು ಮಾಡಿ ಪ್ರಸ್ತುತ ಅಸ್ತಿತ್ವದ ಪ್ರಶ್ನೆಗಳನ್ನು ಗೌಣವಾಗಿಸುವುದು ಅವನಿಗೆ ಬೇಡವಾಗಿತ್ತು. ಆ ಗಂಭೀರ ವಿಸ್ಮಯವನ್ನು ಅಂತರಾಳದಲ್ಲಿ ಅನುಭವಿಸುತ್ತಲೇ ಬಾಹ್ಯ ಪ್ರಪಂಚದ ವ್ಯವಹಾರಗಳಿಗೆ ಆತ ಪ್ರತಿಕ್ರಿಯಿಸಿದ,

ನಿಯಮಾವಳಿಯನ್ನು ರೂಪಿಸಿದ. ಅವನು ಕಂಡ ಸಮಾಜದಲ್ಲಿ ಶ್ರೇಣೀಕೃತ ವ್ಯವಸ್ಥೆ ಇತ್ತು; ಅದನ್ನು ಬುದ್ಧ ಪ್ರಶ್ನಿಸಿದ, ನಿರಾಕರಿಸಿದ. ಸಾಮಾಜಿಕ ನಿಯಮಗಳು ಹಾಗಿರಬೇಕೆಂದು ಧರ್ಮಶಾಸ್ತ್ರ ಗ್ರಂಥಗಳು ಹೇಳುತ್ತವಲ್ಲಾ ಎಂದು ಶಿಷ್ಯರು ಜ್ಞಾಪಿಸಿದಾಗ ಅವನೆಂದ: ನೀವು ಹೇಳುವುದು ಸರಿ; ಧರ್ಮಶಾಸ್ತ್ರ ಗ್ರಂಥಗಳು ಹಾಗೆ ಹೇಳುತ್ತವೆ. ನಾವದನ್ನು ಬದಲಾಯಿಸಬೇಕು!

ಇಂದು ನಮ್ಮ ಮುಂದಿರುವ ಪ್ರಮುಖ ಪ್ರಶ್ನೆಗಳಿಗೆ ಬುದ್ಧನ ವಿಶ್ಲೇಷಣೆ ಮತ್ತು ಸಿದ್ಧಾಂತ ಮಾರ್ಗದರ್ಶನ ನೀಡಬಲ್ಲವು. ಮೂಲತಃ ಪ್ರಪಂಚದಲ್ಲಿರುವ ಮತಧರ್ಮಗಳು ಹುಟ್ಟಿಕೊಂಡದ್ದು ಹೇಗೆ ಮತ್ತು ಅವುಗಳ ಪ್ರಧಾನ ಆಕಾಂಕ್ಷೆಗಳೇನಿದ್ದವು? ಮನುಷ್ಯನ ಹುಟ್ಟು-ಸಾವು, ಅಸ್ತಿತ್ವ, ಸುತ್ತಣ ಜಗತ್ತಿನೊಡನೆ ಸಂಬಂಧ, ಆ ಜಗತ್ತಿನ ಅರ್ಥೈಸುವಿಕೆ, ಇದೆಲ್ಲದರ ಮೂಲೋದ್ದೇಶ, ಇತ್ಯಾದಿಗಳು ಮತಧರ್ಮದ ಮೂಲದಲ್ಲಿವೆ. ಒಂದೊಂದು ಪರಿಸರದಲ್ಲಿ ಒಂದೊಂದು ಅನುಭವ ಮತ್ತು ಅದರಿಂದಾಗಿ ವಿವಿಧ ಕಲ್ಪನೆಗಳು. ಆದ್ದರಿಂದಲೇ ದ್ವೀಪದ ದೇವರು ಬೇರೆ, ಕಾಡಿನ ದೇವರು ಬೇರೆ, ಬೆಟ್ಟದ ದೇವರು ಬೇರೆ. ಆ ಜನಗಳ ನಂಬಿಕೆ ಮತ್ತು ಆಚರಣೆಗಳಲ್ಲಿ ವೈವಿಧ್ಯವೂ ಇದರ ಫಲವೇ ಆಗಿದೆ. ಹೀಗಿರುವಾಗ ಈ ನಂಬಿಕೆ ಸರಿಯಾದ್ದು, ಇನ್ನೊಂದು ಸರಿಯಲ್ಲದ್ದು ಎಂಬ ಮಾತೇ ಅರ್ಥಹೀನವಾದ್ದು. ಅಂತೆಯೇ, ಆ ಆಚರಣೆ ಶ್ರೇಷ್ಠವಾದ್ದು, ಇನ್ನೊಂದು ಕ್ಷುದ್ರವಾದ್ದು ಎಂಬ ಭಾವನೆ ಕುಬ್ಜ ಮನಸ್ಸಿನ ದ್ಯೋತಕ. ಮಾನವಶಾಸ್ತ್ರದಲ್ಲಿ ಇಂತಹ ಸಾವಿರಾರು ಸಂಪ್ರದಾಯಗಳ ಉಲ್ಲೇಖವಿದೆ; ಅದರಲ್ಲಿ ಶ್ರೇಷ್ಠ-ಕನಿಷ್ಠ ಎಂಬ ಗಣನೆಯಿಲ್ಲ, ಕೇವಲ ವೈವಿಧ್ಯವಿದೆ, ಭಿನ್ನತೆ ಇದೆ. ಒಂದೇ ವಾಕ್ಯದಲ್ಲಿ ಹೇಳುವುದಾದರೆ, ಇತಿಹಾಸದ ಬೇರೆಬೇರೆ ಘಟ್ಟಗಳಲ್ಲಿ ಹುಟ್ಟಿಕೊಂಡಿರುವ ಅನಿಸಿಕೆಗಳು ಮತಧರ್ಮಗಳ ಮೂಲಸಾಮಗ್ರಿ. ಭೌಗೋಳಿಕ ವ್ಯತ್ಯಾಸಗಳಿಂದಲೂ ಅನಿಸಿಕೆಗಳ ಭಿನ್ನತೆ ಸಾಧ್ಯವಾಗಿದೆ. ಉಡುಪಿಯ ಮಾಧ್ವ ಸಂಪ್ರದಾಯದ ಹಯಗ್ರೀವ ಟಿಬೆಟ್ಟಿನ ಬೌದ್ಧ ಸಂಪ್ರದಾಯದವರಿಗೆ ಹೇಗೆ ತಾನೆ ರುಚಿಸಬಲ್ಲದು? ಹಾಗಿದ್ದರೂ ಭಗವಂತನಿಗೆ ಹಯಗ್ರೀವಕ್ಕಿಂತಲೂ ಉತ್ತಮವಾದ ಉಣಿಸು ಸಾಧ್ಯವಿಲ್ಲವೆಂದು ವಾದಿಸಿದರೆ ಏನೆನ್ನಬೇಕು? ಅದಕ್ಕಿರುವ ಒಂದೇ ಹೆಸರು:ಜಡ್ಡುಗಟ್ಟಿದ ಮೌಢ್ಯ. ಆಂಗ್ಲಭಾಷೆಯ "ಫಂಡಮೆಂಟಲಿಸಂ" ಎಂದರೆ ಅದಕ್ಕಿರುವುದು ಇದೇ ಆಯಾಮ. ನಾವದನ್ನು ತಪ್ಪಾಗಿ ಮೂಲಭೂತವಾದ ಎನ್ನುತ್ತಿದ್ದೇವೆ. ಚರಿತ್ರೆಯ ಒಂದು ಘಟ್ಟದ ತಿಳಿವಳಿಕೆ, ನಂಬಿಕೆ, ಆಚರಣೆ, ಸಂಪ್ರದಾಯ, ಇವನ್ನೆಲ್ಲಾ ಚರಿತ್ರೆಯ ಎಲ್ಲ ಘಟ್ಟಗಳಿಗೂ ಸಂಪೂರ್ಣವಾಗಿ ಅನ್ವಯವಾಗುವಂತಹ ಅಂಶಗಳೆಂದು ಗರ್ಜಿಸುವುದು ಮತಧಾರ್ಮಿಕ ಮೊಂಡುತನ ಎನಿಸಿಕೊಳ್ಳುತ್ತದೆ. ಅದು ಸಾರ್ವತ್ರಿಕವೂ ಅಲ್ಲ, ಸರ್ವಕಾಲದ ಸತ್ಯವೂ ಅಲ್ಲ. ಯಾವುದೇ ಚಾರಿತ್ರಿಕ ಘಟ್ಟ ತೆಗೆದುಕೊಂಡರೂ ಅದು ಸಾರ್ವತ್ರಿಕವಲ್ಲವೆಂಬುದು ಶತಸ್ಸಿದ್ಧ. ಕೆಂಪಸಾಗರದ ಮಾರಮ್ಮನಿಗೆ ಕ್ಯಾಂಟರ್‌ಬರಿಯಲ್ಲಿ ಮಾನ್ಯತೆ ಇಲ್ಲ; ಉಡುಪಿಯ ಹಯಗ್ರೀವದ ಹೆಸರು ಉರುಗ್ವೆಯಲ್ಲಿ ಪ್ರಚಲಿತವಾಗಿಲ್ಲ! ಯಾವ ಮತಧರ್ಮವೂ ಸಾರ್ವತ್ರಿಕವಲ್ಲವೆಂಬುದಕ್ಕೆ ತರ್ಕ ಬೆಳೆಸಿ ವಾದಿಸುವ

ಅಗತ್ಯವಿಲ್ಲ. ನನ್ನ ಧರ್ಮವನ್ನು ಮಾತ್ರವೇ ದೇವರು ಪ್ರತಿಪಾದಿಸಿದ್ದು ಎಂದು ಎಲ್ಲ ಮತಧರ್ಮದವರೂ ಕೊಚ್ಚಿಕೊಂಡು ತೃಪ್ತಿಪಡಬಹುದು; ಏಕೆಂದರೆ, ಹುಚ್ಚರ ಸಂತೆಯಲ್ಲಿ ಒಬ್ಬರನ್ನೊಬ್ಬರು ಹೀಯಾಳಿಸುವುದಿಲ್ಲ, ಹಿಂಸಿಸುವುದಿಲ್ಲ. ಸಾವಿರ ಕೋಟಿ ಜನರ ಪೈಕಿ ಒಂದು ಲಕ್ಷ ಮಂದಿ ತಮ್ಮ ಹರಿ-ವಾಯುಗಳೇ ಸರ್ವಮಾನ್ಯರೆಂದು ತಿಳಿಯುವುದಾದರೆ ಏನೂ ಅಡ್ಡಿಯಿಲ್ಲ; ಆದರೆ ಬೇರೆಯವರಿಗೆ ಅವರದೇ ವಿಶಿಷ್ಟ ಹರಿ-ವಾಯುಗಳಿರುತ್ತಾರೆ ಎಂಬುದರ ಬಗ್ಗೆ ಜಗಳ ಮಾಡಬಾರದು, ಅಷ್ಟೆ. ಹುಚ್ಚಾಸ್ಪತ್ರೆಯೊಂದರಲ್ಲಿ ನಡೆಯುತ್ತದೆನ್ನಲಾಗುವ ಒಂದು ಸಂವಾದದ ಪರಿಚಯವಿದೆ ತಾನೆ? ಒಬ್ಬನೆಂದ: "ನಾನು ದೇವದೂತ;ದೇವರು ಅವನ ಸಂದೇಶವನ್ನು ಸಾರಲು ನನ್ನನ್ನಿಲ್ಲಿಗೆ ಕಳಿಸಿದ್ದಾನೆ." ಅದಕ್ಕೆ ಪ್ರತಿಯಾಗಿ ಇನ್ನೊಬ್ಬನೆಂದ: "ಹೌದೇ? ಆದರೆ ನಿನ್ನನ್ನು ಕಳಿಸಿದ ಜ್ಞಾಪಕವೇ ನನಗಿಲ್ಲವಲ್ಲ!"

ಮತಧರ್ಮಗಳ ಈ ಅನಿವಾರ್ಯ ಮಿತಿಯನ್ನು ಎಲ್ಲ ಮತಧರ್ಮೀಯರೂ ಅರಿತುಕೊಳ್ಳುವುದು ಪರಸ್ಪರ ದೂಷಣೆ ಮತ್ತು ಕ್ರೌರ್ಯಗಳಿಗೆ ಪ್ರತಿಬಂಧಕವಾಗಬಹುದು. ಮತಧಾರ್ಮಿಕ ಮೊಂಡುತನದ ಅಭಿವ್ಯಕ್ತಿಯಾಗುವುದು ಯಾವುದೇ ಮತಧರ್ಮವು ಸಾರ್ವತ್ರಿಕ ಎಂಬುದಕ್ಕಿಂತಲೂ ಅದು ಸಾರ್ವಕಾಲಿಕ ಎಂಬುದರಲ್ಲಿ. ಅಂದು ನಮ್ಮ ದೇವರು ಅಥವಾ ದೇವದೂತ ಹೇಳಿದ್ದು ಇಂದಿಗೂ ಅದೇ ಮಟ್ಟದಲ್ಲಿ ಸತ್ಯ ಎಂಬುದು ಚರಿತ್ರೆಯ ಬೆಳವಣಿಗೆಯನ್ನು ನಿರಾಕರಿಸುತ್ತದೆ. ಮತಧರ್ಮದ ವಿಕಸನದ ಹಾದಿಯನ್ನು ತಿಳಿದೂ ಈ ರೀತಿಯ ವಾದ ಹೂಡುವುದಂತೂ ತೀರಾ ಹಾಸ್ಯಾಸ್ಪದ. ಮದುವೆ ಮಾಡಿಕೊಂಡ ಮಾರನೆಯ ದಿನವೇ ಸತ್ಯನಾರಾಯಣನ ಪೂಜೆ ಮಾಡಿ ಭವಿಷ್ಯದ ಬಗ್ಗೆ ಜೀವವಿಮೆ ಪಡೆಯುವ ಮಹಾತಂತ್ರ ಈಚಿನ ದಿನಗಳಲ್ಲಿ ವಿಪರೀತವಾಗಿ ಬಳಕೆಯಲ್ಲಿದೆ. ಒಂದು ಸಾವಿರ ವರ್ಷಗಳ ಮಾತಿರಲಿ, ಒಂದು ನೂರು ವರ್ಷಗಳ ಹಿಂದೆ ಕೂಡ ಈ ದೇವರಿಗೆ ಬಂದೆಯಾ, ಹೋದೆಯಾ ಎನ್ನುವವರಿರಲಿಲ್ಲ. ಅವನು ಸಾರ್ವಕಾಲಿಕ ಎಂತಾದಾನು? ಅದೇ ಮಾತು ಬಾಲ ಯೇಸುವಿಗೂ ಅನ್ವಯವಾಗುತ್ತದೆ. ಪ್ರತಿ ಗುರುವಾರ ದಿನಪತ್ರಿಕೆಗಳಿಗೆ ಜಾಹಿರಾತು ತಂದುಕೊಡುವ ಒಂದು ವೈಶಿಷ್ಟ್ಯ ಬಿಟ್ಟರೆ ಈ ಬಾಲ ಯೇಸುವಿಗೆ ಇನ್ನಾವ ಶಕ್ತಿಯೂ ಇಲ್ಲ. ಎಷ್ಟೋ ದೇಶಗಳಲ್ಲಿ ಯೇಸುವಿನ ಈ ಬಾಲಾವತಾರವನ್ನು ಮಾನ್ಯ ಮಾಡಿ ಪೂಜಿಸುವ ಪದ್ಧತಿಯೇ ಇಲ್ಲ. ನಿನ್ನೆ-ಮೊನ್ನೆ ಈ ಬಾಲಕ ನಿಮ್ಮ ಆಕಾಂಕ್ಷೆಗಳನ್ನೆಲ್ಲಾ ಪೂರೈಸುವ ಮಾಂತ್ರಿಕನೆಂಬ ಖ್ಯಾತಿ ಹೊಂದಿರಲಿಲ್ಲ ಎನ್ನುವುದು ಸತ್ಯ. ಹೀಗಿರುವಾಗ ಮತಧರ್ಮದ ನಂಬಿಕೆ ಮತ್ತು ಆಚರಣೆಗಳು ಸಾರ್ವಕಾಲಿಕವಾಗುವುದು ಹೇಗೆ? ವಿವಿಧ ಕಾಲಘಟ್ಟಗಳ ಬೇರೆಲ್ಲ ಬದಲಾವಣೆಗಳನ್ನೂ ಸ್ವೀಕರಿಸಿ ಮತಧರ್ಮದ ಪ್ರತಿಪಾದನೆಗಳನ್ನು ಮಾತ್ರ ಯಾವ ಬದಲಾವಣೆಯೂ ಇಲ್ಲದಂತೆ ಉಳಿಸಿಕೊಳ್ಳಬೇಕೆಂಬ ಬಾಲಿಶ ಹಟವೇಕೆ? ಇದು ಎಲ್ಲ ಮತಧರ್ಮಗಳಿಗೂ ಅನ್ವಯಿಸುತ್ತದೆ. ಸಾವಿರದ ನಾನ್ನೂರು ವರ್ಷಗಳ ಹಿಂದಿನ ಕಟ್ಟುಪಾಡುಗಳನ್ನು ಹಾಗೇ ಉಳಿಸಬೇಕೆಂದು ಕೆಂಡಕಾರುವ ಮೌಲ್ವಿಯು ಮಸೀದಿಯಲ್ಲಿ ನಮಾಜಿಗೆ ಕರೆಕೊಡಲು ಧ್ವನಿವರ್ಧಕ ಬಳಸುತ್ತಾನೆ. ಲಲಿತಾ ಸಹಸ್ರನಾಮದ ಕ್ಯಾಸೆಟ್

ಪಾಕಿಕೊಂಡು ಚಿಕಾಗೋದಲ್ಲಿ ಅಚ್ಚಗನ್ನಡ ಬ್ರಾಹ್ಮಣ ಯುವತಿ ಮಹಾಲಕ್ಷ್ಮಿಯ ಪ್ರಸಾದ ಬೇಡುತ್ತಾಳೆ. ಬೆತ್ಲೆಹಂನಲ್ಲಿ ಯೇಸು ಹುಟ್ಟಿದನೆನ್ನಲಾದ ಜಾಗದಲ್ಲಿರುವ ಚರ್ಚಿನಲ್ಲಿ ಇಸ್ರೇಲಿ ಟ್ಯಾಂಕುಗಳ ಭಯಾನಕ ಧಾಳಿಯನ್ನು ಎದುರಿಸುವ ಸಲುವಾಗಿ ಸಶಸ್ತ್ರ ಪ್ಯಾಲಿಸ್ಟೀನಿಯನ್ನರು ಅಡಗಿ ಕುಳಿತುಕೊಳ್ಳುತ್ತಾರೆ. ಇವೆಲ್ಲಾ ಸಾವಿರ ವರ್ಷದ ಹಿಂದೆ ಇರಲಿಲ್ಲವಲ್ಲಾ, ಈಗೇಕೆ ಮಾಡುತ್ತೀರಿ, ಎಂದು ಗೊಡ್ಡು ಮತಾಂಧರನ್ನು ಕೇಳಬೇಕಾಗಿದೆ. ಈ ಬದಲಾವಣೆ ಸ್ವೀಕರಿಸದ ಮೊಂಡು ಮತಧಾರ್ಮಿಕ ಸಂಪ್ರದಾಯವು ಸಾಮಾಜಿಕ ಸಂಬಂಧಗಳನ್ನು ಪುನರ್ವಿಮರ್ಶೆ ಮಾಡಿಕೊಳ್ಳಬೇಕೆಂಬ ಮಾತನ್ನು ಒಪ್ಪುವುದಿಲ್ಲ. ಇದೊಂದು ಚರಿತ್ರೆಯ ವಿಪರ್ಯಾಸ. ಬರ್ನಾರ್ಡ್ ಷಾ ಬಹಳ ಹಿಂದೆ ಒಂದು ಮಾತು ಹೇಳಿದ: ಹಳೆಯ ನೇಗಿಲು ಬಿಟ್ಟು ಹೊಸ ನೇಗಿಲು ತೆಗೆದುಕೊ ಎಂದರೆ ಕೃಷಿ ಉತ್ಪನ್ನ ಹೆಚ್ಚಿಸಿಕೊಳ್ಳಲು ಕಾತುರನಾಗಿರುವ ರೈತ ಒಮ್ಮೆಲೇ ಮುನ್ನುಗ್ಗುತ್ತಾನೆ; ಆದರೆ ಹಳೆಯ ಬೌದ್ಧಿಕ ಸಾಮಗ್ರಿಯನ್ನು ಬಿಸುಟು ಆಧುನಿಕ ಚಿಂತನೆಯನ್ನು ರೂಢಿಸಿಕೊ ಎಂದರೆ ವಿಮುಖನಾಗುತ್ತಾನೆ.

ಮತಧರ್ಮಗಳ ಜಡ್ಡುತನದ ಮೂಲ ಲಕ್ಷಣ ಇದು. ಅವುಗಳ ಧಾರ್ಮಿಕ ಗ್ರಂಥಗಳಿಗೆ ಸಹ ಇತಿಹಾಸದ ಕಟ್ಟುಪಾಡು ಅನ್ವಯಿಸುತ್ತದೆಂಬ ಗ್ರಹಿಕೆ ಮತಧರ್ಮಗಳಿಗೆ ಮಾನ್ಯವಲ್ಲ. ಇಂದಿನ ಪ್ಯಾಲಿಸ್ಟೈನಿನ ಭೌಗೋಳಿಕ ವಲಯದಲ್ಲಿ ಹುಟ್ಟಿಕೊಂಡ ಕ್ರೈಸ್ತಧರ್ಮ ಮತ್ತು ಇಸ್ಲಾಂ ಎರಡೂ ಆಡಂ ಮತ್ತು ಈವ್‌ಗಳ ಬಗ್ಗೆ ಪ್ರಸ್ತಾಪ ಮಾಡುತ್ತವೆ; ಭಾರತ ಮತ್ತು ಆಫ್ರಿಕಾಗಳಲ್ಲಿ ಹುಟ್ಟಿಕೊಂಡ ಮತಧರ್ಮಗಳಲ್ಲಿ ಅವರ ಹೆಸರೇ ಇಲ್ಲ! ವಿಕಾಸಶೀಲ ಜೀವನಧರ್ಮವನ್ನು ನಿರಾಕರಿಸುವುದು ಮತಧರ್ಮಗಳ ಜಡ್ಡುತನದ ಒಂದು ಸ್ಪಷ್ಟ ನಿದರ್ಶನ. ಗೋಧ್ರಾದಲ್ಲಿ ರೈಲಿಗೆ ಬೆಂಕಿಯಿಟ್ಟು ಜನರನ್ನು ಜೀವಂತ ಸುಡುವುದು ಇಂತಹ ನಿರಾಕರಣೆಯಿಂದ ಸಾಧ್ಯವಾಗುತ್ತದೆ; ಅಂತೆಯೇ ಗುಜರಾತಿನ ಮುಖ್ಯಮಂತ್ರಿ ನರಮೇಧೇಂದ್ರ ಮೋದಿಗೆ ಸಾವಿರ ಜನರನ್ನು ಸುಟ್ಟು ಹಾಕುವ ಮಾನಸಿಕ ವ್ಯಾಧಿಗೂ ಇದು ಬಲವಾದ ಪ್ರೇರಣೆ ನೀಡುತ್ತದೆ.

ನಮ್ಮ ಆಂತರಿಕ ಕೋಮು ಸಂಬಂಧಗಳನ್ನು ಸುಧಾರಿಸಲು ಒಂದು ಪ್ರಬಲ ಬೌದ್ಧಿಕ ಸಾಧನೆಯ ಪ್ರಯೋಗ ಅಗತ್ಯವಾಗಿದೆ. ಆ ಸಾಧನೆಯೆಂದರೆ ಐತಿಹಾಸಿಕ ಪ್ರಜ್ಞೆ, ಮಾನವ ಸಮಾಜದ ವಿಕಾಸದ ಹಾದಿಯ ಬಗೆಗಿನ ತಿಳಿವಳಿಕೆ ಮತ್ತು ಮಾನವತಾ ಧರ್ಮದ ಅನುಸರಣೆ. ಮತಧರ್ಮಗಳ ಬೇರೆ ಯಾಂತ್ರಿಕ ಆಚರಣೆಗಳನ್ನು ವೈಯಕ್ತಿಕ ಮಟ್ಟಕ್ಕೆ ಸೀಮಿತಗೊಳಿಸಿ, ಐತಿಹಾಸಿಕ ಪ್ರಜ್ಞೆ ಮತ್ತು ಮಾನವತಾಧರ್ಮದ ಅನುಸರಣೆಯನ್ನು ಸಾಮುದಾಯಿಕ ಮಟ್ಟಕ್ಕೆ ಏರಿಸಬೇಕಾಗಿದೆ. ಕೋಮು ಸಾಮರಸ್ಯ ಚಳುವಳಿಯ ಪ್ರಣಾಲಿಕೆಯ ಮೂಲಭೂತ ಸೂತ್ರ ಇದೇ ಆಗಬೇಕೆಂದು ತೋರುತ್ತದೆ.

೪. ಮತಧರ್ಮ ಮತ್ತು ರಾಜಕೀಯ

ಮತಧರ್ಮಗಳನ್ನು ಪ್ರತಿನಿಧಿಸುವ ಸಂಸ್ಥೆಗಳಲ್ಲಿ ರಾಜಕೀಯ ತುಂಬಿರುವುದು ಹೊಸತೇನೂ ಅಲ್ಲ. ಈಚಿನ ದಶಕಗಳಲ್ಲಿ ಆ ಸಂಸ್ಥೆಗಳ ಧುರೀಣರು ರಾಜಕೀಯವನ್ನು ತಮ್ಮ ಮೂಲಧನವಾಗಿಸಿಕೊಂಡಿರುವುದು ಎಲ್ಲರಿಗೂ ತಿಳಿದಿದೆ. ಅದು ಎಲ್ಲ ಧರ್ಮಸಂಸ್ಥೆಗಳಿಗೂ ಅನ್ವಯಿಸುವ ಮಾತು. ಬೆಂಗಳೂರಿನ ಸೆಂಟ್ ಜಾನ್ಸ್ ಮೆಡಿಕಲ್ ಕಾಲೇಜಿನ ನಡತೆಯ ಬಗ್ಗೆ ಬೆಂಗಳೂರಿನ ವಿಶ್ವವಿದ್ಯಾನಿಲಯವು ಒಂದು ತೀರ್ಮಾನ ಕೈಗೊಂಡಾಗ ಅದನ್ನು ವಿರೋಧಿಸಲು ಕೇರಳದ ಕ್ರೈಸ್ತ ಧರ್ಮೀಯರು ಮೆರವಣಿಗೆ ತೆಗೆದಿದ್ದರು. ಅದು ಜರುಗಿ ಇಪ್ಪತ್ತೈದು ವರ್ಷಗಳು ಕಳೆದಿವೆ. ಆಗಿನ ಪ್ರಧಾನಿಯ ಕಾರ್ಯದರ್ಶಿ ದೆಹಲಿಯಿಂದ ಒತ್ತಡ ತಂದು ವಿಶ್ವವಿದ್ಯಾನಿಲಯದ ಕೈ ಕಟ್ಟಿಹಾಕಿಸಿದ್ದರು.

ಅದನ್ನು ಮೀರಿಸುವಂತಹ ಅನೇಕ ವಿದ್ಯಮಾನಗಳು ಈಚಿನ ದಿನಗಳಲ್ಲಿ ನಡೆದಿವೆ. ಯಾವುದೋ ಜಗದ್ಗುರುವು ಇಂತಹ ಪುಸ್ತಕವನ್ನು ವಿದ್ಯಾರ್ಥಿಗಳು ಓದಬಾರದೆಂಬ ಮೂರ್ಖಮಾತು ಹೇಳಿದರೆ ಅದರಂತೆ ತಲೆದೂಗುವ ಮಂತ್ರಿಮಂಡಲಗಳು ನಮ್ಮಲ್ಲಿ ತಲೆಯೆತ್ತಿವೆ. ಮತಧರ್ಮದ ಸಾಂಸ್ಥಿಕ ಆಯಕಟ್ಟಿನಲ್ಲಿ ರಾಜಕೀಯ ತೂರವಂತೆಯೇ ರಾಜಕೀಯವನ್ನು ಮತಧರ್ಮಧ ನಿಟ್ಟಿನಿಂದ ನಡೆಸುವ ಪ್ರವೃತ್ತಿಯೂ ನಮ್ಮಲ್ಲಿದೆ. ಇದೂ ಹಿಂದೆ ಇದ್ದದ್ದೆ; ಆದರೆ ಈಗ ಅದು ಹೆಚ್ಚು ವ್ಯಾಪಕವಾಗಿದೆ ಮತ್ತು ವಿಷದ ಗಾಳಿಯನ್ನು ಹಬ್ಬಿಸುತ್ತಿದೆ.

ಅನೇಕ ಶತಮಾನಗಳ ಹಿಂದೆ ಪ್ಲೇಟೋ ಎಂಬ ಗ್ರಿಸೀನ ತತ್ವಜ್ಞಾನಿಯು ವಿಧವಿಧವಾಗಿ ಆಲೋಚಿಸಿ ರಾಜ್ಯದ ಅಧೀನಕ್ಕೆ ಒಳಗಾಗದೆ ಹೋಗಬಹುದಾದಂತಹ ಜನರನ್ನು ನಿರ್ಬಂಧಿಸಲು ರಾಜ್ಯಯಂತ್ರವು ಆಗಾಗ್ಗೆ ಅನುಕೂಲಕರ ಸುಳ್ಳಿನ ಆಸರೆ ಪಡೆಯಬೇಕೆಂದು ಸೂಚಿಸಿದ್ದ. ಧಾರ್ಮಿಕ ಜಡ್ಡುತನದ ಬಳಕೆಯನ್ನೂ ಕೌಟಿಲ್ಯ ಎತ್ತಿಹಿಡಿದಿದ್ದ. ಇಂದಿನ ಯುಗದಲ್ಲಿ ಸಾಮ್ರಾಜ್ಯಶಾಹಿಯು ಮತಧರ್ಮದ ಹೆಸರಿನಲ್ಲಿ ಇಸ್ರೇಲ್‌ನಂತಹ ರಾಷ್ಟ್ರವನ್ನು ಹುಟ್ಟಿಹಾಕಿ, ಅದಕ್ಕೆ ಬೆಂಬಲ ನೀಡಿ, ಎಂತೆಂತಹ ಪಾತಕಗಳನ್ನು ಎಸಗಿದೆಯೆಂಬುದನ್ನು ಇಲ್ಲಿ ಪಟ್ಟಿಮಾಡುವ ಅವಶ್ಯಕತೆಯಿಲ್ಲ. ಮತಧರ್ಮದ ಮುಸುಕಿನಲ್ಲಿ ಆ ಭಾಗದ ಲೂಟಿಯ ರಾಜಕೀಯ ಮುಚ್ಚಿಹೋಗುತ್ತದೆ. ತಮ್ಮ

ಸಂಪತ್ತನ್ನು ಸೂರೆ ಮಾಡಲು ಅವಕಾಶ ಮಾಡಿಕೊಟ್ಟಿರುವ ಅರಬ್ಬರು ಒಂದೇ ಮತಧರ್ಮೀಯರಾದರೂ ರಾಜಕೀಯವಾಗಿ ಐಕ್ಯತೆಯನ್ನು ಸಾಧಿಸಿಕೊಂಡಿಲ್ಲ. ಇರಾಕನ್ನು ಧ್ವಂಸಮಾಡಿದ ಅಮೆರಿಕಾಕ್ಕೆ ಸೌದಿ ಅರೇಬಿಯ ಯುದ್ಧದ ಖರ್ಚನ್ನು ಪೂರೈಸಿಕೊಟ್ಟದ್ದು ಇದಕ್ಕೆ ಒಂದು ಚಿಕ್ಕ ಉದಾಹರಣೆ, ಅಷ್ಟೆ. ತಾನೇ ಮಾತುಕತೆಯಿಂದ ಇರಾಕ್- ಕುವೈತ್ ದ್ವಂದ್ವವನ್ನು ಕೊನೆಗಾಣಿಸಲು ಸೌದಿ ಅರೇಬಿಯಾ ಯತ್ನಿಸಲಿಲ್ಲ, ಅಥವಾ ತಾನೇ ಯುದ್ಧವನ್ನೂ ಮಾಡಲಿಲ್ಲ. ಕೂಲಿ ಕೊಟ್ಟು ಅಮೆರಿಕಾವನ್ನು ಯುದ್ಧ ಮಾಡಲು ಗೊತ್ತು ಮಾಡಿಕೊಂಡದ್ದು ಈ ಮಧ್ಯಕಾಲೀನ ಸಂಸ್ಕೃತಿಯ ರಾಷ್ಟ್ರದ ಪದ್ಧತಿಗೆ ಒಳ್ಳೆಯ ಉದಾಹರಣೆ.

ಅಮೆರಿಕಾ ಸರ್ಕಾರದ ಮೇಲೆ ಹಿಡಿತ ಸಾಧಿಸಿಕೊಂಡಿರುವವರು ಆ ದೇಶದ ಮಿಲಿಟರಿ-ಔದ್ಯಮಿಕ ಸಂಕೀರ್ಣಗಳ ಮಾಲಿಕರು. ಅವರನ್ನು ತೃಪ್ತಿಪಡಿಸದೆ ಬಿಳಿಮನೆಯಲ್ಲಿ ವಾಸಿಸುವ ಅಮೆರಿಕಾ ಅಧ್ಯಕ್ಷನಿಗೆ ಉಳಿಗಾಲವಿಲ್ಲ. ಈ ಸಂಕೀರ್ಣವು ಬಹುಮಟ್ಟಿಗೆ ಯೆಹೂದ್ಯರಿಂದ ಕೂಡಿದ್ದು ಅದಕ್ಕೆ "ಯೆಹೂದ್ಯ ಒತ್ತಾಸೆಯ ಕೇಂದ್ರ" ವೆಂಬ ಹೆಸರಿದೆ. (ನಮ್ಮಲ್ಲಿ ಹೀಗೆ ಒತ್ತಾಸೆ ತರುವ ಕೇಂದ್ರಗಳು ಹೆಂಡ, ಕಲ್ಲು, ವಂತಿಗೆ, ಇತ್ಯಾದಿಗಳಲ್ಲಿ ವ್ಯವಹಾರ ಮಾಡುವ ಧಣಿಗಳ ಹಿಡಿತದಲ್ಲಿವೆ). ಬ್ರಿಟನ್ನಿನತ್ತ ಕಣ್ಣು ಹಾಯಿಸಿದರೆ ಐರ್ಲೆಂಡ್ ಗಣರಾಜ್ಯದ ಜೊತೆ ಅದಕ್ಕಿರುವ ಭಿನ್ನಹಿಯ ಬಿಕ್ಕಟ್ಟಿಗೆ ಮತ್ತೆ ಮತಧರ್ಮದ ಲೇಪ ಕಾಣುತ್ತದೆ. ಉತ್ತರ ಐರ್ಲೆಂಡಿನ ಲಂಡನ್‌ಡೆರಿಯ ಹಿಂಸಾಕೃತ್ಯಗಳನ್ನು ಈ ನಿಟ್ಟಿನಿಂದ ವ್ಯಾಖ್ಯಾನಿಸುವುದು ರೂಢಿಯಲ್ಲಿದೆ. ಐರ್ಲೆಂಡಿನ ಗಣರಾಜ್ಯದ ಸೈನ್ಯ (ಐ.ಆರ್.ಎ.)ವೆಂದು ಕರೆಯಲಾಗುವ ದಂಡು ರೋಮನ್ ಕ್ಯಾಥೊಲಿಕ್ ಪಂಗಡದ ತುಕಡಿಯಂತೆ ಕೆಲಸ ಮಾಡುತ್ತದೆ. ಈ ಪಂಥದ ಅಗ್ರಸೇನಾನಿಯಾದ ಪೋಪನು ದಕ್ಷಿಣ ಅಮೆರಿಕಾಕ್ಕೆ ಭೇಟಿ ನೀಡಿದಾಗ ಅಲ್ಲಿನ ಹಿಂದುಳಿದವರಿಗೆ ಬೇಕಾದಷ್ಟು ಉಪದೇಶ ಕೊಟ್ಟಿದ್ದುಂಟು: "ನಿಮ್ಮ ಯಜಮಾನನ ಮೇಲೆ ಕೈ ಮಾಡಬೇಡಿ. ಅವನು ನಿಮ್ಮ ಅಣ್ಣನಂತೆ." ಈ ದುರುಳ ಅಣ್ಣ ಅಮೆರಿಕಾ ಅಲ್ಲದೆ ಮತ್ತಾರೂ ಅಲ್ಲ. ಪೋಪರು ರಾಜಕಾರಣದಲ್ಲಿ ಹಸ್ತಕ್ಷೇಪ ಮಾಡುವುದು ಹಲವು ಶತಮಾನಗಳ ಸಂಪ್ರದಾಯ ಎನ್ನಬಹುದು. ಈಗಲೂ ಅಮೇರಿಕಾದಲ್ಲಿ ರೋಮನ್ ಕ್ಯಾಥೊಲಿಕ್‌ನವನೊಬ್ಬ ಅಧ್ಯಕ್ಷೀಯ ಚುನಾವಣೆಗೆ ನಿಂತರೆ (ಕೆನಿಡಿ ನಿಂತಿದ್ದಂತೆ), ಅದು ರೋಮನ್ ಕ್ಯಾಥೊಲಿಕ್ಕರ ಮರ್ಯಾದೆಯ ವಿಷಯವೆಂಬಂತೆ ಚರ್ಚಿಸಲಾಗುತ್ತದೆ.

ದೆಹಲಿಯ ಜಮಾ ಮಸೀದಿಯ ಹಿರಿಯ ಪೂಜಾರಿ ಬುಖಾರಿ ಅನೇಕ ಬಾರಿ ಚುನಾವಣೆಗಳ ಸಮಯದಲ್ಲಿ ಆದೇಶ ಹೊರಡಿಸಿದ್ದುಂಟು. ಯಾರಿಗೆ ಮುಸಲ್ಮಾನರೆಲ್ಲಾ ಮತ ನೀಡಬೇಕೆಂದು (ನಮ್ಮ ಕರ್ನಾಟಕದ ಕೆಲವು ಲಿಂಗಾಯತ ಜಗದ್ಗುರುಗಳಂತೆ) ಈತ ಅಧಿಕಾರಯುತವಾಗಿ ಆದೇಶ ಹೊರಡಿಸುತ್ತಾನೆ. (ಆ ಆದೇಶಕ್ಕೆ ಬೆಲೆ ಬಾರದಂತೆ ಜನರು ನಡೆದುಕೊಂಡಿದ್ದಾರೆಂಬುದು ಬೇರೆ ವಿಷಯ). ನಮ್ಮ ದೇಶದ ಚುನಾವಣೆಗಳಲ್ಲಿ ಮತೀಯ ಮತ್ತು ಜಾತೀಯ ಲೆಕ್ಕಾಚಾರಗಳ ಹಾವಳಿ ಹೆಚ್ಚಾಗಿರುವುದರ ಜೊತೆಗೆ ರಾಜಕೀಯ ಪಕ್ಷಗಳ ನಾಯಕರು ಬೇರೆಬೇರೆ ಮತಧರ್ಮಗಳ

ದೊಡ್ಡ ಪೂಜಾರಿಗಳನ್ನು ಕಂಡು ಸಾರ್ವಜನಿಕವಾಗಿ ಕಾಲಿಗೆರಗುವುದು ವಿಪರೀತವಾಗಿ ರೂಢಿಗೆ ಬರುತ್ತಿದೆ. ಪಿ.ವಿ. ನರಸಿಂಹರಾಯರು ಅಜ್ಮೀರಿನ ದರ್ಗಾಕ್ಕೆ (ಸಾರ್ವಜನಿಕ ಹಣ ವ್ಯಯವಮಾಡಿ)ಹೋದರೆ ಶಂಕರದಯಾಳ ಶರ್ಮ ಪುಟ್ಟಪರ್ತಿಗೆ ಬಂದು ತಲೆ ಬೋಳಿಸಿಕೊಳ್ಳುತ್ತಾರೆ. ಕೆಲವು ವರ್ಷಗಳ ಹಿಂದೆ ಬೆಂಗಳೂರಿನ ಒಂದು ಪತ್ರಿಕೆಯಲ್ಲಿ ಪ್ರವಾದಿ ಮಹಮ್ಮದ್‌ರ ಹೆಸರನ್ನು ಆತ ಕುಖ್ಯಾತನೆಂಬಂತೆ ಯಾವುದೋ ಕತೆಯಲ್ಲಿ ಬಳಸಿಕೊಳ್ಳಲಾಯಿತೆಂದು ಹಿಂಸಾಚಾರಕ್ಕಿಳಿದವರಿಗೆ ಧಾರ್ಮಿಕ ಆಸಕ್ತಿಗಿಂತ ರಾಜಕೀಯ ಬಂಡವಾಳ ಹೆಚ್ಚು ಮುಖ್ಯವಾಗಿತ್ತು. ಅಂತಹ ದಾಂಧಲೆ ನಡೆಸಿದ ಕುಕರ್ಮಿಗಳು ಈಗ ರಾಜಕೀಯ ಪಕ್ಷಗಳಲ್ಲಿ ಮುಂದಾಳತ್ವ ವಹಿಸಿಕೊಂಡಿರುವುದೊಂದು ಕುತೂಹಲ.

ಇದನ್ನೆಲ್ಲಾ ಗಮನಿಸಿದರೆ ಒಂದಂಶ ಸ್ಪಷ್ಟವಾಗುತ್ತದೆ. ಕೆಲವು ಸಾಂಸ್ಕೃತಿಕ ಧಾಂಡಿಗರಿಂದ ರಾಜರ್ಷಿ ಎನಿಸಿಕೊಂಡಿರುವ ಲಾಲ ಕೃಷ್ಣ ಅದ್ವಾನಿ ಮತಧರ್ಮವನ್ನು ರಾಜಕೀಯಕ್ಕೆ ಬಳಸಿದವರಲ್ಲಿ ಮೊದಲಿಗರೂ ಅಲ್ಲ, ಕೊನೆಯವರೂ ಅಲ್ಲ. ಅವರಿಗೆ ಮತಧರ್ಮದ ಪ್ರತೀಕಗಳು, ಅದರ ಒರಟು ನಂಬಿಕೆ, ಸಾಮೂಹಿಕ ಪೂರ್ವಗ್ರಹಗಳು, ಇವೆಲ್ಲಾ ಒಂದಲ್ಲ ಒಂದು ರಾಜಕೀಯ ಉದ್ದೇಶಕ್ಕೆ ಸಾಮಗ್ರಿಗಳಾಗುತ್ತವೆ. ಅಷ್ಟೇ ಪ್ರಕರ್ಷವಾಗಿ ಹಿಂದೆ ಪ್ರತಿಪಾದನೆ ಮಾಡುತ್ತಿರಲಿಲ್ಲವೇನೋ, ಆದರೆ ಆಗಲೂ ಇದರ ಪ್ರಯೋಗ ಸಾಕಷ್ಟಿತ್ತು. ಮತಧರ್ಮವನ್ನು ರಾಜಕೀಯದಿಂದ (ಅಂದರೆ, ಸೀಮಿತಾರ್ಥದಲ್ಲಿ ಚುನಾವಣೆಗಳಿಂದ) ಬೇರ್ಪಡಿಸಬೇಕೆಂಬ ಕೂಗು ಮಾತ್ರ ಕಳೆದ ದಶಕದಲ್ಲಿ ಹೆಚ್ಚಾಗಿ ಕೇಳಿಸಲಾರಂಭವಾಯಿತು.

ನಿಜಕ್ಕೂ ಧರ್ಮನಿರಪೇಕ್ಷವಾದ ಕಾರ್ಯಾಚರಣೆಯನ್ನು ರಾಜಕೀಯದಲ್ಲಿ ಬಯಸುವುದಾದರೆ ಅದನ್ನು ಸಿದ್ಧಿಸಿಕೊಳ್ಳಲು ಇರುವುದೇ ಒಂದು ಮಾರ್ಗ. ಅದೇನೆಂದರೆ ಸೈದ್ಧಾಂತಿಕ ನಿಲುವು ರಾಜಕಾರಣದ ಅವಿಭಾಜ್ಯ ಅಂಗವಾಗುವಂತೆ ಯೋಜಿಸಿಕೊಳ್ಳುವುದು. ಅದಿಲ್ಲದಿದ್ದರೆ ತಿಮ್ಮ ಹೋದ - ಬೊಮ್ಮ ಬಂದ ಎಂಬ ರಾಜಕೀಯ ಮರುಕಳಿಸುತ್ತಿರುತ್ತದೆ. ಇಬ್ಬರು ಕಮಂಗಿಗಳದ್ದೂ ಒಂದೇ ಪಾಠ. ಎಷ್ಟು ಹಣ ಸಿಗುತ್ತದೋ ಅಷ್ಟನ್ನೂ ಗಬಗಬನೆ ಐದು ವರ್ಷಗಳಲ್ಲಿ ನುಂಗಿಕೊಳ್ಳುವುದು! ಇದಕ್ಕೆ ಭಿನ್ನವಾಗಿ ಸೈದ್ಧಾಂತಿಕ ನೆಲೆಯಿಂದ ನಮ್ಮ ಸಮಸ್ಯೆಗಳನ್ನು ವಿಶ್ಲೇಷಿಸಿ, ಪರಿಹಾರಕ್ಕಾಗಿ ಹೋರಾಟ ಮಾಡುವ ದಿಟ್ಟತನ ಬೆಳೆಸಿಕೊಂಡರೆ ನಮ್ಮ ರಾಜಕೀಯ ಅಷ್ಟು ದುರ್ಗಂಧದಿಂದ ತುಂಬಿರಲು ಸಾಧ್ಯವಾಗುವುದಿಲ್ಲ. ಸದ್ಯದ ಪರಿಸ್ಥಿತಿ ಹೇಗಿದೆಯೆಂದರೆ ಆಳುವ ಪಕ್ಷ ಮತ್ತು ಅಧಿಕೃತ ವಿರೋಧ ಪಕ್ಷಗಳೆರಡೂ ಪ್ರಮುಖ ವಿಷಯಗಳ ಬಗ್ಗೆ ಒಂದೇ ದೃಷ್ಟಿಯುಳ್ಳವಾಗಿದ್ದರೂ ಔಪಚಾರಿಕವಾಗಿ ತಾವು ಬೇರೆಬೇರೆ ಎಂಬಂತೆ ನಡೆದುಕೊಳ್ಳುವ ಮೋಜಿನ ಪ್ರಸಂಗಗಳು ಕಾಣಬರುತ್ತವೆ. ಡಂಕಲ್, ಅಂಕಲ್ (ಸ್ಯಾಮ್), ಕಾರ್ಗಿಲ್, ಕೈಗಾರಿಕಾನೀತಿ, ಶಿಕ್ಷಣ (ಅ) ನೀತಿ, ಉದಾರೀಕರಣ, ಮನಮೋಹಕ ಅರ್ಥಶಾಸ್ತ್ರ, ಇತ್ಯಾದಿಗಳನ್ನು ಕುರಿತಂತೆ ನರಸಿಂಹರಾಯರು ಮತ್ತು ಅದ್ವಾನಿಯವರು ಬಹುಮಟ್ಟಿಗೆ ಸಹಮತ ಉಳ್ಳವರು. "ಇವನ್ನೆಲ್ಲಾ ನಾನು ನಿನಗಿಂತಲೂ ಸಮರ್ಥವಾಗಿ ನಿರ್ವಹಿಸಬಲ್ಲೆ" ಎಂದಷ್ಟೇ

ಇಬ್ಬರ ನಡುವಣ ತಿಕ್ಕಾಟ. ಆದೇ ಕಾರಣದಿಂದ ಅವರಿಬ್ಬರ ನಡುವೆ ಸೈದ್ಧಾಂತಿಕ ವ್ಯತ್ಯಾಸ ಮತ್ತು ವಿರೋಧ ಅಷ್ಟಾಗಿ ಕಾಣಬರುವುದಿಲ್ಲ.

ನಮ್ಮ ಸದ್ಯದ ವೈಪರೀತ್ಯವನ್ನು ಸ್ವಲ್ಪ ತೀಕ್ಷ್ಣವಾಗಿ ಪರಿಶೀಲಿಸೋಣ. ಯಾವುದು ಖಾಸಗಿಯಾಗಿರಬೇಕೋ ಅದು ಸಮೂಹ ಸನ್ನಿಯ ಮಡಿಲಿಗೆ ಬಿದ್ದಿದೆ ಮತ್ತು ಯಾವುದು ಸಾಮೂಹಿಕ ಹಿತಾಸಕ್ತಿಗೆ ಪರಿಕರವಾಗಿರಬೇಕಾಗಿತ್ತೋ ಅದು ಖಾಸಗೀಕರಣಕ್ಕೆ ಬಲಿಯಾಗಿದೆ. ಮತಧರ್ಮದಲ್ಲಿನ ನಂಬಿಕೆ ಮತ್ತು ನಿಷ್ಠೆ ಹಾಗೂ ಆಚರಣೆ ಇದಕ್ಕೊಂದು ಉದಾಹರಣೆ. ಅದು ಪೂರ್ಣವಾಗಿ ವ್ಯಕ್ತಿಯೊಬ್ಬನ ಖಾಸಗಿ ಆವರಣಕ್ಕೆ ಸೇರಬೇಕಾದ ವಿಷಯ. ಆದರೆ ಅದು ಸಾರ್ವಜನಿಕ ಅಮಲಿಗೆ ಕಾರಣವಾಗಿ ಸಮಾಜದ ವ್ಯಕ್ತಿಗಳನ್ನು ಬೇರ್ಪಡಿಸುವಂತಹ ವಿಷಯವಾಗಿ ಪರಿಣಮಿಸಿದೆ. ಇನ್ನೊಂದು ಮಗ್ಗುಲಲ್ಲಿ ನೋಡೋಣ. ರಾಜ್ಯದ ಸಾರ್ವಜನಿಕ ಖಜಾನೆಗೆ ಸೇರಬೇಕಾದ ಹಣವನ್ನು ಲಂಚ, ಇತ್ಯಾದಿ ರೂಪದಲ್ಲಿ ಪಡೆದು, ಕಪ್ಪುಹಣದ ಜಾಲವನ್ನು ದೊಡ್ಡದು ಮಾಡುತ್ತಾ ಅನೇಕ ವ್ಯಕ್ತಿಗಳು ಸೇರಿ ಖಜಾನೆಗೆ ಕನ್ನ ಹಾಕಿದ್ದಾರೆ. ಅಂತೆಯೇ ರಾಷ್ಟ್ರೀಯ ಸಂಸ್ಕೃತಿಯಾಗಲಿ ಶಿಕ್ಷಣ ವ್ಯವಸ್ಥೆಯಾಗಲಿ ಇಡೀ ಸಮೂಹದ ಕಾಳಜಿಯಾಗಬೇಕು, ಆಸ್ತಿಯಾಗಬೇಕು. ಆದರೆ ಅವನ್ನೂ ವಿದಳನಗೊಳಿಸಲಾಗಿದೆ. ಭ್ರಷ್ಟಾಚಾರ, ವಂತಿಗೆ, ಹರ್ಷದ್ ಮೆಹ್ತಾ, ಬೊಫರ್ಸ್ ಹಗರಣ, ಇಂತಹ ಪ್ರಕರಣಗಳು ಅದರ ಪರಿಣಾಮ. ಇಂತಹ ಮಾರಕ ರೋಗಗಳನ್ನು ಕಂಡು ಅಸಹ್ಯಪಟ್ಟುಕೊಳ್ಳುವ ಬದಲು ಆ ಜಾಡ್ಯಕ್ಕೆ ತುತ್ತಾಗಲು ಎಲ್ಲಿಲ್ಲದ ಪೈಪೋಟಿ ಕಂಡುಬರುತ್ತಿದೆ. ಮೌಲ್ಯಾಧಾರಿತ ರಾಜಕೀಯದ ಮಾತನ್ನಾಡುವ ಗಂಭೀರ ಪುರುಷರ ನಡತೆ ಈ ಜಾಡ್ಯಕ್ಕೆ ಮೆರುಗು ನೀಡುತ್ತದೆಂಬುದು ಇನ್ನೊಂದು ಗಣನೀಯ ಅಂಶ. ಇಂತಹ ಅಸಹನೀಯ ದುರ್ನಡತೆಯನ್ನು ತಡೆಗಟ್ಟುವ ಬದಲು ಶಂಕರಾಚಾರ್ಯರುಗಳು (ಪುರಿ, ದ್ವಾರಕ, ಶೃಂಗೇರಿ, ಕಾಮಕೋಟಿ, ಜೋಶಿಮಠ, ಇತ್ಯಾದಿ), ಸಾಯಿಬಾಬ (ಆತ ಎಂದಿಗಾದರೂ ಬದುಕು ಬಾಬಾ ಆಗಬಲ್ಲನೋ ತಿಳಿಯದು), ಚಂದ್ರಾಸ್ವಾಮಿಯಂತಹ ಪಟಿಂಗರು ಮತ್ತು ಕುರುಡುತನದ ಸಾಕಾರಮೂರ್ತಿಯಾದ ಬುಖಾರಿ ಹಾಗೂ ಪಾಪ ಪ್ರಜ್ಞೆಯನ್ನು ವಾರಕ್ಕೊಮ್ಮೆ ತೊಳೆದುಹಾಕುವ ಪಾದ್ರಿಸಂತತಿ,–ಇವರೆಲ್ಲಾ ಈ ಜಾಡ್ಯವು ಇನ್ನೂ ವ್ಯಾಪಕವಾಗಿ ಬೆಳೆಯುವಂತೆ ಸೊಪ್ಪು ಹಾಕುತ್ತಿದ್ದಾರೆ. ಕಾಸಿಗೊಂದು ಕೊಸರಿಗೆರಡರಂತೆ ಸಿಕ್ಕುವ ನಮ್ಮ ಎಲ್ಲ ಜಗದ್ಗುರುಗಳೂ ಇದಕ್ಕೆ ತಮ್ಮದೇ ಆದ ವಿಶಿಷ್ಟ ಸೇವೆ ಸಲ್ಲಿಸುತ್ತಿದ್ದಾರೆ.

ಸಂವಿಧಾನದಲ್ಲಿ ನಮ್ಮ ರಾಷ್ಟ್ರವನ್ನು ಧರ್ಮನಿರಪೇಕ್ಷವಾದ ಪ್ರಜಾಪ್ರಭುತ್ವವೆಂದು ಬಣ್ಣಿಸಿಕೊಂಡಿದ್ದೇವೆ. (ಸಮಾಜವಾದಿ ಸಾರ್ವಭೌಮ ರಾಜ್ಯವೆಂಬುದನ್ನು ಮನಮೋಹನ್ ಸಿಂಗ್-ನರಸಿಂಹರಾಯರ ಜಂಟೀ ಕಾರ್ಯಾಚರಣೆ ಎಂದೋ ಅಳಿಸಿಹಾಕಿತು). ಎಷ್ಟೇ ಲೋಪಗಳಿದ್ದರೂ ನಮ್ಮದು ಪ್ರಜಾಪ್ರಭುತ್ವ ಎಂಬುದನ್ನು ತಳ್ಳಿಹಾಕುವಂತಿಲ್ಲ. ಧರ್ಮನಿರಪೇಕ್ಷತೆಯ ಲಕ್ಷಣವನ್ನು ಬೆಳೆಸಿಕೊಳ್ಳುವ ಸಾಧ್ಯತೆಯೂ ಗೌಣವಲ್ಲ. ಇವೆರಡು ಲಕ್ಷಣಗಳನ್ನೂ ಧ್ವಂಸಮಾಡುವುದು ಮತಧರ್ಮಗಳ ನೇತಾರರ ಮಾರ್ಗವಾಗಿದೆ. ಅವರಿಗೆ

ಧಾರ್ಮಿಕ ಜಡ್ಡುತನದಿಂದ ಆವೃತವಾದ ಅಧಿಕಾರಶಾಹಿ ಪ್ರಿಯವೆನಿಸುತ್ತದೆ. ಅದಕ್ಕಾಗಿ ಪರಸ್ಪರ ವೈಷಮ್ಯವನ್ನು ಬೇರೆಬೇರೆ ಮತೀಯ ಗುಂಪುಗಳ ನಡುವೆ ಬಿತ್ತಿ ಬೆಳೆಸುವುದು ಅವರ ಅಪ್ರಕಟಿತ ಕಾರ್ಯಕ್ರಮ. ಸಂಘ ಪರಿವಾರ ಮತ್ತು ಜಮಾತ್ ಇದರಲ್ಲಿ ಬೇರೆಯವರಿಗಿಂತಲೂ ಮುಂದಿವೆ.

ಈ ಹಿನ್ನೆಲೆಯಲ್ಲಿ ಮತಧರ್ಮ ಮತ್ತು ರಾಜಕೀಯ ಎಂಬ ಕಲ್ಪನೆಗಳು ಮೂಲತಃ ಏನನ್ನು ಪ್ರತಿನಿಧಿಸುತ್ತವೆಂಬುದನ್ನು ತಿಳಿಯಬೇಕು. ಮತಧರ್ಮವು ವ್ಯಕ್ತಿಯ ಭಾವನೆಯನ್ನು ಮೃದುಗೊಳಿಸಿ ಎತ್ತರಕ್ಕೇರಿಸುವ ಸಾಧನ. ಸುತ್ತಣ ವಿಶ್ವದಲ್ಲಿ ನಮ್ಮ ತಿಳಿವಳಿಕೆಯನ್ನು ಮೀರುವಂತಹ ನೂರಾರು ಘಟನೆಗಳು ಮತ್ತು ಸಂರಚನೆಗಳು ಇವೆ. ಅವುಗಳನ್ನು ಅವಲೋಕಿಸಿದಾಗ ಉಂಟಾಗುವ ವಿಸ್ಮಯಕ್ಕೆ ಎಣೆಯಿಲ್ಲ. ಇದಕ್ಕೆಲ್ಲಾ ಒಂದು ಆಧಾರವಿದೆಯೆ? ಹಾಗಿದ್ದರೆ ಅದು ಯಾವುದು, ಯಾವ ಸ್ವರೂಪದ್ದು? ಅದನ್ನು ತಣಿಸಲು ಸಾಧ್ಯವೆ? ಹಾಗಿದ್ದರೆ ಹೇಗೆ?– ಇಂತಹ ತುಡಿತವು ಮತಧರ್ಮಗಳ ತಾತ್ವಿಕ ನೆಲೆ. ಏನೇನೋ ಉತ್ತರಗಳನ್ನು ಕೊಟ್ಟು ಅವೇ ಅಂತಿಮ ನಿರ್ಧಾರಗಳೆಂದು ಪ್ರತಿಯೊಂದು ಮತಧರ್ಮವೂ ಭಾವಿಸಿದಂತಿದೆ. ಆ ಉತ್ತರಗಳಲ್ಲಿ ಹೂರಣವಿಲ್ಲವೆಂದು ತಿಳಿದಾಗಲೂ ಅವನ್ನು ನಿರಾಕರಿಸಲು ಬೇಕಾದ ಮಾನಸಿಕ ಚೈತನ್ಯವನ್ನು ಇವೇ ಮತಧರ್ಮಗಳು ಊನಗೊಳಿಸಿವೆ. ಆದಾಗ್ಯೂ ಅವು ಇನ್ನೊಂದು ಸ್ತುತ್ಯರ್ಹವಾದ ಕೆಲಸವನ್ನು ಮಾಡುತ್ತವೆ. ಮನಸ್ಸಿಗೆ ಒಂದು ರೀತಿಯ ಸ್ಥೈರ್ಯವನ್ನು ಒದಗಿಸುವುದು ಆ ಕೆಲಸ. ನಮ್ಮ ವ್ಯಾವಹಾರಿಕ ಪ್ರಪಂಚದಲ್ಲಿ ನಾವು ಪದೇಪದೇ ಕಂಡು ಬೇಸರಿಸುವುದು ಏನನ್ನು? ಅನ್ಯಾಯ, ಅಸಮಾನತೆ, ಹಿಂಸೆ, ಕ್ರೌರ್ಯ, ದಬ್ಬಾಳಿಕೆ, ಇತ್ಯಾದಿ. ಈ ಪ್ರಕ್ರಿಯೆಯು ಗುಲಾಮಗಿರಿ, ಊಳಿಗಮಾನ್ಯ ಪದ್ಧತಿ ಮತ್ತು ಬಂಡವಾಳಶಾಹಿ ವ್ಯವಸ್ಥೆಗಳಿಗೆಲ್ಲಾ ಸಮಾನವಾಗಿ ಅನ್ವಯಿಸುತ್ತದೆ. ದೌರ್ಜನ್ಯವೆಸಗುವ ವ್ಯಕ್ತಿಗೆ ಮತ್ತು ವ್ಯವಸ್ಥೆಗೆ ಬುದ್ಧಿ ಕಲಿಸಲು ನಮಗೆ ಶಕ್ತಿಯಿಲ್ಲ, ಅದಕ್ಕೆ ಸಂಘಟಿತ ಯತ್ನವೂ ಅಶಕ್ಯ. ಇಂತಹ ಘೋರ ಅಂಧಕಾರದಲ್ಲಿ ಅಸಹಾಯಕತೆಯನ್ನು ನೀಗುವಂತೆ ಮಾಡುವ ಒಂದು ಭಾವನಾ ಪ್ರಪಂಚವಿದೆ. ಅದೇ ಮತಧರ್ಮ. ಅದರಡಿಯಲ್ಲಿ ಎಲ್ಲರೂ ಸಮಾನರು, ಎಲ್ಲರಿಗೂ ಏಕಪ್ರಕಾರವಾದ ರಕ್ಷೆ ಅಥವಾ ಶಿಕ್ಷೆ. ದೌರ್ಜನ್ಯವೆಸಗುವವನಿಗೆ ಅಲ್ಲಿ ಸದಾಕಾಲಕ್ಕೂ ಸುಖ ಕಟ್ಟಿಟ್ಟದ್ದಲ್ಲ. ಅವನು ನರಕಕ್ಕೆ ದೂಡಲ್ಪಡುತ್ತಾನೆ! ನಿಜ ಜೀವನದಲ್ಲಿ ಅಸಹ್ಯವಾದ್ದೆಲ್ಲಾ ಭಾವನಾಪ್ರಪಂಚದಲ್ಲಿ ಇಲ್ಲವಾಗಿವೆ ಮತ್ತು ಅಲ್ಲಿ ರಂಜನೀಯವಾದ ಸುಖ ಎಲ್ಲರಿಗೂ ಖಾತ್ರಿಯಾಗಿ ದೊರೆಯುತ್ತವೆಂಬ ಆಶಯವಿದೆ. ಈ ಭಾವನಾತ್ಮಕ ಸುಖವು ಅನುಭವಕ್ಕೆ ಬಂದ ದುಃಖವನ್ನು ಕೆಲಕಾಲವಾದರೂ ಕಡಿಮೆ ಮಾಡುತ್ತದೆ. ಕಲೆಯ ಪ್ರಯೋಜನಗಳಲ್ಲಿ ಒಂದು "ಸದ್ಯಃ ಪರನಿರ್ವೃತಯೇ" ಎಂದು ಹೇಳಲಾಗುತ್ತದೆ. ಅಂದರೆ, ಕಷ್ಟ ನಿಷ್ಠೂರಗಳಿಂದ ತುಂಬಿದ ಸದ್ಯದ ಪ್ರಪಂಚವನ್ನು ಮರೆಸಿ ಮೇಲಕ್ಕೆಲ್ಲೋ ಭಾವನಾತ್ಮಕ ವಿಶ್ವಕ್ಕೆ ನಮ್ಮನ್ನು ಕರೆದು ಕೊಂಡೊಯ್ಯಬಲ್ಲದು ಎಂದರ್ಥ. ಆ ಪ್ರಪಂಚದಲ್ಲಿ ಲೀನರಾಗಿ ಕಿಂಚಿತ್ತಾದರೂ ಇಲ್ಲಿಯ ದುಷ್ಕರ ಜೀವನವನ್ನು ಮರೆಯಬಹುದು. ಆದರೆ ಅದು ಕ್ಷಣಿಕ. ವ್ಯಾವಹಾರಿಕ ಪ್ರಪಂಚದಿಂದ

ಎಲ್ಲಿಗೆ ತಾನೆ ಓಡಿಹೋಗಲು ಸಾಧ್ಯ! ಹೀಗಿದ್ದರೂ ಮುಗ್ಧತೆಯ ಅನುಭವವನ್ನು ನೀಡುವ ಆಕರ ಮತಧರ್ಮ. ಮತ್ತುಬರಿಸಿ ನಮ್ಮನ್ನು ಪೇಲವವಾಗಿಸುವ ದುಃಶಕ್ತಿಯೂ ಅದಕ್ಕಿದೆ. ಅದರ ಫಲವಾಗಿ ದೈನ್ಯ, ಅಸಹಾಯಕತೆ, ಗೋಳನ್ನು ಒಪ್ಪಿಕೊಳ್ಳುವ ಮನಃಪ್ರವೃತ್ತಿ, ಇತ್ಯಾದಿಗಳು ಸಂಭವಿಸುತ್ತವೆ. ನಮ್ರತೆ, ವಿನಯ ಮತ್ತು ಸಹನೆಗಳಿಗಿಂತ ಭಿನ್ನವಾದ ಲಕ್ಷಣಗಳು ಇವು.

ಮತಧರ್ಮಕ್ಕೆ ಈ ಎರಡು ಲಕ್ಷಣಗಳಿವೆ ಮತ್ತು ಅವೆರಡರಲ್ಲಿ ಯಾವುದಾದರೂ ಸಾಧ್ಯತೆ ವಿಜೃಂಭಿಸಬಹುದು. ಕಾರ್ಲ್ ಮಾರ್ಕ್ಸ್ ಹೇಳಿದಂತೆ ಹೃದಯರಹಿತ ಕಠೋರ ಪ್ರಪಂಚದ ನಡುವೆ ಹೃದಯ ತುಂಬುವ ಸಾಧನ ಮತಧರ್ಮ; ಜರ್ಝರಿತ ಮನಸ್ಸಿನ ಧೀರ್ಘ ನಿಟ್ಟುಸಿರು ಈ ಮತಧರ್ಮ; ಆದರೆ ಅದು ಮನಸ್ಸನ್ನು ಜಗ್ಗಿ ಅಜಗರವಾಗಿಸುವ ಮಾದಕ ಅಫೀಮು ಸಹ ಆಗಬಲ್ಲದು. ಖ್ಯಾತ ಮನೋವಿಜ್ಞಾನಿ ಸಿಗ್ಮಂಡ್ ಫ್ರಾಯ್ಡ್ ಒಂದು ದೀರ್ಘ ಲೇಖನ ಬರೆದಿದ್ದಾನೆ. ಅದರ ಶೀರ್ಷಿಕೆ "ಭ್ರಮೆಯೊಂದರ ಭವಿಷ್ಯ". ಅದಕ್ಕೆ ಭವಿಷ್ಯವಿಲ್ಲ; ಎಂದೋ ಒಂದು ದಿನ ಕಾಂತಿಹೀನವಾಗಿ ಅದು ಮುರುಟಿಹೋಗುತ್ತದೆ. ಆ ಭ್ರಮೆಯ ಅವಶ್ಯಕತೆಯೇ ಇಲ್ಲದಾದಾಗ ಅದನ್ನೇಕೆ ಪೋಷಿಸಬೇಕು? ಎಂದಿದ್ದರೂ ಅದರ ಜೀವ ನಂದಿಹೋಗುವಂಥದೇ! ಯಾವುದು ಆ ಭ್ರಮೆ? ಫ್ರಾಯ್ಡ್‌ನ ಉತ್ತರ ಸ್ಪಷ್ಟವಿದೆ: ಮತಧರ್ಮವೇ ಆ ಭ್ರಮೆ. ಅಧೀನತೆ ಮತ್ತು ದೀನತನ ಚಿರಂತನವಾಗಿ ಮಾನವನನ್ನು ಕಂಗೆಡಿಸಿ ನೆಲೆಯೂರಲಾರವು.

ಮತಧರ್ಮವು ಹತಾಶೆಯನ್ನು ಬೋಧಿಸುತ್ತದೆಂಬುದು ಕೂಡ ಸಾರ್ವತ್ರಿಕ ಸತ್ಯವಲ್ಲ. ಅಂತಹ ಭಾವನೆಯನ್ನು ಧರ್ಮಗುರುಗಳು ಬಿತ್ತಬಹುದಾದರೂ ಧರ್ಮದ ನೆಲೆಯಿಂದ ಸಮಾನತೆ ಮತ್ತು ಭ್ರಾತೃತ್ವಗಳಿಗಾಗಿ ಸೆಣಸಾಡಿದ ಅನೇಕ ಮಹತ್ವಾಕಾಂಕ್ಷಿಗಳು ಚರಿತ್ರೆಯಲ್ಲಿ ಕಂಗೊಳಿಸಿದ್ದಾರೆ. ಹದಿನೇಳನೆಯ ವಯಸ್ಸಿನಲ್ಲೇ ಜೀವಂತವಾಗಿ ಸುಡಲ್ಪಟ್ಟ ಜೋನ್, ರೈತಾಪಿ ಜನರನ್ನು ಬಂಧನದಿಂದ ಬಿಡಿಸಲು ಹೋರಾಡಿ ಕಡೆಗೆ ಪ್ರಾಣವನ್ನೇ ಕೊಟ್ಟ ಥಾಮಸ್ ಮುನ್‌ಜರ್, ಅವನಂತೆಯೇ ಭಾರತದ ಸಂದರ್ಭದಲ್ಲಿ ಚಿರಸ್ಥಾಯಿಯಾದ ಚೈತನ್ಯ ಮಹಾಪ್ರಭುಗಳು, ಇವರೆಲ್ಲಾ ಸತ್ಯ ಮತ್ತು ನ್ಯಾಯಕ್ಕಾಗಿ ಸರ್ವವನ್ನೂ ತ್ಯಾಗ ಮಾಡಿದಂತಹವರು. ಅವರಿಗೆಲ್ಲಾ ಮೂಲಪ್ರೇರಣೆ ದೊರೆತದ್ದು ಮತಧರ್ಮದ ಆಯಕಟ್ಟಿನಲ್ಲಿ. ಧಾರ್ಮಿಕ ಮೌಲ್ಯಗಳು ಅವರೆಲ್ಲರ ನಿಟ್ಟಿನಲ್ಲಿ ಮಾನವಿಕ ಮೌಲ್ಯಗಳು. ಮತಧರ್ಮದ ಸೀಮಿತ ಕಟ್ಟುಪಾಡನ್ನು ಮೀರಿನಿಲ್ಲುವ ಶ್ರೇಷ್ಠ ಸಾರ್ವತ್ರಿಕ ಮೌಲ್ಯಗಳು ಅವು. ಮತಧರ್ಮಗಳ ಚೌಕಟ್ಟಿನಿಂದ ಹೊರಗಡೆ ನಿಲ್ಲುವವರಿಗೂ ಅವು ಪ್ರಸ್ತುತವಾದವು, ಆಚರಣೆಗೆ ಯೋಗ್ಯವಾದವು. ಆದರೆ ಮಸೀದಿಯನ್ನು ಉರುಳಿಸಿ ಶ್ರೀ ರಾಮಚಂದ್ರನಿಗೆ ಸೇವೆ ಸಲ್ಲಿಸುವ ಜಗದ್ಗುರುಗಳು ಹಾಗೂ ಅವರ ಪರಿವಾರದವರಿಗೆ ಈ ಮೌಲ್ಯ ಕೇವಲ ಗ್ರಂಥಸ್ಥವಾದದ್ದು. ಅವರ ಆಚರಣೆ ಬೇರೇನೋ ಉದ್ದೇಶದಿಂದ ಮೂಡುತ್ತದೆ. ದ್ವೇಷದ ಕಿಡಿ ಮತ್ತು ಅಸಹನೆ, ಇತರರನ್ನು ಕೀಳೆಂದು ಪರಿಗಣಿಸುವ ಕೀಳುತನ ಹಾಗೂ ಕೊಳಕು ಮನಸ್ಸು ಅಲ್ಲಿ ಭಯಾನಕವಾಗಿ ಕುಣಿಯುತ್ತವೆ. "ಎಲ್ಲರೂ ಸುಖವಾಗಿರಲಿ" ಎಂಬ ಸುಂದರ ಪದ್ಯವನ್ನು ಬಾಯಲ್ಲಿ ಉಚ್ಚರಿಸುತ್ತಾ

ಯಾವನಿಗೋ ಚೂರಿ ಹಾಕುವ ಕುಸಂಸ್ಕೃತಿ ಅಲ್ಲಿ ಕಾಣಸಿಗುತ್ತದೆ. ಇಡೀ ಮಾನವ ಕುಲದ ಸೋದರತೆಯನ್ನು ಬೋಧಿಸುತ್ತಾ ಪಕ್ಕದಲ್ಲಿರುವ ಸೋದರನ ತಲೆ ತುಂಡರಿಸುವುದು ಕಡುಪಾಪವೆಂಬ ಪ್ರಜ್ಞೆಗೆ ಅಲ್ಲಿ ಜಾಗವಿಲ್ಲ. ಮಸೀದಿಯನ್ನುರುಳಿಸಿ ಹಿಂದಿರುಗುವಾಗ ಆರು ತಿಂಗಳ ಕೂಸೊಂದನ್ನು ಚಲಿಸುತ್ತಿರುವ ರೈಲಿನಿಂದ ಹೊರಗೆಸೆಯುವುದು ಈ ವಿಷ ಮನಸ್ಸಿಗೆ ಯಾವ ಆತಂಕವನ್ನೂ ಎಳ್ಳಷ್ಟೂ ಉಂಟುಮಾಡುವುದಿಲ್ಲ.

ಜಗದ್ಗುರು-ಮುಲ್ಲಾ-ಪಾದ್ರಿ ಉಸುರುವ ಧಾರ್ಮಿಕ ಮೌಲ್ಯದ ಛಾಯೆ ಅವರ ಉಸಿರಿನಲ್ಲಿಲ್ಲ. ಅಂದರೆ, ಬೋಧನೆ ಮತ್ತು ಆಚರಣೆಗಳ ನಡುವೆ ದೊಡ್ಡ ಕಂದರವಿದೆ ಎಂದರ್ಥ. ಧಾರ್ಮಿಕ ಜಡ್ಡುತನದ ಪಾಯದ ಮೇಲೆ ಕಟ್ಟಲಾಗಿರುವ ರಾಜಕೀಯ ಕಟ್ಟಡದಲ್ಲಿ ರಕ್ತದ ಕಲೆಗಳೇ ಸುಣ್ಣ-ಬಣ್ಣ. ಅಲ್ಲಿ ಮಾನವೀಯ ಮೌಲ್ಯಗಳನ್ನು ಹೊತ್ತು ಮತಧರ್ಮಗಳ ಸ್ಮಾರಕವನ್ನು ಕಟ್ಟಲಾಗಿದೆ. ಮಧ್ಯಕಾಲೀನ ಯುಗದಲ್ಲಿ ಬರ್ಬರತೆ ತಾಂಡವವಾಡುತ್ತಿತ್ತೆಂದು ಚರಿತ್ರೆಯ ಪುಟಗಳಲ್ಲಿ ದಾಖಲಾಗಿದೆ. ಯಂತ್ರಯುಗದ ಆಧುನಿಕ ಮಾನವನ ಬರ್ಬರತೆಯೆದುರು ಅದು ಗೌರವಯುತವಾದ ಬಾಳ್ವೆ ಎನಿಸಿಕೊಳ್ಳುತ್ತದೋ ಏನೋ! ಮಸೀದಿಯನ್ನು ಕೆಡವಿದ್ದು ಒಂದು ರೀತಿಯಲ್ಲಿ ಮನಸ್ಸುಗಳನ್ನು ಕೊಂದಿದ್ದು ಎಂಬುದು ನಿಜ. ಆದರೆ ದಾವೂದ್ ಇಬ್ರಾಹಿಂನಂತಹವನ ಹೀನಕೃತ್ಯವು ಅದಕ್ಕೆ ನೂರುಪಟ್ಟು ದೌರ್ಜನ್ಯದ್ದು, ಅಮಾನವೀಯವಾದದ್ದು. ಆ ಇಬ್ರಾಹಿಂಗೆ ಯಾವ ಮುಲ್ಲಾ ಎಂತಹ ಮೌಲ್ಯಗಳನ್ನು ಬೋಧಿಸಿದ? ಅಥವಾ, ಸ್ವತಃ ಇಬ್ರಾಹಿಂ ಮುಲ್ಲಾಗೆ ಪಾಠ ಹೇಳಿಕೊಟ್ಟನೆ? ಏನೇ ಇರಲಿ, ಈ ಇಬ್ರಾಹಿಂ ಎಂಬ ಮೃಗವು ಮುಂಬೈಯಲ್ಲಿ ಕೆಲವು ಮುಲ್ಲಾಗಳೊಡನೆ ವ್ಯವಹಾರವನ್ನಿರಿಸಿಕೊಂಡಿದ್ದನೆಂಬುದು ಸುಳ್ಳಲ್ಲ. ಮಸೀದಿಯನ್ನು ಸಿಡಿಸಿದ ಪರಿವಾರವು ಜಗದ್ಗುರುಗಳ ಕೃಪಾಪೋಷಿತರಾಗಿದ್ದರಂತೆ ಇಬ್ರಾಹಿಂ ಮುಲ್ಲಾಗಳ ದೈತ್ಯಶಿಶು.

''ಸಾಂಸ್ಕೃತಿಕ ರಾಷ್ಟ್ರೀಯತೆ'' ಎಂಬ ಘೋಷಣೆ ಅದ್ವಾನಿಯವರ ಪರಿವಾರದಿಂದ ಕೂಗಲ್ಪಡುತ್ತದೆ. ಯಾವುದನ್ನು ಹಾಗೆಂದು ಗುರುತಿಸಬೇಕು? ಕೆಲವರನ್ನು ಎರಡನೆಯ ದರ್ಜೆಯ ಪ್ರಜೆಗಳೆಂದು ತುಚ್ಛೀಕರಿಸುವುದನ್ನೆ? ಮುಲ್ಲಾಗಳ ಕಪಿಮುಷ್ಟಿಯಿಂದ ಹೊರಬರದೆ ನಮ್ಮ ರಾಷ್ಟ್ರದ ಒಂದು ಭಾಗದ ಜನರಿಗೆ ಮೌಢ್ಯ ಮತ್ತು ಹಿಂದುಳಿದಿರುವಿಕೆಗಳಿಂದ ಬಿಡುಗಡೆ ಇಲ್ಲ. ಅಂತಹ ಬಿಡುಗಡೆಗೆ ಪ್ರಯತ್ನ ಮಾಡದೆ ಅವರನ್ನು ಹೀಯಾಳಿಸಿ ಇನ್ನಷ್ಟು ಮೌಢ್ಯದಲ್ಲಿ ಮುಳುಗುವಂತೆ ಮಾಡುವುದು ಯಾವ ಧಾರ್ಮಿಕ ಮೌಲ್ಯ ಅಥವಾ ಸಾಂಸ್ಕೃತಿಕ ರಾಷ್ಟ್ರೀಯತೆ? ಒಂದೇ ನಾಗರಿಕ ಸಂಹಿತೆ ಬೇಕೆಂದಾಗಲೂ ಈ ಮೌಢ್ಯವನ್ನೇ ಮುಂದುಮಾಡುವ ದುಷ್ಟತನ ಪ್ರಕಟವಾಗುತ್ತಿದೆ. ಅದರ ಪ್ರಭಾವದಿಂದ ಹೊರಬರಲು ಸಹಾಯ ಹಸ್ತ ನೀಡದಿರುವ ಸರ್ಕಾರ ಮತ್ತು ರಾಜಕೀಯ ಪಕ್ಷಗಳು ನಮ್ಮಲ್ಲಿವೆ. ಇದು ಯಾರಿಗೂ ಶುಭವನ್ನಾಗಲಿ ಶೋಭೆಯನ್ನಾಗಲಿ ತರುವುದಿಲ್ಲ. ವಿಚಿತ್ರವಾದ ತರ್ಕವೊಂದನ್ನು ಈ ಸಂದರ್ಭದಲ್ಲಿ ನಮ್ಮ ಮುಂದಿಡಲಾಗುತ್ತದೆ. ಅದೊಂದು ಸ್ವಾರಸ್ಯ ಎನ್ನುವುದಕ್ಕಿಂತ ಕೃತ್ರಿಮ ಎನ್ನುವುದು ಹೆಚ್ಚು ಸಮಂಜಸವಾಗಿ ಕಾಣುತ್ತದೆ.

ಎಲ್ಲರಿಗೂ ಸಮಾನವಾದ ನಾಗರಿಕ ಸಂಹಿತೆ ಬೇಕು, ಎಂಬುದನ್ನು ಒಪ್ಪಿಕೊಂಡಂತೆ ನಟಿಸುವುದರಲ್ಲಿ ಬೇಕಾದಷ್ಟು ಪೈಪೋಟಿ ಇದೆ. ಆದರಿಂದ ಕೆಲವು ಮತಗಳಿಗೆ ಸೇರಿದ ಮಹಿಳೆಯರಿಗೆ ಹೆಚ್ಚಿನ ಸ್ವಾತಂತ್ರ್ಯ ದೊರೆಯುತ್ತದೆಂದು ಈ ಮಾತನ್ನು ಪುಷ್ಟೀಕರಿಸಲಾಗುತ್ತದೆ. ಅಲ್ಲಿಂದ ಮುಂದಕ್ಕೆ ಪ್ರಾರಂಭವಾಗುವುದು ಕೃತ್ರಿಮತೆ. ಆದರ ಸ್ವರೂಪ ಮಾತ್ರ ಬೇರೆಬೇರೆ ರೀತಿಯದು. ಅದಕ್ಕಿನ್ನೂ ಕಾಲ ಪಕ್ವವಾಗಿಲ್ಲ, ಅದನ್ನು ಯಾರ ಮೇಲೂ ಹೇರಲಾಗುವುದಿಲ್ಲ, ಅಂತಹ ಸಲಹೆ ಅವರಿಂದಲೇ ಬರುವವರೆಗೆ ನಾವೇನೂ ಮಾಡಲಾಗದು, ಸದ್ಯದಲ್ಲೇ ಚುನಾವಣೆ ಬರುತ್ತದಾದ್ದರಿಂದ ಆ ರೀತಿಯ ಸಂಹಿತೆಯನ್ನು ನಾವು ಯೋಚಿಸಿಯೇ ಇಲ್ಲವೆಂಬ ಆಶ್ವಾಸನೆ, (ಅದನ್ನು ನೀಡುವುದು ಕೂಡ ನೇರವಾಗಿ ಮಹಿಳೆಯರಿಗಲ್ಲ. ಅವರ ಧಾರ್ಮಿಕ ನಡತೆಯನ್ನು ನಿಯಂತ್ರಿಸುವ ಮುಲ್ಲಾ-ಪಾದ್ರಿ-ಜಗದ್ಗುರುಗಳ ಬಣಕ್ಕೆ), ಮತಧರ್ಮಗಳಲ್ಲಿ ನಿರೂಪಿಸಿರುವ ನಡವಳಿಕೆಗೆ ವಿರುದ್ಧವಾಗಿ ಯಾವ ನಾಗರಿಕ ಸಂಹಿತೆಯೂ ಇರಬಾರದು, ಇತ್ಯಾದಿ ಸಬೂಬುಗಳ ಮಾಲೆಯಿಂದ ಬಂಧನದಲ್ಲಿರುವವರ ಕುತ್ತಿಗೆಯನ್ನು ಹಿಸುಕಲಾಗುತ್ತಿದೆ.

ಮತಧರ್ಮ ಮತ್ತು ರಾಜಕೀಯದ ನಡುವಿನ ಬಾಂಧವ್ಯಕ್ಕೆ ಇದಕ್ಕಿಂತ ಬೇರೆ ಉದಾಹರಣೆ ಅನಗತ್ಯ. ಸ್ವಾತಂತ್ರ್ಯದ ವ್ಯಾಪ್ತಿಯನ್ನು ಹಿಗ್ಗಿಸಲು ರಾಜಕೀಯ ಪ್ರಕ್ರಿಯೆಯ ಬಳಕೆಯನ್ನು ನಿರೀಕ್ಷಿಸುವುದು ಸಹಜ. ಮಾರ್ಕ್ಸ್‌ವಾದಿ ಚಿಂತನೆಯಲ್ಲಿ ಚಾರಿತ್ರಿಕ ಭೌತವಾದದ ತಿರುಳಲ್ಲಿ ಇದೂ ಅಡಕವಾಗಿದೆ. ಅದಕ್ಕೆ ತೀರಾ ವಿರುದ್ಧವಾಗಿ ಸ್ವಾತಂತ್ರ್ಯದ ವ್ಯಾಪ್ತಿಯನ್ನು ಕುಗ್ಗಿಸಲು, ಇಲ್ಲವೇ ಅದನ್ನು ಸ್ಥಗಿತಗೊಳಿಸಲು, ರಾಜಕೀಯ ಪ್ರಕ್ರಿಯೆಯನ್ನು ಬಳಸುವುದು ನಮ್ಮ ನಡುವಿನ ವೈಪರೀತ್ಯಗಳಲ್ಲೊಂದು. ಭ್ರಷ್ಟಾಚಾರ, ಕಪ್ಪುಹಣ, ಕಾಳಸಂತೆ, ಇತ್ಯಾದಿಗಳನ್ನು ವ್ಯಕ್ತಿ ಚಾರಿತ್ರ್ಯದ ಬಗೆಗಿನ ಉಪದೇಶಗಳಿಂದ ನಿವಾರಿಸುವುದು ಆಕಾಶದ ಹೂವಿನಷ್ಟೇ ಅಸಾಧ್ಯ. ಸಾಮೂಹಿಕವಾಗಿ ಹೋರಾಟದಲ್ಲಿ ಪಾಲ್ಗೊಳ್ಳುವುದರಿಂದ ಮಾತ್ರ ಅಪೇಕ್ಷಿತ ಹಾದಿಯಲ್ಲಿ ಹೆಜ್ಜೆ ಹಾಕಲು ಸಾಧ್ಯ. ಅಂತೆಯೇ ರಾಜಕೀಯವನ್ನು ಸ್ವಚ್ಛಗೊಳಿಸುವುದು ಕೂಡ. ಅವಾಂತರ ಮಾಡುವ ಒಬ್ಬ ಶೇಷನ್‌ನಂತಹ ಅವತಾರ ಪುರುಷನಿಂದ ಎಲ್ಲಾ ಸ್ವಚ್ಛವಾಗುತ್ತದೆಂದು ನಿರೀಕ್ಷಿಸಿ ಕೈಕಟ್ಟಿ ಕೂರುವುದು ಮತ್ತು ಆತನನ್ನು ಆಕಾಶದೆತ್ತರಕ್ಕೆ ಎತ್ತಿನಿಲ್ಲಿಸಿ ಬೆಂಬಲಿಸುವುದು ಸೂಕ್ತವಾದ ಕ್ರಮಗಳಲ್ಲ. ಬದಲಾಗಿ, ಉದ್ದೇಶಿತ ಬದಲಾವಣೆಗಳಿಗಾಗಿ ಸಾರ್ವಜನಿಕ ಚಿಂತನೆ ಮತ್ತು ಕ್ರಿಯೆಗಳ ಅವಶ್ಯಕತೆಯಿದೆ. ಧರ್ಮನಿರಪೇಕ್ಷ ಪ್ರಜಾಪ್ರಭುತ್ವ ವ್ಯವಸ್ಥೆಯ ರಕ್ಷಣೆಯೂ ಅಂಥದೇ ಕ್ರಮದಿಂದ ಆಗಬಲ್ಲುದು ಮತ್ತು ಆಗಬೇಕು. ಸಾರ್ವತ್ರಿಕ ಮಾನವೀಯ ಮೌಲ್ಯಗಳನ್ನು ಮತೀಯ ಮೌಲ್ಯಗಳ ಜಾಗದಲ್ಲಿ ಸ್ಥಾಪನೆಯಾಗುವಂತೆ ಮಾಡಲು ಎಲ್ಲ ಮತಧರ್ಮಗಳವರನ್ನೂ ಅಣಿಮಾಡಲು ಸರಿಹೊಂದುವ ಕಾರ್ಯಕ್ರಮಗಳನ್ನು ರೂಪಿಸುವುದೇ ಈ ಹೋರಾಟದ ಮೊದಲ ಹೆಜ್ಜೆ. ಯಾವುದೇ ಕಾರಣದಿಂದಲೂ ಮತಿಭ್ರಷ್ಟ, ಮತಾಂಧ ಅಭಿಪ್ರಾಯಗಳನ್ನು ಸಮರ್ಥಿಸದಿರುವುದು ಇದರ ಒಂದು ಭಾಗ. ಕತ್ತಲೆಯಲ್ಲಿರುವ ಜನಗಳನ್ನು ಬೆಳಕಿಗೆ ತರಲು ಇರುವ ಪ್ರಮುಖ ಅಡಚಣೆಯೆಂದರೆ ಮುಲ್ಲಾ - ಪಾದ್ರಿ - ಜಗದ್ಗುರುಗಳ

ಹಿಡಿತ. ಅವರ ಸಾಂಸ್ಥಿಕ ದರ್ಪಕ್ಕೆ ಪೆಟ್ಟುಕೊಟ್ಟರೆ ಮಾತ್ರ ಬಂಧಿತ ಸಮುದಾಯವು ಹೊರಬಂದು ಸ್ವತಂತ್ರ ಚಿಂತನೆ ಮತ್ತು ಕ್ರಿಯೆಗಳಲ್ಲಿ ಭಾಗವಹಿಸಬಹುದು. ರಾಜಕೀಯವೆಂಬುದು ವ್ಯಕ್ತಿನಿಷ್ಠವಾದ ಕ್ರಿಯೆಯಲ್ಲ; ಅದು ತತ್ವನಿಷ್ಠ ಮತ್ತು ಉದ್ದೇಶನಿಷ್ಠವಾದದ್ದು. ಮತೀಯ ಸಾಂಸ್ಥಿಕ ಹಿಡಿತದ ವಿರುದ್ಧ ಕೂಡ ಸೈದ್ಧಾಂತಿಕ ರಾಜಕೀಯ ಹೋರಾಟವನ್ನು ಜನಸಮುದಾಯವೇ ನಡೆಸಬೇಕಾಗುತ್ತದೆ. ಇಂತಹ ಪಾಲ್ಗೊಳ್ಳುವಿಕೆಯು ನೂತನ ಪ್ರಜ್ಞೆಯ ಆವಿಷ್ಕಾರಕ್ಕೆ ಅನುವುಮಾಡಿಕೊಡುತ್ತದೆ ಮತ್ತು ಮೌಲ್ಯಗಳ ಸಾರ್ಥಕತೆಗೆ ಇಂಬು ಕೊಡುತ್ತದೆ. ಹೀಗೆ ಗಟ್ಟಿಗೊಂಡಾಗ ಮಾತ್ರವೇ ನಿಜವಾಗಿ ಮೌಲ್ಯಗಳು ಜೀವಂತವಾಗಿ ಉಳಿಯುವುದು. ಔಪಚಾರಿಕ ಧಾರ್ಮಿಕ ಮೌಲ್ಯಗಳು ಬಾಯಿಪಾಠದಲ್ಲಿ ಮಾತ್ರ ಕಳೆಯನ್ನು ಹೊಂದಿದ್ದರೆ, ಸಾರ್ವತ್ರಿಕ ಮಾನವೀಯ ಮೌಲ್ಯಗಳು ಕ್ರಿಯೆಯಲ್ಲಿ ಮಿಂಚುತ್ತವೆ.

ನಮ್ಮಲ್ಲಿ ಆಗಾಗ್ಗೆ ಕೇಳಿಬರುವ ಮಾತೊಂದಿದೆ; "ರಾಜಕೀಯವನ್ನು ಆಧ್ಯಾತ್ಮಿಕತೆಯಿಂದ ನವಿರುಗೊಳಿಸಿ" ಎಂಬುದೇ ಆ ಮಾತು. ಹಾಗೆಂದರೆ ಏನೋ ಗಹನವಾದ ಅರ್ಥವಿದೆಯೆಂದು ಕೆಲವರು ಮೂಕರಾಗುವುದುಂಟು. ನಾವು ಹಾಗೆ ಮೂಗಿನ ಮೇಲೆ ಬೆರಳಿಟ್ಟು ಕುಳಿತಿರಬೇಕಾಗಿಲ್ಲ ಅಥವಾ, ಮತಧರ್ಮಗಳ ದುಷ್ಪ್ರಭಾವವನ್ನು ಎದುರಿಸಲು ಮತಧರ್ಮಗಳಲ್ಲಿ ಇನ್ನೂ ಹೆಚ್ಚಿನ ರಾಜಕೀಯವನ್ನು ತುರುಕಲು ಮುನ್ನುಗ್ಗಬೇಕಾಗಿಲ್ಲ. ಖಾಸಗಿ ಮತ್ತು ಸಾರ್ವಜನಿಕ ವಲಯಗಳಲ್ಲಿ ಸಾರ್ವತ್ರಿಕ ಮೌಲ್ಯಗಳ ಕ್ರಿಯಾತ್ಮಕ ಅಳವಡಿಸುವಿಕೆಗೆ ಶ್ರಮಿಸಿದರೆ ಸಾಕು, ಮತಧರ್ಮದ ಜಡ್ಡುತನವನ್ನು ಮೆಟ್ಟಿ ನಿಲ್ಲಬಹುದು ಮತ್ತು ದಿಕ್ಕು ತಪ್ಪಿಸುವ ಕೊಳಕು ರಾಜಕೀಯವನ್ನೂ ಎದುರಿಸಬಹುದು.

(ಕೆಂಬಾವುಟ, ಆಗಸ್ಟ್ ೧೯೯೫)

◆

೫. ಸಾಹಿತ್ಯ ಮತ್ತು ರಾಜಕಾರಣ

ಬರ್ಟೋಲ್ಟ್ ಬ್ರೆಕ್ಟ್‌ನ ಎರಡು ಪುಟ್ಟ ನಾಟಕಗಳಿವೆ. ಅವನ್ನು 'ಹೌದಪ್ಪ' ಮತ್ತು 'ಇಲ್ಲಪ್ಪ' ಎಂದು ಭಾಷಾಂತರಿಸಬಹುದು. ಅವೆರಡರಲ್ಲೂ ಒಂದು ಕಮ್ಯುನಿಸ್ಟ್ ಪಕ್ಷದೊಳಗಿನ ಸದಸ್ಯರ ದ್ವಂದ್ವಗಳನ್ನು, ಆಂತರಿಕ ಜಗಳಗಳನ್ನು ಚರ್ಚಿಸಲಾಗಿದೆ. ಹಿಂದೊಮ್ಮೆ ಆ ನಾಟಕಗಳು ಬೆಂಗಳೂರಿನಲ್ಲಿ ಪ್ರದರ್ಶಿತವಾದಾಗ ಮೂಡಿಬಂದ ಒಂದು ವಿಶಿಷ್ಟ ಪ್ರತಿಕ್ರಿಯೆ ಹೀಗಿತ್ತು: ಇವು ರಾಜಕೀಯ ನಾಟಕಗಳು; ಒಂದು ರಾಜಕೀಯ ಪಕ್ಷದ ಒಳಜಗಳವನ್ನು ಕಟ್ಟಿಕೊಂಡು ನಾವೇನು ಮಾಡಬೇಕು? ರಾಜಕೀಯ ಪ್ರಚಾರಕ್ಕಾಗಿ ಈ ನಾಟಕಗಳನ್ನು ಮಾಡುತ್ತಿದ್ದೀರಿ, ಇತ್ಯಾದಿ. ಹಾಗೆ ಟೀಕೆ ಮಾಡಿದ ಜನ ಶೇಕ್ಸ್‌ಪಿಯರನ ರಿಚರ್ಡ್ ಮತ್ತು ಹೆನ್ರಿ ನಾಟಕಗಳನ್ನು ಮೂದಲಿಸುವುದಿಲ್ಲ, ಸಂಸರ ನಾಟಕಗಳನ್ನು ನೋಡಿ ಮೂಗು ಮುರಿಯುವುದಿಲ್ಲ. "ಯಾವುದೋ ಅರಮನೆಯ ಆಂತರಿಕ ಷಡ್ಯಂತ್ರಗಳಿಂದ ನಮಗೇನಾಗಬೇಕು?"-ಇಂತಹ ಪ್ರತಿಕ್ರಿಯೆ ಬಹುಮಟ್ಟಿಗೆ ಅಸಂಭವ. ಈ ನಾಟಕಗಳ ಪಾತ್ರಗಳಾದರೆ ಜೀವಂತ ಜನ, ಅವರ ವ್ಯವಹಾರಗಳು, ಕುತಂತ್ರಗಳು, ಘರ್ಷಣೆಗಳು ಜೀವನದ ಅವಿಭಾಜ್ಯ ಅಂಗಗಳು; ಬ್ರೆಕ್ಟನ ನಾಟಕವಾದರೆ ಅಲ್ಲಿಯ ಪಾತ್ರಗಳು ಜೀವಂತ ಜನರಲ್ಲವೇನು? ಅವರ ಅನುಭವಗಳು ಜೀವನದ ಭಾಗವಲ್ಲವೇನು?

"ರಾಜಕೀಯ" ಎಂದು ಮುಖ ಸೊಟ್ಟಗೆ ಮಾಡಿಕೊಳ್ಳುವ ವಿಮರ್ಶಕ ವಿದ್ವಾಂಸರು ಒಂದು ತೆರನಾದ ರಾಜಕೀಯ ಸೂತ್ರಗಳ ಬಗ್ಗೆ ಮಾತ್ರ ಹಾಗೆ ಪ್ರತಿಕ್ರಿಯಿಸುತ್ತಾರೆ. ಬೇರೆ ತೆರನಾದ ರಾಜಕೀಯವು ಅವರಿಗೆ ರಾಜಕೀಯವೆನಿಸುವುದಿಲ್ಲ. ಯೂತ್ ಹಾಸ್ಟೆಲ್ ಸಂಘದ ವತಿಯಿಂದ ಹಿಮಾಲಯದಲ್ಲಿ ಚಾರಣಕ್ಕೆ ಹೋಗಿದ್ದ ಸಂದರ್ಭದಲ್ಲಿನ ಒಂದು ಅನುಭವ ಜ್ಞಾಪಕಕ್ಕೆ ಬರುತ್ತದೆ. ಪ್ರತಿದಿನ ಸಂಜೆ ಊಟದ ನಂತರ ಒಂದು ಗೋಷ್ಠಿ ನಡೆಯುವುದು ಸಂಪ್ರದಾಯ. ಹಾಡು, ನಗೆಹನಿ, ಕವನ, ಕುಣಿತ, ಇವೆಲ್ಲಾ ಗೋಷ್ಠಿಯ ಕಾರ್ಯಕ್ರಮಗಳು. ಕಟ್ಟುನಿಟ್ಟಾದ ಒಂದು "ನಿಯಮ" ಇತ್ತು. ಅದೇನೆಂದರೆ, ಯಾವುದರಲ್ಲೂ ರಾಜಕೀಯ ನುಸುಳಬಾರದು, ಎಂದು. ಆಗತಾನೆ ವಾಜಪೇಯಿ ಸರ್ಕಾರ ಬಂದಿತ್ತು. ನಮ್ಮ ಕ್ಯಾಂಪುಗಳ ನಾಯಕರ ಪ್ರಕಾರ ರಾಜಕೀಯವೆಂದರೆ ವಾಜಪೇಯಿ ಅಥವಾ ಅವರ ಸರ್ಕಾರವನ್ನು ಟೀಕಿಸುವುದು; ವಾಜಪೇಯಿಗೆ "ಕಿರುಕುಳ" ನೀಡುತ್ತಿದ್ದ ಜಯಲಲಿತಾ ಅಥವಾ ಇನ್ನಾರನ್ನೋ ಟೀಕಿಸಿದರೆ ಅದು

ರಾಜಕೀಯವೆನಿಸುತ್ತಿರಲಿಲ್ಲ. ಬೇರೊಂದು ಉದಾಹರಣೆ ನೋಡುವುದಾದರೆ, ಪುನರ್ಜನ್ಮವನ್ನು ವೈಜ್ಞಾನಿಕ ಸತ್ಯವೆಂಬಂತೆ ಸಾಹಿತ್ಯದಲ್ಲಿ ಪ್ರತಿಪಾದಿಸಿದರೆ ಅದು ಸಾಧು, ಯುಕ್ತ; ಅದು ಮೂರ್ಖತನದ ನಂಬಿಕೆಯೆಂದು ಲೇವಡಿ ಮಾಡಿದರೆ ಅದು ಅಸಾಧು ಮತ್ತು ಅಯುಕ್ತ. ಒಬ್ಬ "ಧರ್ಮಾರತ್ನಾಕರ" ಶ್ರೀಮಂತನ ತಥಾಕಥಿತ ಹೃದಯವಂತಿಕೆಯನ್ನು ಚಿತ್ರಿಸಿದರೆ ಅದು ಸ್ವೀಕಾರಾರ್ಹ; ಅವನ ಶೋಷಕ ಪ್ರವೃತ್ತಿ, ಕ್ರೌರ್ಯ, ಲಂಪಟತನ, ಮುಂತಾದುವನ್ನು ಚಿತ್ರಿಸಿದರೆ ಅದು "ಪ್ರಚಾರಾತ್ಮಕ ಸಾಹಿತ್ಯ." ಸಾರಾಂಶವಿಷ್ಟೆ: ಅಸ್ತಿತ್ವದಲ್ಲಿರುವ ವ್ಯವಸ್ಥೆಯ ಸಮರ್ಥನೆಯಾದರೆ ಅಥವಾ ಅದಕ್ಕೆ ಪೂರಕ ಸಾಮಗ್ರಿ ಒದಗಿಸುವಂತಿದ್ದರೆ, ಅದು ಶ್ರೇಷ್ಠ ಸಾಹಿತ್ಯ, ಗಂಭೀರವಾಗಿ ಅದರ ಚಿಂತನೆ ನಡೆಸಬೇಕು, ಅದು ಎತ್ತಿಹಿಡಿಯುವ ಮೌಲ್ಯಗಳನ್ನು ಶ್ಲಾಘಿಸಬೇಕು, ಆ ಕೃತಿಯ ಸಾರ್ವತ್ರಿಕತೆಯನ್ನು ಘೋಷಿಸಬೇಕು. ಅದಕ್ಕೆ ಬದಲಾಗಿ, ಸಾಹಿತ್ಯವು ವ್ಯವಸ್ಥೆಯನ್ನು ಕೆದಕಿ ನೋಡಿ, ಅದರ ಹುಳುಕನ್ನು ಕಂಡು ಹೇಸಿ, ಅದರ ಬದಲಾವಣೆ ಹೇಗೆ ಅಗತ್ಯ ಮತ್ತು ಅದಕ್ಕೆ ದಾರಿ ಯಾವುದು ಎಂದೇನಾದರೂ ಪರಾಮರ್ಶೆ ನಡೆಸಹೊರಟರೆ ಅದು ಕಳಪೆ ಸಾಹಿತ್ಯ, ಪ್ರಚಾರ ಸಾಹಿತ್ಯ, ಮೌಲ್ಯರಹಿತ ಸಾಹಿತ್ಯ, ಚಿರಂತನವಾಗದ ಸಾಹಿತ್ಯ!

ಅಷ್ಟೇಕೆ, ಇನ್ನೊಂದು ಆಯಾಮದಲ್ಲಿ ಇದನ್ನು ನೋಡೋಣ:ನಾನೀಗ ಪ್ರತಿಪಾದಿಸುತ್ತಿರುವ ವಿಷಯ ಮತ್ತು ಅದಕ್ಕೆ ಬಳಸುತ್ತಿರುವ ಭಾಷೆ ಹಾಗೂ ಶೈಲಿ ವಿಮರ್ಶೆಯ ಪರಿಭಾಷೆಗೆ ಹೊರತಾದ್ದು; ಅದರಲ್ಲಿ ಗಾಂಭೀರ್ಯವಿಲ್ಲ, ಎಂದು ವಿದ್ವಾಂಸರೆನಿಸಿಕೊಂಡ ಶ್ರೇಷ್ಠ ವಿಮರ್ಶಕರು ಹೇಳಿದರೆ ಆಶ್ಚರ್ಯವಿಲ್ಲ. ಅವರ ಪ್ರಕಾರ ಅದನ್ನು ಸುತ್ತಿ, ಬಳಸಿ, ಸುಲಭವಾಗಿ ಅರ್ಥವಾಗದಂತೆ, ಏನೋ ಅತಿಸೂಕ್ಷ್ಮವೂ ಗಹನವೂ ಆದ ಅಗಾಧ ಪಾಂಡಿತ್ಯದ ಚಿಂತನೆ ನಡೆಯುತ್ತಿದೆ ಎಂಬಂತೆ ಪ್ರದರ್ಶಿಸಬೇಕು. ಆಗ ಅದು ಗಂಭೀರ ಸಾಹಿತ್ಯ ಚರ್ಚೆ ಎನಿಸಿಕೊಳ್ಳುತ್ತದೆ. ಒಟ್ಟಿನಲ್ಲಿ ಜನಕ್ಕೆ ನೇರವಾಗಿ ತಟ್ಟುವಂತೆ ಇರಬಾರದು, ಅಷ್ಟೆ! ಸಾಧ್ಯವಾದರೆ ಒಂದಿಬ್ಬರು "ಆಧುನಿಕೋತ್ತರ" ಪಾಶ್ಚಾತ್ಯ ವಿದ್ವಾಂಸರ ಹೆಸರುಗಳನ್ನು ಉಲ್ಲೇಖಿಸಿ ಅವರ ಮಾತಿನ ಮಹತ್ವವನ್ನು ಹೀರಿಕೊಂಡಂತೆ ನಟಿಸಿದರೆ ಪಾಂಡಿತ್ಯದ ಪ್ರಖರತೆ ಇನ್ನೂ ಹೆಚ್ಚುತ್ತದೆ. ಆ ಆಧುನಿಕೋತ್ತರ ತಂತ್ರದಲ್ಲಿ ಗೂಢವಾದ ರಾಜಕೀಯವಿದೆಯೆಂದು ಮಾತ್ರ ಹೇಳಬಾರದು! ಬಲವಾಗಿ, ಬಲವಂತವಾಗಿ ಉಂಡು, ಹೊಟ್ಟೆಯ ಮೇಲೆ ಕೈಯ್ಯಾಡಿಸುತ್ತಾ ಮೋಕ್ಷದ ಲಕ್ಷಣಗಳನ್ನು ಸಂತೃಪ್ತಿಯ ಭಾವದಿಂದ ಭೋರ್ಗರೆಯುವ ಮಹಾಬ್ರಾಹ್ಮಣನ ಪ್ರಜ್ಞೆಗೂ ನಮ್ಮ ಕೆಲವು ಧೀಮಂತ ವಿಮರ್ಶಕರ ದೃಷ್ಟಿಕೋನಕ್ಕೂ ಅಷ್ಟೇನೂ ವ್ಯತ್ಯಾಸ ಕಾಣಬರುವುದಿಲ್ಲ.

ನಮ್ಮ ಸಾಹಿತ್ಯ ಕ್ಷೇತ್ರದಲ್ಲಿ ಎಂತಹ ಮತ್ತು ಎಷ್ಟು ರಾಜಕಾರಣವಿದೆಯೆಂಬುದು ಸಾಕಷ್ಟು ಪರಿಚಿತವಾದ ವಿಷಯ. ಕೆಲವು ರಾಜಕಾರಣಿಗಳು ಸೃಷ್ಟಿಸುವ ಸಾಹಿತ್ಯದ ಬಗ್ಗೆ ಎಷ್ಟೋ ಸಾಹಿತಿಗಳು ಬಹಳ ಉತ್ಸಾಹದಿಂದ ಮಾತನಾಡುವುದು,ಅದನ್ನು ಅಟ್ಟಕ್ಕೇರಿಸಿ ವಿಮರ್ಶಿಸುವುದು ಸಹ ತಿಳಿದ ಸಂಗತಿಯೇ. ರಾಜಕಾರಣವೆಂದರೆ ಹೀಯಾಳಿಕೆಗೆ ಗುರಿಯಾಗಬೇಕಾದ ಯಾವುದೋ ಪಿಡುಗು ಎಂಬಂತಹ ಅಭಿಪ್ರಾಯವನ್ನು ಹರಡುವುದು ಹಲವರ ಸಂಪ್ರದಾಯ. ತಾವು

ನಿಷ್ಕ್ರಿಯರಾಗಿ, ತಟಸ್ಥರಾಗಿ, ದೂರದಲ್ಲಿ ಎಲ್ಲೋ ನಿಂತು ಎಲ್ಲಾ ಘಟನಾವಳಿಗಳನ್ನೂ ಅಸಮಾಧಾನದಿಂದ ನೋಡುವುದು ಅತಿ ಸುಲಭದ ಕ್ರೀಡೆ. ಯಾವುವು ತೃಪ್ತಿಕರವಲ್ಲವೋ ಅಂತಹ ಘಟನೆಗಳಿಗೆ ಪರ್ಯಾಯವೊಂದನ್ನು ಕಂಡುಕೊಳ್ಳಲು ಮಾನಸಿಕವಾಗಿ ಹಾಗೂ ಕ್ರಿಯಾತ್ಮಕವಾಗಿ ಸಿದ್ಧರಿಲ್ಲದಿದ್ದವರು ಟೀಕೆಗಳನ್ನು ಮಾಡುತ್ತಲೇ ತೃಪ್ತಿ ಹೊಂದಬೇಕು. ಯಾವುದೇ ಸಂದರ್ಭದಲ್ಲಿ ಎಂತಹ ಸನ್ನಿವೇಶವಿದೆಯೆಂದು ವಿವರಿಸುವುದು ಅಷ್ಟೊಂದು ಕ್ಲಿಷ್ಟವಾದ ಸಮಸ್ಯೆಯಲ್ಲ. ವಿವರಣೆ ಕೊಡುವುದರಲ್ಲೂ ವಾರೆನೋಟ, ವ್ಯಕ್ತಿನಿಷ್ಠ ದೃಷ್ಟಿಕೋಣ ಸಾಧ್ಯ. ಆದರೆ ಅದು ಅನಿವಾರ್ಯವಲ್ಲ. ನಿಜಕ್ಕೂ ನಮ್ಮ ಮುಂದಿರುವ ಸವಾಲೆಂದರೆ ಪರಿಸ್ಥಿತಿಯನ್ನು ಬದಲಾಯಿಸುವುದು, ಅದಕ್ಕೆ ಸೂಕ್ತವಾದ ಪ್ರಕ್ರಿಯೆಯನ್ನು ಯೋಜಿಸುವುದು, ಅದರಲ್ಲಿ ಪಾಲ್ಗೊಳ್ಳುವುದು, ಮತ್ತು ಅಪೇಕ್ಷಿತ ಫಲಿತಾಂಶವನ್ನು ದೊರಕಿಸಿಕೊಳ್ಳುವುದು. ಬೇರೆ ಯಾರೋ ಇದನ್ನೆಲ್ಲಾ ಸರಿಯಾಗಿ ಮಾಡಲಿಲ್ಲವೆಂದು ಹೇಳುವ ಮುನ್ನ ನಮ್ಮ ಪಾತ್ರವೇನೆಂಬುದನ್ನು ನಿಷ್ಕರ್ಷಿಸಿಕೊಳ್ಳಬೇಕಾದ್ದು ಅವಶ್ಯಕ. ಪಾಲ್ಗೊಳ್ಳುವ ಜನ ಬೇರೆ, ನಿರ್ದೇಶನ ಕೊಡುವ ವ್ಯಕ್ತಿ ಬೇರೆ ಎಂದಾಗ ಆ ವ್ಯಕ್ತಿಯ ಆಳವಾದ ಭಾವನೆಗಳು ಅಪ್ರಸ್ತುತವಾಗಿ ಬಿಡುವ ಅಪಾಯವಿದೆ. ಆಂಟೋನಿಯೋ ಗ್ರಾಂಶಿ ಇದನ್ನು ಗಮನದಲ್ಲಿಟ್ಟುಕೊಂಡೇ "ಸಾವಯವ ಬುದ್ಧಿಜೀವಿ" ಎಂಬ ಕಲ್ಪನೆಯನ್ನು ಮುಂದಿಟ್ಟಿದ್ದು. ಅವನು ಕೇವಲ ಪ್ರೇಕ್ಷಕನಲ್ಲ, ಅವನದು ಬರೀ ಸಾಕ್ಷಿ ಪ್ರಜ್ಞೆಯಲ್ಲ. ಅವನು ದುಡಿಯುವ ಜನರ ನಡುವಿನಿಂದಲೇ ಬಂದವನು, ಅವರ ಆಕಾಂಕ್ಷೆಗಳನ್ನು ತನ್ನದಾಗಿಸಿಕೊಂಡವನು, ಅವರೊಡನೆ ಸಾಮುದಾಯಿಕ ಕ್ರಿಯೆಗಳಲ್ಲಿ ಏಕೀಭವಿಸಿಕೊಳ್ಳುವವನು. ಅವನ ಪ್ರಜ್ಞೆ ಅವಿಭಕ್ತವಾದ ಪ್ರಜ್ಞೆ. ಹತ್ತೊಂಭತ್ತನೆಯ ಶತಮಾನದ ಇಂಗ್ಲೆಂಡ್ ಬಗ್ಗೆ ಬರೆಯುತ್ತಾ ಬೇಸಿಲ್ ವಿಲೆ ಎಂಬೊಬ್ಬ ವಿಮರ್ಶಕ ಹೇಳುತ್ತಾನೆ: ಆಗ ಎರಡು ವಿಭಾಗದ ಜನರಿದ್ದರು. ಒಂದು ವಿಭಾಗವು ಚಿಂತನೆಯನ್ನು ಮಾತ್ರವೇ ಮಾಡುವುದರಲ್ಲಿ ನಿರತವಾಗಿತ್ತು; ಇನ್ನೊಂದು ಅದೊಂದನ್ನು ಬಿಟ್ಟು ಮಿಕ್ಕುದೆಲ್ಲವನ್ನೂ ಮಾಡುತ್ತಿತ್ತು, ಎಂದು. ನಮ್ಮ ಅನೇಕ ಸಾಹಿತಿಗಳು ಸಮಕಾಲೀನ ರಾಜಕೀಯವನ್ನು ನೋಡುವುದು ಈ ಪರಿಯಲ್ಲಿ. ಸ್ವಾತಂತ್ರ್ಯ ಬಂತೆಂದು ಹಿಗ್ಗಿ ಹಾಡುತ್ತಾರೆ; ಆಮೇಲೆ ಐದು ವರ್ಷಗಳು ಕಳೆಯುವುದಕ್ಕೂ ಮುನ್ನವೇ ನಿರಾಶೆಯ ಬೆಟ್ಟಗಳಾಗಿ ತಮ್ಮೆಲ್ಲ ಕೋಪವನ್ನು ಆರ್ಭಟದ ಕಾವ್ಯದಲ್ಲಿ ಮೊಳಗಿಸಿ ಬಿಡುತ್ತಾರೆ. ಆ ಮಧ್ಯದ ವರ್ಷಗಳಲ್ಲಿ ಈತ ಮಾಡಿದ್ದೇನು? ಅಂದರೆ, ಆತ ಚುನಾವಣೆಯಲ್ಲಿ ಗೆದ್ದು ಬಂದು, ಮಂತ್ರಿಯಾಗಿ ಏನೋ ಕಡಿಯಬೇಕಾಗಿತ್ತೆಂದಲ್ಲ. ಸಾಮೂಹಿಕ ಪ್ರಜ್ಞೆ ಮತ್ತು ಕ್ರಿಯೆಗಳನ್ನು ರೂಪಿಸುವುದರಲ್ಲಿ ಪಾಲ್ಗೊಳ್ಳಬೇಕಾಗಿತ್ತು, ಅದರ ಕಷ್ಟಗಳನ್ನು ನೇರವಾಗಿ ಅನುಭವಿಸಬೇಕಾಗಿತ್ತು, ಎಂದರ್ಥ. ಗಿಯೋರ್ಗ್ ಲುಕಾಚ್ ಬರೆದಿರುವ ಟಾಲ್‌ಸ್ಟಾಯ್ ಬಗೆಗಿನ ಒಂದು ಲೇಖನದಲ್ಲಿ ಆ ಮಹಾನ್ ಲೇಖಕನ ಮಹತ್ವ ಎಂತಹುದೆಂಬುದನ್ನು ಚರ್ಚಿಸಿದ್ದಾನೆ. ಒಬ್ಬ ಸಾಮಾನ್ಯ ರೈತನ ಚಿತ್ರಣ ನೀಡುವುದು ಟಾಲ್‌ಸ್ಟಾಯ್‌ಗೆ ಅನಿವಾರ್ಯ ಎಂಬುವಷ್ಟು ಮಟ್ಟಿಗೆ ಅದನ್ನು ಆತ ಮಾಡಿದ್ದಾನೆ. ಅಲ್ಲೆಲ್ಲಾ ಪ್ರಶ್ನೆಯನ್ನು ವೈಯಕ್ತಿಕ ನೆಲೆಯ

ನೈತಿಕ ಪ್ರಶ್ನೆಯೆಂಬಂತೆ ಎತ್ತಲಾಗುತ್ತದೆ. ಇತರರ ದುಡಿಮೆಯನ್ನು ಶೋಷಿಸುವಾಗೆಲ್ಲಾ ವ್ಯಕ್ತಿಯು ನೈತಿಕವಾಗಿ ಪತನ ಹೊಂದುತ್ತಲೇ ಇರುತ್ತಾನೆ; ಹಾಗಾಗದಂತೆ ಜೀವನವನ್ನು ಹೇಗೆ ನಿರ್ವಹಿಸುವುದು? ಟಾಲ್‌ಸ್ಟಾಯ್‌ಗೆ ಇದು ಮೂಲಭೂತವಾದ ಪ್ರಶ್ನೆ. ಅದಕ್ಕೆ ಟಾಲ್‌ಸ್ಟಾಯ್ ಎಷ್ಟೋ ನಿರರ್ಥಕ ಹಾಗೂ ಪ್ರತಿಗಾಮಿ ಎನಿಸಬಹುದಾದ ಉತ್ತರಗಳನ್ನು ಕೊಟ್ಟಿದ್ದಾನೆ. ಲುಕಾಚ್‌ನ ಅಭಿಪ್ರಾಯದಲ್ಲಿ ಟಾಲ್‌ಸ್ಟಾಯ್ ಏನು ಉತ್ತರವನ್ನೇ ಕೊಟ್ಟಿರಲಿ ಅದು ಮುಖ್ಯವಲ್ಲ, ಅಂತಹ ಪ್ರಶ್ನೆಯನ್ನು ಸದಾ ಎತ್ತುತ್ತಲೇ ಇದ್ದನಲ್ಲಾ, ಅದು ಮುಖ್ಯವಾಗುತ್ತದೆ.

ಒಂದರ್ಥದಲ್ಲಿ ಟಾಲ್‌ಸ್ಟಾಯ್ ಸಾಹಿತ್ಯದಲ್ಲಿ ರಾಜಕೀಯವು ವಿಪುಲವಾಗಿ ತುಂಬಿಕೊಂಡಿದೆ. ಆದರೆ ಅದು ಕಳಪೆಯ ಸಾಹಿತ್ಯವಾಗುವುದಿಲ್ಲ. ಅಲ್ಲಿಯ ಉತ್ತರಗಳು ದುಡಿಯುವ ಜನರ ಅಂತಿಮ ಉತ್ತರಗಳೂ ಅಲ್ಲ. ಆದರೆ ಅಲ್ಲಿ ಸಾಮೂಹಿಕ ಪ್ರಜ್ಞೆಯ ತುಡಿತವಿದೆ. ಅದು ಆರೋಗ್ಯಕರವಾದ ರಾಜಕೀಯ. ಬರ್ನಾರ್ಡ್ ಷಾ ತನ್ನೊಂದು ನಾಟಕವಾದ 'ಮೇಜರ್ ಬಾರ್ಬರಾ'ದಲ್ಲಿ ಅಂಡರ್‌ಶಾಫ್ಟ್ ಎಂಬ ತುಪಾಕಿ ಮದ್ದು ತಯಾರಕನ ಬಾಯಲ್ಲಿ ಅವನ ಮಗ ಸ್ಟೀಫನ್‌ಗೆ ಛೇಡಿಸುವ ಮಾತನ್ನಾಡಿಸಿದ್ದಾನೆ. ಸ್ಟೀಫನ್ ವಿದ್ಯಾವಂತ ಯುವಕ. ಆಕ್ಸ್‌ಫರ್ಡ್-ಕೇಂಬ್ರಿಜ್‌ಗಳ ಹಿನ್ನೆಲೆಯುವನು. ಏನೇನೋ ನೈತಿಕ ಮೌಲ್ಯಗಳನ್ನು ನಂಬಿದ್ದಾನೆ. ಯುದ್ಧಸಾಮಗ್ರಿಯನ್ನು ತಯಾರಿಸಿ ಹಣ ಮಾಡುವ ತನ್ನ ತಂದೆಯನ್ನು ಕಂಡರೆ ಅವನಿಗೆ ಅನೈತಿಕತೆಯ ಸಾಕಾರಮೂರ್ತಿಯನ್ನು ಕಂಡಂತಾಗುತ್ತದೆ. ತಂದೆ ಅವನಿಗೆ ಹೇಳುತ್ತಾನೆ: ಭೇಷ್ ಮಗನೆ! ಇವನು ಮೂರ್ಖ, ಅವನು ತುಂಟ, ಇನ್ನೊಬ್ಬ ಅಯೋಗ್ಯ. ಹೀಗೆ ಹಣೆಪಟ್ಟಿ ಕಟ್ಟಿಯಾದ ಮೇಲೆ ನಿನ್ನ ಜವಾಬ್ದಾರಿ ಮುಗಿಯಿತಲ್ಲವೆ?ನೀನು ಮಹಾ ನೈತಿಕ ಪ್ರಜ್ಞೆಯ ಧೀಮಂತ. ನೇರವಾಗಿ ಪಾರ್ಲಿಮೆಂಟ್ ಸದಸ್ಯನಾಗಲು ಅರ್ಹನಾಗಿದ್ದೀಯೆ, ಎಂದು.

ಇಷ್ಟೆಲ್ಲಾ ಪ್ರಸ್ತಾಪಿಸಿದ್ದು ಸಾಹಿತ್ಯದ ವ್ಯಾಪ್ತಿಯನ್ನು ತಿಳಿಯಲು ಮತ್ತು ಅದರಲ್ಲಿ ರಾಜಕಾರಣದ ನೆಲೆಯನ್ನು ಅರ್ಥೈಸಲು. ಯಾವ ರಾಜಕೀಯ ಬಂದರೆ ಸಾಹಿತ್ಯ ತುಚ್ಛವಾಗುತ್ತದೆಂದು ತೀರ್ಮಾನ ಮಾಡುವವರು ಯಾರು? ಏಕೆ ಹಾಗೆ ಮಾಡುತ್ತಾರೆ? ಅವರು ಎತ್ತಿಹಿಡಿಯುವ ರಾಜಕೀಯ ಎಂಥದು? ಮಾನ್ಯ ಬರಗೂರು ರಾಮಚಂದ್ರಪ್ಪನವರ ಹೆಗ್ಗಳಿಕೆ ಏನೆಂದರೆ ಕನ್ನಡ ಸಾಹಿತ್ಯ ಮತ್ತು ವಿಮರ್ಶೆಯ ಸಂದರ್ಭದಲ್ಲಿ ಈ ಪ್ರಶ್ನೆಗಳನ್ನು ಗಟ್ಟಿಯಾಗಿ, ನಿರ್ಭಿಡೆಯಿಂದ, ನಿಸ್ಸಂಕೋಚವಾಗಿ ಎತ್ತುವುದು ಮತ್ತು ಅನೇಕ ಕವಿಗಳ, ಕಾದಂಬರಿಕಾರರ ಕೃತಿಗಳ ಸೂಕ್ಷ್ಮ ವಿಶ್ಲೇಷಣೆಗಳ ಆಧಾರದ ಮೇಲೆ ಆ ಪ್ರಶ್ನೆಗಳಿಗೆ ಉತ್ತರಗಳನ್ನು ಸೂಚಿಸುವುದು. ಅವು ಅಸಾಂಪ್ರದಾಯಿಕ ಉತ್ತರಗಳೆಂದು ಬೆಚ್ಚಿಬೀಳುವ ಪ್ರಸಂಗವೇನೂ ಇಲ್ಲವೆಂದು ನವಿರಾಗಿ ಪ್ರತಿಪಾದಿಸುವುದು ಅವರ ವೈಶಿಷ್ಟ್ಯ. ಫ್ರೆಡರಿಕ್ ಏಂಗಲ್ಸ್ "ಇಂಗ್ಲೆಂಡಿನಲ್ಲಿ ದುಡಿಯುವ ವರ್ಗದ ಪರಿಸ್ಥಿತಿ" ಎಂಬ ತನ್ನ ಕೃತಿಯಲ್ಲಿ ಯಾವ ವರ್ಗದ ಜನ ಎಂತಹ ಸಾಹಿತ್ಯ ಕೃತಿಗಳನ್ನು ಅಭ್ಯಾಸ ಮಾಡಿ ತಮ್ಮದಾಗಿಸಿಕೊಳ್ಳುತ್ತಾರೆಂಬುದನ್ನು ವಿಹಂಗಮವಾಗಿ ಚರ್ಚಿಸಿದ್ದಾನೆ. ಹಾಗೆ ಮಾಡುವಾಗ ಒಂದೆಡೆ ಆತ ಹೇಳುತ್ತಾನೆ: "ಆ ಮಹಾನ್ ಪ್ರತಿಭಾಶಾಲಿ, ಪ್ರವಾದಿಗಳಿದ್ದಾರಲ್ಲ,

ಶೆಲ್ಲಿ ಮತ್ತು ಬೈರನ್ ಎಂಬುವವರು, ಎಂತಹ ಅದ್ಭುತ ಸಾಹಿತಿಗಳು ಅವರು. ನಮ್ಮ ಪ್ರಸ್ತುತ ಸಮಾಜದ ಅಂಕುಡೊಂಕುಗಳನ್ನು ಅದೆಷ್ಟು ಮೊನಚಾಗಿ ವಿಮರ್ಶಿಸುತ್ತಾನೆ ಆ ಶೆಲ್ಲಿ! ಅದನ್ನು ಓದುವವರು ಹೊಟ್ಟೆಪಾಡಿನ ಮಟ್ಟಿಗೆ ದುಡಿಯುವ ಜನರೇ. ಬಂಡವಳಿಗ ಶ್ರೀಮಂತ ವರ್ಗ ಓದುವ ಶೆಲ್ಲಿ ತುಂಡರಿಸಲಾದ ಶೆಲ್ಲಿ. ಅವರ ಡಾಂಭಿಕ ನೈತಿಕತೆಗೆ ತಕ್ಕಂತೆ ಶೆಲ್ಲಿಯನ್ನು ಕತ್ತರಿಸಿ ತಮಗೆ ಹಿತವಾದುದನ್ನಷ್ಟೇ ಓದಿಕೊಳ್ಳುತ್ತಾರೆ ಅವರು." ನಮ್ಮ ಕುವೆಂಪು, ಬೇಂದ್ರೆ, ಮುಂತಾದವರನ್ನು ಅರ್ಥೈಸುವಾಗ ಎಷ್ಟೋ ವಿಮರ್ಶಕರಿಗೆ ಸಂಕೋಚ ತುಂಬಿಬರುತ್ತದೆ. ಮಡಿವಂತಿಕೆಗೆ ಯಾವುದು ಹಿಡಿಸುತ್ತದೋ ಅದನ್ನು ಎತ್ತಿಹಿಡಿಯಲಾಗುತ್ತದೆ. ಜೊತೆಗೆ ಅಂತಹ ಗಂಭೀರ ವ್ಯಕ್ತಿತ್ವದ ಸಾಹಿತಿವರ್ಯರನ್ನು ಟೀಕೆ ಮಾಡಲು ಸಹ ಅಂಜಿಕೆ. ಹೇಗೂ ಕವಿಗಳು ಋಷಿಗಳಲ್ಲವೆ? ಆದ್ದರಿಂದ ಈ ಕವಿಗಳು ನೀಡುವ ಕಾಣ್ಕೆ ಮತ್ತು ಸಂದೇಶಗಳು ಅಂತಿಮ ಸತ್ಯ ಎಂಬ ರೀತಿಯಲ್ಲಿ ವ್ಯಾಖ್ಯಾನಿಸುವುದು ಒಂದು ಸಂಪ್ರದಾಯ. ಬರಗೂರರು ಅಂತಹ ಯಾವ ನಿರ್ಬಂಧಕ್ಕೂ ಸಿಕ್ಕಿಕೊಳ್ಳದೆ ತಮ್ಮ ವಿಶ್ಲೇಷಣೆಯನ್ನು ಇಡೀ ಸಮಾಜ ಹಾಗೂ ಅದರ ನಿರೀಕ್ಷಿತ ಸಂಸ್ಕೃತಿಯ ಹಿನ್ನೆಲೆಯಲ್ಲಿ ಸಮರ್ಥವಾಗಿ ಮಾಡುತ್ತಾರೆ. ಹಾಗೆ ಮಾಡಿದಾಗ ಬೇಂದ್ರೆಯಂತಹ ವರಕವಿ ಕೂಡ ಯಾವುದೋ ನ್ಯೂನತೆಗೆ ಬಲಿಯಾಗಿದ್ದಾರೆಂದು ಕಂಡುಬಂದರೆ ಬರಗೂರರು ಅದನ್ನು ಮುಕ್ತವಾಗಿ ಹೇಳುತ್ತಾರೆ; ಆದರೆ ಬೇಂದ್ರೆಯವರಿಗೆ ಅಪಚಾರವೆಸಗುವುದಿಲ್ಲ.

ಏಪ್ರಿಲ್ ೧೯೮೧ರಲ್ಲಿ ಪ್ರಕಟಿತವಾದ ಬರಗೂರರ "ಸಾಹಿತ್ಯ ಮತ್ತು ರಾಜಕಾರಣ" ಎಂಬ ಗ್ರಂಥವು ೨೨ ಲೇಖನಗಳ ಸಂಕಲನ. ೧೯೭೩ರಿಂದ ೧೯೮೦ರವರೆಗೆ ಬೇರೆ ಬೇರೆ ಸಂದರ್ಭಗಳಲ್ಲಿ ಬರೆಯಲಾಗಿದ್ದ ಕೆಲವು ಲೇಖನಗಳಿವು. ಮೊದಲಿಗೆ ಅವು ಎಲ್ಲಿ ಪ್ರಕಟವಾಗಿದ್ದುವೆಂಬುದನ್ನು ನಮೂದಿಸಿಲ್ಲ. ವಿಚಾರ ಸಂಕಿರಣಗಳಲ್ಲಿ, ಸಾಹಿತ್ಯ ಕಾರ್ಯಾಗಾರಗಳಲ್ಲಿ ಲೇಖಕರು ನೀಡಿದ್ದ ಉಪನ್ಯಾಸಗಳೂ ಇಲ್ಲಿ ಸೇರಿವೆ. ಮೂರು ಭಾಗಗಳಾಗಿ ವಿಂಗಡಿಸಲಾಗಿರುವ ಲೇಖನಗಳು ಸಾಹಿತ್ಯಕ ಸಿದ್ಧಾಂತ, ಸಾಹಿತಿ-ಸಾಹಿತ್ಯಕೃತಿಗಳ ವಿಮರ್ಶೆ, ಸಾಮಾಜಿಕ-ರಾಜಕೀಯ-ಸಾಂಸ್ಕೃತಿಕ ವಿಷಯಗಳ ಚರ್ಚೆ, ಇವುಗಳನ್ನು ಸ್ಥೂಲವಾಗಿ ಒಳಗೊಂಡಿವೆ ಎನ್ನಬಹುದು. ಬಂಡಾಯ ಸಾಹಿತ್ಯ ಸಂಘಟನೆಯ ಉದ್ದೇಶಗಳ ಪೂರೈಕೆಗೆ ಒಂದು ಸೈದ್ಧಾಂತಿಕ ನೆಲೆ ಮತ್ತು ಆಯಾಮಗಳನ್ನೊದಗಿಸುವಲ್ಲಿ ಈ ಎಲ್ಲ ಲೇಖನಗಳೂ ಸಮರ್ಥವಾದ ಪಾತ್ರ ನಿರ್ವಹಿಸಿವೆ. ಬಂಡಾಯ ಚಳುವಳಿಯ ಆಶಯಗಳನ್ನು ಟೀಕಿಸುವಾಗ ಕೆಲವರು ಸಾಮಾನ್ಯವಾಗಿ ಎತ್ತಿ ತೋರಿಸುತ್ತಿದ್ದ ಮತ್ತು ಇಂದಿಗೂ ಎತ್ತಿ ಹಿಡಿಯುವ ಅಂಶವೆಂದರೆ ಅಲ್ಲಿ ಸಾಹಿತ್ಯ ಕಲೆಯ ಅಭಾವವಿದೆ, ಕಲೆಗಿಂತಲೂ ಕರೆಗೆ ಪ್ರಾಧಾನ್ಯವಿದೆ, ಎಲ್ಲಾ ಘೋಷಣೆಯಲ್ಲಿ ಪರಿಸಮಾಪ್ತವಾಗುತ್ತದೆ, ಎಂಬುದು. ಚಳುವಳಿಯನ್ನು ದಂಡನೆಗೆ ಗುರಿಮಾಡಿಕೊಳ್ಳುವವರು ಆಯ್ಕೆ ಮಾಡಿಕೊಳ್ಳುವ ಸುಲಭಮಾರ್ಗ ಇದು. ಏಕೆಂದರೆ, ಸಾಹಿತ್ಯದ ಪ್ರಾಥಮಿಕ ಲಕ್ಷಣವೇ ಅದು ಕಲಾತ್ಮಕವಾಗಿಯೂ ಇರಬೇಕೆಂಬುದು. ಹಾಗಿಲ್ಲದಿದ್ದಾಗ ಅದನ್ನು ಸಾಹಿತ್ಯವೆಂದು ಕರೆಯುವ ಪ್ರಶ್ನೆಯೇ ಏಳುವುದಿಲ್ಲ. ಅದು ಬಂಡಾಯ ಸಾಹಿತ್ಯಕ್ಕೂ ಅನ್ವಯವಾಗುತ್ತದೆ.

ಬರಗೂರರು ಈ ಅಂಶವನ್ನು ಹಲವು ಬಾರಿ ಬಲವಾಗಿ ಪ್ರತಿಪಾದಿಸಿರುವುದು ಪ್ರಮುಖವಾಗಿ ಗಮನಕ್ಕೆ ಬರುತ್ತದೆ. ಕಾವ್ಯ ಪ್ರಯೋಜನವನ್ನು ವ್ಯಾಖ್ಯಾನಿಸಿರುವ ಭಾರತೀಯ ಕಾವ್ಯಮೀಮಾಂಸಕರು ಹೆಜ್ಜೆ ಹೆಜ್ಜೆಗೂ ಕವಿತ್ವದಲ್ಲಿ ಕಲಾವಂತಿಕೆಯು ಅವಿಭಾಜ್ಯ ಅಂಗವಾಗಿ ಇರಲೇಬೇಕೆಂದು ಹೇಳುವುದಿಲ್ಲ. ಉದಾಹರಣೆಗೆ, ಪ್ರಸಿದ್ಧವಾದ ಮಮ್ಮಟನ "ಕಾವ್ಯಂ ಯಶಸೇ ಅರ್ಥಕೃತೇ ವ್ಯವಹಾರವಿದೇ ಶಿವೇತರಕ್ಷತಯೇ|ಸದ್ಯಃ ಪರನಿರ್ವೃತಯೇ ಕಾಂತಾಸಮ್ಮಿತತಯಾ ಉಪದೇಶಯುಜೇ||"ಎಂಬ ಕಾರಿಕೆಯನ್ನು ನೋಡಬಹುದು. ಸ್ವಕೀಯ ಆನಂದ ಮತ್ತು ಸಾಮಾಜಿಕ ನಡತೆಗೆ ಸಂಬಂಧಪಟ್ಟ ಕಾವ್ಯೋದ್ದೇಶಗಳನ್ನು ಪ್ರಸ್ತಾಪಿಸಿರುವ ಮಮ್ಮಟನು ಇಲ್ಲಿ ಕವಿ ಪ್ರತಿಭೆಯ ಸೋಂಕಿಲ್ಲದ ಕಾವ್ಯವು ಕಾವ್ಯವಲ್ಲವೆಂದೇನೂ ಅಷ್ಟು ಸ್ಪಷ್ಟವಾಗಿ ಹೇಳಿಲ್ಲ. ಹಾಗಿದ್ದರೆ ಉಪದೇಶ ಕೊಡುವ ಅತಿಸಾಮಾನ್ಯ ಸುಭಾಷಿತವು ಕಾವ್ಯತ್ವದ ಶ್ರೇಷ್ಠ ಪ್ರತಿನಿಧಿಯೆಂದು ಅವನ ಇಂಗಿತವೇ? ಹೀಗಿದ್ದಾಗ್ಯೂ ಎರಡು ಶತಮಾನಗಳಿಂದ ಉದ್ದೇಶ ಸಹಿತವಾದ ಸಾಹಿತ್ಯವನ್ನು ಕಟುವಾಗಿ ಟೀಕಿಸುತ್ತಾ ಬಂದಿರುವ ಒಂದು ಸಂಪ್ರದಾಯವಿದೆ. ಮತ್ತೆ ಒತ್ತಿ ಹೇಳಬೇಕಾದ್ದು, ಬದಲಾವಣೆಯ ಆಶಯವನ್ನುಳ್ಳ ಸಾಹಿತ್ಯಕ್ಕೆ ಮಾತ್ರ ಇದನ್ನು ಅನ್ವಯ ಮಾಡಲಾಗುತ್ತದೆ, ಎಂಬುದನ್ನು. ಆಂಗ್ಲ ಸಾಹಿತ್ಯ ವಿಮರ್ಶಕರಲ್ಲಿ ೧೬ನೆಯ ಶತಮಾನದ ಫಿಲಿಪ್ ಸಿಡ್ನಿಯಾಗಲಿ, ೧೭ನೆಯ ಶತಮಾನದ ಮಿಲ್ಟನ್ ಆಗಲಿ, ೧೮ನೆಯ ಶತಮಾನದ ಡ್ರೈಡನ್ ಆಗಲಿ, ೧೯ನೆಯ ಶತಮಾನದ ಶೆಲ್ಲಿಯಾಗಲಿ, ೨೦ನೆಯ ಶತಮಾನದ ಎಲಿಯಟ್ ಆಗಲಿ ಉದ್ದೇಶ, ಉಪದೇಶಗಳಿಂದ ಕೂಡಿದ ಸಾಹಿತ್ಯವು ಸಾಹಿತ್ಯವೆನಿಸಿಕೊಳ್ಳುವುದಿಲ್ಲವೆಂದು ಹೇಳುವುದಿಲ್ಲ. ನಮ್ಮ ಮಂಕು ವಿಮರ್ಶಕರು ಆಗಾಗ್ಗೆ ಅತಿಪುಲಕದಿಂದ ವೈಭವಿಸುವ "ಶುದ್ಧ ಸಾಹಿತ್ಯ" ನಮ್ಮ ಪ್ರಾಚೀನ ಕಾವ್ಯಮೀಮಾಂಸಕರಿಗಾಗಲಿ, ಪಾಶ್ಚಾತ್ಯ ಮೀಮಾಂಸಕರಿಗಾಗಲಿ ಮಾನ್ಯವಲ್ಲ. ಮಾನ್ಯ ಡಾ. ಎಸ್.ಎಲ್.ಬೈರಪ್ಪ ಹಾಗೂ ಅವರ ಅನುಚರರು ಇದನ್ನು ತಿಳಿದಿಲ್ಲವೆಂದಲ್ಲ; ಬೇರಾವುದೋ ಉದ್ದೇಶದಿಂದ ಅದನ್ನು ಮುಚ್ಚಿಡುತ್ತಾರೆ, ಅಷ್ಟೆ. ಆ ಉದ್ದೇಶವು ಗೂಢವಾದದ್ದೇನೂ ಅಲ್ಲ. ಶತಮಾನಗಳಿಂದ ಬೆಳೆದುಬಂದಿರುವ ಶ್ರೇಣೀಕೃತ ಸಮಾಜದ ಅನಿಷ್ಟ ಮೌಲ್ಯಗಳನ್ನು ಕಿತ್ತುಹಾಕಿ ಸಮಾನತೆಯ ಮೌಲ್ಯವನ್ನು ಪುರಸ್ಕರಿಸುವ ಸಮಾಜ ಕಟ್ಟಬೇಕೆಂದು ತಹತಹಿಸುವವರ ಭಾವನೆಗಳನ್ನು ಅಸಂಗತವೆಂದು ತುಳಿದುಹಾಕುವುದು ಆ ಉದ್ದೇಶ. ಹುಟ್ಟಿನಿಂದಲೇ ಶ್ರೇಷ್ಠ-ಕನಿಷ್ಠ ಎಂಬ ಹೊಲಸು ವಿಂಗಡಣೆಯನ್ನು ಎಂಥೆಂಥದೋ ಬುದ್ಧಿವಂತಿಕೆ-ಚಮತ್ಕಾರಗಳಿಂದ ಸಮರ್ಥಿಸುವ ಸಾಹಿತ್ಯವನ್ನು ಉದ್ದೇಶ ಸಹಿತವಾದ ಸಾಹಿತ್ಯವೆಂದೇಕೆ ತಳ್ಳಿಹಾಕುವುದಿಲ್ಲ ಈ ವಿದ್ವದ್ದಿಗ್ಗಜಗಳು? ಅದಕ್ಕೇಕೆ 'ಶುದ್ಧ ಸಾಹಿತ್ಯ'ವೆಂಬ ನಾಮಕರಣ? ಸ್ಥಗಿತತೆಯ ಮೌಲ್ಯ ಶುದ್ಧ, ಬದಲಾವಣೆಯ ಮೌಲ್ಯ ಅಶುದ್ಧ, ಅಷ್ಟೆ. ಇದನ್ನೇ ಇನ್ನೂ ಸ್ವಲ್ಪ ಮುಕ್ತವಾಗಿ ಹೇಳುವುದಾದರೆ ಗೊಲ್ವಾಲ್ಕರ್ ಸಂಸ್ಕೃತಿ ಶುದ್ಧ, ಅಂಬೇಡ್ಕರ್ ಸಂಸ್ಕೃತಿ ಅಶುದ್ಧ! ಹಾಗೆಂದು ನೇರವಾಗಿ ಹೇಳದೆ ಏನೇನೋ ಮೆರಗು ಹಚ್ಚಿ, ಸಾರುತ್ತಿರುವ ವ್ಯವಸ್ಥೆಗೆ ಕಂಭಗಳಾಗ ಬಯಸುವ ಸಾಹಿತಿಗಳ ಚಾರಿತ್ರ್ಯ ಇನ್ನೆಷ್ಟು

ಪರಿಶುದ್ಧವಾಗಿರಬಹುದೆಂಬ ಜಿಜ್ಞಾಸೆ ತೀರಾ ಅನವಶ್ಯಕ. ಇಲ್ಲಿ ಒಂದು ಸ್ವಾರಸ್ಯವನ್ನು ಗಮನಿಸಬಹುದು: ಅಂಬೇಡ್ಕರರ ಬಗ್ಗೆ ಕವಿತೆಗಳನ್ನು ಬರೆದಿರುವವರಿಗೆ ನಮ್ಮಲ್ಲಿ ಕೊರತೆಯಿಲ್ಲ. ಕವನ ಬರೆದು ಪ್ರಸಿದ್ಧಿಗೆ ಬಂದ ಮೇಲೆ ಅಂಬೇಡ್ಕರ್ ಬಗ್ಗೆ ಒಂದಾದರೂ ಕವನ ಬರೆದಿಲ್ಲವೆಂದರೆ ಅದು ಶೋಭಿಸುವುದಿಲ್ಲವೇನೋ! ಆದ್ದರಿಂದ ಹೇಗೋ ಬೌದ್ಧಿಕ ಕಸರತ್ತು ಮಾಡಿ ಒಂದು ಕವನ ಹೊಸೆದು ಬಿಡುತ್ತಾರೆ, ಅಂಬೇಡ್ಕರ್‌ಗೆ ನಮನ ಸಲ್ಲಿಸಿ ಬಿಡುತ್ತಾರೆ. ಆದರೆ ಅಂತರಂಗವಾಗಿ ಅವರ ನಂಬಿಕೆ ಮತ್ತು ಶ್ರದ್ಧೆ ಕಾವ್ಯದಲ್ಲಿ ಬಿಂಬಿಸಲಾದ ಭಾವನೆಗೆ ಸರಿಸಾಟಿಯಾದುದೇ ಆಗಿರುತ್ತದೆಂದು ಹೇಳಲಾಗುವುದಿಲ್ಲ. ದಿನನಿತ್ಯದ ಬೇರೆ ಆಗುಹೋಗುಗಳಿಗೆ ಅವರು ಸ್ಪಂದಿಸುವ ವಿಧಾನವೇ ಇದನ್ನು ಚೆನ್ನಾಗಿ ಹೊರಗೆಡಹುತ್ತದೆ. ಪಂಪ ಅಥವಾ ರನ್ನನಿಗೆ ಇರುವ ಅನುಕೂಲ ಇವರಿಗಿಲ್ಲ. ಏಕೆಂದರೆ, ನಿಜಜೀವನದಲ್ಲಿ ಆ ಪ್ರಾಚೀನ ಕವಿಗಳು ಯಾವ ಮೌಲ್ಯಗಳನ್ನು ಪಾಲಿಸಿದರೆಂಬುದಕ್ಕೆ ನಮ್ಮಲ್ಲಿ ದಾಖಲೆಗಳಿಲ್ಲ. ಆದ್ದರಿಂದ ಅವರ ಸಾಹಿತ್ಯ ವಚನಗಳನ್ನು ನೋಡಿ ಅವರ ವ್ಯಕ್ತಿತ್ವವನ್ನು ಕಲ್ಪಿಸಿಕೊಳ್ಳುತ್ತೇವೆ. ಸಮಕಾಲೀನ ಸಾಹಿತಿಗಳ ಸನ್ನಿವೇಶ ಅದಲ್ಲ. ಅವನು ಬರೆದದ್ದನ್ನಷ್ಟೇ ವಾಚನ ಮಾಡಿ ತೆಪ್ಪಗಿರಲು ನಾವೇನು ಮೂದೇವಿಗಳೆ? ಯಾವ ಬಣಕ್ಕೆ ಹೋದ, ಯಾರನ್ನು ಓಲೈಸಿದ, ಏನೇನು ಉಪನ್ಯಾಸ ನೀಡಿ ಯಾವಯಾವ ಬೇಡಿಕೆಗಳನ್ನು ಪೂರೈಸಿಕೊಂಡ, ಎಂತೆಂತಹ ಮೌಲ್ಯಗಳ ಬಗ್ಗೆ ನಿರರ್ಗಳವಾಗಿ ಮಾತಾಡಿ ಎಷ್ಟೆಷ್ಟು ಕಾನೂನುಬಾಹಿರ ಸವಲತ್ತುಗಳನ್ನು ಪಡೆದುಕೊಂಡ, ಯಾವ ಚಳುವಳಿಯಲ್ಲಿ ಯಾವ ಹಕ್ಕುಗಳ ಸ್ಥಾಪನೆಗಾಗಿ ಹೋರಾಡಿದ, ಎಂಬಿತ್ಯಾದಿ ವಿಷಯಗಳೆಲ್ಲಾ ಸಮಕಾಲಿನ ಸಾಹಿತಿಯ ಓದುಗರಿಗೆ ತೆರೆದಿಟ್ಟ ಪುಸ್ತಕಗಳು. ಅವನ್ನೆಲ್ಲಾ ಮುಚ್ಚಿಟ್ಟು ಅವನ "ಶುದ್ಧಸಾಹಿತ್ಯ" ವನ್ನಷ್ಟೇ ಗ್ರಹಿಸಬೇಕೆಂದು ಅಪೇಕ್ಷಿಸುವುದು ಆಗಿಹೋಗದ ಮಾತು. ಸಾಹಿತ್ಯದಲ್ಲಾಗಲಿ, ವಿಜ್ಞಾನದಲ್ಲಾಗಲಿ, ನಿಜಜೀವನದಲ್ಲಾಗಲಿ, ಆಚರಣೆಯು ಸತ್ಯಾಸತ್ಯತೆಗಳಿಗಿರುವ ಏಕೈಕ ಅಂತಿಮ ನಿರ್ಧಾರಕ ಅಂಶ. ಬರಗೂರರು ಅಡಿಗರ 'ಗೊಂದಲಪುರ'ದ ಕೆಲವು ಸಾಲುಗಳನ್ನು ವ್ಯಾಖ್ಯಾನಿಸುತ್ತಾ ಇದರ ಬಗ್ಗೆ ಬೆಳಕು ಚೆಲ್ಲಿದ್ದಾರೆ (ಪು. ೧೮೮): "ಕನಸದ ಈ ಚಿತ್ರ ಹೆಚ್ಚೆಂದರೆ ಯುಟೋಪಿಯನ್ ಸಮಾಜವಾದಿಯ ಮಾದರಿಯೆನ್ನಬಹುದು. ನಿಜವಾದ ಸಮಾಜವಾದಿಯೊಬ್ಬ ಆಶಾವಾದಿಯಾಗಿದ್ದರೂ ಕ್ರಿಯೆಯನ್ನು ಮುಖ್ಯವೆಂದು ಗಣಿಸುತ್ತಾನೆಯೇ ಹೊರತು ಹೀಗೆ ಸಾಮಾನ್ಯ ಪುಢಾರಿಯಂತೆ ಮಾತನಾಡುವುದಿಲ್ಲ." ಯಾರಿಗೆ ಕ್ರಿಯೆಯ ಒತ್ತಡ ಮತ್ತು ಒತ್ತಾಸೆ ಇಲ್ಲವೋ ಅವರು ಮನಸ್ವಿಯಾಗಿ ಬರೆಯಬಹುದು, ಬರ್ನಾರ್ಡ್ ಷಾನ ಸ್ಟೀಫನ್‌ಗಳಾಗಬಹುದು. ನಮ್ಮ ಮಧ್ಯೆ ಒಂದು ಹೀನಾಯ ಪಿಡುಗಾಗಿರುವ ಅಸ್ಪೃಶ್ಯತೆ ಬಗ್ಗೆ ಒಮ್ಮೆಯಾದರೂ ತಲೆ ಕೆಡಿಸಿಕೊಳ್ಳದ ಅನೇಕ ಕನ್ನಡ ಕವಿಗಳು, ಕವಯಿತ್ರಿಯರು ಕೆಲವು ವರ್ಷಗಳ ಹಿಂದೆ ದಕ್ಷಿಣ ಆಫ್ರಿಕಾದ ವೀರ ಹುತಾತ್ಮ ಬೆಂಜಮಿನ್ ಮೊಲಾಯಿಸ್ ಬಗ್ಗೆ ಕವನಗಳ ಮಹಾಪೂರವನ್ನೇ ಸೃಷ್ಟಿಸಿಬಿಟ್ಟರು. ಆ ಯುವಕನನ್ನು ಕುರಿತು ಅಷ್ಟೊಂದು ಕವನಗಳು ಬೇರಾವ ಭಾಷೆಯಲ್ಲೂ ಬರಲಿಲ್ಲವೆಂದು ತೋರುತ್ತದೆ. ಸಾಹಿತಿಯ ಈ ಎರಡು ಮುಖಗಳು ನಮ್ಮ

ಮುಂದಿದ್ದರೆ ಅವೆರಡೂ ಪ್ರತ್ಯೇಕವೆಂದು ಗುರುತಿಸದ ವಿಮರ್ಶೆ ಯಾವ ಪುರುಷಾರ್ಥಕ್ಕೆ? ಭಾವನೆ ಮತ್ತು ಕ್ರಿಯೆ ಏಕೀಭವಿಸಿದಾಗ ಮಾತ್ರ ಸಾಹಿತ್ಯಕ್ಕೆ ಯಥಾರ್ಥವಾದ ಬೆಲೆ ಬರುತ್ತದೆ. ಪ್ರೇಮಚಂದ್, ಫೈಜ್ ಅಹಮ್ಮದ್ ಫೈಜ್, ಮಗ್ದೂಮ್ ಮೋಹಿಯುದ್ದೀನ್, ಭೀಷಮ್ ಸಾಹ್ನಿ, ಮುಂತಾದವರು ದೊಡ್ಡ ಸಾಹಿತಿಗಳಾಗಿ ಗೋಚರಿಸುವುದು ಅಂತಹ ಕಾರಣದಿಂದ. ಅವರೆಲ್ಲಾ "ಶುದ್ಧ ಸಾಹಿತ್ಯ" ರಚಿಸದೆಯೂ ಸುವಿಖ್ಯಾತಿಯನ್ನು ಪಡೆದಿದ್ದಾರೆ. ಅಯೋಧ್ಯೆಯ ಮಸೀದಿಯನ್ನು ನೆಲಸಮಗೊಳಿಸಿದ ತರುವಾಯದಲ್ಲಿ ಬೆಂಗಳೂರಿನಲ್ಲೊಂದು ಸಭೆ ನೆಡೆಯಿತು. ಮಾನ್ಯ ಪು.ತಿ.ನ. ಅವರು ಅದನ್ನು ಉದ್ಘಾಟಿಸುತ್ತಾ, "ಪಾಪ, ಅದ್ವಾನಿ ಏನು ಮಾಡುತ್ತಾರೆ? ಅವರಿಗೆ ಮಸೀದಿಯನ್ನುರುಳಿಸುವ ಆಕಾಂಕ್ಷೆ ಇರಲಿಲ್ಲ. ಏನೋ ಆಗಿಹೋಯಿತು, ಅಷ್ಟೆ. ಅದನ್ನೆಲ್ಲಾ ದೊಡ್ಡದು ಮಾಡಬಾರದು" ಎಂಬರ್ಥ ಬರುವಂತೆ ಮಾತನಾಡಿದ್ದರು. ಈ ಮಾತುಗಳಲ್ಲಿ ಅವರ ಭಾವನೆ ವ್ಯಕ್ತವಾಗಿಲ್ಲವೆ? ಅದರ ಆಧಾರದ ಮೇಲೆ ಅವರ ರಾಜಕೀಯವನ್ನು ಅರ್ಥಮಾಡಿಕೊಳ್ಳಬಾರದೆ? ಒಂದು ಉಪನ್ಯಾಸಕ್ಕೆ ಅನ್ವಯಿಸುವ ಮಾತು ಒಬ್ಬನ ಸಾಹಿತ್ಯ ಕೃತಿಗೆ ಅನ್ವಯವಾಗದಿರುವುದೆಂತು? ಬರಗೂರರು ಒಂದೆಡೆ ಹೇಳುವಂತೆ "ಹುಸಿನಗೆಯ ಹಿಂದೆಯೇ ಮೈಯೆಲ್ಲ ವಿಷವಾಗಿರುವ ಸಂಚಿನ ವ್ಯವಸ್ಥೆ ಈ ದೇಶದ್ದು"(ಪು. ೧೫೩). ಇದನ್ನು ಮರೆತು ಸಾಹಿತ್ಯವನ್ನು ನಾವು ಶುದ್ಧಸಾಹಿತ್ಯವೆಂದು ಪರಾಮರ್ಶೆ ಮಾಡುತ್ತಿರಲು ಶಕ್ಯವೆ?

"ಸಾಹಿತ್ಯ ಮತ್ತು ರಾಜಕಾರಣ" ಸಂಕಲನದ ಮೂರನೆಯ ಭಾಗದಲ್ಲಿ "ಗುಪ್ತ ಗುಲಾಮಗಿರಿ" ಎಂಬ ಶೀರ್ಷಿಕೆಯ ೧೯೭೫ರ ಒಂದು ಲೇಖನವಿದೆ. ಬರಗೂರರು ಈ ಲೇಖನದಲ್ಲಿ ವರ್ಗಪ್ರಜ್ಞೆ ಮತ್ತು ವರ್ಗಹೋರಾಟಗಳ ಪ್ರಶ್ನೆಯನ್ನು ಸವಿಸ್ತಾರವಾಗಿ ಚರ್ಚಿಸಿದ್ದಾರೆ. ಈ ಲೇಖನದ ಸಾರವು ಒಂದು ಸೈದ್ಧಾಂತಿಕ ನೆಲೆಯನ್ನು ಕಲ್ಪಿಸಿಕೊಟ್ಟರೆ, ಅದರ ಆನ್ವಯಿಕ ಪ್ರಯೋಗವು ಸಾಹಿತ್ಯ ವಿಮರ್ಶೆಯ ವಿಧಾನದಲ್ಲಿ ಕಂಡುಬರುತ್ತದೆ. ಈ ಲೇಖನದಲ್ಲಿ ಬರಗೂರರ ಒಂದೊಂದು ಲೇಖನವನ್ನೂ ಪರಿಚಯ ಮಾಡಿಕೊಡುವ ಉದ್ದೇಶ ನನ್ನದಲ್ಲ. ಅವರ ಪ್ರಬುದ್ಧ ಲೇಖನಗಳೇ ನಮಗೆ ನೇರವಾಗಿ ಲಭ್ಯವಿರುವಾಗ ಅವನ್ನು ಪರಿಚಯ ಮಾಡಿಕೊಡುವ ಗುಜರಿ ಲೇಖನವಾದರೂ ಏಕೆ ಬೇಕು?

ಕಾರ್ಲ್ ಮಾರ್ಕ್ಸ್ ಮತ್ತು ಫ್ರೆಡರಿಕ್ ಏಂಗಲ್ಸ್ ಇಬ್ಬರೂ ಸೇರಿ ೧೮೫೦ರ ದಶಕದಲ್ಲಿ ಒಂದು ಪುಟ್ಟಲೇಖನ ಬರೆದಿದ್ದರು. ಇಕೇರಿಯಸ್ ಎಂಬುವವನು ಬರೆದಿದ್ದ ಒಂದು ಲೇಖನಕ್ಕೆ ಸಂಪಾದಕೀಯ ಮುನ್ನುಡಿಯಾಗಿತ್ತು ಆ ಲೇಖನ. ಇಕೇರಿಯಸ್‌ನ ಲೇಖನದ ಶೀರ್ಷಿಕೆ "ಲಂಡನ್ನಿನಲ್ಲಿ ಬಟ್ಟೆ ಹೊಲಿಯುವ ಕಸುಬು ಅಥವಾ ದೊಡ್ಡ ಮತ್ತು ಚಿಕ್ಕ ಬಂಡವಾಳಗಳ ನಡುವೆ ಹೋರಾಟ" ಎಂಬುದಾಗಿತ್ತು. ಮಾರ್ಕ್ಸ್ ಮತ್ತು ಏಂಗಲ್ಸ್ ಬರೆದಿದ್ದು ಇದು: "ಈ ಲೇಖನದ ಕರ್ತೃ ಸ್ವತಃ ಒಬ್ಬ ದುಡಿಮೆಗಾರ. ಲಂಡನ್ನಿನ ಒಂದು ಬಟ್ಟೆ ಹೊಲಿಯುವ ಅಂಗಡಿಯಲ್ಲಿ ಕೆಲಸ ಮಾಡುತ್ತಾನೆ. ಜರ್ಮನಿಯ ಬಂಡವಳಿಗರನ್ನು ನಾವು ಕೇಳುತ್ತೇವೆ: ಸ್ವಾಮಿ,

ನಿಮ್ಮಲ್ಲಿ ಎಷ್ಟು ಮಂದಿ ಹೀಗೆ ಒಂದು ಚಳುವಳಿಯನ್ನು ಸಮಗ್ರವಾಗಿ ಅಧ್ಯಯನ ಮಾಡಿ ಬರೆಯಬಲ್ಲವರು ಇದ್ದೀರಿ, ಎಂದು. ದುಡಿಯುವ ವರ್ಗವು ಸಮರಾಂಗಣದಲ್ಲಿ ಯುದ್ಧ ಮಾಡಿ ತನ್ನ ಗೆಲುವನ್ನು ಸಾಧಿಸಿಕೊಳ್ಳುವ ಮೊದಲು, ಅಂತಹ ವಿಜಯಗಳಿಗೆ ಪೂರ್ವಭಾವಿಯಾಗಿ ಬೌದ್ಧಿಕ ವಿಜಯಗಳನ್ನು ಸಾಧಿಸಿಕೊಳ್ಳುವ ಮೂಲಕ ವರ್ಗಶತ್ರುವಿಗೆ ಒಂದು ತಿಳಿವಳಿಕೆ ಅಥವಾ ಸೂಚನಾ ಪತ್ರವನ್ನು ನೀಡುತ್ತದೆ.'' ಬರಗೂರರ ''ಸಾಹಿತ್ಯ ಮತ್ತು ರಾಜಕಾರಣ'' ಅಂತಹ ಒಂದು ಸೂಚನಾ ಪತ್ರ. ನಮ್ಮ ಆಳುವ ವರ್ಗದ ಪರವಾಗಿ ತಿಳಿವಳಿಕೆ ಪತ್ರ ನೀಡಲು ಆ ವರ್ಗದಿಂದ ಉಂಬಳಿ ಪಡೆಯುವ ಒಂದು ದೊಡ್ಡ ಬೌದ್ಧಿಕ ಸೈನ್ಯವಿದೆ. ಆ ಸೈನ್ಯದ ಒಂದು ಪ್ರಬಲಾಸ್ತ್ರ ''ಶುದ್ಧಸಾಹಿತ್ಯ''. ದುಡಿಯುವ ಜನರು ಉಂಬಳಿ ನೀಡಿ ಬೌದ್ಧಿಕ ಕಸರತ್ತು ಮಾಡುವವರನ್ನು ನೇಮಿಸಿಕೊಳ್ಳಲಾರರು, ನೇಮಿಸಿಕೊಳ್ಳಬೇಕಾಗಿಲ್ಲ. ದುಡಿಯುವ ಜನರ ನಡುವಿನಿಂದಲೇ ಶುದ್ಧಸಾಹಿತ್ಯಕ್ಕೆ ಸೂಕ್ತ ಉತ್ತರ ನೀಡಬಲ್ಲ ಸೈನ್ಯ ಉದ್ಭವಿಸುತ್ತದೆ. ಅವರೊಡನೆ ಸಮೀಕರಿಸಿಕೊಂಡವರೂ ಈ ಶುದ್ಧಸಾಹಿತ್ಯದ ಮಹಾನ್ ಸಾಹಿತ್ಯಮೀಮಾಂಸಕರಿಗೆ ಸೆಣಸಾಟದಲ್ಲಿ ತೊಡರುಗಳನ್ನೊಡ್ಡಿ ಹತಾಶರನ್ನಾಗಿಸುತ್ತಾರೆ. ಬರಗೂರರ ''ಸಾಹಿತ್ಯ ಮತ್ತು ರಾಜಕಾರಣ'' ಅಂತಹ ಒಂದು ಕೃತಿ. ''ಬಂಡಾಯ ಆಯಾ ಔರ್ ಗಯಾ'' ಎಂದು ಕೆಲವರು ತಮಾಷೆ ಮಾಡುವುದುಂಟು. ಲಂಕೇಶರು ಬಂಡಾಯವನ್ನು ''ಭಂಡಾಯ'' ಎಂದು ಲೇವಡಿ ಮಾಡುತ್ತಿದ್ದರು. ೧೯೭೯ರಲ್ಲಿ ಸಾಂಸ್ಥಿಕವಾಗಿ ಅಸ್ತಿತ್ವಕ್ಕೆ ಬಂದ ಬಂಡಾಯ ಸಾಹಿತ್ಯ ಸಂಘಟನೆಯ ಪ್ರಮುಖ ವಕ್ತಾರರಾಗಿದ್ದ ಎಷ್ಟೋ ವಿದ್ವಾಂಸರು ಎಲ್ಲೆಲ್ಲೋ ಚದುರಿಹೋಗಿದ್ದಾರೆ, ಯಾವಯಾವುದೋ ಬಾಲಗಳನ್ನು ಹಿಡಿದು ಮುಗ್ಗರಿಸುತ್ತಿದ್ದಾರೆ. ಹೊಸ ಪೀಳಿಗೆಗೆ ಅದರಿಂದ ಆತಂಕ ಉಂಟಾಗಿದೆ. ನಾವೆಲ್ಲಾ ಮತ್ತೊಮ್ಮೆ ''ಸಾಹಿತ್ಯ ಮತ್ತು ರಾಜಕಾರಣ'' ಕೃತಿಯನ್ನು ಜೀರ್ಣಿಸಿಕೊಂಡು ಸಬಲರಾಗುವುದು ಉನ್ನತ ಆಕಾಂಕ್ಷೆಯಾಗಿರುತ್ತದೆ.

◆

೬. ಮತಾಂಧತೆಯ ಸಂದರ್ಭದಲ್ಲಿ

ಬಂಗ್ಲಾದೇಶದಲ್ಲಿ ಇತ್ತೀಚೆಗೆ ಜಹಾನಾರಾ ಎಂಬೊಬ್ಬಾಕೆ ಮೃತಪಟ್ಟಳು. ಹಲವು ದಶಕಗಳ ಕಾಲ ಆಕೆ ಗೊಡ್ಡು ಸಂಪ್ರದಾಯಗಳ ಹಾಗೂ ಮೂರ್ಖ ಮತಾಂಧತೆಯ ವಿರುದ್ಧ ಹೋರಾಟ ನಡೆಸಿದ್ದಳು. ಆಕೆಯ ಶವದ ಮೆರವಣಿಗೆಯಲ್ಲಿ ಅಧಿಕ ಸಂಖ್ಯೆಯ ಜನ ಪಾಲ್ಗೊಂಡಿದ್ದರು. ಅದು ಢಾಕಾದಲ್ಲಿ ಜರುಗಿದ್ದು. ಮೆರವಣಿಗೆಯ ಮೇಲೆ ಮತಾಂಧರು ಕಲ್ಲು ತೂರಿದರು. ಆದರೆ ಜನ ಧೃತಿಗೆಡದೆ ಮುನ್ನಡೆದರು.

ಅದಕ್ಕೆ ಒಂದು ವಾರ ಮುಂಚೆ ಅದೇ ನಗರದಲ್ಲಿ ಒಂದು ಸಾವಿರ ಹಾವಾಡಿಗರು, ದೊಂಬರಾಟದವರು ಮೆರವಣಿಗೆ ನಡೆಸಿದ್ದರು. ತಾಸ್ಲಿಮಾ ನಸ್ರೀನ್‌ಗೆ ನೇಣುಗಂಬದ ಶಿಕ್ಷೆಯಾಗಬೇಕೆಂದು ಅವರ ಆಗ್ರಹ. ಆಕೆಯನ್ನು ಹಿಡಿದು ಶಿಕ್ಷಿಸದಿದ್ದರೆ , ಢಾಕಾ ನಗರದಲ್ಲಿ ಹತ್ತು ಸಾವಿರ ಹಾವುಗಳನ್ನು ಹರಿಬಿಡುವುದಾಗಿ ಅವರು ಬೆದರಿಕೆ ಹಾಕಿದ್ದರು. ಇದೊಂದು ಹೊಸರೀತಿಯ ಬೆದರಿಕೆ. ಅನೇಕ ವರ್ಷಗಳ ಹಿಂದೆ ಭುಟ್ಟೋ ಮಹಾಶಯ ಪಾಕಿಸ್ತಾನದಲ್ಲಿ ಅದನ್ನು ಮಾಡಿ ತೋರಿಸಿದ್ದ. ತನ್ನ ವಿರುದ್ಧ ರಾಜಕೀಯ ಪಕ್ಷವೊಂದು ಬೃಹತ್ ಬಹಿರಂಗ ಸಭೆ ನಡೆಸಲು ಜನರನ್ನು ಸೇರಿಸಿದ್ದಾಗ ಮೂಟೆಗಟ್ಟಲೆ ಹಾವುಗಳನ್ನು ಸಭೆಯಲ್ಲಿ ಸುರಿಸಿದ್ದ ಈ ಮುತ್ಸದ್ದಿ. ಬಂಗ್ಲಾದೇಶದ ಸಾಮಾಜಿಕ – ರಾಜಕೀಯ ಜೀವನದಲ್ಲಿ ಹರಡಿರುವ ವಿಷ ಸಾಲದೆಂಬಂತೆ ಈಗ ತಾಸ್ಲಿಮಾ ವಿರುದ್ಧ ವಿಷ ಕಾರುತ್ತಾ ಜನರನ್ನು ಹುಚ್ಚೆಬ್ಬಿಸುತ್ತಿದ್ದಾರೆ. ಈಕೆ ವೈದ್ಯಕೀಯ ಪದವೀಧರೆ , ಲೇಖಕಿ, ಸಾಮಾಜಿಕ ಕಾರ್ಯಕರ್ತೆ. ರಾಜಕೀಯದಲ್ಲಿ ಮತೀಯ ಹೊಲಸನ್ನು ಬೆರೆಸಕೂಡದೆಂದು ಮೊದಲಿಂದ ವಾದಿಸುತ್ತಿದ್ದಾಳೆ. ಸಾಮಾಜಿಕ ಸಂಬಂಧಗಳು ಮಾನವೀಯವಾಗಿರಬೇಕೇ ಹೊರತು ಮತೀಯವಾಗಕೂಡದೆಂದು ಅವಳು ಅಭಿಪ್ರಾಯ ಪಟ್ಟಿದ್ದಾಳೆ.

ಜೊತೆಗೆ ಧಾರ್ಮಿಕ ಮೊಂಡುತನವನ್ನು ಕಟುವಾಗಿ ಟೀಕಿಸಿ ಎಲ್ಲ ಧರ್ಮಗಳನ್ನೂ ಚಾರಿತ್ರಿಕ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕೆಂದು ಆಗಾಗ್ಗೆ ಪ್ರತಿಪಾದಿಸುತ್ತಾಳೆ. ಧರ್ಮ ನಿರಪೇಕ್ಷತೆಯಲ್ಲಿ ಅಚಲವಾದ ನಂಬಿಕೆ ಇರಿಸಿಕೊಂಡಿರುವ ಈಕೆ ಮತೀಯ ಕಟ್ಟುಪಾಡುಗಳನ್ನು ಯಾರ ಮೇಲೂ ಹೇರುವ ಅಧಿಕಾರ ಸರ್ಕಾರಕ್ಕಾಗಲಿ ಮುಲ್ಲಾಗಳಿಗಾಗಲಿ ಇಲ್ಲವೆಂದು

ಸಾರ್ವಜನಿಕವಾಗಿ ಹೇಳುತ್ತಾಳೆ. ಮತೀಯ ಸಂಪ್ರದಾಯಗಳು ಹಾಗೂ ನಿಯಮಗಳು ಆಯಾ ಕಾಲಕ್ಕೆ ತಕ್ಕಂತೆ ಮಾರ್ಪಾಟಾಗಬೇಕೆಂದು ಅಪೇಕ್ಷಿಸುವ ತಾಸ್ಲಿಮಾ ಧರ್ಮಗ್ರಂಥಗಳನ್ನು ಸಾರ್ವಕಾಲಿಕವೆಂದು ಹೇಳುವುದನ್ನು ವಿರೋಧಿಸುತ್ತಾಳೆ. ಧಾರ್ಮಿಕ ಮೌಲ್ಯಗಳನ್ನು ಪಾಲಿಸಲು ಸಿದ್ಧವಿರುವ ಈಕೆ ಮತೀಯ ಮೌಢ್ಯವನ್ನು ತೀವ್ರವಾಗಿ ಹೀಯಾಳಿಸುತ್ತಾಳೆ. ಮುಲ್ಲಾ ಸಂತತಿ ಹಾಗೂ ಮತಾಂಧರು ಆಕೆ ಹೆಂಗಸಾಗಿದ್ದು ಇದನ್ನೆಲ್ಲಾ ಹೇಳುವುದನ್ನು ಸಹಿಸಲಾರರು. ಅದಕ್ಕೇ ಅವಳನ್ನು ನೇಣುಗಂಬಕ್ಕೇರಿಸಲು ಇವರೆಲ್ಲರ ಸನ್ನಾಹ ಮತ್ತು ಉತ್ಸಾಹ.

ಎಲ್ಲ ಮತೀಯ ಗ್ರಂಥಗಳನ್ನೂ ಆದರಿಸುತ್ತಲೇ ಅವುಗಳನ್ನು ಮಾರ್ಪಾಟು ಮಾಡಿಕೊಳ್ಳುತ್ತಿರಬೇಕೆಂಬುದನ್ನು ಕುಶವಂತ ಸಿಂಗ್ ಸಹ ಹೇಳುತ್ತಾರೆ. ಆದರೆ ಭಾರತದಲ್ಲಿ ಯಾರೂ ಆತನನ್ನು ಗಲ್ಲಿಗೇರಿಸಬೇಕೆಂದು ಆರ್ಭಟ ಮಾಡಿಲ್ಲ. ಆಶ್ಚರ್ಯವೆಂದರೆ ತಾಸ್ಲಿಮಾಗೆ ಗಲ್ಲಾಗಬೇಕೆಂದು ಪ್ರತಿಭಟಿಸುತ್ತಿರುವ ಬಂಗ್ಲಾದೇಶದ ಮತಾಂಧರು ಸರಿಯಾಗಿಯೇ ಧರ್ಮಾಚರಣೆ ಮಾಡುತ್ತಿದ್ದಾರೆಂದು 'ಪ್ರಜಾವಾಣಿ' ಪತ್ರಿಕೆಯಲ್ಲಿ ಒಂದಿಬ್ಬರು ಪತ್ರ ಬರೆದಿದ್ದರೆಂಬುದನ್ನು ಗಮನಿಸಬೇಕು. ಬಹುಶಃ ಇವರು ಮತಧರ್ಮದ ಹೆಸರಿನಲ್ಲಿ ನಡೆಯುವ ಎಲ್ಲ ಹಿಂಸೆ, ಅತ್ಯಾಚಾರ ಮತ್ತು ದೌರ್ಜನ್ಯಗಳನ್ನು ಸಮರ್ಥಿಸುತ್ತಾರೆಂದು ತೋರುತ್ತದೆ.

ಎರಡು ಬೇರೆ ಉದಾಹರಣೆಗಳನ್ನು ನೋಡಬಹುದು. ಇದೇ ಫೆಬ್ರವರಿಯ ಘಟನೆಗಳಿವು. (ಅ)ಕರಾಚಿಯ ಮಾರುಕಟ್ಟೆಗೆ ತರಕಾರಿ ಕೊಳ್ಳಲು ಒಬ್ಬ ಮುದುಕಿ ಹೋಗಿದ್ದಳು. ಕೈ ಚೀಲದಲ್ಲಿ ಕುರಾನಿನ ಒಂದು ಪ್ರತಿ ಇತ್ತು. ಚೀಲದಿಂದ ಏನನ್ನೋ ತೆಗೆಯ ಹೋಗಿ ಆ ಪುಸ್ತಕವನ್ನು ಕೆಳಗೆ ಬೀಳಿಸಿದಳು. ಕುರಾನಿಗೆ ಅಗೌರವ ತೋರಿದಳೆಂದು ಅವಳನ್ನು ದಸ್ತಗಿರಿ ಮಾಡಲಾಯಿತು. ಹೆಂಗಸಾಗಿ ಧರ್ಮಗ್ರಂಥವನ್ನು ಅವಳು ತನ್ನ ಬಳಿ ಇಟ್ಟುಕೊಳ್ಳಬಾರದಾಗಿತ್ತೆಂದು ಕೆಲವು ಮುಲ್ಲಾಗಳು ಉದ್ಗಾರ ತೆಗೆದರು. ಸದಾ ಆ ಪುಸ್ತಕವನ್ನು ಹೊತ್ತು ತಿರುಗುತ್ತಿದ್ದ ಮುದುಕಿ ಅಜಾಗರೂಕಳಾಗಿ ಅದನ್ನು ಕೆಳಗೆ ಬೀಳಿಸಿದರೆ ಅದು ಅಗೌರವ ಸೂಚನೆಯೇ? (ಆ) ಅದೇ ತಿಂಗಳಲ್ಲಿ ಅದೇ ನಗರದ ಒಂದು ಕೊಳಚೆ ಪ್ರದೇಶದಲ್ಲಿ ಹತ್ತು-ಹನ್ನೆರಡು ವರ್ಷ ವಯಸ್ಸಿನ ಕ್ರಿಶ್ಚಿಯನ್ ಹುಡುಗನೊಬ್ಬ ಆಟವಾಡುತ್ತಿದ್ದ. ಅವನು ಅನಕ್ಷರಸ್ಥ. ಆಟವಾಡುತ್ತಿದ್ದ ಕಡೆ ಜೋಪಡಿಯ ಗೋಡೆಯ ಮೇಲೆ ಇಸ್ಲಾಂ ಮತಕ್ಕೆ ಅವಹೇಳನವೆನ್ನಲಾದ ಏನನ್ನೋ ಬರೆಯಲಾಗಿತ್ತಂತೆ. ಅದನ್ನು ಬರೆದವನು ಈ ಹುಡುಗನೆಂದು ಅವನನ್ನು ದಸ್ತಗಿರಿ ಮಾಡಲಾಯಿತು.

ಮತಾಂಧತೆಯ ಪರಿಣಾಮ

ಮತಾಂಧತೆಯು ಜನಸಮೂಹವನ್ನು ಆವರಿಸಿದಾಗ ಇಂತಹ ಪ್ರಸಂಗಗಳು ಸ್ವಾಭಾವಿಕ. ರಾಜಕೀಯ ಅಧಿಕಾರ ಗಳಿಸಲು ಅಥವಾ ಉಳಿಸಿಕೊಳ್ಳಲು ಇಂತಹ ಮೌಢ್ಯವನ್ನು ಪೋಷಿಸಿದರೆ ಯಾವುದೇ ರಾಷ್ಟ್ರಕ್ಕೂ ಗಂಡಾಂತರ ತಪ್ಪಿದ್ದಲ್ಲ. ಆಗ ಮತಧರ್ಮವು ಮಾನವೀಯತೆಯನ್ನು ಮೆಟ್ಟಿ ನಿಲ್ಲುತ್ತದೆ, ಸಾಮಾಜಿಕ ಸಂಬಂಧಗಳು ಮುರಿದು ಬೀಳುತ್ತವೆ, ಸಾಮೂಹಿಕ ಜೀವನ

ಮೌಲ್ಯಗಳು ಕುಸಿಯುತ್ತವೆ. ಉದಾತ್ತ ಕಲ್ಪನೆಗಳು ಸೊರಗಿ ಅವುಗಳ ಜಾಗದಲ್ಲಿ ಹತಾಶೆ, ಕ್ರೋಧ, ಸಂಶಯ ಮತ್ತು ಮುಯ್ಯಿಯ ಭಾವನೆಗಳು ಮನೆ ಮಾಡಿಕೊಳ್ಳುತ್ತವೆ. ಇದು ವ್ಯಕ್ತಿಗೆ, ಸಮಷ್ಟಿಗೆ, ಮಾನವತೆಗೆ ಹಾಗೂ ರಾಷ್ಟ್ರೀಯತೆಗೆ ನಾಚಿಕೆ ತರಿಸುವಂಥದು. ಮತಾಂಧತೆಯ ಸೊಕ್ಕಿನಲ್ಲಿ ನಾಚಿಕೆಗೆ ಸ್ಥಳವಿಲ್ಲವಾಗುತ್ತದೆ. ಹಾಗಿದ್ದರೆ ಮುಂದಿನ ಹೆಜ್ಜೆ ಯಾವುದು ?

ತಾಸ್ಲಿಮಾ ನಸ್ರೀನ್ ಪ್ರಕಟಿಸಿರುವ "ಲಜ್ಜಾ" ಕಾದಂಬರಿಗೆ ಇವೆಲ್ಲಾ ಹಿನ್ನೆಲೆಯಾಗುತ್ತದೆ. ಆ ಕಾದಂಬರಿ ಬರೆದುದಕ್ಕೆ ಆಕೆ ಬಂಗ್ಲಾದೇಶದಲ್ಲಿ ಎಲ್ಲಿಲ್ಲದ ಆಕ್ರೋಶಕ್ಕೆ ಬಲಿಯಾಗಿದ್ದಾಳೆ. ಜೀವ ಉಳಿಸಿಕೊಳ್ಳಲು ಎಲ್ಲೋ ಅಡಗಿ ಕುಳಿತಿದ್ದಾಳೆ. ಕಾದಂಬರಿಯಾಗಿ ಅದು ಕಳಪೆಯಾದದ್ದು ಎಂಬ ವಿಮರ್ಶೆ ಒಂದು ಕಡೆಯಾದರೆ ಅಂತಹದ್ದನ್ನು ಬರೆದು ಮತೀಯ ನಂಬಿಕೆ ಉಳ್ಳವರನ್ನು ಕೆರಳಿಸಬಾರದಾಗಿತ್ತೆಂದು ಇನ್ನೊಂದು ಕಡೆ ಮಾತು ಕೇಳಿಬರುತ್ತದೆ. ಸಾಹಿತ್ಯಕವಾಗಿ "ಲಜ್ಜಾ" ಬಹಳ ಉನ್ನತ ಮಟ್ಟದ್ದೆಂದು ಯಾರೂ ಭ್ರಮಿಸಿಲ್ಲ. ಆದರೆ ಅಲ್ಲಿಯ ವಸ್ತುವನ್ನು ಟೀಕಿಸುವುದು ಅದರ ಗುಣಾವಗುಣಗಳ ಕಾರಣಕ್ಕಲ್ಲ. ಅದು ಎಲ್ಲೋ ಕಸಿವಿಸಿ ಉಂಟುಮಾಡುತ್ತದೆ. ಬೊಟ್ಟು ಮಾಡಿ ನಮ್ಮ ಪಾತಕಗಳನ್ನು ತೋರಿಸುತ್ತದೆ. ನಮ್ಮ ಬೇಜವಾಬ್ದಾರಿ ತನವನ್ನು ಛೇಡಿಸುತ್ತದೆ. ಆದರಿಂದಾಗಿ ಅದನ್ನು ಹೇಗೋ ಇಲ್ಲವಾಗಿಸಬೇಕೆಂಬ ಅವಶ್ಯಕತೆ ಬಹಳ ಮಂದಿಗೆ ಇರುತ್ತದೆ. ಇದು ಬಂಗ್ಲಾದೇಶದ ಪರಿಸ್ಥಿತಿಗೆ ಸಂಬಂಧಿಸಿದ್ದಾದರೂ ಒಂದು ರೀತಿಯಲ್ಲಿ ನಮ್ಮ ಸನ್ನಿವೇಶ, ವಾತಾವರಣ ಮತ್ತು ರಾಜಕೀಯದ ಮೇಲಿನ ವ್ಯಾಖ್ಯಾನವೂ ಆಗುತ್ತದೆ. ಆದ್ದರಿಂದ "ಲಜ್ಜಾ" ಕಾದಂಬರಿಗೆ ಪ್ರತಿಕ್ರಿಯೆಯು ಬಂಗ್ಲಾದೇಶದಲ್ಲಿದ್ದಂತೆ ಭಾರತದಲ್ಲೂ ಸಾಕಷ್ಟು ವಿರೋಧದಿಂದ ತುಂಬಿದ್ದರೆ ಆಶ್ಚರ್ಯವೇನಿಲ್ಲ.

ಈ ಕಾದಂಬರಿಯು ಡಿಸೆಂಬರ್ 6, 1992 ರಂದು ಭಾರತದಲ್ಲಿ ಕೆಲವು ಮತಾಂಧ ಬಣಗಳು ತಮ್ಮ ರಾಜಕೀಯ ಮುನ್ನಡೆಗಾಗಿ ಶ್ರೀರಾಮಚಂದ್ರನನ್ನು ಮುಂದೆ ಮಾಡಿ ಅಯೋಧ್ಯೆಯಲ್ಲಿ ಒಂದು ಮಸೀದಿಯನ್ನು ಧ್ವಂಸಮಾಡಿದ್ದನ್ನು ಪ್ರಸ್ತಾವನೆಯನ್ನಾಗಿ ಹೊಂದಿದೆ. ಈ ದುಷ್ಟ ಕ್ರಿಯೆಗೆ ಪ್ರತಿಕ್ರಿಯೆ-ಪ್ರತೀಕಾರವಾಗಿ ಬಂಗ್ಲಾದೇಶದಲ್ಲಿ ನರಮೇಧ , ದೇವಸ್ಥಾನಗಳ ಮೇಲೆ ಹಲ್ಲೆ , ಹಿಂದೂ ಕುಟುಂಬಗಳ ಮೇಲೆ ದೌರ್ಜನ್ಯ, ಆಸ್ತಿಯ ಲೂಟಿ, ರಕ್ತದ ಹೊಳೆ, ಇತ್ಯಾದಿ ಕೇಡುಗಳು ಲೆಕ್ಕವಿಲ್ಲದಷ್ಟು ನಡೆದುಹೋಗುತ್ತವೆ. ಧರ್ಮನಿರಪೇಕ್ಷತೆ, ರಾಷ್ಟ್ರೀಯ ಐಕ್ಯತೆ, ಸಾಮಾಜಿಕ-ಆರ್ಥಿಕ ಪ್ರಗತಿ, ಸಾಂಸ್ಕೃತಿಕ ಅನನ್ಯತೆ, ಮಾನವಿಕ ಸಂಬಂಧಗಳು , ಇವೆಲ್ಲಾ ದ್ವೇಷದ ಬೆಂಕಿಯಲ್ಲಿ ಸುಟ್ಟು ಕರಕಾಗುತ್ತವೆ. ರಾಷ್ಟ್ರ ತನ್ನದು, ಅದಕ್ಕಾಗಿ ನಾನು, ತನ್ನದೆಲ್ಲಾ ಅದಕ್ಕೆ ಮುಡಿಪು, ಅದನ್ನುಳಿದು ತನಗೆ ವ್ಯಕ್ತಿತ್ವವಿಲ್ಲ, ಅದರ ಏಳಿಗೆಯೇ ತನ್ನ ಸುಖ, ಇತ್ಯಾದಿ ಭಾವನೆಗಳನ್ನು ಜೀವಂತವಾಗಿಸಿಕೊಂಡಿದ್ದವರಿಗೆ ಇದರಿಂದ ಸಹಿಸಲಾಗದ ವೇದನೆ, ಮಾನಸಿಕ ತಾಕಲಾಟ ಮತ್ತು ದೈಹಿಕ ಅಸ್ವಸ್ಥತೆಗಳು ಉಂಟಾಗುತ್ತವೆ. ತಮ್ಮ ಭೂತ-ವರ್ತಮಾನ-ಭವಿಷ್ಯಗಳು ಈ ರಾಷ್ಟ್ರದೊಂದಿಗೆ ಮೇಳೈಸಿವೆಯೆಂದು ಜೀವಿಸುತ್ತಿದ್ದ ವ್ಯಕ್ತಿಗಳ ಆಳವಾದ ಹಾಗೂ ಬಲವಾದ ಬೇರುಗಳು ಸಹ ಈ ವಿಷದಿಂದ ಬೆಂಡಾಗಿ ಬತ್ತಿಹೋಗುತ್ತವೆ. ತಾವು

ಕಟ್ಟಿದ ರಾಷ್ಟ್ರ, ಮೌಲ್ಯ, ಮೈತ್ರಿ, ಎಲ್ಲಾ ಹುಸಿಯಾಗಿ ಕಂಡು ಇಡೀ ಜೀವನದ ಶ್ರಮ ವ್ಯರ್ಥವಾಯಿತಲ್ಲ, ಎಂಬ ಕೊರಗು ಅಗಾಧವಾಗಿ ಬೆಳೆಯುತ್ತದೆ.

ಸುಧಾಮಯ ದತ್ತ ಮೈಮೆನ್‌ಸಿಂಗ್ ಜಿಲ್ಲೆಗೆ ಸೇರಿದವನು. ಭಾರತ ಇಬ್ಭಾಗವಾಗುವುದಕ್ಕೂ ಮುಂಚಿನಿಂದ ಅಲ್ಲಿದ್ದ ಈತ ವೃತ್ತಿಯಲ್ಲಿ ವೈದ್ಯ. ಮತೀಯ ವೈಮನಸ್ಯದಿಂದಾಗಿ ಸಂಪತ್ತು ಕಳೆದುಕೊಂಡು ಢಾಕಾಗೆ ಹೋಗಿ ಕಾರ್ಪಣ್ಯದ ಜೀವನಕ್ಕೆ ಕಟ್ಟುಬಿದ್ದ. ಆದರೆ ರಾಷ್ಟ್ರೀಯ ಮಮತೆ ಕಳೆದುಕೊಳ್ಳಲಿಲ್ಲ. 1952ರ ಬಂಗಾಳಿ ಭಾಷಾ ಚಳುವಳಿಯಿಂದ ಹಿಡಿದು 1971ರ ರಾಷ್ಟ್ರೀಯ ವಿಮೋಚನಾ ಚಳುವಳಿಯ ವರೆಗೆ ಎಲ್ಲ ಜನಪರ ಹೋರಾಟಗಳಲ್ಲೂ ಭಾಗಿಯಾಗಿದ್ದ ಈತ ಕಟ್ಟಾ ಸಮಾಜವಾದಿ , ನಾಸ್ತಿಕ, ಧರ್ಮ ನಿರಪೇಕ್ಷ ಬುದ್ಧಿಯವನು. ಕಿರಣ್ಮಯಿ ಆತನ ಹೆಂಡತಿ. ಅತ್ಯಂತ ಸಹನಶೀಲಳು. ಎಲ್ಲರಿಗೂ ಬೇಕಾದವಳು. ಬಂಗ್ಲಾದೇಶ ಬಿಟ್ಟೋಡುವ ಪ್ರಶ್ನೆಯೇ ಆಕೆಗೆ ರುಚಿಸದು. ತನ್ನ ವೈಯಕ್ತಿಕ ಸುಖವನ್ನು ಮರೆತು ಕುಟುಂಬಕ್ಕಾಗಿ ಸರ್ವಸ್ವವನ್ನೂ ತ್ಯಾಗ ಮಾಡಿರುವ ಸಾಧ್ವೀಮಣಿ ಈಕೆ. ಸುರಂಜನ ಅವರ ಮಗ. ಪದವೀಧರ ನಿರುದ್ಯೋಗಿ. ಯುವ ಸಮಾಜವಾದಿ ಕಾರ್ಯಕರ್ತನಾಗಿದ್ದ ಇವನು ಮತೀಯ ಭಾವನೆಗಳನ್ನು ಎಂದೂ ಅನುಭವಿಸದವನು. ತನ್ನ ಮತ ಮನುಷ್ಯಮತವೆಂದು ನಂಬಿ ಆಚರಿಸಿದವನು. ಅವನ ತಂಗಿ ಮಾಯಾ. ಆರು ವರ್ಷದವಳಿದ್ದಾಗ ಒಮ್ಮೆ ಕಾಣೆಯಾಗಿದ್ದು ಮರಳಿ ಬಂದಿದ್ದವಳು. ಯಾರೋ ದುಷ್ಕರ್ಮಿಗಳು ಅವಳನ್ನು ಅಪಹರಿಸಿಕೊಂಡು ಹೋಗಿದ್ದರು. ಆಮೇಲೆ ಎಲ್ಲ ಮತದವರಲ್ಲೂ ಸ್ನೇಹ ಸಂಪಾದಿಸಿದ್ದಳು. ಜೀವನದಲ್ಲಿ ಅಪಾರ ಆಸಕ್ತಿ ಹೊಂದಿದ್ದವಳು. ಆದರೆ ಈಗ ಚಿರಂತನ ದುಃಖಕ್ಕೆ ನೂಕಲ್ಪಟ್ಟವಳು.

ಅಯೋಧ್ಯೆಯ ಮಸೀದಿ ಉರುಳುವುದಕ್ಕೆ ಮೊದಲೂ ಬಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರು ಬೇಕಾದಷ್ಟು ಉಪಟಳಗಳಿಗೆ ಗುರಿಯಾಗಿ ದೇಶ, ಆಸ್ತಿ, ನೆಂಟರು , ಸ್ನೇಹಿತರು ಎಲ್ಲವನ್ನೂ ಬಿಟ್ಟು ನಿರ್ಗತಿಕರಾಗಿ ಭಾರತದೇಶಕ್ಕೆ ಓಡುತ್ತಿದ್ದರು. ಇದರ ಪರಿಣಾಮವಾಗಿ ಹಿಂದೂಗಳ ಜನಸಂಖ್ಯೆ ಕ್ರಮೇಣ ಕಡಿಮೆಯಾಗುತ್ತಿತ್ತು. ರಾಜಕೀಯದಲ್ಲಾಗಲಿ, ನೌಕರಿಗಳಲ್ಲಾಗಲಿ ಅವರಿಗೆ ಪ್ರಾತಿನಿಧ್ಯ ತೀರ ಕಡಿಮೆ. ಅವರ ಕಣ್ಣ ಮುಂದೆಯೇ ಅವರ ಆಸ್ತಿಯನ್ನು ದೋಚುವುದು ಸರ್ವೇಸಾಮಾನ್ಯವಾಗಿತ್ತು. ಎಷ್ಟೇ ಸಾಯುಜ್ಯವನ್ನು ಸಾಧಿಸಿ ರಾಷ್ಟ್ರದೊಡನೆ ಸಮೀಕರಿಸಿಕೊಂಡರೂ ಅವರು ಪರಕೀಯರು! ಭಾರತದಲ್ಲಿನ ಅಲ್ಪಸಂಖ್ಯಾತರು ಅನುಭವಿಸುವ ಯಾವ ಹಕ್ಕೂ ಬಂಗ್ಲಾದೇಶದ ಅಲ್ಪಸಂಖ್ಯಾತರಿಗಿಲ್ಲ. ಅವರ ವ್ಯಕ್ತಿತ್ವವನ್ನು ಹೀಯಾಳಿಸುವುದು ಹಲವರ ಗೀಳು. ಅಯೋಧ್ಯೆಯಲ್ಲಿ ಮಸೀದಿ ಭಗ್ನಗೊಳಿಸಲ್ಪಟ್ಟಾಗ ಈ ಸನ್ನಿವೇಶವು ಇನ್ನೂ ಬಿಗಡಾಯಿಸಿತು. ಬಂಗ್ಲಾದೇಶದ ಹಿಂದುವು ಅಯೋಧ್ಯೆಯ ದುಷ್ಕರ್ಮಕ್ಕೆ ಕಾರಣಕರ್ತನೆಂಬಂತೆ ಅವನ ಮೇಲೆ ಆಕ್ರಮಣ ನಡೆಯಿತು. ಸುಧಾಮಯ, ಸುರಂಜನ, ಇತ್ಯಾದಿಗಳು ಕೂಡ ಈ ಭೀಕರ ಹಲ್ಲೆಗೆ ತುತ್ತಾದರು. ಮಾಯಾ ಮತ್ತೆ ಅಪಹರಿಸಲ್ಪಟ್ಟಳು. ಆ ಸುಂದರ ಸೌಮ್ಯ ಜೀವಿ ಏನೇನು ಹೀನ ಕೃತ್ಯಗಳಿಗೆ ಬಲಿಯಾದಳೋ ತಿಳಿದವರಾರು ! ಅಕ್ಕಪಕ್ಕದವರು ಕೂಡ ಅಸಡ್ಡೆ

ತೋರುವವರೇ. ರಾಜಕೀಯವಾಗಿ ಪುರೋಗಾಮಿಗಳೆನಿಸಿಕೊಂಡಿದ್ದವರು ಸಹ ಮತಾಂಧತೆಯ ಅಲೆಯ ಹೊಡೆತದ ಎದುರು ಭದ್ರವಾಗಿ ನಿಲ್ಲಲಾರದೆ ಹೋದರು. ಅಲ್ಲೊಂದು ಹೇಳಿಕೆ ಇಲ್ಲೊಂದು ಪ್ರತಿಭಟನಾ ಮೆರವಣಿಗೆಯನ್ನು ಬಿಟ್ಟರೆ ಮತಾಂಧತೆಯನ್ನು ದಿಟ್ಟತನದಿಂದ ಎದುರಿಸುವ ಮನೋಭಾವ, ಛಲ, ಧಾರ್ಷ್ಟ್ಯ, ಕರ್ತವ್ಯ ಬುದ್ಧಿ, ಯಾರಲ್ಲೂ ಉಳಿಯಲಿಲ್ಲ. ಇಡೀ ದೇಶಕ್ಕೆ ಪಾರ್ಶ್ವವಾಯು ತಗುಲಿತು, ಹೃದಯಾಘಾತ ಉಂಟಾಯಿತು. 1971ರ ಜನಾಂಗೀಯ ಅಭಿಮಾನ, ಐಕ್ಯತೆ, ಮೌಲ್ಯ ಸಾಧನೆಯ ಗುರಿ, ಎಲ್ಲಾ ನೀರು ಪಾಲು. ಸ್ವತಃ ಸುಧಾಮಯ ಇದರಿಂದ ಕುಪಿತನಾದ. ಅವನಿಗೆ ಲಕ್ವಾ ಹೊಡೆಯಿತು. ಹೃದಯಾಘಾತವಾಯಿತು. ಕಿರಣ್ಮಯಿ ರೋದನವನ್ನು ಎಷ್ಟು ತಡೆದರೂ ಕಡೆಗೆ ಉಕ್ಕಿ ಹರಿಯಿತು. ಸುರಂಜನನು ಹೆಜ್ಜೆ ಹೆಜ್ಜೆಗೂ ತಾನು ಹಿಂದೂ, ಅಲ್ಪಸಂಖ್ಯಾತ, ಮರ್ದನಕ್ಕೆ ವಸ್ತು, ಎಂಬುದನ್ನು ಅನುಭವಿಸಿದ. ಮಾಯಾಳ ಅಪಹರಣಕ್ಕೆ ಸೇಡು ತೀರಿಸಿಕೊಳ್ಳಬೇಕು, ಆದರೆ ಅದಕ್ಕೆ ಅನುವಿಲ್ಲ. ಹೀಗೆ ಚಡಪಡಿಸುತ್ತಾ ಹೆಂಡ ಕುಡಿದು ಪ್ರಪಂಚವನ್ನು ಮರೆಯಲೆಂದು ಹೆಣಗಿದ. ಕಡೆಗೆ ತನ್ನ ನೆಲದ ಬೇರನ್ನು ಕತ್ತರಿಸಿಕೊಂಡು ಹೊರಗೆಲ್ಲಿಯಾದರೂ ಬೀಡು ಬಿಡಬಹುದೇನೋ ಎಂದು ತವಕಿಸಿದ.

ಅತ್ಯಂತ ಶುಭ್ರವಾದ ಮಾನವೀಯ ಸಂಬಂಧಗಳು ಕ್ಷಣಾರ್ಧದಲ್ಲಿ ಹೇಗೆ ಬದಲಾಗಿ ಮೃಗೀಯ ಪ್ರವೃತ್ತಿಗಳಿಗೆ ಎಡೆಮಾಡಿಕೊಡುತ್ತವೆಂಬುದನ್ನು ಸ್ಥೂಲವಾಗಿ ಅವಲೋಕಿಸುವುದು "ಲಜ್ಜಾ"ಕಾದಂಬರಿಯ ಒಂದು ಉದ್ದೇಶ. ಈ ಬದಲಾವಣೆಗೆ ಕಾರಣ ಮತಾಂಧತೆ. ಸಾಹಿತ್ಯಕವಾಗಿ ಈ ಕಾದಂಬರಿಯು ಬಹಳ ಪ್ರಬುದ್ಧವಾದ್ದೆಂದು ಹೇಳಲಾಗುವುದಿಲ್ಲ. ಯಾವ ಯಾವ ವರ್ಷಗಳಲ್ಲಿ ಎಲ್ಲೆಲ್ಲಿ ಏನೇನು ಮತೀಯ ಧ್ವಂಸಕಾರಿ ಪಾತಕಗಳು ಜರುಗಿದುವು ಎಂಬುದನ್ನು ಪದೇ ಪದೇ ಪಟ್ಟಿ ಮಾಡುವುದು ಲೇಖಕಿಗೆ ಒಂದು ರೀತಿಯ ಒತ್ತಡದಂತೆ ಕೆಲಸ ಮಾಡಿದೆ. ಹೀಗಾಗಿ ಜೀವನಸತ್ವದ ಬದಲು ದಾಖಲೆಗಳ ಸಂಗ್ರಹವನ್ನು ಕಾದಂಬರಿ ನಮ್ಮ ಮುಂದಿರಿಸುತ್ತದೆ. ಹಾಗೆಂದು ತಳ್ಳಿಹಾಕಬಹುದಾದ ಕಾದಂಬರಿಯಲ್ಲ "ಲಜ್ಜಾ". ಹಲವಾರು ಮಾನಸಿಕ ತುಡಿತಗಳನ್ನು ಅಚ್ಚುಕಟ್ಟಾಗಿ ನಿರೂಪಿಸಬಲ್ಲವಳು ತಾಸ್ಲಿಮಾ. ಕೆಲವೆಡೆಗಳಲ್ಲಿ ಕಾದಂಬರಿಯು ಉನ್ನತ ಮಟ್ಟಕ್ಕೇರುತ್ತದೆ ಕೂಡ.

ನಮ್ಮಲ್ಲಿ ಆಶ್‌ಗರ್ ಆಲಿ ಇಂಜಿನಿಯರ್ ಎಂಬೊಬ್ಬ ತಥಾಕಥಿತ ಪುರೋಗಾಮಿ ಇದ್ದಾರೆ. ಅವರೂ ಸೇರಿದಂತೆ ಹಲವರು ತಾಸ್ಲಿಮಾಳನ್ನು ದೂಷಿಸಿದ್ದಾರೆ. ಮುಲ್ಲಾಗಳು ಮತ್ತವರ ಭಂಟರಷ್ಟು ಕಠೋರವಾಗಿ ಅಲ್ಲದಿದ್ದರೂ ಈ "ಪುರೋಗಾಮಿ ಬುದ್ಧಿಜೀವಿಗಳು"ಆಕೆಯನ್ನು ಪ್ರಚಾರಪ್ರಿಯಳು ಮತ್ತು ಅನಗತ್ಯವಾಗಿ ಮತೀಯ ಭಾವನೆಗಳನ್ನು ಟೀಕಿಸಿ ರೊಚ್ಚಿಗೆಬ್ಬಿಸುವವಳು ಎಂದೆಲ್ಲಾ ಛೇಡಿಸಿದ್ದಾರೆ. ತಾನು ಮತ್ತು ಅಮೆರಿಕೆಯಲ್ಲಿರುವ ತನ್ನ ಸ್ನೇಹಿತ ರಿಫತ್ ಹಸನ್ ಕೆಲವು ದಶಕಗಳಿಂದ ಮುಸಲ್ಮಾನರ ಮತ್ತು ವಿಶೇಷವಾಗಿ ಆ ಮತದ ಮಹಿಳೆಯರ ಏಳಿಗೆಗಾಗಿ ಶ್ರಮಿಸುತ್ತಿದ್ದು ಒಮ್ಮೆಯಾದರೂ ಮುಲ್ಲಾಗಳ ಬಗ್ಗೆ ಅಸಮಾಧಾನವಾಗುವಂತಹ ಮಾತನ್ನಾಡಿಲ್ಲವೆಂದು ಆಶ್‌ಗರ್ ಆಲಿ ತಮಗೆ ತಾವು ಪ್ರಶಂಸಾಪತ್ರ ಕೊಟ್ಟುಕೊಂಡಿದ್ದಾರೆ

(ದಿ ಹಿಂದೂ, ಜುಲೈ 2, 1994). ಮುಸ್ಲಿಂ ಮಹಿಳೆಯರಿಗೆ ಒಂದಂಗುಲದಷ್ಟು ಮುಂದೆ ಹೋಗಲು ಸಹ ಇವರ ಪ್ರಯತ್ನಗಳಿಂದ ಸಾಧ್ಯವಾಗಿಲ್ಲವೆಂಬುದನ್ನು ಅವರು ಹೇಳಿಲ್ಲ, ಅಷ್ಟೇ. ಮುಲ್ಲಾಗಳ ಕಪಿಮುಷ್ಟಿಯನ್ನು ಸಡಿಲಿಸದೆ ಇಸ್ಲಾಂ ಮತದಲ್ಲಿನ ಕುರುಡು ಮೊಂಡುತನವನ್ನು ಎದುರಿಸಲಾಗುವುದಿಲ್ಲವೆಂದು ಅವರೇಕೆ ತಿಳಿಯಲೊಲ್ಲರೋ ಗೊತ್ತಾಗುವುದಿಲ್ಲ. ತಾಸ್ಲಿಮಾಳ ಅಭಿಪ್ರಾಯಗಳನ್ನು ಸಂಪೂರ್ಣವಾಗಿ ನಿರಾಕರಿಸಿದರೂ ಆಕೆಯೊಡನೆ ಸಹನೆಯಿಂದ ವಾಗ್ಯುದ್ಧ ಏಕೆ ನಡೆಸಬಾರದು? ಅವಳನ್ನು ಕೊಲ್ಲಬೇಕೆಂಬ ಪೈಶಾಚಿಕ ಹಠವೇಕೆ ? ಮನಮೋಹನ ಸಿಂಗರ ಆರ್ಥಿಕ ನೀತಿಯನ್ನು ಒಪ್ಪದ "ಆರ್ಥಿಕ ಮೂಲಭೂತವಾದಿಗಳು" ಅಷ್ಟೇ ಮೊಂಡುತನದಿಂದ ಅವರನ್ನು ಕೊಲ್ಲಬೇಕೆಂದು "ಫತ್ವಾ"ನೀಡಬಹುದೆ? ಕೊಲೆಗೆ ಪ್ರೇರೇಪಣೆ ನೀಡುವ ಮುಲ್ಲಾಗಳು ಕಾನೂನಿಗೆ ಬಾಹಿರರೇನು? ಅಂದರೆ, ಆಕೆಯೊಡನೆ ವಾದಿಸಲು ಅಸಮರ್ಥರಾಗಿ ಆಕೆಯನ್ನು ದಂಡಿಸಲು ಹೊರಟಿರುವವರು ನಮ್ಮ ಮೊಂಡುವಾದಿಗಳು, ಎಂದರ್ಥ.

ನಮ್ಮ ದೇಶದಲ್ಲಿ ಎರಡು ವಿಭಾಗಗಳಲ್ಲಿ ತಾಸ್ಲಿಮಾಳ ಕಾದಂಬರಿಗೆ ಎಳ್ಳಷ್ಟೂ ಮನ್ನಣೆ ದೊರೆಯದಿರುವ ಸಂಭವವಿದೆ. ಎರಡು ವಿಭಾಗಗಳೂ ಮತಾಂಧರದ್ದೇ. ಆದರೆ ಮತಗಳು ಬೇರೆ ಬೇರೆ ಅಷ್ಟೆ. ಬಂಗ್ಲಾದೇಶದ ಇಸ್ಲಾಮಿ ಮೂಲಭೂತವಾದಿಗಳ ಖಂಡನೆಯು ಭಾರತದ ಹಿಂದೂ ಮತಾಂಧರ ಖಂಡನೆಯೂ ಆಗುತ್ತದೆ. ಅಯೋಧ್ಯೆಯಲ್ಲಿ ಮಸೀದಿಯನ್ನು ಧ್ವಂಸಮಾಡಿದ್ದು ಆ ಕೃತ್ಯದ ನಂತರ ಬಂಗ್ಲಾದೇಶದಲ್ಲಿ ನಡೆಸಲಾದ ವಿಧ್ವಂಸಕಾರಿ ಅಕೃತ್ಯದಷ್ಟೇ ನಾಚಿಕೆಗೇಡಿನ ವಿಷಯವೆಂದು ತಾಸ್ಲಿಮಾ ಸೂಚಿಸುತ್ತಾಳೆ. ಮಸೀದಿಯನ್ನು ಕೆಡವಿ ತೃಪ್ತಿಯಿಂದ ರಚಿಸಲಾಗಿರುವ ರಾಮಕೋಟೆಗೆ ಭದ್ರತೆ ಸಾಲದೆಂದು ಅಲಹಾಬಾದ್ ಉಚ್ಚ ನ್ಯಾಯಾಲಯಕ್ಕೆ ಹೋಗುತ್ತಾರೆ! ಮಸೀದಿಯನ್ನೊಡೆದು ಮನಸ್ಸುಗಳನ್ನು ಕಟ್ಟಲಾಗುವುದಿಲ್ಲವೆಂದು ತಾಸ್ಲಿಮಾಳ ಇಂಗಿತ. ಹೀಗಾಗಿ ಬಂಗ್ಲಾದೇಶದ ಮುಸಲ್ಮಾನರನ್ನು ಕಟುವಾಗಿ ಟೀಕಿಸುವ "ಲಜ್ಜಾ" ಕಾದಂಬರಿಯು ಎರಡೂ ಮತಗಳ ಮತಾಂಧರಿಗೆ ಖಾರವಾಗಿ ಪರಿಣಮಿಸುತ್ತದೆ. ಕಾದಂಬರಿಯಲ್ಲಿ ಸಾಹಿತ್ಯಾಂಶ ಸೊನ್ನೆಯೆಂದು ಹೇಳುವವರು ಕೆಲವರಾದರೂ ಹಿಂದೂ ಮತಾಂಧತೆಯನ್ನು ತಾಸ್ಲಿಮಾ ಅಂಜಿಕೆಯಿಲ್ಲದೆ ಸೂಚ್ಯವಾಗಿ ಟೀಕಿಸಿರುವುದನ್ನು ಕಾರಣ ಮಾಡಿಕೊಂಡಿದ್ದಾರೆ. ಹಾಗಿಲ್ಲದೆ ಕೇವಲ ಬಂಗ್ಲಾದೇಶದ ಗೊಡ್ಡು ನಂಬಿಕೆಯವರನ್ನು ಮಾತ್ರ ತಾಸ್ಲಿಮಾ ಟೀಕಿಸಿದ್ದಿದ್ದರೆ ಇಲ್ಲಿನ ಹಿಂದೂ ಮತಾಂಧರು ಆಕೆಯನ್ನು ಹೊಗಳಿ ಅಟ್ಟಕ್ಕೇರಿಸುತ್ತಿದ್ದರು. " ಮತಧರ್ಮಕ್ಕೆ ಇನ್ನೊಂದು ಹೆಸರು ಮಾನವೀಯತೆ ಎಂದಾಗಲಿ" ಎಂದು ಆಕೆ ಹೇಳಿದಾಗ ಸದ್ಯದಲ್ಲಂತೂ ಮತಧರ್ಮದಲ್ಲಿ ಮಾನವೀಯತೆಯ ಅಂಶ ಇಲ್ಲವೆಂದು ಅವಳ ಗ್ರಹಿಕೆಯೆಂಬುದು ಸ್ಪಷ್ಟವಿದೆ.

" ಸಮಕಾಲೀನ ಜೀವನದಲ್ಲಿ ಹಿಂಸೆಯ ಹುಚ್ಚು ಪ್ರವಾಹ" ಎಂಬುದನ್ನು ವಸ್ತುವಾಗುಳ್ಳ ಈ ಕಾದಂಬರಿಯು ಹಿಂಸೆಯ ಹತ್ತು ಮುಖಗಳನ್ನು ವಿವರಿಸುತ್ತದೆ. ಆದರೆ ನಿರೂಪಣೆಯ ವಿಧಾನ ಮತ್ತು ತಂತ್ರಗಳನ್ನು ತಾಸ್ಲಿಮಾ ಸಿದ್ಧಿಸಿಕೊಂಡಿಲ್ಲ. ಹಾಗೆಂದರೆ ಆಕೆಯ ನೈಜ ಮಾನವೀಯ ಭಾವನೆ ಮತ್ತು ಧೋರಣೆಗಳನ್ನು ನಾನು ಶಂಕಿಸಬಹುದೆಂದು ಅರ್ಥವಲ್ಲ. ಎಷ್ಟೋ ವೇಳೆ ಕಾದಂಬರಿಯಲ್ಲಿ ಆಕೆ ಕೆಲವು ಭಾವನೆಗಳ ಸಾಂದ್ರತೆಯನ್ನು ನಿರೂಪಿಸುವಾಗ ಪ್ರಭಾವಶಾಲಿ

ಪ್ರತಿಮೆಗಳನ್ನು ಬಳಸಿದ್ದಾಳೆ. ಅಲ್ಲಲ್ಲಿ ಪ್ರಗತಿಪರ ಹಾಗೂ ಎಡ ಪಕ್ಷಗಳ ಡೋಲಾಯಮಾನ ನೀತಿಗಳನ್ನು ತಾಸ್ಲಿಮಾ ಪ್ರಬಲವಾಗಿ ಖಂಡಿಸಿದ್ದಾಳೆ. ಅದರಿಂದ ಕಸಿವಿಸಿಗೊಳ್ಳುವ ಅವಶ್ಯಕತೆ ಇಲ್ಲ. ಬದಲಾಗಿ ಆಕೆಯ ವಿಮರ್ಶೆಯನ್ನು ಸ್ವವಿಮರ್ಶೆಗೆ ಒಂದು ಆಯುಧವನ್ನಾಗಿ ಮಾರ್ಪಾಟು ಮಾಡಿಕೊಳ್ಳುವುದು ಉತ್ತಮ.

ಒಟ್ಟಿನಲ್ಲಿ, ಮೊಂಡು ಮತಾಂಧರ ಹಲ್ಲೆಯಿಂದ ತಾಸ್ಲಿಮಾಳನ್ನು ಪಾರು ಮಾಡಬೇಕಾದ್ದು ಮಾನವ ಕೋಟಿಯ ನೈತಿಕ ಮತ್ತು ಸಾಂಸ್ಕೃತಿಕ ಜವಾಬ್ದಾರಿ. ಅದಕ್ಕೆ ಇರುವುದೊಂದೇ ಮಾರ್ಗ; ಧರ್ಮಾಂಧತೆಯ ಎಲ್ಲ ಸ್ವರೂಪಗಳ ವಿರುದ್ಧವೂ ಸಮರಶೀಲರಾಗುವುದು. ತಾಸ್ಲಿಮಾ ಈ ದಿಕ್ಕಿನಲ್ಲಿ ಮೊದಲ ಹೆಜ್ಜೆಯನ್ನೇನೂ ಹಾಕಿಲ್ಲ. ಅವಳಿಗಿಂತಲೂ ಮುನ್ನ ಹಲವರು ಈ ಹಾದಿಯಲ್ಲಿ ಮುನ್ನಡೆದಿದ್ದಾರೆ. ಅವರೆಲ್ಲರ ಜೊತೆಗೂಡುವುದು ನಮ್ಮ ಮಾನವಿಕ ಕರ್ತವ್ಯ.

(ಅಚಲ, ಆಗಸ್ಟ್ ೧೯೯೪)

◆

೭. ಧರ್ಮದ ಚಾರಿತ್ರಿಕ ವಿಕಾಸ

ಧರ್ಮವು ಚಿರಂತನವಾದುದು, ಅದು ಮಾನವನಿರ್ಮಿತ ಎಂಬುದಕ್ಕಿಂತ ಶ್ರುತಿ ವಾಕ್ಯಗಳನ್ನಾಧರಿಸಿದ ಚಿಂತನೆ, ಮಾನವ ಕೋಟಿಯನ್ನು ಸಲಹುವ ಸಿದ್ಧಾಂತ, ಎಂಬಿತ್ಯಾದಿ ಮಾತುಗಳು ನಮ್ಮ ಮುಂದೆ ಆಗಾಗ್ಗೆ ಬರುತ್ತಿರುತ್ತವೆ. ಇಲ್ಲೆಲ್ಲಾ ಧರ್ಮವು ಯಾವಾಗಲೂ ಸಂಸ್ಥೀಕರಣಗೊಂಡಿದ್ದುದೇ ಆಗಿತ್ತು, ಅದಕ್ಕೆ ಆದಿಯೆಂಬುದಿಲ್ಲವಾದ್ದರಿಂದ ವಿಕಾಸವೆಂಬ ಕಲ್ಪನೆ ಅದರ ಸಂಬಂಧದಲ್ಲಿ ಸಾಧ್ಯವಿಲ್ಲ ಎಂಬ ಇಂಗಿತ ಪ್ರಮುಖವಾಗಿದೆ. ಕಾಲದಿಂದ ಕಾಲಕ್ಕೆ ಜೀವನದ ಇತರ ಸಂದರ್ಭಗಳಿಗೆ ಅನುಸಾರವಾಗಿ, ಅವಕ್ಕೆ ಹೊಂದಿಕೊಂಡಂತೆ, ಧರ್ಮದ ಬಗೆಗಿನ ಅನಿಸಿಕೆ ಮತ್ತು ಅದನ್ನಾಧರಿಸಿದ ಕ್ರಿಯೆಗಳು ಬದಲಾಗುತ್ತಾ ಬಂದಿವೆಯೆಂಬುದಕ್ಕೆ ಮಾನವ ಸಮಾಜದ ಇತಿಹಾಸದಲ್ಲಿ ಅಸಂಖ್ಯವಾದಷ್ಟು ದಾಖಲೆಗಳಿವೆ. ವಿಶ್ವದಲ್ಲೆಲ್ಲಾ ಧರ್ಮವು ಏಕಪ್ರಕಾರವಾಗಿಲ್ಲದಿರುವುದು ಮತ್ತು ಬೇರೆಬೇರೆ ಹಂತಗಳಲ್ಲಿ ಹಿನ್ನೆಲೆಗಳಿಗನುಸಾರವಾಗಿ ಅದು ವಿವಿಧ ರೂಪಗಳನ್ನು ತಳೆದಿರುವುದು ಇದಕ್ಕೆ ನಿದರ್ಶನವಾಗಿದೆ.

ಯಾವುದು ಸಮಾಜಕ್ಕೆ ಧಾರಣಸಾಮರ್ಥ್ಯವನ್ನು ನೀಡುತ್ತದೋ ಅದು ಧರ್ಮವೆಂಬ ಸಂಸ್ಕೃತದ ಒಂದು ವಾಕ್ಯವಿದೆ (ಧಾರಣಾದ್ಧರ್ಮಂ ಇತ್ಯಾಹುಃ). ಒಂದರ್ಥದಲ್ಲಿ ಅದು ನಿಜ; ಏಕೆಂದರೆ, ಒಂದು ಸಮೂಹವನ್ನು ಯಾವುದೋ ಎಲ್ಲೆಯಲ್ಲಿ ಅಥವಾ ಕಟ್ಟುಪಾಡಿನಲ್ಲಿ ಇಡುವ ಉದ್ದೇಶವನ್ನು ಅದು ಇರಿಸಿಕೊಂಡಿದೆ. ಆದರೆ ಅದು ನಿರಂತರ ಅಥವಾ ಸಾರ್ವಕಾಲಿಕವಲ್ಲ; ಏಕೆಂದರೆ, ಸಮಾಜವು ಸಾರ್ವಕಾಲಿಕವಾಗಿ ಒಂದೇ ತೆರನಾಗಿ ಉಳಿದಿರುವಂತಹ ಘಟಕವಲ್ಲ. ಅನೇಕ ಸಾಮಗ್ರಿಗಳ ಆಧಾರದ ಮೇಲೆ ನಿಂತಿರುವ ಸಮಾಜವು ಆ ಮೂಲಭೂತ ಸಾಮಗ್ರಿಗಳಲ್ಲಿ ಉಂಟಾಗುವ ವ್ಯತ್ಯಾಸಗಳಿಂದಾಗಿ ಸ್ವತಃ ತಾನೂ ಬದಲಾಗುತ್ತಿರುತ್ತದೆ. ಸಮಾಜದ ಆಂತರಿಕ ಸಂಬಂಧಗಳಲ್ಲಿ ಮತ್ತು ಇಡಿಯಾಗಿ ಅದರ ವ್ಯವಸ್ಥೆಯಲ್ಲಿ ಸಹ ಕಾಲದಿಂದ ಕಾಲಕ್ಕೆ ಇಂತಹ ಬದಲಾವಣೆಗಳು ಉಂಟಾಗಿರುವುದನ್ನು ಸುಲಭವಾಗಿ ಗಮನಿಸಬಹುದು. ಧರ್ಮದ ಆಯಾಮದಲ್ಲಿ ಕೆಲವು ಮೌಲ್ಯಗಳು ಸಾರ್ವತ್ರಿಕವಾಗಿ ಮತ್ತು ಸಾರ್ವಕಾಲಿಕವಾಗಿ ಎತ್ತಿ ಹಿಡಿಯಲ್ಪಟ್ಟಿವೆ ಎಂಬರ್ಥದಲ್ಲಿ ಧರ್ಮವು ಚಿರಂತನವೆಂಬ ವಿವರಣೆಯನ್ನು ನೀಡುವುದುಂಟು. ಆಗಲೂ ಚಾರಿತ್ರಿಕವಾಗಿ ಇದು ಪೂರ್ಣಸತ್ಯ ಎನಿಸಿಕೊಳ್ಳಲಾರದು. ಏಕೆಂದರೆ, ಮೌಲ್ಯಗಳ ಆವಿಷ್ಕಾರ ಮತ್ತು ಅನುಸರಣೆಯಲ್ಲಿ ವಿವಿಧ ಮೆಟ್ಟಿಲುಗಳನ್ನು ಗುರುತಿಸಲು ಸಾಧ್ಯವಿದೆ.

ಮಾನವಶಾಸ್ತ್ರ ತಜ್ಞರು ಧರ್ಮವನ್ನು ಅರ್ಥೈಸಲು ವಿವಿಧ ಮಾಪನ ಸೂತ್ರಗಳನ್ನು ಅವಲಂಬಿಸಿದ್ದಾರೆ. ಅದೊಂದು ಸಾಂಸ್ಕೃತಿಕ ಸಂರಚನೆ ಎಂದು ಕೆಲವರು ಭಾವಿಸಿದರೆ, ಇನ್ನು ಕೆಲವರು ಅದನ್ನು ಸಾಮಾಜಿಕ ಸಂಸ್ಥೆಯ ಅಂಗರಚನೆಯಲ್ಲಿ ಒಂದು ಅವಿಭಾಜ್ಯ ಭಾಗವೆಂದು ವ್ಯಾಖ್ಯಾನಿಸಿದ್ದಾರೆ. ಮೆಲ್‌ಫರ್ಡ್ ಸ್ಪೈರೋ ಎಂಬುವನು ಈ ಪ್ರಶ್ನೆಯನ್ನು ವಿಶ್ಲೇಷಿಸುವಾಗ ಸಾಂಸ್ಕೃತಿಕವಾಗಿ ಕಲ್ಪಿಸಿಕೊಳ್ಳಲಾದ ಅತಿಮಾನವರೊಡನೆ ಸಾಂಸ್ಕೃತಿಕ ನೆಲೆಯಲ್ಲಿ ಪಾರಸ್ಪರಿಕ ಸಂಬಂಧಗಳನ್ನೇರ್ಪಡಿಸಿಕೊಳ್ಳುವುದು ಧರ್ಮ (ಅಥವಾ ಮತಧರ್ಮ) ಎನಿಸಿಕೊಳ್ಳುತ್ತದೆ ಎನ್ನುತ್ತಾನೆ. ಪ್ರಥಮತಃ ಮತಧರ್ಮವು ಒಂದು ಸಾಂಸ್ಕೃತಿಕ ಸಂಸ್ಥೆ ಮತ್ತು ಎಲ್ಲಾ ಸಂಸ್ಥೆಗಳೂ ಸಾಮಾಜಿಕ ಆಶಯಗಳ ಪೂರೈಕೆಗಾಗಿ ರಚಿಸಲ್ಪಟ್ಟಿವೆಯೆಂದು ಅವನು ಭಾವಿಸುತ್ತಾನೆ. ಅಂದರೆ, ಮತಧರ್ಮದ ಎಲ್ಲ ಲಕ್ಷಣಗಳೂ ಯಾವುದೋ ಆಶಯವನ್ನು ಪೂರೈಸುವುದಕ್ಕಾಗಿಯೇ ಇವೆಯೆಂದು ಇದರರ್ಥವಲ್ಲ. ಸಾಮಾನ್ಯವಾಗಿ ಮತಧರ್ಮದ ಉದ್ದೇಶ ಅದು, ಎಂಬುದಷ್ಟೇ ಇಲ್ಲಿ ಗ್ರಾಹ್ಯ. ಸಮುದಾಯದ ಸಾಂಸ್ಕೃತಿಕ ಪರಂಪರೆಯ ಒಂದು ಭಾಗ ಮತಧರ್ಮವೆಂದಾಗ ಬೇರೆಲ್ಲ ಭಾಗಗಳು ಆವಿರ್ಭವಿಸಿ ವಿಕಾಸವಾಗುವಂತೆ ಇದೂ ಆಗುತ್ತದೆಂಬ ಸೂಚನೆ ಇಲ್ಲಿ ಅಡಕವಾಗಿದೆ. ಇಂತಹ ಪರಂಪರೆಯಲ್ಲಿ ನಂಬಿಕೆಗಳು ಪ್ರಮಾಣಕವೆಂದು ಅಂಗೀಕರಿಸಲ್ಪಟ್ಟಿರುತ್ತವೆ, ವಿಧಿ ಆಚರಣೆಗಳು ಸಾಮೂಹಿಕ ಅನ್ವಯ ಹೊಂದಿರುತ್ತವೆ ಮತ್ತು ಮೌಲ್ಯಗಳು ವಿಧಾಯಕಗಳಂತಿರುತ್ತವೆ. ಈ ಅರ್ಥದಲ್ಲೇ ಮತಧರ್ಮಗಳು ಮತವನ್ನು ಹೊಂದಿರದೆ ಇರುವುದಿಲ್ಲವೆಂದು ಡರ್ಕ್‌ಹೈಮ್ ಹೇಳುವುದು.

ಆಚರಣೆಗಳು ಸಾಮಾನ್ಯವಾಗಿ ಎರಡು ಉದ್ದೇಶಗಳನ್ನಿರಿಸಿಕೊಂಡಿರುತ್ತವೆ:(ಅ) ಸಮುದಾಯವು ಕಲ್ಪಿಸಿಕೊಂಡಿರುವ ಅತಿಮಾನವರ ಇಚ್ಛೆ ಅಥವಾ ಆಜ್ಞೆಯನ್ನು ಪೂರೈಸುವುದು, ಮತ್ತು (ಆ) ಆಚರಿಸುವವನ ಆಕಾಂಕ್ಷೆಗಳನ್ನು ಪೂರೈಸಲು ಅತಿಮಾನವರ ಸಹಕಾರವನ್ನು ಬೇಡಿ ಪಡೆಯುವುದು. ಕೆಲವೊಮ್ಮೆ ಮತಧರ್ಮೀಯ ಆಚರಣೆಗಳ ಹಿಂದೆ ಈ ರೀತಿಯ ಆಶಯವೇನೂ ಇರದೆ ಕೇವಲ ಒಂದು ವಿಧಿಯಾಗಿ ಆಚರಿಸಲ್ಪಡುತ್ತಿರಬಹುದು. ಸಮಾಜವು ಸಂರಚಿಸಿಕೊಳ್ಳುವ ಎಲ್ಲಾ ಸಂಸ್ಥೆಗಳ ಹಿನ್ನೆಲೆಯಲ್ಲೂ ನಂಬಿಕೆ (ಅಥವಾ ಶ್ರದ್ಧೆ),ಕ್ರಿಯೆ ಮತ್ತು ಮೌಲ್ಯಗಳು ಅಡಕವಾಗಿರುವಂತೆ ಮತಧರ್ಮದ ಹಿನ್ನೆಲೆಯಲ್ಲೂ ಅವು ಇವೆ. ಸುತ್ತಣ ಪ್ರಪಂಚ ಮತ್ತು ಅದರ ಆಗುಹೋಗುಗಳ ವೀಕ್ಷಣೆಗಳಿಗೆ ಸಂಬಂಧಿಸಿದ್ದು ನಂಬಿಕೆ; ಅಂದರೆ ವಿಶ್ವ ಏಕೆ ಮತ್ತು ಹೇಗೆ ಉಂಟಾಗಿದೆ ಹಾಗೂ ಅದರಲ್ಲಿ ಮಾನವನ ನಿರ್ದಿಷ್ಟ ಸ್ಥಾನ ಯಾವುದು ಎಂಬುದು ನಂಬಿಕೆಗಳ ಮೂಸೆಯಲ್ಲಿ ಸೇರಿವೆ. ಉದ್ದೇಶಿತ ಇಚ್ಛೆಗಳ ಪೂರೈಕೆಗೆ ವಿಧಿಸಲಾಗುವ ನಡತೆ ಮತ್ತು ಆಚರಣೆಗಳು ಕ್ರಿಯಾವ್ಯವಸ್ಥೆಯ ಭಾಗವಾಗಿರುತ್ತವೆ. ನಡತೆಯನ್ನು ಶ್ರೇಣೀಕರಿಸಲು ಒಂದು ತಾತ್ವಿಕವಾದ ಗಟ್ಟಿ ನೆಲೆಯನ್ನು ಮೌಲ್ಯಗಳು ಒದಗಿಸಿಕೊಡುತ್ತವೆ. ಯಾವುದೇ ಪರಂಪರೆಗೆ ಸೇರಿದವರನ್ನು ಅರ್ಹ-ಅನರ್ಹರೆಂದು ವಿಭಜಿಸಲು ಇದು ಮಾನದಂಡವಾಗಿರುತ್ತದೆ. ಇವೆಲ್ಲಕ್ಕೂ ಅತಿಮಾನವರೆಂದು ಕಲ್ಪಿಸಿಕೊಂಡು ಅಂಗೀಕಾರ ಪಡೆದಿರುವವರು ಅಂತಿಮವಾಗಿ ತೀರ್ಪು ನೀಡುವವರಾಗಿರುತ್ತಾರೆ.

ಮತಧರ್ಮದ ಉಗಮವನ್ನು ಕುರಿತಂತೆ ವಿದ್ವಾಂಸರು ಅನೇಕ ಊಹೆಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಧರ್ಮವು ದೈವಪ್ರಣೀತವಾದ್ದರಿಂದ ಅದಕ್ಕೆ ಆದಿ ಎನ್ನುವುದಿಲ್ಲವೆಂದು ಸಾರುವ ಅಭಿಪ್ರಾಯವು ಒಂದು ಕಡೆಯಾದರೆ ಇಹದಲ್ಲಿ ಮಾನವನ ಇರುವಿಕೆಯ ಸಂಕೀರ್ಣ ಸನ್ನಿವೇಶವನ್ನು ಅದು ಪ್ರತಿಫಲಿಸುತ್ತದೆಂಬ ಅಭಿಪ್ರಾಯವು ಅದಕ್ಕೆ ವಿರುದ್ಧ ದಿಕ್ಕಿನಲ್ಲಿದೆ.

ಭಾರತೀಯ ಧರ್ಮಶಾಸ್ತ್ರಕಾರರು ಧರ್ಮದ ಉಗಮ ಹಾಗೂ ಅಧಿಕಾರವು ಅಪೌರುಷೇಯವಾದ ವೇದಗಳಿಂದ ಸಿದ್ಧಿಸಿದೆಯೆಂದು ಪ್ರತಿಪಾದಿಸುತ್ತಾರೆ. ವೇದಕಾಲೀನ ಸಮಾಜದ ರಚನೆಗೂ ಧರ್ಮಶಾಸ್ತ್ರಕಾರರು ದೃಷ್ಟಿಯಲ್ಲಿರಿಸಿಕೊಳ್ಳುವ ಸಮಾಜಕ್ಕೂ ಬೇಕಾದಷ್ಟು ವ್ಯತ್ಯಾಸಗಳಿವೆ ಎಂಬುದನ್ನು ಅವರು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಒಂದು ಉದಾಹರಣೆಯನ್ನು ನೋಡೋಣ: ವೈದಿಕ ಸಾಹಿತ್ಯದ ಆದಿಭಾಗದಲ್ಲಿ ವೈದ್ಯರನ್ನು ಬಹುವಾಗಿ ಶ್ಲಾಘಿಸಲಾಗಿದೆ; ಧರ್ಮಶಾಸ್ತ್ರಕಾರರು ಅವರನ್ನು ವಿಪರೀತವಾಗಿ ತೆಗಳಿ ಅವಹೇಳನ ಮಾಡಿದ್ದಾರೆ. ಇನ್ನೊಂದು ಉದಾಹರಣೆಯನ್ನು ನೋಡುವುದಾದರೆ, ಆದಿ ವೈದಿಕ ಕಾಲದಲ್ಲಿ ಜಾತಿಗಳ (ಅಥವಾ, ವರ್ಣಗಳ) ಕಟ್ಟಳೆ ಗಣನೀಯವಾದ ಪ್ರಮಾಣದಲ್ಲಿಲ್ಲ; ಆದರೆ ಧರ್ಮಶಾಸ್ತ್ರಕಾರರಿಗೆ ಅದು ಅತಿಮುಖ್ಯವಾದ ನಿಯಮ. ಧರ್ಮವು ಚಾರಿತ್ರಿಕವಾಗಿ ವಿಕಾಸಹೊಂದುವ ಸಂಸ್ಥೆಯೆಂಬುದನ್ನು ನಿರಾಕರಿಸಿದಾಗ ಉಂಟಾಗುವ ಇಬ್ಬಂದಿ ಇದು. ಅದಕ್ಕೆ ಬದಲಾಗಿ, ಅಂತಹ ಅಂಶವನ್ನು ಸ್ವೀಕರಿಸಿದರೆ ವಸ್ತುನಿಷ್ಠವಾದ ಚಾರಿತ್ರಿಕ ವಿಶ್ಲೇಷಣೆ ಸಾಧ್ಯವಾಗುತ್ತದೆ. ಆಗ ಹರಪ್ಪ ನಾಗರಿಕತೆಯ ಕಾಲದಿಂದಲೂ ಮತಧರ್ಮವು ಎಂತಹ ಸ್ಥಾನವನ್ನು ತನ್ನದಾಗಿಸಿಕೊಳ್ಳುತ್ತಾ ಬಂದಿದೆಯೆಂಬುದು ಅಧ್ಯಯನಕ್ಕೆ ವಸ್ತುವಾಗಬಲ್ಲದು. ಪ್ರಸಕ್ತ ಲೇಖನದಲ್ಲಿ ಅದನ್ನು ವ್ಯಾಪಕವಾಗಿ ಚರ್ಚಿಸಲು ಬರುವುದಿಲ್ಲ.

ಆದರೂ ಒಂದು ವಿಷಯ ಸ್ಪಷ್ಟವಾಗಿದೆ. ಹರಪ್ಪ ನಾಗರಿಕತೆಯ ನಗರೀಕರಣದ ಕಾಲಕ್ಕಾಗಲೆ ಮತಧರ್ಮವು ಸಾಕಷ್ಟು ಪ್ರಭಾವಶಾಲಿ ಸಾಮಾಜಿಕ ಸಂಸ್ಥೆಯಾಗಿದ್ದಿರಬೇಕು. ಅದರ ಸಹಾಯದಿಂದ ಜನಸಮುದಾಯದ ನಿಯಂತ್ರಣ ಸಾಧ್ಯವಾಗಿದ್ದೀತು. ನಗರಗಳ ಜೀವನಾವಶ್ಯಕತೆಗಳನ್ನು ಪೂರೈಸಲು ಕೃಷಿಕೇಂದ್ರಿತ ನೆಲೆಗಳಿಂದ, ಅಂದರೆ ನಗರದಾಚೆಯ ಗ್ರಾಮಗಳಿಂದ, ಆಹಾರದ ಸರಬರಾಜು ಆಗಬೇಕಾಗಿತ್ತು. ಕೃಷಿಕ್ಷೇತ್ರದ ಉತ್ಪಾದಕರು ಸ್ವಯಂಸ್ಫೂರ್ತಿಯಿಂದ ಇದನ್ನು ಮಾಡುತ್ತಿದ್ದರೋ ಅಥವಾ ಯಾವುದಾದರೂ ನಿರ್ಬಂಧಗಳಿಗೆ ಅವರು ಗುರಿಯಾಗಿದ್ದರೋ ಎಂಬುದನ್ನು ತರ್ಕಿಸುವಾಗ ಹರಪ್ಪದ ಅವಶೇಷಗಳಲ್ಲಿ ಉತ್ಖನನ ಶಾಸ್ತ್ರಜ್ಞರು ಕಂಡಿರುವ ಸಾಮಗ್ರಿಗಳ ಸ್ವರೂಪವನ್ನು ಗಣನೆಗೆ ತೆಗೆದುಕೊಳ್ಳಬೇಕು. ಅಲ್ಲಿ ಮಹತ್ತರವಾದ ಆಯುಧಗಳಿಲ್ಲ ಮತ್ತು ಸ್ವಂತದ ರಕ್ಷಣೆಗೆ ಅನುವಾಗುವಂತಹ ರಕ್ಷಾಕವಚಗಳೂ ಇಲ್ಲ. ಇದರಿಂದ ಒಂದು ಖಚಿತವಾದ ತೀರ್ಮಾನ ಸಾಧ್ಯ. ಅದೇನೆಂದರೆ, ಆಯುಧಗಳಿಗಿಂತಲೂ ಪರಿಣಾಮಕಾರಿಯಾದ ಶಸ್ತ್ರಾಸ್ತ್ರಗಳು ಬೇರೆಯೇ ಇದ್ದವು. ಮತಧರ್ಮದ ತೀವ್ರಪ್ರಭಾವವು ಅಂತಹ ಒಂದು ಅಸ್ತ್ರ.

ಈ ಮತಧರ್ಮದ ನಂಬಿಕೆಯ ಸ್ವರೂಪದ ಯಥಾವತ್ತಾದ ಕಲ್ಪನೆಗೆ ನಮ್ಮಲ್ಲಿ ಸಂಪೂರ್ಣ ಸಾಕ್ಷ್ಯಾಧಾರಗಳಿಲ್ಲ. ಆದ್ದರಿಂದ ಅದು ಹೇಗೆ ಉಗಮವಾಗಿ ಆ ಹಂತವನ್ನು ತಲುಪಿತೆಂದು ಕಟ್ಟುನಿಟ್ಟಾಗಿ ನಿರೂಪಿಸಲು ಬರುವುದಿಲ್ಲ. ವೈದಿಕ ಸಾಹಿತ್ಯದ ಮೊದಲ ಭಾಗಗಳನ್ನು ನೋಡಿದರೆ ಬೇರೆಯದೇ ಆದ ಕಲ್ಪನೆ ಅಲ್ಲಿ ಕಂಡುಬರುತ್ತದೆ. ಯಜ್ಞಾದಿಗಳ ತಂತ್ರವು ವಿಶಾಲವಾಗಿ ಬೆಳೆದು ಬೇರೂರುವುದಕ್ಕೆ ಮುಂಚೆ ಪ್ರಕೃತಿಯ ವಿವಿಧ ಪ್ರಕಾರಗಳನ್ನು ಚೈತನ್ಯಶೀಲ ಶಕ್ತಿಗಳೆಂದು ಪರಿಗಣಿಸಿ ಅವುಗಳಿಗೆ ದೇವತೆಗಳ ಸ್ಥಾನಗಳನ್ನು ಕೊಡುವುದಲ್ಲದೆ ಅವುಗಳ ಹೊಗಳಿಕೆಗೆ ಹಾಗೂ ಕಾಂಕ್ಷಿತ ಫಲಪ್ರಾಪ್ತಿಗಳ ಪೂರೈಕೆಗಾಗಿ ಪ್ರಾರ್ಥನೆ ಸಲ್ಲಿಸಿರುವುದನ್ನು ಅಲ್ಲಿ ನೋಡಬಹುದು. ಅದಲ್ಲದೆ, ತನ್ನ ಮಂತ್ರದ ಬಲದಿಂದಾಗಿ ದೇವತೆಯು ಈಪ್ಸಿತಾರ್ಥವನ್ನು ಪೂರೈಸಲೇಬೇಕಾಗುತ್ತದೆಂಬ ಭಾವನೆಗೂ ಇಲ್ಲಿ ಅವಕಾಶವಿದೆ. ದೇವತೆಯು ಇರಲಿ, ಬಿಡಲಿ, ಮಂತ್ರವು ತನ್ನ ಸ್ವಶಕ್ತಿಯಿಂದ ಗೆಲುವನ್ನು ಪಡೆಯುತ್ತದೆಂಬುದು ಪ್ರಾಚೀನ ಮಾಂತ್ರಿಕತೆಯ ಚಿಹ್ನೆ. ಅದನ್ನೇ ಇನ್ನೂ ವಿಸ್ತಾರವಾಗಿ ಯಜ್ಞದ ತಂತ್ರಗಳಲ್ಲಿ ಅಳವಡಿಸಲಾಗಿದೆ. ಬಹುದೇವತೆಗಳ ಸ್ಥಾನದಲ್ಲಿ ಏಕದೇವತೆಯ ಕಲ್ಪನೆ ಇನ್ನೂ ಮುಂದಿನ ಘಟ್ಟಕ್ಕೆ ಸೇರುತ್ತದೆ.

ಜಡವಸ್ತುಗಳಿಗೆ ಹಾಗೂ ಪ್ರಕೃತಿಯ ವ್ಯಾಪಾರಗಳಿಗೆ ಚೈತನ್ಯವನ್ನಾರೋಪಿಸುವ ವಾದವನ್ನು ಸರ್ವಚೇತನವಾದವೆನ್ನುತ್ತಾರೆ. ಮತಧರ್ಮದ ಉಗಮಸ್ಥಾನವು ಇಂತಹ ಭಾವನೆಯಲ್ಲಿದೆಯೆಂದು ಟೈಲರ್‌ನಂತಹ ಮಾನವಶಾಸ್ತ್ರಜ್ಞರು ಪ್ರತಿಪಾದಿಸುತ್ತಾರೆ. ಇದರಂತೆ, ಮತಧರ್ಮವು ಆದಿಯಲ್ಲಿ ಅನೇಕ ಭೂತ ಪ್ರೇತಗಳನ್ನು ಕಲ್ಪಿಸಿಕೊಳ್ಳುತ್ತದೆ. ಆದಿನ್ನೂ ತಾರ್ಕಿಕ ಚಿಂತನೆಗಿಂತಲೂ ಹಿಂದಿನ ಘಟ್ಟ. ತನ್ನ ಮತ್ತು ತನ್ನ ಸುತ್ತಣ ಪ್ರಪಂಚವನ್ನು ಅರ್ಥೈಸಲು ಮಾನವ ಹೀಗೆ ಭೂತಪ್ರೇತಗಳಿಗೆ ಜೋತು ಬೀಳುವುದು ಅದರಿಂದಾಗಿ ಸಹಜವಾಗಿದೆ. ಇದಕ್ಕೆ ಪ್ರತಿಯಾಗಿ ಸ್ಪೆನ್ಸರ್‌ನಂತಹ ಚಿಂತಕರು ಆದಿಯಲ್ಲಿ ಮತಧರ್ಮವು ನಿರೀಶ್ವರವಾದಿ ನೆಲೆಯಲ್ಲಿ ನಿಂತಿದ್ದಿತೆಂದು ವಾದಿಸುತ್ತಾರೆ. ಇದರೊಟ್ಟಿಗೆ ಪಿತೃಗಳನ್ನು ಆರಾಧಿಸುವ ಪದ್ಧತಿಯೂ ಸಮ್ಮಿಳಿತವಾಗಿದ್ದಿತೆಂದು ಅವರ ವಿಚಾರವಾಗಿದೆ. ಮ್ಯಾರೆಟ್ ಮುಂತಾದವರು ಸರ್ವಚೇತನವಾದಕ್ಕೂ ಮುಂಚೆಯೇ ಮತಧರ್ಮವು ಒಂದು ಅನಿಗದಿತ ಸ್ವರೂಪದಲ್ಲಿ ಇದ್ದಿತೆಂದು ತಿಳಿಯುತ್ತಾರೆ. ಎಮಿಲ್ ಡರ್ಕ್‌ಹೈಮನ ಪಂಥದವರು ಆದಿಯ ಹಂತದಲ್ಲಿ ಕುಲದೇವತೆಯ ಕಲ್ಪನೆಯೇ ಮತಧರ್ಮವಾಗಿದ್ದಿತೆಂದು ಬಗೆಯುತ್ತಾರೆ. ಒಂದು ಪಂಗಡವಾಗಲಿ ವ್ಯಕ್ತಿಯಾಗಲಿ ತನಗೆ ಸಂಬಂಧಪಟ್ಟದ್ದೆಂಬ ಭಾವನೆಯಿಂದ ಲಾಂಛನವಾಗಿ ಯಾವುದಾದರೂ ಸಸ್ಯ ಅಥವಾ ಪ್ರಾಣಿಯನ್ನು ಸ್ವೀಕರಿಸಿದರೆ ಆ ವಸ್ತುವನ್ನು ಕುಲದೇವತೆ ಅಥವಾ 'ಟೋಟೆಂ' ಅನ್ನುತ್ತಾರೆ. ಆ ಕುಲದೇವತೆಯಿಂದಲೇ ಪಂಗಡವು ಜನ್ಮ ತಾಳಿತೆಂಬ ನಂಬಿಕೆ ಇದರಲ್ಲಿದೆಯಾದ್ದರಿಂದ ಯಾವ ಪಂಗಡದವರೂ ತಮ್ಮ ಕುಲದೇವತೆಯಾದ ಸಸ್ಯ ಅಥವಾ ಪ್ರಾಣಿಯನ್ನು ನಾಶಮಾಡುವಂತಿಲ್ಲ. ಭಾರತೀಯ ಸಮಾಜದಲ್ಲಿ ಗೋತ್ರದ ಕಲ್ಪನೆಯು ಇಂತಹ ಪದ್ಧತಿಯಿಂದ ಬೆಳೆದುಬಂದಿದೆ. ಹಿಂದೆಂದೋ ಆದಿಮ ಅಥವಾ ಅನಾಗರಿಕ ಅವಸ್ಥೆಯಲ್ಲಿದ್ದಾಗ ಆಮೆಯನ್ನು ಲಾಂಛನವನ್ನಾಗಿ

ಮಾಡಿಕೊಂಡಿದ್ದವರು ಈಗ ಕಾಶ್ಯಪ ಗೋತ್ರದವರಾಗಿರುತ್ತಾರೆ. ಒಂದೇ ಲಾಂಛನವನ್ನುಳ್ಳವರು ಎಂದರೆ ಒಂದೇ ಪಂಗಡದವರು ಎಂದರ್ಥ. ಆದ್ದರಿಂದ ಅವರು ಯಾರೂ ಆ ಲಾಂಛನ ವಸ್ತುಗಳನ್ನು ತಿನ್ನುವಂತಿಲ್ಲ ಮತ್ತು ಪಂಗಡದೊಳಗೇ ವಿವಾಹ ಸಂಬಂಧ ಏರ್ಪಡಿಸಿಕೊಳ್ಳುವಂತಿಲ್ಲ. ಅವೆರಡೂ ನಿಷಿದ್ಧ. ಅವನ್ನೇ "ಟ್ಯಾಬು' ಎಂದು ಕರೆಯುವುದು ವಾಡಿಕೆ.

ಈ ರೀತಿಯ ಗ್ರಹಿಕೆಗೆ ಭಿನ್ನವಾಗಿ ಮಾಂತ್ರಿಕತೆಯು ಮತಧರ್ಮದ ಆದಿಸ್ವರೂಪವಾಗಿದ್ದಿತೆಂಬ ಇನ್ನೊಂದು ವಾದವಿದೆ. ಅದನ್ನು ಜೇಮ್ಸ್ ಫ್ರೇಸರ್, ಜಾರ್ಜ್ ಥಾಮ್ಸನ್, ದೇವಿಪ್ರಸಾದ ಚಟ್ಟೋಪಾಧ್ಯಾಯ ಮುಂತಾದವರು ಪುರಸ್ಕರಿಸುತ್ತಾರೆ. ವ್ರತ ಮತ್ತು ಪೂಜೆಗಳ ನಡುವೆ ಇರುವ ವ್ಯತ್ಯಾಸವನ್ನು ಗುರುತಿಸಿ ಇದನ್ನು ಚಟ್ಟೋಪಾಧ್ಯಾಯ ಅವರು ಸುಲಲಿತವಾಗಿ ವಿವರಿಸಿದ್ದಾರೆ. ಮನೆಯಿಂದ ಹೊರಗೆಲ್ಲೋ ಪ್ರಯಾಣ ಹೋಗಿರುವ ಕುಟುಂಬದವರು ಕುಶಲದಿಂದ ಹಿಂದಿರುಗಿ ಬರಲೆಂಬ ಕಾಮನೆ ಇರುವ ವ್ರತದಲ್ಲಿ ಹಲವು ಚಿಹ್ನೆಗಳನ್ನು ಚಿತ್ರದಾಕಾರದಲ್ಲಿ ಬಿಡಿಸುವ ಪದ್ಧತಿ ಇದೆ. ನದಿ, ಸಮುದ್ರ, ಮುಳ್ಳುಗಳಿಂದ ತುಂಬಿದ ಕಾಡು, ಕಾಡು ಮೃಗಗಳು ಇತ್ಯಾದಿಗಳೆಲ್ಲಾ ಅಲ್ಲಿ ಚಿತ್ರಿತವಾಗುತ್ತವೆ. ದೇವತೆಯ ಕರುಣೆಯಿಂದ ಪ್ರವಾಸಿಗ ಹಿಂದಿರುಗಬೇಕೆಂಬ ಆಶಯ ಇಲ್ಲಿಲ್ಲ. ಅಲ್ಲಿರುವುದು ಒಂದು ತರಹದ ಆಜ್ಞೆಯ ಭಾವನೆ. ನದಿಯನ್ನು ವಶಪಡಿಸಿಕೊಳ್ಳುವುದಕ್ಕೆ ಹೂವುಗಳು ಸಾಕ್ಷಿ ಎಂಬಂತೆ ಅವನ್ನು ವ್ರತದಲ್ಲಿ ಬಳಸಲಾಗುತ್ತದೆ. ಭಾಂಜೋ ಎಂಬ ವ್ರತದಲ್ಲಿ ಐದು ವಿವಿಧ ಧಾನ್ಯಗಳನ್ನು ಒಂದು ಪಾತ್ರೆಯಲ್ಲಿ ನೆನೆಹಾಕಿ ಇಡುತ್ತಾರೆ. ಮಾರನೆಯ ದಿನ ಅದರಲ್ಲಿ ಒಂದು ಭಾಗವನ್ನು ಬಿಟ್ಟು ಮಿಕ್ಕಿದ್ದನ್ನು ಮಣ್ಣು ತುಂಬಿದ ಹರಿವಾಣದಲ್ಲಿ ಇಡಲಾಗುತ್ತದೆ. ಅಲ್ಲಿ ಮೊಳಕೆ ಕಾಣಿಸಿಕೊಂಡಾಗ ಸಾಕಷ್ಟು ಬೆಳೆ ಬರಲಿದೆಯೆಂದು ತಿಳಿಯಲಾಗುತ್ತದೆ. ಅದಕ್ಕೆ ಸಂಬಂಧಿಸಿದ ನೃತ್ಯದಲ್ಲಿ ಮಹಿಳೆಯರು ಸಾಮೂಹಿಕವಾಗಿ ತೊಡಗುವುದು ಮುಂದಿನ ಕ್ರಮ. ನೃತ್ಯವು ಸೊಗಸಾಗುತ್ತಾ ಹೋದಂತೆ ಭಾಂಜೋ ಕೂಡ ಅರಳುತ್ತಾ ಹೋಗುತ್ತದೆಂಬ ನಂಬಿಕೆ ಇದೆ. ಅಂದರೆ, ಫಸಲು ಚೆನ್ನಾಗಿ ಬರಲು ಈ ನೃತ್ಯವು ಕಾರಣ. ಮೆಕ್ಸಿಕೋ, ಜರ್ಮನಿ ಇತ್ಯಾದಿ ಕಡೆಗಳಲ್ಲೂ ಇದಕ್ಕೆ ಸಮನಾದ ನೃತ್ಯಗಳಿವೆ. ರೈತರು ಪೈರನ್ನು ನಾಟಿ ಹಾಕುವಾಗ ಕುಣಿಯುವ ಪದ್ಧತಿ ಅವುಗಳಲ್ಲೊಂದು. ಅವರು ಎಷ್ಟು ಎತ್ತರಕ್ಕೆ ನೆಗೆಯುತ್ತಾರೋ ಅಷ್ಟು ಎತ್ತರಕ್ಕೆ ಪೈರು ಬೆಳೆಯುತ್ತದೆಂದು ಅವರ ನಂಬಿಕೆ. ಮಳೆ ಬಾರದಿದ್ದಾಗ "ಹುಯ್ಯೋ, ಹುಯ್ಯೋ, ಮಳೆರಾಯ; ಹೂವಿನ ತೋಟಕ್ಕೆ ನೀರಿಲ್ಲ" ಇತ್ಯಾದಿ ಹಾಡು ಹೇಳುತ್ತಾ ಊರಮಂದಿ ಒಟ್ಟಾಗಿ ಮೆರವಣಿಗೆ ಹೊರಡುವುದು ನಮ್ಮ ಹಳ್ಳಿಗಳಲ್ಲಿ ಈಗಲೂ ಆಚರಣೆಯಲ್ಲಿದೆ. ಜೇಡಿಮಣ್ಣಿನಿಂದ ಮಾಡಿದ ಮಳೆರಾಯ ಒಬ್ಬ ಬೆತ್ತಲೆ ಹುಡುಗನ ತಲೆಯ ಮೇಲಿರುತ್ತಾನೆ. ಪ್ರತಿಯೊಂದು ಮನೆಯ ಮುಂದೂ ಅವನ ಮೇಲೆ ಒಂದು ಗಡಿಗೆ ನೀರು ಹುಯ್ಯುತ್ತಾರೆ. ಇದು ಮಳೆಯ ಅನುಕರಣೆ. ಆದರಿಂದ ಮಳೆ ಬರುತ್ತದೆಂಬ ನಂಬಿಕೆ ಗಾಢವಾಗಿದೆ. ಇಂಥದೇ ಆಚರಣೆಯು ಆಸ್ಟ್ರೇಲಿಯಾದ

ಬುಡಕಟ್ಟು ಜನಾಂಗದವರಲ್ಲೂ ಇದೆಯೆಂದು ಹೇಳುತ್ತಾರೆ. ಆದರೆ ಅಲ್ಲಿ ಒಂದು ನೃತ್ಯವಿದೆ. ಎಲ್ಲರೂ ಸೇರಿ ಮೇಲಕ್ಕೆ ನೀರನ್ನು ಎರಚುತ್ತಾರೆ. ಅದು ಮಳೆಯ ಅಣಕ ಅಥವಾ ಅನುಕರಣೆ. ಇದರೊಟ್ಟಿಗೆ ಮೋಡದ ಆರ್ಭಟವನ್ನೂ ಅನುಕರಿಸುತ್ತಾರೆ. ಅವರು ಏನನ್ನು ಅಪೇಕ್ಷಿಸುತ್ತಾರೋ ಅದು ಆಗಲೆ ದೊರಕಿಬಿಟ್ಟಿದೆ ಎಂಬ ಭಾವ ಅದರಲ್ಲಿದೆ. ನೃತ್ಯವಿರುವುದು ಮಳೆಗಾಗಿ. ಆದರೆ ನರ್ತಿಸುವಾಗ ಅವರು ತಮ್ಮ ಭಾವ-ಭಂಗಿಗಳಿಂದ ಪ್ರದರ್ಶಿಸುವುದು ಈಗಾಗಲೇ ನಿಜಕ್ಕೂ ಆಕಾಶದಲ್ಲಿ ಕಪ್ಪು ಮೋಡ ದಟ್ಟವಾಗಿ ಕವಿದಿದೆ, ಗುಡುಗು ಗುಡುಗಿದೆ, ಮಿಂಚು ಮತ್ತು ಮಳೆ ಸುರಿದಿದೆ ಎಂಬ ಭಾವವನ್ನು.

ಮಾಂತ್ರಿಕತೆಯ ಹಿಂದಿನ ತತ್ತ್ವವನ್ನು ಜಾರ್ಜ್ ಥಾಮ್ಸನ್ ಬಹಳ ಚೆನ್ನಾಗಿ ವಿಶ್ಲೇಷಣೆ ಮಾಡಿದ್ದಾರೆ. ಅವರ ಮಾತುಗಳಿವು: "ಮಾವೋರಿಗಳಲ್ಲಿ ಒಂದು ಆಲೂಗಡ್ಡೆ ನೃತ್ಯವೆಂಬುದಿದೆ. (ನ್ಯೂಜಿಲೆಂಡಿನ ಆದಿವಾಸಿಗಳು ಈ ಮಾವೋರಿಗಳು). ಪೂರ್ವದಿಂದ ಬೀಸುವ ಬಿರುಗಾಳಿಯು ಚಿಕ್ಕ ಸಸಿಗಳನ್ನು ಬುಡಮೇಲು ಮಾಡಬಹುದು; ಆದ್ದರಿಂದ ಹುಡುಗಿಯರು ಹೋಗಿ ಹೊಲದಲ್ಲಿ ನರ್ತಿಸುತ್ತಾರೆ. ಗಾಳಿ ಬೀಸಿದಾಗ ಲತೆಯು ನಲುಗಾಡುವುದು, ಮಳೆಯಲ್ಲಿ ಮುಳುಗುವುದು, ಸಸಿಯು ಬೆಳೆದು ಫಲ ಕೊಡುವುದು, ಇವೆಲ್ಲಾ ನೃತ್ಯದಲ್ಲಿ ಸೇರಿವೆ. ಹಾಗೆ ನರ್ತಿಸುತ್ತಾ ಅವರು ಹಾಡುತ್ತಾರೆ ಕೂಡ. ತಮ್ಮನ್ನು ಅನುಸರಿಸಬೇಕೆಂದು ಸಸಿಗೆ ಆಹ್ವಾನ ನೀಡುವುದು ಆ ಹಾಡಿನ ಸಾರಾಂಶ. ಅಪೇಕ್ಷಿತ ವಸ್ತುವನ್ನು ಊಹಾತ್ಮಕವಾಗಿ ಸೃಷ್ಟಿಸಿಕೊಂಡು ತಮ್ಮ ಅಪೇಕ್ಷೆ ಸಿದ್ಧಿಸಿದೆಯೆಂಬಂತೆ ನರ್ತಿಸುತ್ತಾರೆ. ಅದು ಮಾಂತ್ರಿಕತೆ; ನೈಜವಾದ ತಂತ್ರದ ಜೊತೆಯಾಗಿ ನಿಲ್ಲುವಂತಹ ಭ್ರಾಮಕ ತಂತ್ರ. ಭ್ರಾಮಕವೇ ಆದರೂ ಅದು ನಿಷ್ಫಲವಲ್ಲ. ಆಲೂಗಡ್ಡೆಯ ಸಸಿಯ ಮೇಲೆ ನೃತ್ಯವು ನೇರವಾದ ಪ್ರಭಾವವನ್ನು ಬೀರುವುದಿಲ್ಲ ನಿಜ. ಆದರೆ ಅದು ಹುಡುಗಿಯರ ಮೇಲೆ ಖಂಡಿತಕ್ಕೂ ಗಾಢವಾದ ಪ್ರಭಾವ ಬೀರುತ್ತದೆ. ತಮ್ಮ ನೃತ್ಯವು ಬೆಳೆಯನ್ನು ರಕ್ಷಿಸುತ್ತದೆಂಬ ಭರವಸೆ ಅವರಿಗಿದೆ; ಬೆಳೆಯನ್ನುಹೆಚ್ಚು ದೃಢಮನಸ್ಸಿನಿಂದ ಪೋಷಿಸಿ ತಮ್ಮೆಲ್ಲ ಶ್ರಮವನ್ನೂ ವ್ಯಯ ಮಾಡುತ್ತಾರೆ. ಹೀಗೆ ನೃತ್ಯವು ಬೆಳೆಯ ಮೇಲೆ ಒಂದು ರೀತಿಯಲ್ಲಿ ಪರಿಣಾಮ ಹೊಂದಿದೆ. ಅವರ ವೈಯಕ್ತಿಕ ಭಾವವನ್ನು ಬದಲಾಯಿಸುವುದರ ಮೂಲಕ ನೃತ್ಯವು ವಸ್ತುಸ್ಥಿತಿಯನ್ನು ಬದಲಾಯಿಸುತ್ತದೆ".

ಇದೇ ಮುಂದುವರಿದು ಒಂದು ಮತಧರ್ಮದ ಸ್ವರೂಪವನ್ನು ಹೊಂದುತ್ತದೆಂಬುದು ಪ್ರಾಚೀನ ಮಾಂತ್ರಿಕತೆಯ ಅಭ್ಯಾಸಿಗಳ ಭಾವನೆ. ಆದರೆ ಪ್ರಾರಂಭಕ್ಕೆ ಅತಿಮಾನವ ಅಥವಾ ನಿಸರ್ಗದಿಂದಾಚೆಗಿನ ಒಂದು ಶಕ್ತಿ ಎಂಬುದರ ಕಲ್ಪನೆ ಇಲ್ಲ; ಏಕೆಂದರೆ ಈ ಆದಿ ಬುಡಕಟ್ಟಿನ ಜನರಿಗೆ ಒಂದು ಮತವಿದೆ, ಆದರೆ ಅವರಿಗೆ ದೈವವೆಂಬುದರ ಕಲ್ಪನೆ ಇಲ್ಲ. ಇದನ್ನು ಗುರುತಿಸಿ ಡರ್ಕ್‌ಹೈಮ್ ತನ್ನ ವಾದವನ್ನು ಬೆಳೆಸಿದ್ದಾನೆ. ಹಾಗೆ ಮತಧರ್ಮಕ್ಕೆ ದೈವದ ಕಲ್ಪನೆ ಇರಲೇಬೇಕೆಂದು ಭಾವಿಸುವುದಾದರೆ ಬೌದ್ಧಮತವು ಕೂಡ ಒಂದು ಧರ್ಮವಾಗಿ ಪರಿಗಣಿತವಾಗುವಂತಿಲ್ಲ. ಏಕೆಂದರೆ ಅಲ್ಲಿ ದೈವಕ್ಕೆ ಸ್ಥಾನವಿಲ್ಲ. ಅತಿಪ್ರಾಚೀನವಾದ ಮಾನವ

ಸಮುದಾಯಗಳಲ್ಲಿ ಮತಧರ್ಮವೆಂಬುದು ಇರಲು ಸಾಧ್ಯವಿರಲಿಲ್ಲವೆಂದು ಜಾನ್ ಲಬಾಕ್‌ನ ಅಭಿಪ್ರಾಯವಾಗಿದೆ. ಅವನ ಪ್ರಕಾರ ನಿಯಾಮಕನೆನಿಸಿಕೊಳ್ಳುವ ದೈವವು ಮತಧರ್ಮದ ಮೂಲಭೂತ ಸಾಮಗ್ರಿ. ಅಸ್ತಿತ್ವದಲ್ಲಿರುವ ಮತಧರ್ಮಗಳನ್ನು ಸೂಕ್ಷ್ಮವಾಗಿ ನೋಡಿದರೆ ಇಂತಹ ದೃಷ್ಟಿಯು ಅಪರಿಪಕ್ವವಾದುದೆಂದು ತಿಳಿಯುತ್ತದೆ. ಎಷ್ಟೋ ಬುಡಕಟ್ಟು ಜನಾಂಗಗಳ ಆಚರಣೆಯಲ್ಲಿ ದೈವಕ್ಕೆ ಸ್ಥಾನವಿಲ್ಲದಿದ್ದರೂ ಅವೂ ಮತಧರ್ಮಗಳೇ ಆಗಿರುತ್ತವೆ.

ಕ್ರಿ. ಪೂ. ಐದನೆಯ ಶತಮಾನದ ಪ್ಲೇಟೋ, ಜನಸಾಮಾನ್ಯರು ಅಂಗೀಕರಿಸಿದ್ದ ಮತಧರ್ಮ ಹಾಗೂ ಪುರಾಣಕತೆಗಳನ್ನು ಮಾನ್ಯಮಾಡಲು ಸಿದ್ಧನಿರಲಿಲ್ಲ. ವಿಶ್ವವನ್ನೆಲ್ಲಾ ಒಬ್ಬ ನಿಯಾಮಕನ ನಿಯಂತ್ರಣಕ್ಕೆ ಒಳಪಡಿಸುವುದು ಅವನಿಗೆ ರುಚಿಸುತ್ತಿರಲಿಲ್ಲ. ಅವನಿಗಿಂತಲೂ ಪ್ರಾಚೀನವಾಗಿದ್ದ ಕಾಲದಲ್ಲಿ ಮತಧರ್ಮವು ಹೆಚ್ಚು ಶುದ್ಧತೆ ಮತ್ತು ಸತ್ಯಗಳನ್ನು ಒಳಗೊಂಡಿದ್ದಿತೆಂದೂ ತನ್ನ ಕಾಲದ ವೇಳೆಗೆ ಅದು ಅಧೋಮಾರ್ಗವನ್ನು ಹಿಡಿದಿದ್ದಿತೆಂದೂ ಅವನು ಭಾವಿಸಿದ್ದನು. ವರ್ತಮಾನದ ಬಗೆಗಿನ ಅಸಮಾಧಾನವು ಭೂತವನ್ನು ವೈಭವೀಕರಿಸುವಂತೆ ಮಾಡುವ ಮನಃಸ್ಥಿತಿಯನ್ನು ನಾವಿಲ್ಲಿ ನೋಡಬಹುದು. ತನಗಿಂತ ಹಿಂದಿನದು ಏಕೆ ಮತ್ತು ಹೇಗೆ ಹೆಚ್ಚು ಶುದ್ಧತೆ ಮತ್ತು ಸತ್ಯತೆಗಳಿಂದ ಕೂಡಿದ್ದಿತೆಂದು ಪ್ಲೇಟೋ ತಿಳಿಯಪಡಿಸಿಲ್ಲ. ಇದೇ ಪರಿಪಾಠವು ನಮ್ಮ ನಡುವಿನ ಅನೇಕ ವಿಚಾರಧಾರೆಗಳಲ್ಲಿ ಕಂಡುಬರುತ್ತದೆ. ಇದರಿಂದ ಭಿನ್ನವಾದ ಚಿಂತನಾಶೈಲಿಯನ್ನು ೧೮ನೆಯ ಶತಮಾನದ ಡೇವಿಡ್ ಹ್ಯೂಮ್‌ನಲ್ಲಿ ನೋಡಬಹುದು. ಅತೀಂದ್ರಿಯ ಜ್ಞಾನವನ್ನು ತರ್ಕಸಾಧನಗಳಿಂದ ಪಡೆಯಲು ಸಾಧ್ಯವಿಲ್ಲವೆಂದು ಬಗೆದ ಹ್ಯೂಮ್ ಮಾನವನ ಜ್ಞಾನದ ಹಾದಿಯು ಕ್ರಮೇಣ ಪ್ರಗತಿಯನ್ನು ಸಾಧಿಸುತ್ತಾ ಬಂದಿದೆಯೆಂದು ವಾದ ಮಾಡಿದ. ಆದಿಮಾನವನ ತಥಾಕಥಿತ ಪರಿಪೂರ್ಣ ಶುದ್ಧತೆ ಮತ್ತು ಗಾಂಭೀರ್ಯಗಳು ವಾಸ್ತವವಲ್ಲವೆಂದು ಹೇಳಿ ರೂಸೋನಂತಹವರ ರೊಮ್ಯಾಂಟಿಕ್ ಕಲ್ಪನೆಗಳನ್ನು ಹುಸಿಯಾದುವೆಂದು ಆತ ಸಾಧಿಸಿದ. ಪ್ರಾಥಮಿಕ ದೆಸೆಯಲ್ಲಿ ಮೂಡಿದ ಮತಧರ್ಮದ ಭಾವನೆಗಳು ಮೌಢ್ಯ ಹಾಗೂ ಭಯಗಳಿಂದ ಉತ್ಪನ್ನವಾಗಿದ್ದು ಅವುಗಳಲ್ಲಿ ತಾರ್ಕಿಕ ರೀತಿಯನ್ನು ಅರಸಹೊರಡುವುದು ವ್ಯರ್ಥವೆಂದು ಅವನ ಅಭಿಪ್ರಾಯವಾಗಿತ್ತು. ಇದೇ ಕಾರಣದಿಂದ ಬಹುದೇವತೆಗಳ ಆರಾಧನೆಯು ಏಕದೇವತೆಯ ಆರಾಧನೆಗಿಂತ ಪೂರ್ವದ್ದೆಂದು ಕೂಡ ಆತ ತರ್ಕಿಸಿದ್ದಾನೆ.

ಮತಧರ್ಮದಂತಹ ಕ್ಷೇತ್ರಗಳು ತೀರಾ ವೈಯ್ಯಕ್ತಿಕವಾದ್ದರಿಂದ ಸ್ವಂತದ ಅನುಭವಗಳನ್ನು ಆಧರಿಸಿ ವ್ಯಾಖ್ಯಾನ ಮಾಡಬಹುದೇ ಹೊರತು ಚಿಂತನಾ ಶಿಸ್ತಿನಿಂದಲ್ಲ, ಎಂದು ವಿಲಿಯಂ ಜೇಮ್ಸ್ ಹೇಳುತ್ತಾನೆ. ಸಂಸ್ಥೀಕರಣಗೊಂಡಿರುವ ಮತಧರ್ಮಕ್ಕಿಂತಲೂ ವೈಯ್ಯಕ್ತಿಕ ಅನಿಸಿಕೆಗಳು ಹೆಚ್ಚು ಆದರಣೀಯವಾಗಿರುತ್ತವೆ. ಈ ಕ್ಷೇತ್ರದ ಅನುಭವವು ತೀವ್ರವಾದ ಮಾನವಿಕ ಭಾವನೆಗಳನ್ನು ಮೈಗೂಡಿಸಿಕೊಂಡು ಅಗೋಚರವಾದ ಯಾವುದೋ ಸತ್ಯ ಅಥವಾ ಶಕ್ತಿಯ ಅರಸುವಿಕೆಯತ್ತ ವಾಲುತ್ತದೆ. ಅಂತಃಕರಣದ ಆಳದಲ್ಲಿ ಮತಧರ್ಮದ ಪ್ರಜ್ಞೆಯು

ಜಾಗ್ರತವಾಗಿರುತ್ತದೆ. ಅದನ್ನು ಹೊರತಂದು ವಿಶಾಲ ವಿಶ್ವಕ್ಕೆ ಅನ್ವಯಿಸುವುದರಿಂದ ಆ ಪ್ರಜ್ಞೆಯು ಇನ್ನೂ ಹರಿತವಾಗಿ ಮೂಡುತ್ತದೆ, ನೋವು ಮತ್ತು ಕೇಡುಗಳನ್ನು ಅರ್ಥೈಸಲು ಸಮರ್ಥವಾಗುತ್ತದೆ.

ಮಾನವನ ಸುಪ್ತ ಪ್ರಜ್ಞೆಯು ಮತಧರ್ಮದ ಅಂಶಗಳಿಂದ ತುಂಬಿರುತ್ತದೆಂದು ಸಿಗ್ಮಂಡ್ ಫ್ರಾಯ್ಡ್ ನಿವೇದಿಸಿದ. ಮಾನವಶಾಸ್ತ್ರ ಸಂಬಂಧೀ ವಿಷಯಗಳನ್ನು ಮತಧರ್ಮದ ಅಂಶಗಳೊಡನೆ ತಾಳೆಹಾಕಿ ನೋಡುವುದು ಆತನ ಪದ್ಧತಿ. ಎಲ್ಲದಕ್ಕಿಂತ ಮುಖ್ಯವಾಗಿ ಅವನು ಮತಧರ್ಮವನ್ನು ಒಂದು ದೊಡ್ಡ ಭ್ರಾಂತಿಯೆಂದು ವಿವರಿಸಿ ಆ ಭ್ರಾಂತಿಯು ಸದಾ ಉಳಿದಿರಬೇಕಾದ ಪ್ರಮೇಯವಿಲ್ಲವೆಂದು ಸಾಧಿಸಿದ್ದಾನೆ. ಹಿಂದೆ ಅದಕ್ಕಿದ್ದ ಪ್ರಾಧಾನ್ಯಕ್ಕೆ ಕಾರಣವೆಂದರೆ ದುಗುಡಗಳಿಂದ ಕಂಗಾಲಾದವರಿಗೆ ಅದು ನೀಡುತ್ತಿದ್ದ ಸಾಂತ್ವನ. ಮಾನವನ ಅಭಿವೃದ್ಧಿಯು ಹೆಚ್ಚಾದಂತೆ ಭ್ರಾಮಕ ಕಲ್ಪನೆಯ ಅಗತ್ಯವು ಕಡಿಮೆಯಾಗುತ್ತದೆ; ಆದ್ದರಿಂದ ಮತಧರ್ಮಕ್ಕೆ ಉಜ್ವಲ ಭವಿಷ್ಯವೇನೂ ಇರಲಾರದೆಂದು ಫ್ರಾಯ್ಡ್ ಪ್ರತಿಪಾದಿಸುತ್ತಾನೆ.

ವೈಯ್ಯಕ್ತಿಕ ಪ್ರಜ್ಞೆಯು ಸಾಮೂಹಿಕ ಸುಪ್ತಪ್ರಜ್ಞೆಯ ಹಿನ್ನೆಲೆಯಲ್ಲಿ ರೂಪುಗೊಳ್ಳುತ್ತದೆಂದು ಕಾರ್ಲ್ ಯುಂಗ್ ಭಾವಿಸಿದ್ದ. ಸಾಮೂಹಿಕ ಸುಪ್ತಪ್ರಜ್ಞೆಗೆ ವಿಶಿಷ್ಟವಾದ ಕೆಲವು ಲಕ್ಷಣಗಳಿವೆ ಮತ್ತು ಅವನ್ನೆಲ್ಲಾ ಆಯಾ ಸಮೂಹಗಳ ಪುರಾಣ, ಪ್ರತಿಮೆ ಮತ್ತು ನಂಬಿಕೆಗಳಲ್ಲಿ ಅಳವಡಿಸಲಾಗಿರುತ್ತದೆ. ಮತಧರ್ಮದ ಬಗೆಗಿನ ಕಲ್ಪನೆಗಳು ಸಹ ಇವನ್ನೆಲ್ಲಾ ಪ್ರತಿಫಲಿಸುತ್ತವೆ. ಮಾನಸಿಕ ಸ್ಥಿರತೆಗೆ ಇಂಬುಕೊಡುವುದರಲ್ಲಿ ಮತಧರ್ಮದ ಪ್ರೇರಣೆ ಇರುವುದರಿಂದ ಮತಧರ್ಮದ ಸಂವೇದನೆಗಳನ್ನು ಚಿವುಟಿ ಹಾಕಬಾರದೆಂದು ಅವನು ಅಭಿಪ್ರಾಯಪಟ್ಟಿದ್ದಾನೆ.

ಇದರಿಂದ ಭಿನ್ನವಾದ ಧೋರಣೆಯನ್ನು ಕಾರ್ಲ್ ಮಾರ್ಕ್ಸ್ ಪ್ರಚೋದಿಸಿರುವುದು ಸಾಮಾನ್ಯವಾಗಿ ಎಲ್ಲರ ಗಮನಕ್ಕೂ ಬಂದಿದೆ. ಆದರೆ ಅವನು ನಿಜವಾಗಿ ಯಾವುದಕ್ಕೆ ಒತ್ತುಕೊಟ್ಟಿದ್ದಾನೋ ಅದು ಬಹುಮಟ್ಟಿಗೆ ತೆರೆಯ ಹಿಂದೆಯೇ ಉಳಿದುಬಿಟ್ಟಿದೆ. ಮತಧರ್ಮದ ಘನವಾದ ಅಂಶಗಳನ್ನು ಆತ ಹೀಗಳೆದಿಲ್ಲ. ಇಹದ ದುಃಖದುಮ್ಮಾನಗಳ ಭಾರವನ್ನು ಸಹಿಸಲು ಮತಧರ್ಮವೂ ಒಂದು ಆಸರೆಯನ್ನು ನೀಡುತ್ತದೆಂದು ಹೇಳುತ್ತಾ ಅಸಮಾನತೆಯ ಸಮಾಜದಲ್ಲಿ ಸಮಾನತೆಯ ಕನಸನ್ನು ಕಾಣಲು ಮತಧರ್ಮವು ಸ್ವಲ್ಪಮಟ್ಟಿನ ಉತ್ತೇಜನ ನೀಡುತ್ತದೆಂದು ಆತ ಎಣಿಸಿದ್ದಾನೆ. ನಿರ್ಹೃದಯಿ ಸಾಮಾಜಿಕ ಆಯಕಟ್ಟಿನಲ್ಲಿ ಹೃದಯವಂತಿಕೆಯನ್ನು ತುಂಬಿಕೊಡುವುದು ಮತಧರ್ಮ; ಬೆಂದು ಬಳಲಿದ ವ್ಯಕ್ತಿಗೆ ನಿಟ್ಟುಸಿರು ಬಿಟ್ಟು ಸ್ವಲ್ಪ ಹಾಯೆನಿಸಿಕೊಳ್ಳಲು ಮತಧರ್ಮವು ಸಹಕಾರಿಯಾಗಿರುತ್ತದೆ. ಕಡುಸಂತಾಪಗಳನ್ನು ಕೆಲವು ಕ್ಷಣಗಳ ಮಟ್ಟಿಗಾದರೂ ಮರೆಯಿಸಿಬಿಡುವ ಸಾಮರ್ಥ್ಯ ಮತಧರ್ಮಕ್ಕಿದೆ. ಹೀಗೆನ್ನುವ ಮಾರ್ಕ್ಸ್ ಮತಧರ್ಮದ ಭಾವನೆಗಳ ತೀವ್ರತೆಯು ವಾಸ್ತವಿಕ ಜಗತ್ತಿನ ತೀವ್ರ ಜಂಜಾಟಗಳ ಪ್ರತಿಫಲನವೆಂದು ತಿಳಿಯುತ್ತಾನೆ. ಆದ್ದರಿಂದಲೇ ಮತಧರ್ಮದ ಕ್ಷೇತ್ರದಲ್ಲಿ ಅನೂಚಾನವಾಗಿ ದಾಖಲಾಗುತ್ತಾ ಬಂದಿರುವ ಧಾರ್ಮಿಕ ಪ್ರತಿಭಟನೆಯು ಸಮಕಾಲೀನ ವಸ್ತುಸ್ಥಿತಿಯ ನ್ಯೂನತೆಗಳ

ವಿರುದ್ಧದ ಪ್ರತಿಭಟನೆಯಾಗಿ ಗೋಚರಿಸಿದೆ. ಬ್ರಹ್ಮಚೈತನ್ಯರಂತಹ ಸಂತರು ರೈತಾಪಿ ಜನಗಳನ್ನು ಸಂಘಟಿಸಿದ್ದು ಧಾರ್ಮಿಕ ಭಾವನೆಗಳನ್ನು ಪ್ರಾಯೋಗಿಕವಾಗಿ ನಿಜಜೀವನದಲ್ಲಿ ಕಾರ್ಯರೂಪಕ್ಕೆ ತರಲು ಉದ್ದೇಶಿಸಿದಾಗ.

ಮತಧರ್ಮದ ಹುಟ್ಟು ಮತ್ತು ಬೆಳವಣಿಗೆಗಳನ್ನು ಕುರಿತಂತೆ ಒಂದು ವ್ಯಾಪಕ ಸಿದ್ಧಾಂತವನ್ನು ಬೆಳೆಸಿದ್ದು ಹೆಗೆಲ್. ಮಾನವ ಜನಾಂಗದ ಅತಿ ಪ್ರಾಚೀನ ಘಟ್ಟದಲ್ಲಿ ಸಹ ಧಾರ್ಮಿಕ ಪ್ರಜ್ಞೆಯನ್ನು ಗುರುತಿಸಬಹುದೆಂದು ಹೇಳುವ ಹೆಗಲ್, ಅದೊಂದು ವಿಶಿಷ್ಟವಾದ ಮಾನವ ಸಂಗತಿಯೆಂದು ಬಣ್ಣಿಸಿದ್ದಾನೆ. ಪ್ರಕೃತಿಯ ವಿವಿಧ ರೂಪಗಳನ್ನು ದೈವತ್ವಕ್ಕೇರಿಸುವ ರೀತಿಯಲ್ಲಿ ಆರಂಭವಾದ ಮತಧರ್ಮದ ಪ್ರಜ್ಞೆಯು ಪುರಾಣ ಮತ್ತು ಕಾವ್ಯಗಳಲ್ಲಿ ವಿಕಾಸವಾಗಿ ಪರಿಪೂರ್ಣ ಧರ್ಮದತ್ತ ಮುನ್ನಡೆ ಸಾಧಿಸಿದೆ. ಅಂತಿಮ ಚೈತನ್ಯಶಕ್ತಿಯ ಕಲ್ಪನೆ ಬಂದಿರುವುದು ಈ ಹಾದಿಯಲ್ಲೇ. ಅದು ತರ್ಕದ ಸಹಾಯದಿಂದ ದೊರಕಿರುವ ಫಲ. ತರ್ಕವು ಮಾನವನ ಅತ್ಯಂತ ವಿಶಿಷ್ಟವಾದ ಲಕ್ಷಣ; ಆದರೆ ತರ್ಕವನ್ನು ಕೇವಲ ಕಾರ್ಯಕಾರಣ ಸಂಬಂಧಗಳನ್ನು ಸೂಚಿಸುವ ತಂತ್ರವೆಂಬ ಸೀಮಿತ ಅರ್ಥದಲ್ಲಿ ತೆಗೆದುಕೊಳ್ಳಬಾರದು. ಇಂದ್ರಿಯಗಳಿಗೆ ಗೋಚರವಲ್ಲದ ಪರಮಾರ್ಥವನ್ನು ತಿಳಿಸಲು ಸಾಮಾನ್ಯ ತರ್ಕಕ್ಕಿಂತಲೂ ಉಚ್ಚಮಟ್ಟದ ತರ್ಕವೊಂದಿದೆ. ಅದರ ಸಹಾಯದಿಂದ ಮತಧರ್ಮವು ಪರಮಾರ್ಥವನ್ನು ಭಾವಾತ್ಮಕ ಸ್ವರೂಪದಲ್ಲಿ ನಿರೂಪಿಸುತ್ತದೆ. ಮಾನವನ ಆತ್ಮವು ಪರದೈವದ ಸಾನ್ನಿಧ್ಯವನ್ನು ಪಡೆಯುವುದು ಮತಧರ್ಮದ ಏಣಿಯನ್ನು ಕ್ರಮಿಸುವಾಗ ಇರಬಹುದು, ಇಲ್ಲವೆ ದರ್ಶನಶಾಸ್ತ್ರದ ಮೆಟ್ಟಿಲುಗಳನ್ನು ಹತ್ತುವ ಮುಖಾಂತರ ಇರಬಹುದು. ಏನೇ ಆದರೂ ಕೇವಲ ಬೌದ್ಧಿಕ ಕುತೂಹಲ ಮತ್ತು ಕಸರತ್ತುಗಳಿಂದ ಅದು ಸಿದ್ಧಿಸುವುದಿಲ್ಲ. ಪ್ರಕೃತಿಯ ಮಡಿಲಲ್ಲಿ ಘಟಿಸುವ ಅನೇಕ ಅತ್ಯಂತ ವಿಸ್ಮಯಕರ ಸಂಗತಿಗಳನ್ನು ವಿಚಕ್ಷಣೆಯಿಂದ ವೀಕ್ಷಿಸಿದ ಮಾತ್ರಕ್ಕೆ ಪರಮಾರ್ಥ ಸತ್ಯದ ಪರಿಚಯವಾಗಲಾರದು. ಈ ಎಲ್ಲಾ ಪರಿಕರಗಳ ಜೊತೆಗೆ ನೈತಿಕ ಔನ್ನತ್ಯದ ಸಾಧನೆಗಾಗಿ ಸಹ ತವಕಿಸುವವನು ಪರಮಾರ್ಥದತ್ತ ಮುನ್ನಡೆಯಬಹುದು. ಅನೈತಿಕತೆಯು ಅತಾರ್ಕಿಕತೆಯ ಪರಮಾವಧಿ. ಎಲ್ಲಿ ನೈತಿಕ ಔನ್ನತ್ಯಕ್ಕಾಗಿ ಹಂಬಲ ಹಾಗೂ ಕೃತಿಗಳಿರುವುದಿಲ್ಲವೋ ಅಲ್ಲಿ ಮತಧರ್ಮದ ಅಸ್ತಿತ್ವವು ಸರ್ವಥಾ ಅಶಕ್ಯ.

ಸ್ಟ್ಯಾನ್ಲೆ ಕುಕ್ ಎಂಬುವನು ಮತಧರ್ಮಗಳ ವಿಶ್ಲೇಷಣೆ ಮಾಡುತ್ತಾ ಅವುಗಳಲ್ಲೆಲ್ಲಾ ಇರುವ ಸಾಮಾನ್ಯವಾದ ಕೆಲವು ಲಕ್ಷಣಗಳತ್ತ ಗಮನ ಸೆಳೆದಿದ್ದಾನೆ. ಒಂದೊಂದು ಮತಧರ್ಮಕ್ಕೂ ತನ್ನದೇ ಆದ ನಿರ್ದಿಷ್ಟ ನಂಬಿಕೆಗಳು, ಆಚರಣೆಗಳು, ಭಾವನೆಗಳು, ದೃಷ್ಟಿಕೋನಗಳು ಇತ್ಯಾದಿ ಇರುತ್ತವೆ. ಪ್ರಮುಖವಾದ ಪ್ರಶ್ನೆಗಳನ್ನು ಕುರಿತಂತೆ ಅವುಗಳಲ್ಲಿ ತೀವ್ರ ಭಿನ್ನಾಭಿಪ್ರಾಯಗಳಿವೆ. ಪ್ರತಿಯೊಂದು ಮತಧರ್ಮವೂ ಪ್ರತ್ಯೇಕವಾಗಿ ತನ್ನ ಪರಿಧಿಗೆ ಸೇರುವವರ ಜೀವನಕ್ರಮವನ್ನು ಅಧಿಕಾರಯುತವಾಗಿ ನಿಯಂತ್ರಿಸಲು ಯತ್ನಿಸುತ್ತದೆ ಮತ್ತು ಕೆಲವು ನಂಬಿಕೆಗಳನ್ನು ಅಂತಿಮ ತೀರ್ಮಾನಗಳೆಂದು ಹೇರಲು ಹವಣಿಸುತ್ತದೆ. ಮಾನವ ಮತ್ತು ವಿಶ್ವದ ಬಗೆಗಿನ ಸತ್ಯಗಳನ್ನು ಮತಧರ್ಮವು ವಸ್ತುವಾಗಿ ಹೊಂದಿರುವಾಗ ಸಹಜವಾಗಿಯೇ

ಏಕಪ್ರಕಾರವಾದ ಅಭಿಪ್ರಾಯವನ್ನು ನಿರೀಕ್ಷಿಸಲಾಗುವುದಿಲ್ಲ. ಅಂತಿಮ ಸತ್ಯಗಳ ಬಗ್ಗೆ ವಸ್ತುನಿಷ್ಠವಾದ ತೀರ್ಮಾನ ಕೊಡಲು ನಮ್ಮ ಸದ್ಯದ ಜ್ಞಾನದ ಸಂದರ್ಭದಲ್ಲಿ ಸಾಧ್ಯವಾಗದು; ಆದರೆ ಅವುಗಳ ಬಗ್ಗೆ ಮಾನವ ಇರಿಸಿಕೊಂಡಿರುವ ನಂಬಿಕೆಗಳನ್ನು ವಸ್ತುನಿಷ್ಠವಾಗಿ ವಿವೇಚಿಸಲು ಸಾಧ್ಯವಿದೆ.

ಇದನ್ನು ಮಾಡಲು ಮಾನವಶಾಸ್ತ್ರ ತುಲನಾ ಪದ್ಧತಿ ಮತ್ತು ಮನೋವಿಜ್ಞಾನಗಳು ಸಹಾಯ ಮಾಡುತ್ತವೆ. ನಾವು ಈಗಾಗಲೇ ನೋಡಿರುವ ಹಲವು ಅಭಿಪ್ರಾಯಗಳು ಈ ಮೂಲಗಳಿಂದ ಹೊರಹೊಮ್ಮಿವೆ. ಚಾರಿತ್ರಿಕವಾಗಿ ನೋಡುವುದಾದರೆ, ಪ್ರಾಥಮಿಕ ದೆಸೆಯಲ್ಲಿ ಮಾನವ ತನ್ನ ಜೀವನವನ್ನು ಹೊರೆಯಲು, ಆಹಾರ ಸಾಮಗ್ರಿಗಳನ್ನು ಪಡೆಯಲು, ಬೇಟೆ, ಪಶುಸಂಗೋಪನೆ ಮತ್ತು ಆರಂಭದ ಹಂತದ ಕೃಷಿಯನ್ನು ಅವಲಂಬಿಸಿದ್ದಾಗ ಯಾವ ಮಾನಸಿಕ ಸ್ಥಿತಿಯಲ್ಲಿರುತ್ತಿದ್ದ ಎಂಬ ಪ್ರಶ್ನೆಗೆ ಉತ್ತರ ಕಂಡುಕೊಂಡರೆ ಒಂದರ್ಥದಲ್ಲಿ ಅವನ ಮತಧರ್ಮದ ಕಲ್ಪನೆಯನ್ನು ಪಡೆಯಬಹುದು. ಅವನಿಗೆ ಯಾವ ಮಟ್ಟದಲ್ಲಿ ಆಹಾರ ಒದಗುತ್ತದೆಯೆಂಬುದು ಕೂಡ ಅವನ ಮತಧರ್ಮದ ಹರಹನ್ನು ಕುಗ್ಗಿಸಬಹುದು ಇಲ್ಲವೆ ಹಿಗ್ಗಿಸಬಹುದು. ನಗರೀಕರಣದ ಹಂತದಲ್ಲಿ ಈ ಹರಹು ಭಿನ್ನವಾಗಿ ಕಾಣುವುದು ಸಹ ಅಪ್ರಾಸಂಗಿಕವಲ್ಲ.

ಮನೋವೈಜ್ಞಾನಿಕ ಪದ್ಧತಿಯನ್ನು ಅನುಸರಿಸಿ ಹೋದಾಗ ಇದಕ್ಕೆ ಒತ್ತುಕೊಡುವ ಬದಲು ಕೇವಲ ಮಾನವನ ಮಾನಸಿಕ ಭಾವನೆಗಳನ್ನು ಗುರುತಿಸಲಾಗುತ್ತದೆ. ಯಾವ ವಸ್ತು ಅಥವಾ ವಸ್ತುಗಳ ಸಂಘಾತವು ಎಂತಹ ನಂಬಿಕೆ ಮತ್ತು ಆಚರಣೆಗಳೊಂದಿಗೆ ಸಮೀಕರಿಸಲಾಗಿರುತ್ತದೆ ಎಂಬುದು ಈ ಪದ್ಧತಿಯಲ್ಲಿ ಪ್ರಮುಖ ಅಂಶ. ವೈಯ್ಯಕ್ತಿಕ ಅನುಭವಗಳು ಸಾರ್ವತ್ರಿಕ ಅನುಭವಗಳಾಗಬಲ್ಲ ಸಾಧ್ಯತೆಯನ್ನಿಲ್ಲಿ ಅಂಗೀಕರಿಸಲಾಗುತ್ತದೆ. ಉದಾಹರಣೆಗೆ, ಅನುಭಾವದಂತಹ ಒಂದು ಮನಃಸ್ಥಿತಿಯನ್ನು ತೆಗೆದುಕೊಂಡರೆ ಅದು ವೈಯ್ಯಕ್ತಿಕ ನೆಲೆಗೆ ಒಗ್ಗುವಂಥದು; ಆದರೆ ಅದು ಸಾರ್ವತ್ರಿಕವಾಗಬಲ್ಲುದು ಎಂಬ ಗ್ರಹಿಕೆಯನ್ನು ಇಲ್ಲಿ ಸ್ವೀಕರಿಸಲಾಗುತ್ತದೆ. ಮಾಂತ್ರಿಕತೆಯಂತಹ ಪದ್ಧತಿಯಲ್ಲಿ ಕೂಡ ನಾವು ಇದೇ ಆಯಾಮವನ್ನು ನೋಡಬಹುದು.

ಮಾಂತ್ರಿಕತೆ ಮತ್ತು ಮತಧರ್ಮಗಳೆರಡರಲ್ಲೂ ಅತಾರ್ಕಿಕವೆನ್ನಬಹುದಾದಂತಹ ಕೆಲವು ನಂಬಿಕೆಗಳಿರುತ್ತವೆ. ಆದರೆ ಮೂಲತಃ ವ್ಯತ್ಯಾಸವಿರುವುದು ವಿಶ್ವದ ವೀಕ್ಷಣೆಯ ವಿಧಾನದಲ್ಲಿ. ಮಾಂತ್ರಿಕತೆಯಲ್ಲಿ ವಿಶ್ವದ ಅಸಂಖ್ಯ ಪ್ರಕ್ರಿಯೆಗಳ ಮೇಲೆ ಮಾನವನ ಹಿಡಿತವು ಅಸಾಧ್ಯವೆಂಬ ಭಾವನೆ ಇಲ್ಲ. ಪ್ರಕೃತಿ ಶಕ್ತಿಯ ಅಡಿಯಾಳುಗಳು ನಾವು, ಅದಕ್ಕೆ ಮಣಿದು, ತಲೆಬಾಗಬೇಕು ಎಂಬ ಭಾವನೆಯು ನಂತರದ ಮತಧರ್ಮದ ಲಕ್ಷಣ. ಮಾಂತ್ರಿಕತೆಯು "ಎಲ್ಲಾ ನನ್ನ ಅಣತಿಯಂತೆ ನಡೆಯುತ್ತದೆ" ಎಂದು ಬೀಗಿದರೆ ಮತಧರ್ಮವು "ಎಲ್ಲಾ ಅವನ ಇಚ್ಛೆಯಂತೆ ಜರುಗುತ್ತದೆ" ಎಂಬ ವಿನಮ್ರತೆಯನ್ನು ಪ್ರಕಟಿಸುತ್ತದೆ. ಋಗ್ವೇದದಂತಹ ಗ್ರಂಥಸಮುಚ್ಚಯವನ್ನು ನೋಡಿದರೆ ಅಲ್ಲಿ ವೇದ್ಯವಾಗುವ ಮನಃಸ್ಥಿತಿ ಇವರೆಡರಿಂದಲೂ

ಸ್ವಲ್ಪ ಭಿನ್ನವಾದುದು. ಮಾನವನನ್ನು ಮೀರಿ ನಿಲ್ಲುವ ದೇವತೆಗಳು ಹಾಗೂ ಒಟ್ಟಾಗಿ ಕಲೆತು ಪೂಜಿಸುವ ಮಾನವರು, ಇಬ್ಬರೂ ಜೊತೆಯಾಗಿ "ನಮ್ಮ ಪರಸ್ಪರ ಮತ್ತು ಸಾಮೂಹಿಕ ಆಶಯಗಳು ನೆರವೇರಲಿ" ಎನ್ನುವ ಮನಃಸ್ಥಿತಿ ಅಲ್ಲಿ ಹಾಸುಹೊಕ್ಕಾಗಿದೆ.

ಮಾಂತ್ರಿಕತೆ ಮತ್ತು ಮತಧರ್ಮಗಳನ್ನು ಕ್ಲಾಡ್ ಲೆವಿ-ಸ್ಟ್ರಾಸ್ ಬೇರೊಂದು ರೀತಿಯಲ್ಲಿ ಭಿನ್ನೈಸುತ್ತಾನೆ. ಮಾಂತ್ರಿಕನು ತನ್ನ ಕ್ರಿಯೆಯಿಂದ ವಾಸ್ತವಿಕ ವಿಶ್ವದ ಗತಿಗೆ ತನ್ನದೇ ಆದ ಹೊಸತೊಂದು ಪ್ರಕ್ರಿಯೆಯನ್ನು ಸೇರಿಸುತ್ತಾನೆ. ಅಸ್ತಿತ್ವದಲ್ಲಿರುವ ಕಾರ್ಯ-ಕಾರಣ ಭಾವಗಳ ಸರಪಳಿಯಲ್ಲಿ ಕೊಂಡಿಗಳು ಹೆಚ್ಚುವಂತೆ ಮಾಡುವುದು ಅವನ ಕ್ರಿಯೆ. ಇದರಿಂದ ಆವರೆಗೆ ಅರ್ಥೈಸಲಾಗದಿದ್ದ ಕೆಲವು ಸಂಗತಿಗಳಿಗೆ ಸಂಬಂಧಾರ್ಥವು ಸ್ಥಾಪಿತವಾಗುತ್ತದೆ. ಪ್ರಾಕೃತಿಕ ನಿಬಿರಗಳ ಅವಿಭಾಜ್ಯ ಅಂಗವೆಂಬಂತೆ ಈ ಮಾನವಿಕ ಕ್ರಿಯೆಗಳು ಸ್ವಾಭಾವಿಕವಾಗಿ ಬೆರೆತುಹೋಗುತ್ತವೆ. ಮತಧರ್ಮದಲ್ಲಾದರೋ ಅಲ್ಲಿಯ ಆಚರಣೆಗಳು ಪ್ರಕೃತಿ ನಿಯಮಗಳನ್ನು ಮಾನವಿಕೀಗೊಳಿಸುವ ಉದ್ದೇಶವನ್ನು ಹೊಂದಿವೆ. ಒಟ್ಟಿನಲ್ಲಿ ಮಾಂತ್ರಿಕತೆಯ ಕ್ರಿಯೆಯು ಪ್ರಾಕೃತಿಕ ಪ್ರಕ್ರಿಯೆಗೆ ತೀರಾ ಹೊರತಾದುದಲ್ಲವೆಂಬುದು ಅವನ ಅಭಿಪ್ರಾಯ. ಆ ಕಾರಣದಿಂದ ಮಾಂತ್ರಿಕತೆಯೆಂಬುದು ಸ್ವತಂತ್ರ ಅಸ್ತಿತ್ವವುಳ್ಳ ಒಂದು ಘಟಕವೇ ಅಲ್ಲವೆಂದು ಅದನ್ನು ಅವನು ಅಲ್ಲಗೆಳೆಯುತ್ತಾನೆ. ಇದರಲ್ಲಿ ಎಷ್ಟೇ ಬುದ್ಧಿವಂತಿಕೆ ಇದೆಯೆಂದು ಕೆಲವರು ತಲೆದೂಗಿದರೂ ಚಾರಿತ್ರಿಕ ವಸ್ತುಸ್ಥಿತಿಯು ಅದಲುಬದಲಾಗುವುದಿಲ್ಲ. ಫ್ರೇಜರ್ ಗುರುತಿಸಿರುವಂತೆ ಮಾಂತ್ರಿಕತೆಯು ಎಲ್ಲಾ ಆದಿಮ ಜನಾಂಗಗಳಲ್ಲೂ ಇದೆ ಮತ್ತು ಅದರಿಂದ ಕ್ರಮೇಣ ಮತಧರ್ಮದ ಸಂಸ್ಥೆಯು ವಿಕಾಸವಾಗಿದೆ. ಮಾಂತ್ರಿಕತೆಯಲ್ಲಿ ವೈಜ್ಞಾನಿಕತೆಯ ಅಂಕುರವು ಕಾಣಸಿಗುತ್ತದೆಂಬ ಅವನ ವಾದವನ್ನು ತಳ್ಳಿಹಾಕಿದವನು ಮಾಲಿನೊವ್‌ಸ್ಕಿ. ಪ್ರಾಕೃತಿಕ ಮತ್ತು ಪ್ರಕೃತಿ-ಅತೀತ ಸಂಗತಿಗಳು ಭಿನ್ನವೆಂದು ಆದಿಮ ಮಾಂತ್ರಿಕತೆಯ ಘಟ್ಟದಲ್ಲೂ ತಿಳುವಳಿಕೆ ಇದ್ದಿತೆಂಬುದು ಅವನ ಅಭಿಪ್ರಾಯ. ಮಾನವನ ಆಶಾಭಾವನೆಯು ಮಾಂತ್ರಿಕ ಆಚರಣೆಗಳಾಗಿ ಪರಿವರ್ತಿತವಾಗಿವೆಯೆಂದು ಅವನು ಪ್ರತಿಪಾದಿಸಿದ. ಅಥರ್ವವೇದದ ಕೆಲವು ಭಾಗಗಳಲ್ಲಿ ಇದು ಸ್ಪಷ್ಟವಾಗಿ ಪ್ರತಿಫಲಿತವಾಗಿದೆ. "ತಕ್ಮನ್" ಸೂಕ್ತವನ್ನು ಇದಕ್ಕೆ ಒಂದು ನಿದರ್ಶನವಾಗಿ ನೋಡಬಹುದು.

ಮತಧರ್ಮದ ಪ್ರಜ್ಞೆಯು ಜಾಗೃತವಾಗಿ ವಿವಿಧ ಸ್ವರೂಪಗಳನ್ನು ಪಡೆಯುವಾಗ ಬೌದ್ಧಿಕ ಹಾಗೂ ನೈತಿಕ ಅಂಶಗಳು ಮತಧರ್ಮದ ಭಾಗವಾಗಿ ಬೆಳೆಯುತ್ತವೆ. ಇವೆಲ್ಲಾ ಒಟ್ಟಾಗಿ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂರಚನೆಗಳಿಗೆ ಬುನಾದಿಯನ್ನು ಹಾಕಿಕೊಡುತ್ತವೆ. ಆಚರಣೆಗಳು ಈ ಪ್ರಕಾರವಾಗಿ ಸಂಕೀರ್ಣವಾಗುತ್ತಾ ಹೋಗುವುದು ಒಂದು ಕಡೆಗಾದರೆ ಅವೆಲ್ಲಾ ಯಾಂತ್ರಿಕವಾಗಿಬಿಡುವುದು ಇನ್ನೊಂದು ಕಡೆ. ವೈಯ್ಯಕ್ತಿಕ ಹಾಗೂ ಸಾಮೂಹಿಕ ಹಿತಾಕಾಂಕ್ಷೆಗೆ ಮಾಧ್ಯಮವಾಗುವಂತೆ ಕೆಲವು ಪಟ್ಟಭದ್ರ ಹಿತಾಸಕ್ತಿಗಳ ಆಯುಧವಾಗಿಯೂ ಮತಧರ್ಮವು ಮಾರ್ಪಟ್ಟಿರುವುದನ್ನು ಇತಿಹಾಸದಲ್ಲಿ ನಾವು ಕಾಣುತ್ತೇವೆ.

ಇಡೀ ಸಮೂಹದ ಅನುಭವವನ್ನು ಆಧರಿಸಿ ಮತಧರ್ಮವು ವಿಕಾಸವಾಗುವುದು ಒಂದು ಪರಿಯಾದರೆ ಕೆಲವು ಮಹಾನ್ ವ್ಯಕ್ತಿಗಳ ಸ್ವಕೀಯ ದೃಷ್ಟಿ, ಅನುಭವ ಮತ್ತು ಆಕಾಂಕ್ಷೆಗಳ ಫಲವಾಗಿ ಮೂಡುವ ಮತಧರ್ಮಗಳು ಇನ್ನೊಂದು ಬಗೆಯವು. ಆ ವ್ಯಕ್ತಿಗಳ ಪ್ರೇರಣೆ ಮತ್ತು ಧಾರ್ಮಿಕ ಜ್ಯೋತಿಯು ಇಡೀ ಸಮೂಹಕ್ಕೆ ದಾರಿದೀಪವಾಗಬಹುದು. ಅಂತಹ ಉದಾಹರಣೆಗಳು ನಮ್ಮಲ್ಲಿ ಅನೇಕವಿವೆ. ಇಂತಹ ಮತಧರ್ಮಗಳ ವಿಶೇಷವೇನೆಂದರೆ ಅವು ಇಡೀ ಸಮೂಹದ ಅನುಭವ ಮತ್ತು ಪಾಲ್ಗೊಳ್ಳುವಿಕೆಗಳಿಂದ ಹೊಮ್ಮಿಲ್ಲದಿದ್ದರೂ ಅವು ಇಡೀ ಸಮೂಹಕ್ಕೆ ಪ್ರಸ್ತುತವಾಗುವಂತೆ ಬೆಳೆಯಬೇಕಾಗುತ್ತದೆ. ಬೇರೆಬೇರೆ ವರ್ಗಗಳ ಅವಶ್ಯಕತೆಗಳನ್ನು ಪೂರೈಸುವುದು ಹಾಗೂ ಬೌದ್ಧಿಕವಾಗಿ ಬೇರೆಬೇರೆ ನೆಲೆಗಳಲ್ಲಿರುವವರಿಗೆ ಅಂಗೀಕೃತವಾಗುವುದು ಒಂದು ವಿಶಿಷ್ಟ ಪ್ರಕ್ರಿಯೆ. ಧಾರ್ಮಿಕ ಮತ್ತು ಧಾರ್ಮಿಕೇತರ ಜೀವನ ಮುಖಗಳು ಹಾಗೂ ಚಿಂತನೆಗಳು ಹೊಸ ಸಮತೋಲನವನ್ನು ಕಂಡುಕೊಳ್ಳಬೇಕಾಗುತ್ತದೆ. ಒಂದರ್ಥದಲ್ಲಿ ಮತಧರ್ಮವು ಚಾರಿತ್ರಿಕವಾಗಿ ಸಮಾಜೀಕರಣಕ್ಕೆ ಒಳಗಾಗುತ್ತದೆಂದು ಬೇಕಾದರೆ ಹೇಳಬಹುದು. ಸಾಮಾಜಿಕವಾಗಿ ಪರಸ್ಪರ ವೈರುಧ್ಯಗಳನ್ನಿರಿಸಿಕೊಂಡಿರುವ ಬಣಗಳು ಮತಧರ್ಮದ ಛತ್ರದಡಿಯಲ್ಲಿ ಏಕತ್ರ ಸಮ್ಮಿಳಿತವಾದಾಗ ಯಾವ ಧಾರ್ಮಿಕ ಮೌಲ್ಯಗಳು ಎಷ್ಟು ವ್ಯಾವಹಾರಿಕವಾಗಿ ಜೀವಂತವಾಗಿರಬಹುದೆಂಬ ಪ್ರಶ್ನೆಯನ್ನು ವಿವಿಧ ಸಮಾಜಗಳ ಸಾಮಾಜಿಕ ಚರಿತ್ರೆಗಳ ಅಧ್ಯಯನದಿಂದ ಬಗೆಹರಿಸಿಕೊಳ್ಳಬೇಕು.

ಮತಧರ್ಮಗಳ ಅಧ್ಯಯನದ ಶಿಸ್ತಿನಲ್ಲಿ ಕೆಲವು ತೊಡಕುಗಳಿವೆ. ಆಯಾ ಮತಧರ್ಮಗಳ ಕಟ್ಟಾ ಅನುಯಾಯಿಗಳು ಅವರವರ ಮತಧರ್ಮಗಳ ಶ್ರೇಷ್ಠತೆಯನ್ನು ಎತ್ತಿಹಿಡಿಯಲು ಅತ್ಯಂತ ವ್ಯಕ್ತಿನಿಷ್ಠವಾದ ಅಧ್ಯಯನಗಳನ್ನು ಮಾಡಿ ಇತರ ಮತಧರ್ಮಗಳನ್ನು ಕಳಪೆಯನ್ನಾಗಿಸಲು ಯತ್ನಿಸುವುದು ಅಂತಹ ಒಂದು ತೊಡಕು. ಇನ್ನೊಂದು ತುದಿಯಲ್ಲಿ ಮತಧರ್ಮಗಳನ್ನು ಅಲ್ಲಗಳೆಯುವ ಮಂದಿ ಇದ್ದಾರೆ. ಅವರಲ್ಲಿ ಕೆಲವರು ಅಧ್ಯಯನ ಕೈಗೊಂಡಾಗ ಇಡಿಯಾಗಿ ಮತಧರ್ಮಗಳನ್ನು ಮೂದಲಿಸುತ್ತಾ ಅವೆಲ್ಲಾ ಸುಳ್ಳಿನ ಕಂತೆಗಳೆಂದು ಜರಿಯಬಹುದು. ಈ ಎರಡೂ ವಿಧಾನಗಳಲ್ಲಿ ಮತಧರ್ಮಗಳ ಉಗಮ ಮತ್ತು ವಿಕಾಸಗಳನ್ನು ಕುರಿತಂತೆ ಉಪಯುಕ್ತವಾದ ಚಾರಿತ್ರಿಕ ಅಧ್ಯಯನ ಇರುವುದಿಲ್ಲ. ಇದನ್ನು ಗಮನಿಸಿದ ಮಾರಿಸ್ ಯಾಸ್ಟ್ರೋ ಎಂಬಾತನು ಮತಧರ್ಮಗಳ ಅಧ್ಯಯನಕ್ಕೆ ನಿಗದಿತವಾದ ಒಂದು ಚಾರಿತ್ರಿಕ ದೃಷ್ಟಿಯನ್ನು ಎತ್ತಿಹಿಡಿದ. ಈ ಪದ್ಧತಿಯಲ್ಲಿ ಮೊದಲಿಗೆ ಎಲ್ಲ ಕಾಲಗಳ ಹಾಗೂ ಪ್ರದೇಶಗಳ ಹಿನ್ನೆಲೆಯಲ್ಲಿ ಮತಧರ್ಮಗಳ ಬಗೆಗಿರುವ ಸಂಪೂರ್ಣ ಮಾಹಿತಿಯನ್ನು ಸಂಗ್ರಹಿಸಬೇಕೆಂದು ಅವನು ಹೇಳುತ್ತಾನೆ. ಅದನ್ನು ವ್ಯವಸ್ಥಿತವಾಗಿ ವಿಂಗಡಿಸಿ ಮಾನವಿಕ ಆಯಕಟ್ಟನ್ನು ದೃಷ್ಟಿಯಲ್ಲಿರಿಸಿಕೊಂಡು ಅರ್ಥೈಸಬೇಕೆಂಬುದು ಅವನ ಅಭಿಪ್ರಾಯ. ಹಾಗೆ ಮಾಡಿದಾಗ ಮತಧರ್ಮಗಳ ಆಂತರಿಕ ಭಾವನಾತ್ಮಕ ಹರಹುಗಳ ಪರಿಚಯವಾಗುತ್ತದೆ. ನಂತರ ತುಲನಾತ್ಮಕ ಅಧ್ಯಯನದಿಂದ ಮತಧರ್ಮಗಳ ಬೆಳವಣಿಗೆಯನ್ನು ಖಚಿತವಾಗಿ ವ್ಯಾಖ್ಯಾನಿಸಬಹುದು. ಇಲ್ಲಿ ವೈಯ್ಯಕ್ತಿಕ ನಿಷ್ಠೆಗಳಿಗೆ ಸ್ಥಾನವಿಲ್ಲವೆಂದು ಸಹ ಅವನು ಬಗೆಯುತ್ತಾನೆ.

ಮತಧರ್ಮಗಳ ಚಾರಿತ್ರಿಕ ವಿಕಾಸಕ್ಕೆ ಸಂಬಂಧಿಸಿದಂತೆ ಒಂದು ಎಚ್ಚರ ಅಗತ್ಯವೆನಿಸುತ್ತದೆ. ಯಾವುದೇ ಕಾಲದಲ್ಲೂ ಮತಧರ್ಮದ ಆಚಾರ-ವಿಚಾರಗಳ ಜೊತೆಜೊತೆಯಲ್ಲೇ ಒಂದು ದಾರ್ಶನಿಕ ಚಿಂತನಾ ಪರಂಪರೆ ಇರುವುದು ಶಕ್ಯ. ಉದಾಹರಣೆಗೆ ಬೌದ್ಧ ದರ್ಶನವಿದೆ. ಅದು ನಾಸ್ತಿಕ ದರ್ಶನವೆಂದು ಪ್ರಸಿದ್ಧವಾಗಿದೆ. ಅಥವಾ ಭಾರತೀಯ ದರ್ಶನಗಳ ಪೈಕಿ ಇರುವ ಲೋಕಾಯತದಂತಹ ನಾಸ್ತಿಕ ದರ್ಶನ ಇರಬಹುದು. ಇವಲ್ಲದೆ ಆಸ್ತಿಕ ದರ್ಶನಗಳೆಂದು ಬೇರೆ ಇವೆ. (ಅವುಗಳಲ್ಲಿ ಸಹ ಭೌತವಾದಿ ಚಿಂತನಾಪ್ರಕ್ರಿಯೆ ವ್ಯಾಪಕವಾಗಿರುತ್ತದೆ). ಇಂತಹ ದಾರ್ಶನಿಕ ಪದ್ಧತಿಗಳಲ್ಲಿ ಪ್ರಸಿದ್ಧವಾಗಿರುವ ಚಿಂತನಾಲಹರಿ, ತಾತ್ವಿಕ ಧೋರಣೆಗಳು ಮತ್ತು ನೈತಿಕ ಪ್ರಶ್ನೆಗಳು ಅವುಗಳ ಸಮಕಾಲೀನ ಮತಧರ್ಮಗಳ ವ್ಯಾಪ್ತಿಗೆ ಸೇರಿರುತ್ತವೆಂದು ಭಾವಿಸಲಾಗದು. ಮತೀಯ ಆಚರಣೆಗಳಿಗೆಲ್ಲಾ ಒಂದು ದಾರ್ಶನಿಕ ಸಮಜಾಯಿಷಿ ನೀಡುವ ಅಗತ್ಯವಿಲ್ಲ ಮತ್ತು ಅದು ಮತಧರ್ಮಗಳ ನಿಷ್ಕೃಷ್ಟವಾದ ಅಧ್ಯಯನವೆನಿಸಿಕೊಳ್ಳುವುದೂ ಇಲ್ಲ. ಮೇಲಾಗಿ ದಾರ್ಶನಿಕ ನಿಷ್ಪತ್ತಿಯು ಮತಧರ್ಮಗಳ ಮಡಿಲಿಂದ ಮೂಡಿಬಂದಿರುವ ಅಂಶವಲ್ಲವೆಂಬುದನ್ನೂ ನಾವಿಲ್ಲಿ ಗಮನಿಸಬೇಕು. ಇಡೀ ಸಮಾಜದ ದೃಷ್ಟಿಯಿಂದ ನೋಡಿದರೆ ಆಯಾ ಕಾಲದ ಮತಧರ್ಮದ ಆಚರಣೆಗಳು ಮತ್ತು ಸಂಪ್ರದಾಯಗಳು ಅದೇ ಸಂದರ್ಭದ ದಾರ್ಶನಿಕ ಚಿಂತನೆಗಳಿಗಿಂತ ಹೆಚ್ಚು ಜೀವಂತವಾಗಿರುತ್ತವೆ. ಮತಧರ್ಮ ಮತ್ತು ದಾರ್ಶನಿಕ ತತ್ತ್ವಗಳನ್ನು ಸಮೀಕರಿಸಲು ಯತ್ನಿಸಿದರೆ ವೈರುಧ್ಯಗಳ ಸರಣಿಯೇ ನಮ್ಮ ಮುಂದೆ ಬರುತ್ತದೆ ಮತ್ತು ಆ ವೈರುಧ್ಯಗಳನ್ನು ತಾರ್ಕಿಕವಾಗಿ ಬಗೆಹರಿಸಲಾಗುವುದಿಲ್ಲ. ಆದ್ದರಿಂದ ಧರ್ಮದ ಚಾರಿತ್ರಿಕ ವಿಕಾಸವನ್ನು ಅಧ್ಯಯನ ಮಾಡುವಾಗ ಆಯಾ ಮತಧರ್ಮಗಳ ವಿವಿಧ ಹಂತಗಳನ್ನು ಗುರುತಿಸಿ ಆಗ್ಗೆ ಪ್ರಚಲಿತವಾದ ನಂಬಿಕೆ, ಆಚರಣೆ, ಸಂಪ್ರದಾಯ, ಮುಂತಾದವುಗಳಿಗೆ ಆದ್ಯತೆ ಕೊಡಬೇಕೇ ವಿನಾ ಆ ಹಂತಗಳ ದಾರ್ಶನಿಕ ಚಿಂತನೆಗಳಿಗಲ್ಲ. ನಾಸ್ತಿಕ ದರ್ಶನಗಳ ಪರಿಧಿಯಲ್ಲಿ ಸಹ ಕೆಲವು ಮತಧರ್ಮೀಯ ಆಚರಣೆಗಳು ಅಸ್ತಿತ್ವದಲ್ಲಿರುವುದನ್ನು ನಾವಾಗ ವ್ಯಾಖ್ಯಾನಿಸಬಹುದು.

ಪ್ರತಿಯೊಂದು ಮತಧರ್ಮದ ಪದ್ಧತಿಯಲ್ಲೂ ಸಾಮಾನ್ಯವಾಗಿ ಒಂದು ತಿಳುವಳಿಕೆಯ ವಿನ್ಯಾಸವಿರುತ್ತದೆ. ಅದನ್ನು ಸ್ಪಷ್ಟವಾಗಿ ಹೇಳಿರಬಹುದು ಅಥವಾ ಹೇಳಿಲ್ಲದಿರಬಹುದು, ಅಷ್ಟೇ. ಅದು ಮಾನವಾತೀತ ವಿಶ್ವದ ಬಗ್ಗೆ ಮತ್ತು ಅದರೊಂದಿಗಿನ ಮಾನವನ ಸಂಬಂಧದ ಬಗ್ಗೆ ಆಗಿರುತ್ತದೆ. ಆ ವಿಶ್ವದ ಅಸ್ತಿತ್ವವನ್ನು ಕುರಿತಂತೆ ಆ ಮತಧರ್ಮಕ್ಕೆ ಯಾವ ಸಂಶಯವೂ ಇರುವುದಿಲ್ಲ. ಅದರೊಡನೆ ಅಪೇಕ್ಷಣೀಯ ಸಂಬಂಧ ಬೆಳೆಸಲು ಆಚರಣೆಗಳಿವೆ, ವಿಧಿಗಳಿವೆ, ಕ್ರಿಯೆಗಳಿವೆ. ವಿವಿಧ ಮತಧರ್ಮಗಳ ಪ್ರಣಾಳಿಕೆಗಳು ಭಿನ್ನವಾದ್ದರಿಂದ ಅವುಗಳ ಬೆರಕೆ ಸಾಧ್ಯವಾಗವುದಿಲ್ಲ. ಕೃಷ್ಣಲೀಲೆಯ ಪ್ರಸಂಗಗಳಲ್ಲಿ ಮಾನವ ಮತ್ತು ದೈವದ ಸಂಬಂಧವನ್ನು ಸ್ಥಾಪಿಸುವ ಪದ್ಧತಿಯನ್ನು ಅನುಸರಿಸುವಾಗ, ಕನ್ಯೆ ಮೇರಿಯು ಏಸುವಿಗೆ ಜನ್ಮವಿತ್ತಳೆಂಬ ಪ್ರಸಂಗದ ಮುಖೇನ ಮಾನವ ಮತ್ತು ದೈವದ ಸಂಬಂಧದ ಕಲ್ಪನೆಗೆ ಅವಕಾಶವಿರುವುದಿಲ್ಲ. ಎರಡಕ್ಕೂ ಆಯಾ ಮತಧರ್ಮಗಳ ವ್ಯಾಪ್ತಿಯಲ್ಲಿ ಸಮಜಾಯಿಷಿಯ ಅಗತ್ಯವಿಲ್ಲ. ಅವು

ನಂಬಿಕೆಯ ಸ್ತರಕ್ಕೆ ಸೇರಿದ ಅಂಶಗಳು, ಅಷ್ಟೆ. ಆ ಕಾರಣದಿಂದಲೇ ಅವು ಮೂಲಭೂತ ಸತ್ಯಗಳಾಗಲು ಸಾಧ್ಯವಿಲ್ಲವೆಂಬುದೂ ಅಷ್ಟೇ ನಿಜ.

ಹತ್ತೊಂಭತ್ತನೆಯ ಶತಮಾನದ ಆದಿಭಾಗದಲ್ಲಿ 'ಯುವ ಹೆಗೆಲಿಯನ್ನರು' ಎಂದು ಕರೆದುಕೊಳ್ಳುತ್ತಿದ್ದ ಒಂದು ತಂಡ ಜರ್ಮನಿಯಲ್ಲಿ ತತ್ತ್ವಶಾಸ್ತ್ರದ ಕ್ಷೇತ್ರದಲ್ಲಿ ಕ್ರಿಯಾಶೀಲವಾಗಿದ್ದಿತು. ಮತಧರ್ಮದ ನಂಬಿಕೆ ಮತ್ತು ಕಾರ್ಯವೈಖರಿಯನ್ನು ದಾರ್ಶನಿಕ ಒರೆಗಲ್ಲಿನಿಂದ ಪರೀಕ್ಷಿಸಿ ಮಾಪನ ಮಾಡುವುದು ಈ ತಂಡದ ಯುವಕರ ಕ್ರಮವಾಗಿತ್ತು. ಅವರ ವಿಮರ್ಶೆಯಲ್ಲಿ ರಾಜಕೀಯ ರೊಮ್ಯಾಂಟಿಕ್ ಭಾವನೆಯು ತುಂಬಿತ್ತೆಂದು ಸ್ವತಃ ಅವರೊಡನಿದ್ದ ಮಾರ್ಕ್ಸ್ ೧೮೪೨ ರಷ್ಟು ಹಿಂದೆಯೇ ತನ್ನೊಬ್ಬ ಸ್ನೇಹಿತ ರೂಜ್‌ಗೆ ಬರೆದ ಪತ್ರದಲ್ಲಿ ತಿಳಿಸಿದ್ದ: "ರಾಜಕೀಯ ಪರಿಸ್ಥಿತಿಯನ್ನು ಟೀಕೆಮಾಡುತ್ತಾ ಮತಧರ್ಮವನ್ನು ವಿಮರ್ಶಿಸಬೇಕೆಂದು ನಾನು ಹೇಳಿದರೆ ಅವರು ಅದನ್ನು ತಿರುಗು ಮುರುಗು ಮಾಡಿದ್ದಾರೆ. ಸ್ವತಃ ಮತಧರ್ಮವು ಖಾಲಿಯಾದ್ದು; ಅದು ಜೀವಿಸುವುದು ಭೂಮಿಯಿಂದಲೇ ವಿನಾ ಸ್ವರ್ಗದಿಂದಲ್ಲ. ಈಗ ವಸ್ತುಸ್ಥಿತಿಯು ಅದಲು ಬದಲಾಗಿದೆ. ಅದನ್ನು ಸರಿಪಡಿಸಿದರೆ ಮತಧರ್ಮವು ತಂತಾನೆ ಮಾಯವಾಗುತ್ತದೆ; ಅದು ಯಾವ ವಸ್ತುಸ್ಥಿತಿಯನ್ನು ಪ್ರತಿನಿಧಿಸುತ್ತದೋ ಅದೇ ಇಲ್ಲವಾದರೆ ಇನ್ನು ಮತಧರ್ಮದ ಸಿದ್ಧಾಂತಕ್ಕೆ ಸ್ಥಾನವೆಲ್ಲಿಯದು!"

ಹೀಗೆ ಹೇಳುವಾಗ ಮಾರ್ಕ್ಸ್‌ಗೆ ಚಾರಿತ್ರಿಕ ಭೌತವಾದದ ತತ್ತ್ವವು ಆಸರೆಯನ್ನು ನೀಡಿತ್ತು. ಭೌತಿಕ ಜಗತ್ತಿನ ಸನ್ನಿವೇಶ, ವ್ಯವಹಾರ ಇತ್ಯಾದಿಗಳು ಆಯಾ ಕಾಲದ ಚಿಂತನೆ ಮತ್ತು ಕಲ್ಪನೆಗಳ ಮೇಲೆ ಗಾಢ ಪ್ರಭಾವ ಬೀರುತ್ತವೆಂಬುದು ಈ ಸಿದ್ಧಾಂತದ ಮೂಲಸೂತ್ರ. ಪ್ರಜ್ಞಾಪೂರ್ವಕ ಇರುವಿಕೆಗಿಂತಲೂ ಭಿನ್ನವಾದ ಪ್ರಜ್ಞೆಯು ಯಾವ ಕಾಲದಲ್ಲೂ ವ್ಯಾಪಕವಾಗಿ ಪಸರಿಸಿರುವುದಿಲ್ಲ. ಮಾನವಕೋಟಿಯ ಇರುವಿಕೆಯು ಅವರ ನೈಜವಾದ ಜೀವನ ಪ್ರಕ್ರಿಯೆ ಎನಿಸಿಕೊಳ್ಳುತ್ತದೆ. ಮಾನವನೊಬ್ಬನು ಹೇಳುವುದು, ಊಹಿಸಿಕೊಳ್ಳುವುದು, ಆಕಾಂಕ್ಷಿಸುವುದು, ಇವೆಲ್ಲಾ ಅಮೂರ್ತವಾಗಿರುವಂತಹ ಸ್ವಜನ್ಯ ಕಲ್ಪನೆಗಳಲ್ಲ. ಅಂದರೆ, ಯಾಂತ್ರಿಕವಾಗಿ ಇವೆಲ್ಲಾ ಪೂರ್ವ ನಿಶ್ಚಯವಾಗಿರುವಂತಹ ಭಾವನೆಗಳೆಂದು ತೀರ್ಮಾನಿಸುವ ಹಾಗಿಲ್ಲ. ಆಯಾ ಸಂದರ್ಭದ ಸಾಮಾಜಿಕ-ಆರ್ಥಿಕ ಇರುವಿಕೆಯ ಸನ್ನಿವೇಶಕ್ಕೂ ಮತ್ತು ಆಗಿನ ಸಾಂಸ್ಕೃತಿಕ ಲೋಕಕ್ಕೂ ಅವಿನಾಭಾವವಾದ ಸಂಬಂಧವು ಸಾಮಾನ್ಯವಾಗಿ ಪ್ರಕಟಗೊಳ್ಳುತ್ತದೆ, ಎಂದಷ್ಟೇ ಇದರರ್ಥ. ಇದರಿಂದಾಗಿ ಮತಧರ್ಮವು ಸಂಪೂರ್ಣ ಸ್ವಾಯತ್ತ ಸಂಸ್ಥೆಯೆಂಬ ಮಾತು ಹುಸಿಯಾಗುತ್ತದೆ. ಅದರ ಸಂರಚನೆಯಲ್ಲೂ ಬದಲಾವಣೆಗಳು ಅನಿವಾರ್ಯ. ಕ್ರೈಸ್ತಧರ್ಮದ ಇಂದಿನ ಚಿಂತನೆ-ಕ್ರಿಯೆಗಳಲ್ಲಿ 'ವಿಮೋಚನಾ ದೈವತಾಶಾಸ್ತ್ರ'ವೆಂಬ ವಿಶಿಷ್ಟ ಮಾದರಿಯೊಂದು ಪ್ರಚಲಿತವಾಗಿರುವುದನ್ನು ಇದಕ್ಕೊಂದು ಉದಾಹರಣೆಯಾಗಿ ನೋಡಬಹುದು. ವಸಾಹತುಶಾಹಿಯ ದುರಾಕ್ರಮಗಳು ವಿಶ್ವದ ಬೇರೆಬೇರೆ ಭಾಗಗಳಲ್ಲಿ ಹರಡುತ್ತಿದ್ದ

ಹದಿನೆಂಟನೆಯ ಶತಮಾನದಲ್ಲಿ ಅಂಥದೊಂದು ಕಲ್ಪನೆ ತೀರಾ ಅನೂಹ್ಯವಾಗಿರುತ್ತಿತ್ತು. ಸನ್ನಿವೇಶದ ಬದಲಾವಣೆಗಳಿಂದಾಗಿ ಇಲ್ಲಿ ಮತಧರ್ಮದ ದೃಷ್ಟಿಕೋನದ ಬದಲಾವಣೆಯು ಸ್ಪಷ್ಟವಾಗಿದೆ.

ಮತಧರ್ಮವು ಸ್ವರ್ಗದಿಂದ ಮರ್ತ್ಯಲೋಕಕ್ಕೆ ಇಳಿದಿದೆಯೆಂದು ಭಾವಿಸುವಾಗ ಇಲ್ಲಿಯ ಚಿಂತನೆ-ಕ್ರಿಯೆಗಳಿಗೆ ಪ್ರಸ್ತುತ ಸನ್ನಿವೇಶಗಳು ಯಾವ ರೀತಿಯಲ್ಲೂ ಜವಾಬ್ದಾರಿಯಲ್ಲ, ಬದಲಾಗಿ ದೈವಪ್ರೇರಣೆಯಂತೆ ಎಲ್ಲಾ ಜರುಗುತ್ತವೆ ಎಂದು ಹೇಳಿದಂತಾಗುತ್ತದೆ. ಅದನ್ನೇ ತಿರುಗು-ಮುರುಗು ಕಲ್ಪನೆಯೆಂದು ಮಾರ್ಕ್ಸ್ ಬಣ್ಣಿಸಿದ್ದು. ಮಾನವನ ಜೀವನ ಪ್ರಕ್ರಿಯೆಗಳಿಂದ ಮೂಡುವ ಹಲವಾರು ಅಂಶಗಳಲ್ಲಿ ಮತಧರ್ಮದ ಕಲ್ಪನೆಯೂ ಒಂದು. ಆದ್ದರಿಂದ ಅದು ಮಾತ್ರ ನಿರಂತರವಾಗಿ, ಶಾಶ್ವತವಾಗಿ, ಏಕಪ್ರಕಾರವಾಗಿ ನಿಲ್ಲುವಂತಹ ಸಂಸ್ಥೆಯೆಂಬುದು ಅವೈಚಾರಿಕ ಮಾತಾಗುತ್ತದೆ. ಈವರೆಗೆ ನಾವು ನೋಡಿರುವಂತೆ ಮಾಂತ್ರಿಕತೆಯ ಹಂತದಿಂದ ಮತಧರ್ಮವು ಬೇರೆ ಬೇರೆ ಮಜಲುಗಳನ್ನು ಮುಟ್ಟಿದೆ. ಅದು ಹಾಗೆಯೇ ಮುಂದುವರಿಯುತ್ತದೆ ಕೂಡ. ಭೌತಿಕ ಆವರಣದಲ್ಲುಂಟಾಗುವ ಬದಲಾವಣೆಯು ಕ್ರಮೇಣ ಮತಧರ್ಮದ ಆಯಕಟ್ಟಿನ ಮೇಲೂ ಪರಿಣಾಮ ಬೀರುತ್ತದೆ.

ಸದ್ಯದ ಪರಿಸ್ಥಿತಿಯಲ್ಲಾಗಲೇ ಮತಧರ್ಮದ ಕಟ್ಟಲೆಗಳು ನೂತನ ಸ್ವರೂಪ ಧಾರಣೆ ಮಾಡುತ್ತಿರುವುದನ್ನು ಗಮನಿಸಬಹುದಾಗಿದೆ. ಅದು ಮುಂದಕ್ಕೆ ಹೋಗುವ ಹೆಜ್ಜೆಯಾಗಬಹುದು, ಹಿಂದಕ್ಕೆ ಹೋಗುವುದೂ ಆಗಬಹುದು. ಸ್ಥಗಿತತೆಯಂತೂ ಅದರ ಲಕ್ಷಣವಲ್ಲ; ಏಕೆಂದರೆ ಸ್ಥಗಿತತೆಯು ಮಾನವನ ಜೀವನದ ಲಕ್ಷಣವಲ್ಲ. ಯಾವುದು ಸರಿ, ಯಾವುದು ತಪ್ಪು ಎನ್ನುವುದು ಮತಧರ್ಮದ ವಿಕಾಸದ ಬಗ್ಗೆ ಚರ್ಚಿಸುವಾಗ ಅಪ್ರಕೃತವೆನಿಸಬಹುದು; ಅಂತೆಯೇ ಯಾವುದು ಪ್ರಗತಿ ಮತ್ತು ಯಾವುದು ಹಿಂಜರಿತ ಎಂಬುದು ಕೂಡ. ಆದರೆ ಮತಧರ್ಮವು ತನ್ನ ಚರಿತ್ರೆಯಲ್ಲಿ ಸದಾ ವಿಕಾಸಶೀಲವಾಗಿಯೇ ಉಳಿದುಬಂದಿದೆಯೆಂಬುದು ಅಪ್ರಕೃತವಲ್ಲ. ಸಿಗ್ಮಂಡ್ ಫ್ರಾಯ್ಡ್ ಮತಧರ್ಮದ ಭವಿಷ್ಯವನ್ನು ವಿಶದೀಕರಿಸುತ್ತಾ ತನ್ನೊಂದು ಗ್ರಂಥವನ್ನು "ಭ್ರಾಂತಿಯೊಂದರ ಭವಿಷ್ಯ" ಎಂದು ಕರೆದನೆಂದು ಹಿಂದೆಯೇ ಪ್ರಸ್ತಾಪಿಸಿದ್ದಾಗಿದೆ. ಭ್ರಾಂತಿಯು ಚಿರಕಾಲ ಉಳಿಯಲಾರದೆಂದು ಅವನ ಸೂಚನೆಯಾಗಿತ್ತು. ಅವನ ಸೂಚನೆಯಲ್ಲಿ ಹುರುಳಿದೆಯೇ ಇಲ್ಲವೇ ಎಂಬುದನ್ನು ಭವಿಷ್ಯದ ಮಾನವಕೋಟಿಯೇ ನಿರ್ಧರಿಸುತ್ತದೆ.

(ಕೆಂಬಾವುಟ, ಆಗಸ್ಟ್ ೨೦೦೦)

◆

೮. ದೂರ ದೂರ ದೂಡಲ್ಪಟ್ಟವರು

ಆಗಸ್ಟ್ ೧೯೯೮ರಲ್ಲಿ ಬಿರ್ಸಾ ಮುಂಡ ಎಂಬ ಸ್ವಾತಂತ್ರ್ಯ ಹೋರಾಟಗಾರನ ಭಾವಚಿತ್ರವನ್ನು ಪಾರ್ಲಿಮೆಂಟ್ ಭವನದಲ್ಲಿ ಅನಾವರಣಗೊಳಿಸಲಾಯಿತು. ಅವನೊಬ್ಬ ಬುಡಕಟ್ಟು ಜನಾಂಗದವನು. ಬಿರ್ಲಾಗಳಿಗೆ ಮಣೆ ಹಾಕಿ ಕೂತಿರುವ ದೇಶದಲ್ಲಿ ಒಮ್ಮೊಮ್ಮೆ ಬಿರ್ಸಾ ಅಂಥವರಿಗೂ ಮನ್ನಣೆ ಮಾಡಬೇಕು. ಅವನ ಜನಾಂಗದವರಿಗೆ ಇಂತಹ ಗೌರವದಿಂದ ಸ್ವಲ್ಪ ಸಮಾಧಾನ ದೊರಕಲೆಂದು. ಎಲ್ಲೆಲ್ಲೂ ಅಂಬೇಡ್ಕರ್ ಅವರ ಗುಣಗಾನ ಮಾಡುವುದಿಲ್ಲವೇ, ಹಾಗೆ. ಇಂತಹ ಪೂಜೆ ಸಲ್ಲಿಸುತ್ತಿರುವಾಗಲೇ ಇನ್ನೊಂದೆಡೆ ಮಣಿಪುರದ ಮಹಿಳೆಯರು ಬೆತ್ತಲೆ ಪ್ರತಿಭಟನೆ ಮಾಡಬೇಕಾದಂತಹ ರೀತಿಯಲ್ಲಿ ಇನ್ನೊಂದು ಪೂಜೆ ನಡೆಯುತ್ತಿರುತ್ತದೆ. ಅವರು ನಮ್ಮ ದೇಶದೊಡನೆ ಭಾವನಾತ್ಮಕವಾದ ಸಂಬಂಧ ಬೆಳೆಸಿಕೊಳ್ಳಬೇಕೆಂಬ ಉಪದೇಶ ಮಾತ್ರ ನಿರಂತರವಾಗಿ ನೀಡಲಾಗುತ್ತಿರುತ್ತದೆ. ತಾರತಮ್ಯವಿಲ್ಲದೆ ಎಲ್ಲರನ್ನೂ ಅದುಮಿ ಹಿಡಿಯುವ ಪ್ರಭುತ್ವ ನಮ್ಮದು. "ನನಗೆ ಯಾವ ಪೂರ್ವಗ್ರಹ ಭಾವನೆಯೂ ಇಲ್ಲ, ಆದ್ದರಿಂದ ಎಲ್ಲರನ್ನೂ ಸಮಾನವಾಗಿ ದ್ವೇಷಿಸುತ್ತೇನೆ" ಎಂದು ಹೇಳಬಹುದಾದಂತಹ ನಾಯಕರು, ರಾಜಕೀಯ ಪಕ್ಷಗಳ ಧುರೀಣರು, ನಮ್ಮನ್ನಾಳುತ್ತಾರೆ. ದಂಡಿಸಿಕೊಂಡು ಸುಸ್ತಾದವರು ವಾಜಪೇಯಿ ಸರ್ಕಾರವನ್ನು ಕೆಳಗಿಳಿಸಿದಂತೆ ಅಧಿಕಾರಕ್ಕೆ ಬಂದವರನ್ನೆಲ್ಲಾ ಆಗಾಗ್ಗೆ ಹೊರನೂಕುತ್ತಿರಬಹುದು. ಆದರೆ ದಂಡನೆಯು ಇಲ್ಲವಾಗುವಂತೆ ತಾವೇ ಪ್ರಭುತ್ವವನ್ನು ತಮ್ಮದಾಗಿಸಿಕೊಳ್ಳುವ ಸಂದರ್ಭವಿನ್ನೂ ಒದಗಿಬಂದಿಲ್ಲ.

ದೇಶದ ದಲಿತರನ್ನು ಮಣಿಪುರದ ಮಹಿಳೆಯರನ್ನು ನಡೆಸಿಕೊಂಡಂತೆ ನಡೆಸಿಕೊಳ್ಳಲಾಗದು. ಏಕೆಂದರೆ, ಅವರು ಎಲ್ಲೆಲ್ಲೂ ಹರಡಿಕೊಂಡಿದ್ದಾರೆ. ಜನಸಂಖ್ಯೆಯಲ್ಲಿ ಗಣನೀಯ ಪ್ರಮಾಣದಲ್ಲಿದ್ದಾರೆ. ವೋಟು ಚಲಾಯಿಸಿ ತಕ್ಕಡಿ ತೂಗಲು ಸಮರ್ಥರಾಗಿದ್ದಾರೆ. ಆದ್ದರಿಂದ ಅಂಬೇಡ್ಕರ್ ಅವರನ್ನು ಶ್ಲಾಘಿಸುವುದು ವಾಜಪೇಯಿಯವರಿಗೂ ಬೇಕಾಗಿದೆ. ಅಧಿಕಾರಕ್ಕೆ ಬರಬೇಕಾದಾಗ ಅರುಣ ಶೌರಿ ಸಹ ಅಂಬೇಡ್ಕರ್‌ರನ್ನು ಮೂದಲಿಸದೆ ಮೌನ ವಹಿಸಬಲ್ಲ. ಹಿಂದುಳಿದವರು, ಮಹಿಳೆಯರು, ಅಲ್ಪಸಂಖ್ಯಾತರು, ಹೀಗೆ ಬೇರೆ ಬೇರೆ ಸಾಮಾಜಿಕ ಬಣಗಳನ್ನು ಓಲೈಸಲು ಪ್ರಯತ್ನಗಳು ನಡೆಯುತ್ತಿರುತ್ತವೆ. ಆದರೆ ಯಾವ ಬಣದ ಏಳಿಗೆಯೂ

ಪೂರ್ಣಪ್ರಮಾಣದಲ್ಲಿ ಆಗದಂತೆ ಪ್ರತಿಬಂಧಕಗಳನ್ನು ಒಡ್ಡುವ ಪ್ರವೃತ್ತಿ ಪ್ರಭುತ್ವದಲ್ಲಿದೆ. ಹೀಗಿರುವಾಗಲೂ ಹಲವು ಅತಿರೇಕಗಳು ಬೆಳಕಿಗೆ ಬರುವುದುಂಟು. ಗುಜರಾತಿನಲ್ಲಿ ಯಾವನೋ ಮೌಲ್ವಿಯನ್ನು ವಿವಸ್ತ್ರಗೊಳಿಸುತ್ತಾರೆ. ಮಧ್ಯಪ್ರದೇಶದ ಯಾವುದೋ ಶಾಲೆಗೆ ನುಗ್ಗಿ ಮಕ್ಕಳ ಬಳಿ ಇರುವ ಬೈಬಲ್ ಪ್ರತಿಗಳನ್ನು ಸುಡುತ್ತಾರೆ. ರಾಜಸ್ತಾನದಲ್ಲಿ ಯಾರದೋ ಅಂತರ್ಜಾತೀಯ ವಿವಾಹದ ಬಗ್ಗೆ ದಾಂಧಲೆ ನಡೆಸುತ್ತಾರೆ. ಇಂತಹ ಪ್ರಸಂಗಗಳು ನೂರಾರು. ಅವು ದೇಶದ ಉದ್ದಗಲಕ್ಕೂ ಘಟಿಸುತ್ತಿರುತ್ತವೆ. ಆದರೆ ಸಂಘಟಿತ ಪ್ರತಿರೋಧ ವ್ಯಾಪಕವಾಗಿ ಇರುವುದಿಲ್ಲ. ಎಲ್ಲವನ್ನೂ ನುಂಗಿಕೊಂಡು ಜೀವಿಸುವ ಉದಾರಿಗಳು ನಾವು, ಚಿಂದಿಬಟ್ಟೆಯ ಧರ್ಮಪ್ರವರ್ತಕರು !

ಆಡಳಿತ ಯಂತ್ರವನ್ನು ತಮ್ಮದಾಗಿಸಿಕೊಂಡಿರುವ ಆಳುವ ವರ್ಗದ ಪ್ರಾತಿನಿಧಿಕ ರಾಜಕೀಯ ಪಕ್ಷಗಳು ತುಳಿತಕ್ಕೊಳಗಾಗಿರುವವರ ಬಗ್ಗೆ ನಿರಂತರವಾಗಿ ಸಾಂತ್ವನದ ಮಾತುಗಳನ್ನಾಡುತ್ತಿರುತ್ತವೆ. ಆದರೆ ರಾಜಕೀಯವಾಗಿ ಅವರ ಮುನ್ನಡೆಯನ್ನು ಸಹಿಸುವುದಿಲ್ಲ. ಆಡಳಿತದಲ್ಲಿರಲಿ, ಬಿಡಲಿ, ಇಂತಹ ರಾಜಕೀಯ ಪಕ್ಷಗಳು ಅಧಿಕಾರವನ್ನು ವಿಕೇಂದ್ರೀಕರಿಸುವ ಮಾತನ್ನು ಆಗಿಂದಾಗ್ಗೆ ಆಡುತ್ತಿರುತ್ತವೆ, ಆದರೆ ಅದಕ್ಕೆ ಅಗತ್ಯವಾದ ಆರ್ಥಿಕ ಮತ್ತು ಸಾಮಾಜಿಕ ಅಡಿಪಾಯವನ್ನು ನಿರ್ಮಿಸುವುದಿಲ್ಲ. ಮಿಶ್ರೀ ದೇವಿಯ ಕತೆಯನ್ನು ಬೇಗನೆ ಮರೆತುಬಿಡುವ ಅಮಾಯಕರು ಇದ್ದಲ್ಲೇ ಇದ್ದುಕೊಂಡು ಉಸಿರಿದ್ದಾಗ ನಿಟ್ಟುಸಿರು ಬಿಡುತ್ತಾರೆ! ಯಾರೀಕೆ, ಮಿಶ್ರೀ ದೇವಿ? ರಾಜಸ್ತಾನದ ಒಂದು ಹಳ್ಳಿಯ ಪಂಚಾಯಿತಿ ಸದಸ್ಯೆ. ಕೆಲವು ವರ್ಷಗಳ ಹಿಂದೆ ಸ್ವಾತಂತ್ರ್ಯೋತ್ಸವ ಸಂದರ್ಭದಂದು ರಾಷ್ಟ್ರಧ್ವಜ ಹಾರಿಸಲು ಹೋದಾಗ ಅವಳ ಬಟ್ಟೆ ಕಳಚಿ ಅವಮಾನ ಮಾಡಿದರು. ಕೆಳಜಾತಿಯ ಮಹಿಳೆ ಬಾವುಟ ಹಾರಿಸುವುದು ಅಲ್ಲಿಯ ಮಹಾಜನರಿಗೆ ಹಿಡಿಸಲಿಲ್ಲ. ನಮ್ಮ ಆನೇಕಲ್ಲಿನ ನಗರಸಭೆಯ ಸುಸಂಸ್ಕೃತ ಸದಸ್ಯರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಅಧ್ಯಕ್ಷೆಯಾಗಿದ್ದ ದಲಿತ ಮಹಿಳೆಯನ್ನು ಕೊಂದೇ ಬಿಟ್ಟರು. ಆದರೂ ದೇಶದಲ್ಲಿ ಕೋಪದ ಪ್ರವಾಹ ಕಂಡುಬರಲಿಲ್ಲ. ಮನಸ್ಸುಗಳನ್ನು ಮರಗಟ್ಟಿಸಿಕೊಳ್ಳುವ ತಂತ್ರವನ್ನು ಶತಮಾನಗಳಿಂದ ಸಿದ್ಧಿಸಿಕೊಳ್ಳುತ್ತಾ ಬಂದಿರುವ ನಾವು ಪಾತಕಿಗಳಿಗೆ ಇದಿರೇಟು ಹೊಡೆಯಲು ಇನ್ನೂ ಕಾಲ ಪಕ್ವವಾಗಿಲ್ಲವೆಂದು ಹೇಳಿಕೊಳ್ಳುತ್ತಾ ಇನ್ನೆಷ್ಟು ಕಾಲ ಹೀಗೇ ಮುದುಡಿಕೊಂಡು ಕುಳಿತಿರುವುದು? ಯಾವುದೋ ಭಾವಿಯಲ್ಲಿ ನೀರು ಸೇದಿಕೊಂಡರೆ, ಯಾವುದೋ ಊರಿನ ಕೇರಿಗೆ ಕಾಲಿಟ್ಟರೆ, ಕ್ಷಣಕಾಲದಲ್ಲಿ ಭುಗಿಲೇಳುತ್ತದೆ, ಜನರನ್ನು ಜೀವಂತ ಸುಡುತ್ತಾರೆ. ಅದಕ್ಕೆ ಶಿಕ್ಷೆ ಇಲ್ಲ. ಆದರೆ ಅದಕ್ಕೆ ವಿರೋಧವನ್ನು ಗಟ್ಟಿಯಾಗಿ ವ್ಯಕ್ತಪಡಿಸಿದರೆ ಪ್ರಭುತ್ವವು ಕ್ರಿಯಾಶೀಲವಾಗುತ್ತದೆ, ಭಾರತೀಯ ಸಂಸ್ಕೃತಿಯ ಹಿರಿಮೆಯ ಬಗ್ಗೆ ಉಪದೇಶ ನೀಡುತ್ತದೆ.

ಹೀಗಿದ್ದರೂ ಹಿಂದುಳಿದ ಜನ ಕ್ರಮೇಣ ತಲೆಯೆತ್ತುತ್ತಿದ್ದಾರೆ. ಅವರ ಆಕಾಂಕ್ಷೆಗಳು ಹಿಗ್ಗುತ್ತಿವೆ. ಹೊಸ ಸವಾಲುಗಳನ್ನವರು ಎಸೆಯುತ್ತಿದ್ದಾರೆ ಮತ್ತು ಪ್ರಭುತ್ವ ಹಾಗೂ ಆಳುವ

ವರ್ಗದ ಸವಾಲನ್ನೆದುರಿಸುತ್ತಿದ್ದಾರೆ. ವಾಜಪೇಯಿ ಸರ್ಕಾರದಲ್ಲಿ ಸಚಿವರಾಗಿದ್ದ ಯಶವಂತ ಸಿಹ್ನ ಒಮ್ಮೆ ಹೇಳಿದರು : ''ಬಂಡವಾಳಶಾಹಿ ಮತ್ತು ಸಮಾಜವಾದ ಎರಡೂ ಸೋತಿವೆ, ಆದ್ದರಿಂದ ನಮ್ಮ ದೇಶದ ಪ್ರತಿಭೆಗೆ ತಕ್ಕುದಾದ ಬೇರೇನಾದರೂ ಒಂದನ್ನು ನಾವು ಹೊಂದಬೇಕು'' ಎಂದು. ಆ ಬೇರೊಂದನ್ನು ಗುಜರಾತಿನಲ್ಲಿ ಅವರು ತೋರಿಸಿದರು, ಅಮೆರಿಕಾದ ಆಜ್ಞೆಗೆ ತಲೆಬಾಗಿ ನಮ್ಮ ರೈತರ ತಲೆಯ ಮೇಲೆ ಚಪ್ಪಡಿಗಳನ್ನು ಎಳೆದರು. ಬಂಡವಾಳಶಾಹಿ ಗೆದ್ದಿಲ್ಲವೆಂದು ಹೇಗೆ ಹೇಳುವುದು? ಸಮಾಜವಾದವು ಗೆದ್ದೂ ಇಲ್ಲ, ಸೋತೂ ಇಲ್ಲ; ಏಕೆಂದರೆ ಈವರೆಗೆ ನಾವು ಅದನ್ನು ಪ್ರಾಯೋಗಿಕವಾಗಿ ಅನ್ವಯಿಸಿಯೇ ಇಲ್ಲ. ಪ್ರಜಾಪ್ರಭುತ್ವವೆಂಬುದರ ಪಾಡೂ ಅದೇ ಆಗಿದೆ.

ಇಂದು ಒಂದು ಸಿದ್ಧಾಂತಕ್ಕೆ ಬದ್ಧನಾಗಿರುವುದಾಗಿ ಹೇಳುವ ಮಹಾಶಯ ನಾಳೆ ಇನ್ನೊಂದಕ್ಕೆ ಜಿಗಿಯುತ್ತಾನೆ. ಇಂದು ಮತೀಯವಾದಿಯೆಂದು ಕರೆದುಕೊಳ್ಳುವವನು ಒಮ್ಮೆಲೇ ಶುಭ್ರನಾಗಿ ನಾಳೆ ಜಾತ್ಯತೀತ ವ್ಯಕ್ತಿಯಾಗಿ ಕಂಗೊಳಿಸುತ್ತಾನೆ. ನಿನ್ನೆಯ ಮನಮೋಹನ್ ಸಿಂಗ್ ಮತ್ತು ಚಿದಂಬರಂ ಇವತ್ತು ಹೊಸ ಸೈದ್ಧಾಂತಿಕ ಪೋಷಾಕನ್ನು ಧರಿಸಿದ್ದಾರೇನೋ ಎಂಬಂತೆ ವ್ಯವಹರಿಸಲಾಗುತ್ತದೆ. ಇದಕ್ಕೆಲ್ಲಾ ರಾಜಕೀಯ ನೆಲೆ ಯಾವುದು? ಹಿಂದುಳಿದವರು ಆಳ್ವಿಕೆಯಲ್ಲಿ ಭಾಗಿಗಳಾಗಲು, ಅಭಿವೃದ್ಧಿ ಹೊಂದಲು ಮತ್ತು ತಮ್ಮೆಲ್ಲ ಸಮಸ್ಯೆಗಳಿಗೆ ಪರಿಹಾರ ದೊರಕಿಸಿಕೊಳ್ಳಲು ಅನುವಾಗುವಂತೆ ಸೂಕ್ತ ರಾಜಕೀಯ ವ್ಯವಸ್ಥೆ ಮಾಡುವುದಾಗಿ ಹೇಳುತ್ತಾ, ಹೊಸ ಹೊಸ ಮಿಶ್ರಣಗಳ ಪ್ರಯೋಗ ಮಾಡುವುದೇ ಆ ನೆಲೆ. ಈ ಅದ್ಭುತ ಪ್ರಕ್ರಿಯೆಯಲ್ಲಿ ವಾಜಪೇಯಿ - ಫರ್ನಾಂಡಿಸ್ - ಕರುಣಾನಿಧಿ ಒಂದಾಗುತ್ತಾರೆ. ಆಮೇಲೆ ಸೋನಿಯಾ - ಕರುಣಾನಿಧಿ - ಲಾಲೂ ಪ್ರಸಾದ್ ಜೊತೆಗೂಡುತ್ತಾರೆ. ಕಮ್ಯುನಿಸ್ಟ್ ಸಿದ್ಧಾಂತಿಗಳು ಇದನ್ನೆಲ್ಲಾ ನೋಡುತ್ತಾ ದಿಗ್ಭ್ರಮೆಗೊಳ್ಳುತ್ತಾರೆ. ಇಲ್ಲವೆ ಹತ್ತಿರಕ್ಕೆ ಹೋಗಿಯೂ ದೂರದಲ್ಲೇ ನಿಲ್ಲುತ್ತಾ ವಾದಪ್ರಿಯರಾಗುತ್ತಾರೆ. ಎಷ್ಟೋ ವೇಳೆ ಈ ಮಿಶ್ರಣಗಳು ಸ್ವಯಂ ಕೃತಾರ್ಥರಾಗಲು ಕೆಲವರಿಗೆ ಮುಖ್ಯಹಾದಿ. ಅದು ಜಯಲಲಿತಾಗೆ ಮಾತ್ರ ಅನ್ವಯಿಸುವುದಿಲ್ಲ, ದೇವೇಗೌಡರಿಗೂ ಅನ್ವಯಿಸುತ್ತದೆ. ವೈಯಕ್ತಿಕ ಆಶಯಗಳಿಂದಾಗಿ ಕೆಲವರನ್ನು ಒಳಕ್ಕೆ ಬಿಟ್ಟುಕೊಳ್ಳಬಹುದು ಇಲ್ಲವೆ ಹೊರಗಿರಿಸಬಹುದು, ಸದ್ಯದ ಸೋನಿಯಾ ಮುಲಾಯಂ ಸಂಬಂಧವಿದ್ದಂತೆ. ಇಂತಹ ಸನ್ನಿವೇಶಗಳಲ್ಲಿ ಸೈದ್ಧಾಂತಿಕ ಚೌಕಟ್ಟಿಗೆ ಭಂಗ ಬರುತ್ತದೇನೋ ಎಂಬ ತವಕ ಸಾಧ್ಯ, ಆದರೆ ಮಡಿವಂತಿಕೆ ಸಲ್ಲದು.

ಕೆಲವು ವಾಸ್ತವಿಕ ಸಂಗತಿಗಳನ್ನು ಗಮನಿಸೋಣ : ಬುದ್ಧನ ಹೆಸರಿಗೆ ಕಲಂಕ ತರುವಂತೆ ''ಬುದ್ಧನು ಮುಸಿನಗುತ್ತಾನೆ''ಎಂಬ ಅಂಕಿತದಲ್ಲಿ ನಮ್ಮ ದೇಶವು ಅಣ್ವಸ್ತ್ರ ಪರೀಕ್ಷೆ ನಡೆಸಿತು. ಮಾನವತೆಗೆ ಅದೊಂದು ಸವಾಲು. ಹೊರಗಿನವರನ್ನು ಹಾಗೂ ಒಳಗಿನವರನ್ನು ಮಣಿಸುವ ಉದ್ದೇಶ ಇದರಲ್ಲಿದೆ. ''ನನ್ನ ರೆಟ್ಟೆ ಗಟ್ಟಿಯಾಗಿದೆ, ಎಚ್ಚರ'' ಎಂದು ನೆರೆ ದೇಶದವರಿಗೆ ಹೇಳುವ ಹುನ್ನಾರದ ಹಿಂದೆ ಸ್ವದೇಶದ ಬಗೆಗಿನ ದುರಭಿಮಾನವೂ ಎದ್ದು ಕಾಣುತ್ತದೆ. ಅದು

ಅಹಂಕಾರ ಮತ್ತು ದ್ವೇಷದ ಪ್ರದರ್ಶನವಾಗಿ, ದೇಶದ ಸಂಪನ್ಮೂಲವು ದುರುಪಯೋಗವಾಗುವ ಸಂಭವ ಹೆಚ್ಚು, ದೇಶದ ಸುರಕ್ಷತೆಯ ಸಾಧ್ಯತೆ ಕಡಿಮೆ. ಏಕೆಂದರೆ, ನಮ್ಮ ದೇಶಕ್ಕೂ ಅಪಾಯ ಒದಗಬಾರದಂತೆ ಅಣ್ವಸ್ತ್ರವನ್ನು ನೆರೆ ರಾಷ್ಟ್ರಗಳ ಮೇಲೆ ಪ್ರಯೋಗಿಸಲು ಬರುವುದಿಲ್ಲ. ಈ ಅಸ್ತ್ರವನ್ನು ವೃದ್ಧಿಪಡಿಸಿದ ನಂತರವೇ ಕಾರ್ಗಿಲ್ ಯುದ್ಧ ಸಂಭವಿಸಿದ್ದು. ಅಣ್ವಸ್ತ್ರವು ಭಾರತದಲ್ಲಿದ್ದಂತೆ ಪಾಕಿಸ್ತಾನದಲ್ಲೂ ಇದೆ, ಚೀಣಾದಲ್ಲೂ ಇದೆ. ಅವನ್ನು ಬಳಸಿದರೆ ನೆರೆರಾಷ್ಟ್ರದವರು ಮಾತ್ರವೇ ಸಾಯುವಂತಹ ಭೌಗೋಳಿಕ ರಚನೆ ನಮ್ಮದಲ್ಲ. ಒಂದು ಲಕ್ಷ ಕೋಟಿ ಡಾಲರುಗಳಷ್ಟು ವಿದೇಶಿ ವಿನಿಮಯವನ್ನು ನಮ್ಮಲ್ಲಿ ಶೇಖರಿಸಿಟ್ಟುಕೊಂಡರೂ ನಮ್ಮ ದೇಶ ಅಮೆರಿಕಾ, ವಿಶ್ವ ಬ್ಯಾಂಕ್ ಮತು ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯೆದುರು ಮಂಡಿಯೂರಿ ನಿಲ್ಲುವಂತಿದ್ದರೆ ಅಣ್ವಸ್ತ್ರ ಹೇಗೆ ಸಹಾಯ ಮಾಡುತ್ತದೆ? ಅದು ನಮ್ಮ ಸಂಪನ್ಮೂಲವನ್ನು ವ್ಯರ್ಥ ಮಾಡಿದಂತೆಯೇ ಸರಿ. ಅಣ್ವಸ್ತ್ರ ತಯಾರಿಸಿದ್ದೇವೆಂದು ನಮ್ಮ ರೈತರಿಗೆ ಬೆಂಬಲ ನೀಡುವಲ್ಲಿ ಏನಾದರೂ ಸಮರ್ಥರಾಗಿದ್ದೇವೆಯೇ? ವಿಶ್ವ ಬ್ಯಾಂಕ್ ಆಣತಿಯಂತೆ ನಮ್ಮ ಶಿಕ್ಷಣವನ್ನು ದುಬಾರಿ ಮಾಡಿ, ಜನಸಾಮಾನ್ಯರಿಗೆ ಅದು ಎಟುಕದಂತೆ ಮಾಡುತ್ತಿರುವಾಗ ಅಣ್ವಸ್ತ್ರ ಏನು ಮಾಡುತ್ತದೆ? ನಮ್ಮ ಕುಡಿಯುವ ನೀರು , ನೀರಾವರಿ, ವಿದ್ಯುಚ್ಛಕ್ತಿ , ಮುಂತಾದುವನ್ನು ನಿಯಂತ್ರಿಸುವುದರಲ್ಲೂ ವಿಶ್ವ ಬ್ಯಾಂಕ್‌ಗೆ ಸ್ಥಾನ ಕಲ್ಪಿಸಿಕೊಟ್ಟಿದ್ದೇವೆ. ಗ್ರಾಮಾಂತರ ರಸ್ತೆ ದುರಸ್ತಿಗೆ ಯಾವುದಾದರೂ ದೇಶವು ವಿಶ್ವ ಬ್ಯಾಂಕಿನಿಂದ ಸಾಲ ಪಡೆಯುತ್ತಿದ್ದರೆ ಅದು ಭಾರತ !

ಇದರಿಂದ ನಮ್ಮ ಮುಂದೆ ಎರಡು ಚಿತ್ರಗಳು ಗೋಚರಿಸುತ್ತವೆ. ಒಂದು ಕಡೆ ನಮ್ಮ ದೇಶದ ಒಂದು ವಿಭಾಗವು ಕ್ರಮೇಣ ಆಂತರಿಕವಾಗಿ ಅಂಚಿಗೆ ದೂಡಲ್ಪಡುತ್ತಿದೆ. ಆ ವಿಭಾಗದವರಿಗೆ ಮನೆ, ಅಕ್ಷರ, ಆಹಾರ, ಬಟ್ಟೆ , ಉದ್ಯೋಗ, ಎಲ್ಲದಕ್ಕೂ ಮುಗ್ಗಟ್ಟು , ಅವರಿಗೆ ಅತಿ ಸಾಮಾನ್ಯ ಹಕ್ಕುಗಳು ಸಹ ಲಭ್ಯವಿಲ್ಲ. ಇನ್ನೊಂದೆಡೆ, ದೇಶದ ಒಂದು ಚಿಕ್ಕ ವಿಭಾಗದವರು ವಿದೇಶಿ ಬಂಡವಳಿಗರ ತೊತ್ತಿನವರಂತೆ ನಡೆದುಕೊಳ್ಳುತ್ತಾ ಎಲ್ಲ ವೈಭೋಗಗಳನ್ನೂ ಅನುಭವಿಸುತ್ತಿದ್ದಾರೆ. ಇದು ಒಂದು ಚಿತ್ರವಾದರೆ ಇನ್ನೊಂದು ಭೀಕರ ಚಿತ್ರವೂ ನಮ್ಮ ಮುಂದಿದೆ. ಅದೇನೆಂದರೆ, ಇಷ್ಟೆಲ್ಲಾ ಸಂಪತ್ತಿದ್ದರೂ ಸಹ ದೇಶವು ಅಂತರರಾಷ್ಟ್ರೀಯವಾಗಿ ಮೂಲೆಗೆ ನೂಕಲ್ಪಡುತ್ತಿದೆ; ಕೆಲವು ದೊಡ್ಡಣ್ಣ ದೇಶಗಳ ಆಜ್ಞಾನುವರ್ತಿಯಾಗಿ ನಡೆದುಕೊಳ್ಳುತ್ತಿದೆ. ಅದಕ್ಕೆ ಶೋಭಾಯಮಾನವಾದ ಹೆಸರುಗಳನ್ನು ನೀಡುತ್ತಾರೆ. ವಿದೇಶಿ ನೇರ ಬಂಡವಾಳ ಹೂಡಿಕೆ, ಮುಕ್ತ ಮಾರುಕಟ್ಟೆಯ ಆರ್ಥಿಕತೆ, ಜಾಗತೀಕರಣ, ಇತ್ಯಾದಿಗಳು ಅಂತಹ ರಂಜನೀಯ ಶಬ್ದಗಳು. ನ್ಯಾಯಮೂರ್ತಿ ಬಿ. ಪಿ. ಜೀವನ ರೆಡ್ಡಿ ಒಂದು ಲೇಖನದಲ್ಲಿ ಐದಾರು ವರ್ಷಗಳ ಹಿಂದೆ ಹೇಳಿದ್ದಿದು: "ಅಸಮಾನವಾದ ವಾಣಿಜ್ಯ ಒಪ್ಪಂದಗಳಿಂದಾಗಿ ಮಾರುಕಟ್ಟೆ ವಿಸ್ತಾರವಾಯಿತು, ನಿಜ, ಆದರೆ ದೇಶದ ಸಾರ್ವಭೌಮತ್ವ ಕುಗ್ಗಿಹೋಗಿದೆ. " ಪ್ರಬಲ ರಾಷ್ಟ್ರಗಳೆದುರು ನಮ್ಮ ದೇಶ ಕುಬ್ಜವಾಗಿದ್ದರೂ ಆಂತರಿಕವಾಗಿ

ತೀವ್ರವಾದ ಹಿಂಸೆ ಕೊಟ್ಟು ಜನಸಾಮಾನ್ಯರನ್ನು ಕಂಗಾಲಾಗಿಸುವುದರಲ್ಲಿ ಸರ್ಕಾರವು ಹಿಂದೆ ಬಿದ್ದಿಲ್ಲ! ಜೀವನ ರೆಡ್ಡಿ ಮುಂದುವರಿದು ಹೇಳುತ್ತಾರೆ :"ಮುಕ್ತ ಮಾರುಕಟ್ಟೆ, ಜಾಗತೀಕರಣ, ಇಂತಹ ಪರಿಕಲ್ಪನೆಗಳನ್ನು ಮುಂದು ಮಾಡಿದ್ದು ಅಮೆರಿಕಾ ಮತ್ತಿತರ ಅಭಿವೃದ್ಧ ದೇಶಗಳು, ಅಂದರೆ ಅವೆಲ್ಲಾ ಅವರಿಗೆ ಹಿತಕರವಾಗಿಯೇ ಇರಬೇಕು. ಬೇರೆಯವರಿಗೆ ಏನಾದರೇನಂತೆ! ಅನಭಿವೃದ್ಧ ದೇಶಗಳಿಗೆ ಏನೋ ಬಳುವಳಿ ನೀಡಬೇಕೆಂದೇನೂ ಆ ದೇಶಗಳ ಆಶಯವಾಗಿರಲಿಲ್ಲ. ಏಷ್ಯಾ, ಆಫ್ರಿಕಾ, ಮತ್ತು ದಕ್ಷಿಣ ಅಮೆರಿಕಾ ದೇಶಗಳ ಆರ್ಥಿಕತೆಗಳಿಗೆ ಪೆಟ್ಟು ಬೀಳುತ್ತಿರುವುದನ್ನು ಗಮನಿಸಿದರೆ ಸಾಕು, ಇದು ಸ್ಪಷ್ಟವಾಗಿ ತಿಳಿಯುತ್ತದೆ."

ಇದರ ಪರಿಣಾಮವೇನಾಗಿದೆ? ಅಭಿವೃದ್ಧ ದೇಶಗಳು ಭಾರತವನ್ನು ಅಂಚಿಗೆ ದೂಡುತ್ತವೆ ಮತ್ತು ಭಾರತದ ಆಳುವ ವರ್ಗ ಅಥವಾ ಪ್ರಭುತ್ವವು ಈಗಾಗಲೇ ವಂಚಿತರಾಗಿರುವ ಜನವಿಭಾಗದವರನ್ನು ಇನ್ನೂ ದೂರಕ್ಕೆ ಹೊರದೂಡುತ್ತದೆ. ಸ್ಟಾಕ್ ಮಾರ್ಕೆಟ್ ತಿಮಿಂಗಲಗಳು, ರಿಲಯನ್ಸ್, ನಾರಾಯಣಮೂರ್ತಿ, ಕೇತನ್ ಪಾರೇಖ್, ರಮೇಶ ಗೆಲ್ಲಿ ಮುಂತಾದವರು ಹಸನಾದ ಜೀವನ ನಡೆಸುತ್ತಾ ದೇಶವನ್ನು ಮಹಾಕೂಪಕ್ಕೆ ತಳ್ಳುತ್ತಾರೆ. ವಾಜಪೇಯಿ, ಚಿದಂಬರಂ, ಇದನ್ನೆಲ್ಲಾ ಆಯೋಜಿಸುತ್ತಾರೆ. ಸಹಜವಾಗಿಯೇ ಜನ ಇದನ್ನು ವಿರೋಧಿಸಲು ತವಕಿಸುತ್ತಾರೆ. ಪ್ರಭುತ್ವದ ದೃಷ್ಟಿಯಲ್ಲಿ ಹೀಗೆ ಪ್ರತಿರೋಧ ಒಡ್ಡುವವರೆಲ್ಲಾ ಕಾನೂನು ಉಲ್ಲಂಘಿಸುವ ದುಷ್ಟ ಪ್ರಜೆಗಳು. ಅವರನ್ನು ಬಗ್ಗು ಬಡಿಯಬೇಕು, ಇಲ್ಲವಾಗಿಸಬೇಕು. ಅದಕ್ಕಾಗಿ ಬೇಕಾದರೆ ಅವರನ್ನು ತೀವ್ರಗಾಮಿಗಳೆಂದೋ ಆತಂಕಕಾರಿಗಳೆಂದೋ ಭಯೋತ್ಪಾದಕರೆಂದೋ ಕರೆದು ಕೊಲ್ಲಬಹುದು. ಆಡ್ವಾನಿ ಗೃಹಮಂತ್ರಿಯಾದ ತರುವಾಯದಲ್ಲಿ ಮುಖ್ಯಮಂತ್ರಿಗಳನ್ನೆಲ್ಲಾ ಸೇರಿಸಿ, ಸಭೆ ನಡೆಸಿದ್ದರು. ಅಲ್ಲಿ ಅಡ್ವಾನಿ ಗುಡುಗಿದರು: "ನಕ್ಸಲೀಯರು ತೀವ್ರಗಾಮಿಗಳು, ಅವರು ಮಾನವತೆಯ ಶತ್ರುಗಳು, ಕಾನೂನನ್ನು ಧಿಕ್ಕರಿಸುವವರು. ಅವರ ಪ್ರಾಬಲ್ಯಕ್ಕೂ ಆರ್ಥಿಕ - ಸಾಮಾಜಿಕ ಹಿಂದುಳಿದಿರುವಿಕೆಗೂ ಯಾವ ಸಂಬಂಧವೂ ಇಲ್ಲ. ಯಾವುದೋ ಪ್ರದೇಶದಲ್ಲಿ ಅಭಿವೃದ್ಧಿಯಾಗಿಲ್ಲದಿರುವುದರಿಂದ ಅವರು ಹುಟ್ಟಿಕೊಂಡಿದ್ದಾರೆಂದು ಹೇಳುವುದು ಅವರಿಗೆ ಅನಗತ್ಯವಾದ ಗೌರವ ಕಟ್ಟಿಕೊಡುವಂತಹ ಮೂರ್ಖತನ. ಅದು ಕೇವಲ ಕಾನೂನು ಮತ್ತು ಶಿಸ್ತಿನ ಪ್ರಶ್ನೆ. ಅದು ದೇಶದ ಸುಭದ್ರತೆಗೆ ಧಕ್ಕೆ ಉಂಟುಮಾಡುವಂತಹ ಪಿಡುಗು."

ಈ ಆರ್ಭಟಕ್ಕೆ ಬೆನ್ನೆಲುಬಾಗಿ ನಿಲ್ಲುವಂತೆ ನಮ್ಮ ಶ್ರೇಷ್ಠ ನ್ಯಾಯಾಲಯಗಳು ಸಂವಿಧಾನಕ್ಕೆ ನವೀನ ವ್ಯಾಖ್ಯಾನ ನೀಡುವ ಕ್ರಿಯೆಯಲ್ಲಿ ಮುಂದಾಗುತ್ತವೆ. ಆಗ ಜನಸಾಮಾನ್ಯರಿಗೆ ಮುಷ್ಕರ ಹೂಡುವ ಹಕ್ಕು, ರಸ್ತೆ ತಡೆ ಮೂಲಕ ಪ್ರತಿಭಟಿಸುವ ಹಕ್ಕು, ಬಂದ್ ಆಚರಿಸುವ ಹಕ್ಕು, ಉದ್ಯೋಗ ಕಳೆದುಕೊಳ್ಳದಿರುವ ಹಕ್ಕು, ಇವೆಲ್ಲಾ ಇಲ್ಲವಾಗುತ್ತವೆ. ಅಂದರೆ, ಪ್ರಭುತ್ವದ ಅಂಗವಾಗಿ ನ್ಯಾಯಾಂಗವು ಕಾರ್ಯಾಂಗದ ಸ್ವರೂಪವನ್ನು ಮೈಗೂಡಿಸಿಕೊಳ್ಳುತ್ತದೆ. ಆಗ ಯಾವುವೂ ಸಾಮಾಜಿಕ ಮತ್ತು ಆರ್ಥಿಕ ಪ್ರಶ್ನೆಗಳಾಗುವುದಿಲ್ಲ. ಎಲ್ಲವೂ ಕಾನೂನಿನ ಮತ್ತು ಸುವ್ಯವಸ್ಥೆಯ, ಶಿಸ್ತಿನ, ಪ್ರಶ್ನೆ ಅಷ್ಟೇ. ನಕ್ಸಲೀಯ ಸಿದ್ಧಾಂತವನ್ನು ವಿರೋಧಿಸುವುದು ಬೇರೆ, ಆ ಸಿದ್ಧಾಂತವನ್ನು ಕೇವಲ ಕಾನೂನಿನ ಪ್ರಶ್ನೆಯೆಂದು ನೋಡುವುದೇ ಬೇರೆ.

ಇದರ ಪರಿಸಮಾಪ್ತಿ ಹೇಗೆಂದರೆ, ಜನಸಾಮಾನ್ಯರ ಯಾವ ಹೋರಾಟವೂ, ಪ್ರತಿರೋಧವೂ, ಅಂಗೀಕಾರಾರ್ಹವಲ್ಲ; ಏನಿದ್ದರೂ ಶ್ರೀರಾಮನ ಭಜನೆ ಮಾಡಿಕೊಂಡು, ಪ್ರಭುಗಳು ಹೇಳಿದ್ದನ್ನು ಕೇಳಿಕೊಂಡು ಬಿದ್ದಿರಬೇಕು! ಇಷ್ಟು ಶತಮಾನಗಳಲ್ಲಿ ನಾಗರಿಕ ಸಮಾಜ ಸಾಧಿಸಿದ್ದು ಇದನ್ನೇ ಏನು?

ಮಾರ್ಕ್ಸ್‌ವಾದಿಗಳು ಸಮಾಜದ ವಿಕಾಸವನ್ನು ಗುರುತಿಸುವ ವಿಧಾನವು ಬೇರೆಯೇ ಇದೆ. ಬಂಡವಳಿಗರ ಹಾಗೂ ಭೂಮಾಲಿಕರ ಪ್ರಭುತ್ವದ ಜಾಗದಲ್ಲಿ ದುಡಿಯುವ ಜನರ ಪ್ರಭುತ್ವವನ್ನು ಸ್ಥಾಪಿಸುವುದು ಕಮ್ಯುನಿಸ್ಟರ ಉದ್ದೇಶ , ಜವಾಬ್ದಾರಿ ಮತ್ತು ಹಕ್ಕು. ಇಂದಿನ ಸಂವಿಧಾನವು ಅದಕ್ಕೆ ಅಡ್ಡಿಯಾದರೆ ಬೇರೊಂದು ಸಂವಿಧಾನ ರಚಿಸಿಕೊಳ್ಳುವುದು ನಮ್ಮ ದೇಶದ ಪ್ರಜೆಗಳು ಕೈಗೊಳ್ಳಬೇಕಾದ ಒಂದು ಅನಿವಾರ್ಯ ಕ್ರಮ. ಸದ್ಯದ ಸನ್ನಿವೇಶವನ್ನು ವಿಶ್ಲೇಷಿಸುವುದು ಹಾಗೂ ಅರ್ಥೈಸುವುದು ಕೇವಲ ಮೋಜಿಗಾಗಿ ಅಥವಾ ಬೌದ್ಧಿಕ ವ್ಯಾಪಾರಕ್ಕಾಗಿ ಅಲ್ಲ. ಅದನ್ನು ಬದಲಾಯಿಸಲು ಸಾಮೂಹಿಕ ಮಧ್ಯಪ್ರವೇಶ ಮಾಡುವ ಸಲುವಾಗಿ ವಿಶ್ಲೇಷಣೆ, ಎಂಬುದು ವೈಜ್ಞಾನಿಕ ನಿಲುವು. ಈ ಸಂಬಂಧದಲ್ಲಿ ನಾವು ಗಮನಿಸಬೇಕಾದ ಕೆಲವು ಅಂಶಗಳಿವೆ :

(ಅ) ಸಮಾಜದ ರಚನೆಯ ಪರಿಣಾಮವಾಗಿ ಉಂಟಾಗುವ ದುರವಸ್ಥೆಯನ್ನು ನಿವಾರಿಸಲು ಆ ರಚನೆಯನ್ನು ಮೂಲದಲ್ಲಿ ಬದಲಾಯಿಸಬೇಕು. ಹಾಗೆ ಮಾಡದೆ ತೇಪೇದಾರಿ ಕೆಲಸ ಮಾಡುತ್ತಿದ್ದರೆ, ಒಂದೆರಡು ತೂತುಗಳನ್ನು ಹೊಲೆಯಬಹುದು, ಹೊಸ ವಸ್ತ್ರವನ್ನು ಸೃಷ್ಟಿಸಲಾಗುವುದಿಲ್ಲ. ಏನೆಲ್ಲಾ ಕಾರ್ಪಣ್ಯಗಳ ಬಗ್ಗೆ ಅನುಕಂಪ, ಹಿಂದುಳಿದವರ ಬಗ್ಗೆ ಕಾಳಜಿ, ಎಂತೆಂತಹ ಮೀಸಲಾತಿ ಪ್ರಕರಣಗಳು! ಆದರೆ ಅವುಗಳೆಲ್ಲಾ ನಿರರ್ಥಕವಾಗದಿರಬೇಕಾದರೆ ಮೊದಲಿಗೆ ಭೂಮಿಯ ಹಂಚಿಕೆ ಆಗಬೇಕೆಂಬ ತಿಳುವಳಿಕೆ ಬೇಡವೆ? ಅದಾಗದೆ ಅನಕ್ಷರತೆ, ಅನಾರೋಗ್ಯ, ಅಪೌಷ್ಟಿಕತೆ, ಯಾವುದೂ ತೊಲಗುವುದಿಲ್ಲ. ರಾಚನಿಕ ಮಾರ್ಪಾಡು ಇಲ್ಲದೆಯೇ ಸಾಮಾಜಿಕ ಬದಲಾವಣೆ ತರುತ್ತೇವೆಂಬ ಭ್ರಮೆಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಇನ್ನು ಆ ಭ್ರಮೆಗೆ ಅರ್ಥವಿಲ್ಲ. ನಮ್ಮ ಶ್ರೇಣೀಕೃತ ಸಮಾಜದಲ್ಲಿ ವರ್ಗ, ಜಾತಿ , ಬುಡಕಟ್ಟು, ಲಿಂಗ, ಎಂಬಿತ್ಯಾದಿ ಆಧಾರಗಳಿಂದ ಮೇಲು-ಕೀಳು ಎಂಬ ವಿಂಗಡಣೆ ಇದೆ. ಅದಕ್ಕೆ ಆಧಾರವಾದ ಅಂಶಗಳನ್ನು ಹಾಗೆಯೇ ಉಳಿಸಿಕೊಂಡು ಅವನ್ನು ನಿವಾರಣೆ ಮಾಡಿಕೊಳ್ಳುವ ಆಸೆ ಈಡೇರಲು ಸಾಧ್ಯವಿಲ್ಲ.

(ಆ) ಈಗಿನ ಅಸಮಾನತೆಗೆ ಹೊಸ ಆಯಾಮ ಕಲ್ಪಿಸಿಕೊಡುವಂತಹ ನವ ಉದಾರೀಕರಣ ಸೂತ್ರಗಳು ಜಾರಿಗೆ ಬರುತ್ತಿವೆ. ಅದರಿಂದಾಗಿ ಆರೋಗ್ಯ, ಶಿಕ್ಷಣ , ಮುಂತಾದ ಕ್ಷೇತ್ರಗಳಲ್ಲಿ ಸರ್ಕಾರವು ತೊಡಗಿಸುವ ಹಣದಲ್ಲಿ ಕಡಿತ ಉಂಟಾಗುತ್ತಿದೆ. ಈಗಾಗಲೇ ವಂಚಿತರ ಸಂಖ್ಯೆ ಅಗಾಧವಿದೆ; ಆ ಸಂಖ್ಯೆ ಹೆಚ್ಚುತ್ತಾ ಹೋಗುತ್ತದೆ. "ಸರ್ಕಾರದ ಶಾಲೆ, ಆಸ್ಪತ್ರೆಗಳಿಲ್ಲ; ಆದ್ದರಿಂದ ಉತ್ತಮವಾದ ಖಾಸಗಿ ಸೇವೆ ಪಡೆದುಕೊಳ್ಳಿ; ಪಡೆಯಲು ಆರ್ಥಿಕ ಚೈತನ್ಯವಿಲ್ಲದಿದ್ದರೆ ನಿಮ್ಮ

ತಲೆ ಹಿಡಿಯಲು ದೆವ್ವವನ್ನು ಆಹ್ವಾನಿಸಿ! ಸರ್ವರಿಗೆ ಸಮಬಾಳು ಎಂದು ಹಾಡಿದ ಕವಿಯನ್ನು ಹುಚ್ಚನೆಂದು ಮರೆತುಬಿಡಿ''. ಇದು ಪ್ರಭುತ್ವದ ಇಂದಿನ ರಾಗ. ಮಾರುಕಟ್ಟೆ ನಿರ್ಧರಿಸುವ "ಅಭಿವೃದ್ಧಿ'' ಈ ತೆರನಾದದ್ದು. ಅದರಿಂದ ಸಾಮಾಜಿಕ ಅನೈಕ್ಯತೆ ಇನ್ನೂ ಹೆಚ್ಚಿದರೆ ಅದನ್ನು ಕಾನೂನು ವ್ಯವಸ್ಥೆಯಿಂದ ಸರಿಪಡಿಸುವ ಕೆಚ್ಚು ಪ್ರಭುತ್ವಕ್ಕಿದೆ. "ನೀರಿಲ್ಲದಿದ್ದರೆ ಹೋಗಲಿ, ಚಿಂತಿಸಬೇಡಿ, ಪೆಪ್ಸಿ ಕುಡಿಯಿರಿ, ಬಿಸ್ಲೇರಿ ಕುಡಿಯಿರಿ, ಸುಮ್ಮನೆ ದಾಂಧಲೆ ಮಾಡಬೇಡಿ '' ಎನ್ನುವ ಪ್ರಭುತ್ವದ ಪ್ರಜ್ಞೆ ಹೀನಾಯವಾದ್ದು.

ಪ್ರಭುತ್ವವು ಬಂಡವಳಿಗರ ಮತ್ತು ಭೂಮಾಲಿಕರ ಪರವಾದ ನೀತಿಗಳಿಗೆ ಸೊಪ್ಪು ಹಾಕುವುದರಿಂದ ದೂರ ದೂಡಲ್ಪಡುವವರ ಸಂಖ್ಯೆ ಹೆಚ್ಚುತ್ತಲೇ ಇದೆ. ಅದಕ್ಕೆ ಅನೇಕ ಮಾಪಕ ಸಾಧನಗಳಿವೆ. ಉದಾಹರಣೆಗೆ, ಸಮಗ್ರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮವೆಂಬುದೊಂದಿದೆ. ಅದರಡಿಯಲ್ಲಿ ಫಲಾನುಭವಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಗಣನೀಯವಾಗಿ ಕಡಿಮೆಯಾಗಿದೆ. ಒಂದು ಅಂಕಿ -ಸಂಖ್ಯೆ ನೋಡುವುದಾದರೆ, ೧೯೯೩ರಲ್ಲಿ ೨೫.೩೯ ಲಕ್ಷ ಇದ್ದದ್ದು ೯೬-೯೭ ರಲ್ಲಿ ೧೪ ಲಕ್ಷಗಳಿಗೆ ಇಳಿದಿತ್ತು. ಅಂದರೆ , ಮಿಕ್ಕವರು ಅನುಕೂಲವಂತರಾದರೆಂದು ಅರ್ಥವಲ್ಲ. ಅವರು ಕನಿಷ್ಠ ಸೌಲಭ್ಯಗಳಿಂದಲೂ ವಂಚಿತರಾಗಿ ಸಮಾಜದ ಅಂಚಿಗೆ ನೂಕಲ್ಪಟ್ಟರು ಎಂದರ್ಥ. ಅಂತಹ ಹತ್ತಾರು ಬೇರೆ ಯೋಜನೆಗಳ ಹೆಸರಿನಲ್ಲಿ ಹಣ ನುಂಗಿದವರೇ ಹೆಚ್ಚು. ಬರ ಪರಿಹಾರಕ್ಕೆಂದು ನೀಡಲಾದ ಹಣವನ್ನೇ ಲಪಟಾಯಿಸುವ ಜನರ ನಾಡು ನಮ್ಮದು. ಮಹೋನ್ನತ ಭಾರತೀಯ ಸಂಸ್ಕೃತಿಗೆ ಇವೆಲ್ಲಾ ಕೀರ್ತಿ ಪತಾಕೆಗಳಾಗಿರಬೇಕು! ಅದಿರಲಿ, ಮುಖ್ಯವಾಗಿ ಗಮನಿಸಬೇಕಾದ ವಿಷಯವೇನೆಂದರೆ ಈ ಯಾವ ಯೋಜನೆಯಲ್ಲೂ ಸಾಮಾಜಿಕ - ಆರ್ಥಿಕ ಸಂಬಂಧಗಳಲ್ಲಿ ಮೂಲಭೂತ ರಾಚನಿಕ ಬದಲಾವಣೆಗಳನ್ನು ಗುರಿಯಾಗಿ ಇಟ್ಟುಕೊಳ್ಳಲಾಗಿಲ್ಲ. ಈ ಯೋಜನೆಗಳನ್ನು ಕಾರ್ಯಗತಗೊಳಿಸುವ ಜವಾಬ್ದಾರಿಯನ್ನು ಪಂಚಾಯಿತಿ ವ್ಯವಸ್ಥೆಗೆ ನೀಡಲಾಗಿದೆ. ಸಂವಿಧಾನದ ೭೩ನೆಯ ತಿದ್ದುಪಡಿಯೊಂದನ್ನು ೧೯೯೨ರಲ್ಲಿ ತರಲಾಯಿತು. ಅದರಂತೆ ಇಪ್ಪತ್ತೆರಡು ವಿಷಯಗಳು ಪಂಚಾಯಿತಿ ಆಡಳಿತಕ್ಕೆ ಸೇರಿವೆ. ಅವುಗಳ ಅನುಷ್ಠಾನಕ್ಕೆ ಹಣವನ್ನು ಮಂಜೂರು ಮಾಡಿಲ್ಲ. ಮತ್ತು ಮಾಡಿದ್ದಾಗ ನುಂಗಣ್ಣಗಳ ಹಾವಳಿಯಿಂದಾಗಿ ಅದು ಯಾರಿಗಾಗಿ ಮಂಜೂರಾಗಿರುತ್ತದೋ ಅವರಿಗೆ ಮುಟ್ಟುವುದಿಲ್ಲ.

ಇದರ ಸಾರಾಂಶ ಸ್ಪಷ್ಟವಾಗಿದೆ. ನಮ್ಮ ಗ್ರಾಮೀಣ ಸಮಾಜದಲ್ಲಿ ಊಳಿಗಮಾನ್ಯ ಪದ್ಧತಿಯ ಹಿಡಿತ ಇನ್ನೂ ಸಡಿಲವಾಗಿಲ್ಲ. ಉತ್ಪಾದನಾ ವಿಧಾನದಲ್ಲಿ ಕೆಲವೊಮ್ಮೆ ಬಂಡವಾಳಶಾಹಿ ಪ್ರಕ್ರಿಯೆಯು ಕಂಡುಬಂದಿದ್ದರೂ ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ತರಗಳಲ್ಲಿ ಇನ್ನೂ ಊಳಿಗಮಾನ್ಯ ಪದ್ಧತಿಯ ತತ್ವಗಳೇ ಬಲವಾಗಿವೆ. ಆದ್ದರಿಂದ ಪಂಚಾಯಿತಿ ವ್ಯವಸ್ಥೆಯು ಎಷ್ಟು ಫಲಪ್ರದವಾಗಬೇಕಿತ್ತೋ ಅಷ್ಟು ಆಗಿಲ್ಲ. ಅಲ್ಲಿಯ ಪ್ರಜಾಪ್ರಭುತ್ವದ ಸೀಮಿತತೆಯು ಶಾಸನಸಭೆ ಮತ್ತು ಲೋಕಸಭೆಗಳ ಸಂಬಂಧದಲ್ಲಿ ಕಾಣಬರುವ ಪ್ರಜಾಪ್ರಭುತ್ವಕ್ಕಿಂತಲೂ ಹೆಚ್ಚಿನದು.

ಅಲ್ಲಿ ಮತ್ತು ಇತರೆಡೆಗಳಲ್ಲಿ ವಿದ್ಯಾವಂತರೆನಿಕೊಂಡವರು ಸಾಮಾಜಿಕ ಅಧಿಕಾರ ಚಲಾಯಿಸುತ್ತಾರೆ. ಅನಕ್ಷರಸ್ಥರು ಮೂಲೆಗುಂಪಾಗುತ್ತಾರೆ. ಅವರನ್ನು ವಿದ್ಯಾವಂತರನ್ನಾಗಿಸುವ ಗುರಿ ನಮ್ಮದಾಗಲೇ ಇಲ್ಲ. ಇದಕ್ಕಿಂತಲೂ ಶೋಚನೀಯ ಪರಿಸ್ಥಿತಿ ಬೇಕೇ?

ಮದರಾಸಿನಲ್ಲಿರುವ ಎಂ. ಎಸ್. ಸ್ವಾಮಿನಾಥನ್ ಸಂಶೋಧನಾ ಸಂಸ್ಥೆಯು ಹಿಂದೆಯೇ ಪ್ರಕಟಿಸಿದ್ದ ಒಂದು ಖ್ಯಾತ ಮಾಹಿತಿ ಹೀಗಿದೆ: ಜಗತ್ತಿನಲ್ಲಿ ಜನಸಂಖ್ಯೆಯ ಅರ್ಧಭಾಗ ಮಹಿಳೆಯರದು. ಇಡೀ ವಿಶ್ವದ ಉತ್ಪಾದನಾ ಕಾರ್ಯದಲ್ಲಿ ಅವರದು ಮೂರನೆಯ ಎರಡು ಭಾಗ. ಆ ದುಡಿಮೆಗೆ ಅವರು ಪಡೆಯುವ ವರಮಾನ ಒಟ್ಟು ವಿಶ್ವ ವರಮಾನದ ಹತ್ತನೆಯ ಒಂದು ಭಾಗ, ಮತ್ತು ವಿಶ್ವದ ಆಸ್ತಿಯಲ್ಲಿ ಅವರ ಮಾಲಿಕತ್ವದಲ್ಲಿರುವುದು ನೂರನೆಯ ಒಂದು ಭಾಗಕ್ಕಿಂತಲೂ ಕಡಿಮೆ. ಇಂತಹ ಹಿನ್ನೆಲೆಯಲ್ಲಿ ಮಹಿಳೆಯರ ಸ್ಥಿತಿಗತಿಗಳನ್ನು ಸುಲಭವಾಗಿ ಅರ್ಥಮಾಡಿಕೊಳ್ಳಬಹುದು. ಅಧಿಕಾರದಲ್ಲಿ ಸಮಭಾಗ ಪಡೆಯಲು ಈ ಸಮೀಕರಣ ಬದಲಾದಾಗ ಮಾತ್ರ ಮಹಿಳೆಯರಿಗೆ ಸಾಧ್ಯತೆ ಇರುತ್ತದೆ. ಅದಿಲ್ಲದಿದ್ದಾಗ ಅಧಿಕ ಸಂಖ್ಯೆಯಲ್ಲಿ ಅವರು ಸಮಾಜದ ಅಂಚಿಗೆ ನೂಕಲ್ಪಡುತ್ತಲೇ ಇರುತ್ತಾರೆ. ಅಲ್ಲೊಬ್ಬ, ಇಲ್ಲೊಬ್ಬ ಮಹಿಳೆ ಅಧಿಕಾರ ಸ್ಥಾನಕ್ಕೆ ಬಂದಿರುವುದನ್ನು ನೋಡಿ ಎಷ್ಟೋ ವೇಳೆ ನಾವು ಸಾಮಾನ್ಯೀಕರಿಸುವುದುಂಟು, ಎಲ್ಲ ಸ್ಥಾನಗಳನ್ನೂ ಅವರೇ ಪಡೆದುಕೊಂಡು ಬಿಡುತ್ತಿದ್ದಾರೆ ಎಂದು. ಗ್ರಾಮೀಣ ಪ್ರದೇಶಗಳನ್ನೂ ಗಣನೆಗೆ ತೆಗೆದುಕೊಂಡಾಗ ವಸ್ತುಸ್ಥಿತಿ ಬೇರೆಯೇ ಆಗಿ ಕಾಣುತ್ತದೆ.

ಕೃಷಿ ಕಾರ್ಮಿಕರು ನಮ್ಮ ದೇಶದಲ್ಲಿ ಲಕ್ಷಗಟ್ಟಲೆ ಇದ್ದಾರೆ. ಅವರದೇ ಆದ ಭೂಮಿ ಅವರಿಗಿಲ್ಲ. ಆದರೆ ಅವರ ದುಡಿಮೆಯೆಲ್ಲಾ ಕೃಷಿ ಕ್ಷೇತ್ರದಲ್ಲಿ. ಅವರಿಗಿರುವ ಒಂದೇ ಆಸ್ತಿ ಅವರ ದುಡಿಯುವ ಶಕ್ತಿ. ಅದನ್ನು ಮಾರಿಕೊಂಡಾಗ ಅವರಿಗೆ ದೊರೆಯುವ ಕೂಲಿಯಿಂದ ವರ್ಷವಿಡೀ ಬಾಳುವೆ ನಡೆಸುವುದು ದುಷ್ಕರ. ಇನ್ನು ವಿದ್ಯಾಭ್ಯಾಸ, ವಸತಿ, ಆರೋಗ್ಯ, ಇತ್ಯಾದಿಗಳಿಗೆ ಏನು ಖರ್ಚು ಮಾಡಿಯಾರು! ಮಾರುಕಟ್ಟೆಯಲ್ಲಿ ಅವರ ಕೊಳ್ಳುವ ಶಕ್ತಿ ಎಷ್ಟು ಕಡಿಮೆಯೆಂದರೆ ಅವರಿಗೆಂದೇ ತೆಗೆದಿರುವ ಸುಲಭ ಬೆಲೆ ಅಂಗಡಿಗಳಲ್ಲಿ ದಾಸ್ತಾನು ಹಾಗೇ ಉಳಿದಿರುತ್ತದೆ. ಅದರ ಮಾಲಿಕ ಅದನ್ನು ಕಾಳಸಂತೆಯಲ್ಲಿ ಮಾರಿಕೊಳ್ಳುತ್ತಾನೆ. ಹೆಸರು ಇವರದು, ಲಾಭ ಅವನಿಗೆ. ಅವರು ಸಂಪತ್ತನ್ನು ಸೃಷ್ಟಿಸುತ್ತಾರೆ. ಆದರೆ ಬೆತ್ತಲೆ ಬೈರಾಗಿಗಳಂತೆ ಉಳಿಯುತ್ತಾರೆ. ಅವರಿಗೆ ಕನಿಷ್ಠ ಕೂಲಿಯೆಂಬುದು ಕನಸಿನ ಗಂಟು. ಈ ದುರಂತದ ಸಮಗ್ರ ಚಿತ್ರಣ ಬೇಕಾದರೆ ಮಹಾಶ್ವೇತಾದೇವಿಯವರ 'ವಾಶೈ ಟುಡು' ಎಂಬ ಕಾದಂಬರಿಯನ್ನು ನೋಡಬಹುದು.

ಪರಿಸ್ಥಿತಿ ಹೀಗಿರುವಾಗ ಸಾಲದ ಹೊರೆ ಅತಿಯಾದರೆ ಆಶ್ಚರ್ಯವಿಲ್ಲ. ಸಣ್ಣ ಹಿಡುವಳಿದಾರರು ತಮ್ಮ ಬೆಳೆಯನ್ನು ಕೊಯ್ಲಿಗೆ ಮುಂಚೆಯೇ ಪರಭಾರೆ ಮಾಡುವುದು ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಕಾಣಬರುತ್ತದೆ. ಅಗ್ಗದ ಬೆಲೆಗೆ ಮಾರಿಕೊಂಡು, ಆಮೇಲೆ ಸಾಲವನ್ನು ತೀರಿಸಲಾಗದೆ ಕ್ರಿಮಿನಾಶಕಗಳನ್ನು ಸೇವಿಸಿ ಆತ್ಮಹತ್ಯೆ ಮಾಡಿಕೊಳ್ಳುವವರ ಸಂಖ್ಯೆಗೆ

ಎಲ್ಲೆಯೆಲ್ಲಿದೆ? ಖಾಸಗಿ ಲೇವಾದೇವಿಯವರಿಗೆ ಕತ್ತನ್ನು ಕೊಟ್ಟು, ಬೀಜ, ನೀರು, ವಿದ್ಯುತ್, ಇತ್ಯಾದಿಗಳಿಗೆ ಹಣ ದೊರಕಿಸಿಕೊಳ್ಳಲು ಅವರು ಅಸಮರ್ಥರು. ಇಡೀ ದೇಶವೇ ಒಂದು ಕಡೆ ಸಾಲದ ಭಾರದಿಂದ ಕುಗ್ಗಿ ಹೋಗಿದ್ದರೆ, ದೇಶದೊಳಗಡೆ ಈ ರೈತರು ಸಾಲದ ಹೊರೆಯಿಂದ ತತ್ತರಿಸಿಹೋಗಿದ್ದಾರೆ. ಅಂಚಿಗೆ ದೂಡಲ್ಪಡುವವರಲ್ಲಿ ಕ್ರಮೇಣ ಇವರೂ ಸೇರ್ಪಡೆಗೊಳ್ಳುತ್ತಾರೆ.

ಹೀಗಿರುವಾಗ ನಮ್ಮ ಮಾಧ್ಯಮಗಳ ಪ್ರಚಾರ ದಂಗುಗೊಳಿಸುವಂಥದು. ಅಲ್ಲಿ ಮಾರಾಟಕ್ಕೆಂದು ಇಡಲಾದ ವಸ್ತುಗಳು ಕಣ್ಣು ಕೋರೈಸುವಂಥವು. ಏನೋ ದೇಶದ ಬಹುಭಾಗದ ಜನ ಅವನ್ನೇ ಕೊಳ್ಳುತ್ತಿದ್ದಾರೇನೋ ಎಂಬ ಭ್ರಮೆ ಮೂಡುತ್ತದೆ, ದೇಶದಲ್ಲಿ ಪ್ರಕಾಶ ಬೆಳಗಿಬಿಟ್ಟಿದೆಯೆಂಬ ಭಾವನೆ ಉಂಟಾಗುತ್ತದೆ. ನಮ್ಮ ದೇಶ ಏನೆಲ್ಲಾ ಆಮದು ಮಾಡಿಕೊಳ್ಳುತ್ತದೆ! ಅದರಿಂದೇನಾದರೂ ದೇಶಕ್ಕೆ ಸಾಲದ ಹೊರೆ ಹೆಚ್ಚಾದರೆ ಅದಕ್ಕೆ ಅಂಚಿಗೆ ದೂಡಲ್ಪಟ್ಟಿರುವವರು ಸರ್ವಥಾ ಕಾರಣರಲ್ಲ. ಏಕೆಂದರೆ, ಅವರು ಅವನ್ನು ಮುಟ್ಟಿಯೂ ನೋಡುವುದಿಲ್ಲ. ಆದರೆ ಸಾಲ ತೀರಿಸುವ ಬಾಧೆ ಮಾತ್ರ ಅವರಿಗೂ ಅಂಟುತ್ತದೆ. ದಿನನಿತ್ಯದ ಅಗತ್ಯ ವಸ್ತುಗಳ ಬೆಲೆಯ ಹೆಚ್ಚಳಕ್ಕೆ ನಮ್ಮ ಝುಗಮಗಿಸುವ ವಸ್ತುಗಳ ಕಾಣಿಕೆಯೂ ಇದೆ. ಆ ವಸ್ತುಗಳನ್ನು ಬಳಸದ ಸಾಮಾನ್ಯ ಪ್ರಜೆಯು ಅವುಗಳ ಭಾರವನ್ನು ಮಾತ್ರ ಹೊರಬೇಕಾಗಿದೆ. ಕೆಲವು ವರ್ಷಗಳ ಹಿಂದೆ ಲ್ಯಾಂಬೆತ್ ಎಂಬಲ್ಲಿ ಕ್ರೈಸ್ತ ಬಿಷಪ್ಪುಗಳ ಸಮಾವೇಶವೊಂದು ಜರುಗಿತ್ತು. ಅಲ್ಲಿ ದಕ್ಷಿಣ ಆಫ್ರಿಕಾದ ಕೇಪ್ ಟೌನಿನ ಬಿಷಪ್ ಇಂಜಂಗೋಂಕುಲು ದುಂಗಾನೆ ಎಂಬುವನು ಮಾತನಾಡುವಾಗ ಹೇಳಿದ: "ಜಗತ್ತಿನ ಅತಿ ಬಡತನದ ದೇಶಗಳಿಂದ ಅತಿ ಶ್ರೀಮಂತ ದೇಶಗಳಿಗೆ ಪ್ರತಿದಿನ ೭೧೭ ದಶಲಕ್ಷ ಡಾಲರುಗಳಷ್ಟು (ಅಂದರೆ, ಸುಮಾರು ೨೮೯೮ ಕೋಟಿ ರೂಪಾಯಿಗಳು) ರವಾನೆಯಾಗುತ್ತಿದೆ. ಇದರಲ್ಲಿ ಸಾಲ, ಬಡ್ಡಿ, ಅಕ್ರಮ ಮಾರುಕಟ್ಟೆ ವ್ಯವಹಾರ, ಕಚ್ಚಾಸಾಮಗ್ರಿಗಳ ಲೂಟಿ ಎಲ್ಲಾ ಸೇರಿವೆ." ದುಂಗಾನೆ ಮುಂದುವರಿದು ಹೇಳಿದ "ಈ ಅಗಾಧ ಮೊತ್ತದ ಬಹುಭಾಗವನ್ನು ಸಾಲವಾಗಿ ಪಡೆದವರು ಪ್ರಭುತ್ವದ ಚುಕ್ಕಾಣಿ ಹಿಡಿದವರು, ಸರ್ವಾಧಿಕಾರಿಗಳು. ಅವರು ಪಡೆದ ಸಾಲವನ್ನು ತೀರಿಸುವ ಹೊಣೆಯನ್ನು ಮಾತ್ರ ಜನಸಾಮಾನ್ಯರ ತಲೆಗೆ ಕಟ್ಟಲಾಗಿದೆ."

ಇದು ಭಾರತದ ಸಂದರ್ಭದಲ್ಲೂ ಸ್ವಲ್ಪಮಟ್ಟಿಗೆ ಧೈರ್ಯವಾಗಿಯೇ ಹೇಳಬಹುದಾದ ಮಾತು. ಜನಕ್ಕೆ ಸಹನೆಯ ಮಹತ್ವವನ್ನು ಬೋಧಿಸಲು ಈಗ ಅದನ್ನು "ಮಾನವೀಯ ಮುಖದ ಉದಾರೀಕರಣ" ಎಂದೋ, "ಸರ್ವರಿಗೂ ಫಲಪ್ರಾಪ್ತಿಯಾಗುವ ಜಾಗತೀಕರಣ"ಎಂದೋ ಕರೆಯುವ ವಾಡಿಕೆ ಬಂದಿದೆ. ವಾಸ್ತವದಲ್ಲಿ ಅಂತಹ ಗಮನಾರ್ಹ ವ್ಯತ್ಯಾಸವೇನೂ ಇಲ್ಲ. ಅದನ್ನು ಯಾವ ಹೆಸರಿನಿಂದ ಕರೆದರೂ ಅದರ ಅಂತರಾರ್ಥ ಒಂದೇ. ಪಾಶ್ಚಿಮಾತ್ಯ ರಾಷ್ಟ್ರಗಳು ತಮ್ಮ ಆರ್ಥಿಕ ಬಿಕ್ಕಟ್ಟನ್ನು ನಿವಾರಿಸಿಕೊಳ್ಳಲು ಭಾರತದಂತಹ ದೇಶಗಳಿಂದ ಕೆಲವು ಸವಲತ್ತುಗಳನ್ನು ಪಡೆದು ಮಾರುಕಟ್ಟೆಯನ್ನು ಸ್ವಾಧೀನಪಡಿಸಿಕೊಳ್ಳುತ್ತಿವೆ. ಇದರಿಂದ ನಮ್ಮ ಆರ್ಥಿಕ ಸಂಕಷ್ಟ ಹೆಚ್ಚುತ್ತದೆ. ಅವರ ಬಿಕ್ಕಟ್ಟು ತಕ್ಕಮಟ್ಟಿಗೆ ಪರಿಹಾರವಾಗುತ್ತದೆ. ಹಲವು

ದಶಕಗಳಿಂದ ನಮ್ಮನ್ನು ಕಿತ್ತು ತಿನ್ನುತ್ತಿರುವ ಸಮಸ್ಯೆಗಳ ಜೊತೆಗೆ ಇನ್ನಷ್ಟು ಕೂಡಿಕೊಂಡಿವೆ, ಅಷ್ಟೆ. ನಿಜವಾದ ಪರಿಹಾರ ದೊರಕುವುದು ನಮ್ಮ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಬದಲಾಯಿಸಿದಾಗ ಮಾತ್ರ. ಅದಕ್ಕೆ ಪ್ರಜ್ಞಾಪೂರ್ವಕವಾದ ಸಾಮೂಹಿಕ ಮಧ್ಯಪ್ರವೇಶ ಒಂದೇ ದಾರಿ. ನಮ್ಮ ಆರ್ಥಿಕ- ಸಾಮಾಜಿಕ ಸನ್ನಿವೇಶದ ಮೂಲ ಕಾರಣಗಳನ್ನು ಸ್ಪಷ್ಟಪಡಿಸಿಕೊಳ್ಳುವುದು ಪ್ರಜ್ಞೆಯ ವಿಕಾಸವೆನಿಸಿಕೊಳ್ಳುತ್ತದೆ. ಸುಮ್ಮನೆ ಯಾರನ್ನೋ ದೂರುವುದು ವಿಶ್ಲೇಷಣೆ ಎನಿಸಿಕೊಳ್ಳುವುದಿಲ್ಲ. ಕಾರ್ಯ-ಕಾರಣ ಸಂಬಂಧಗಳನ್ನು ಗುರುತಿಸುವುದು ಮತ್ತು ಅದರಿಂದ ಮೂಡುವ ತಿಳುವಳಿಕೆಯನ್ನು ಆಯುಧವನ್ನಾಗಿ ಮಾಡಿಕೊಂಡು ಸಂಘಟನೆ ಹಾಗೂ ಹೋರಾಟಗಳಿಗೆ ಮುಂದಾಗುವುದು ನಮ್ಮ ನಿಜವಾದ ಮಾರ್ಗವಾಗಬೇಕಾಗಿದೆ.

ಇಲ್ಲಿ ಒಂದು ದೊಡ್ಡ ಮುಗ್ಗಟ್ಟು ನಮ್ಮನ್ನು ಕಾಡುತ್ತದೆ. ಯಾರು ಬಂಡವಾಳ ಮತ್ತು ಭೂಸಂಪತ್ತನ್ನು ಶೇಖರಿಸಿಕೊಂಡು ದುಡಿಯುವವರ ಶ್ರಮದಿಂದ ಬರುವ ಉತ್ಪಾದನೆಯನ್ನು ತಮ್ಮದನ್ನಾಗಿಸಿಕೊಳ್ಳುತ್ತಾರೋ ಅವರಲ್ಲಿ ಸಣ್ಣ ಪುಟ್ಟ ವ್ಯತ್ಯಾಸ ವೈಮನಸ್ಯಗಳಿದ್ದರೂ ಮೂಲತಃ ಐಕ್ಯತೆ ಸಾಧಿಸಿಕೊಂಡಿದ್ದಾರೆ. ಅವರ ಲಾಭದ ದರ ಕಡಿಮೆಯಾಗದಂತೆ ಮುಂಜಾಗ್ರತೆಯಿಂದ ಒಟ್ಟಾಗಿ ಆರ್ಥಿಕ ಸೂತ್ರಗಳನ್ನು ರೂಪಿಸುತ್ತಾರೆ. ಸಂವಿಧಾನಾತ್ಮಕವೆಂದು ಹೇಳಲಾದ ರಕ್ಷಣೆಯನ್ನು ನ್ಯಾಯಾಲಯದಿಂದ ಪಡೆದುಕೊಳ್ಳುತ್ತಾರೆ. ವಿವಿಧ ಸ್ತರಗಳಿಗೆ ಸೇರಿದ ದುಡಿಮೆಗಾರರು ಮತ್ತು ಅವರ ಸಂಘಟನೆಗಳು ಛಿದ್ರವಾದಾಗೆಲ್ಲಾ ಅವರು ಅಮೃತಾನ್ನ ತಿಂದು ತೇಗುತ್ತಾರೆ. ಅದನ್ನು ಕಂಡೂ ಕಾಣದಂತೆ ವರ್ತಿಸುವ ದುಡಿಯುವ ಜನತೆ ಮತಿಭ್ರಷ್ಟವಲ್ಲದಿದ್ದರೂ ಕುರುಡಾಗಿರುವುದಂತೂ ನಿಜ. ಅದರಲ್ಲಿ ಅಮುಖ್ಯವಾದ ವಿಷಯಗಳಿಗಾಗಿ ದೊಡ್ಡ ಬಿರುಕುಂಟಾಗುತ್ತದೆ, ತಾನು ಬೇರೆಯವರಿಗಿಂತ ಹೆಚ್ಚು ಕ್ರಾಂತಿಕಾರಿಯಾದ್ದರಿಂದ ಆ ಇತರರೊಡನೆ ಸೇರಿ ಹೋರಾಟ ಮಾಡಲಾಗುವುದಿಲ್ಲವೆಂಬ ಅನಿಷ್ಟ ಮಡಿವಂತಿಕೆ ಇರುತ್ತದೆ. ತಮ್ಮ ನೇತೃತ್ವದಲ್ಲಿ ಮಾತ್ರವೇ ಅರ್ಥವತ್ತಾದ ಕ್ರಾಂತಿಕಾರಿ ಬದಲಾವಣೆಗಳು ಸಾಧ್ಯವೆಂದು ತಮ್ಮ ಘೋಷಣಾ ಪತ್ರಗಳಲ್ಲಿ ಬರೆದಿಟ್ಟುಕೊಂಡು ಅವರವರ ಸೀಮಿತ ಸಂಸ್ಥಾನಗಳಲ್ಲಿ ಕನಸು ಕಾಣುತ್ತಿರುವುದು ಅವರ ಸಂಪ್ರದಾಯವಾಗಿ ಬಿಡುತ್ತದೆ. ಅಂಥ ಘನಘೋರ ವ್ಯತ್ಯಾಸಗಳಿಲ್ಲದಿದ್ದರೂ ಒಟ್ಟಾಗಿ ಬಂಡವಳಿಗ ವರ್ಗವನ್ನೆದುರಿಸಬೇಕೆಂಬ ಗುರಿಯನ್ನು ಅವರು ಮುಟ್ಟದೆ ಕಂಗೆಡುತ್ತಾರೆ. ಇದರಿಂದ ದೂರ ದೂರ ದೂಡಲ್ಪಟ್ಟವರು ಹತ್ತಿರ ಹತ್ತಿರ ಬಂದು ಸಂಘಟಿತರಾಗುವ ಬದಲು ಅಲ್ಲೇ ಉಳಿಯುತ್ತಾರೆ. ಇಲ್ಲವೇ ಇನ್ನೂ ದೂರಕ್ಕೆ ಸರಿಸಲ್ಪಡುತ್ತಾರೆ. ಇದು ನಮ್ಮ ವ್ಯಥೆಯ ಕಥೆ, ನಮ್ಮ ಮುಂದಿರುವ ಅತ್ಯಂತ ಮಹತ್ವದ ಸವಾಲು. ಇದಕ್ಕೆ ಚಿಟಿಕೆ ಹೊಡೆಯುವಷ್ಟು ಕಾಲದಲ್ಲಿ ಪರಿಣಾಮಕಾರಿ ಪರಿಹಾರವನ್ನು ಪಡೆದುಕೊಳ್ಳಲು ಆಗುವುದಿಲ್ಲ. ನಮ್ಮೆಲ್ಲ ವ್ಯತ್ಯಾಸ ಮತ್ತು ಮಡಿವಂತಿಕೆಗಳನ್ನು ಪೋಷಿಸಿಕೊಳ್ಳುತ್ತಲೇ ಕನಿಷ್ಠ ಸಮಾನ ಆಕಾಂಕ್ಷೆಗಳನ್ನು ಮುಂದಿಟ್ಟುಕೊಂಡು ಜಂಟೀ ಹೋರಾಟಗಳನ್ನು ನಡೆಸುವುದು ಅನಿವಾರ್ಯವೆಂಬುದನ್ನು ನಾವು ಮನದಟ್ಟು ಮಾಡಿಕೊಳ್ಳಬೇಕು.

ಹಾಗಾದಾಗಲೇ ದೂರಕ್ಕೆ ದೂಡುವವನ ಸನ್ನಾಹ ಸೋಲಲು ಸಾಧ್ಯ. ಯಾವ ಬದಲಾವಣೆಯೂ ತಕ್ಷಣದಲ್ಲಿ, ಒಂದೇ ಏಟಿನಿಂದ, ಆಗಿಬಿಡುವುದಿಲ್ಲ. ನಿರಂತರ ಬದಲಾವಣೆಯೆಂಬುದು ಮಾನವ ಸಮಾಜದ ಒಂದು ಲಕ್ಷಣ. ಅದು ಯಾರೋ ಇಚ್ಛಿಸಿಬಿಟ್ಟಿದ್ದರಿಂದ ಉಂಟಾಗುವಂಥದಲ್ಲ. ಅದು ಉತ್ಪಾದನಾ ಸಂಬಂಧಗಳನ್ನಾಧರಿಸಿ ಕಾರ್ಯರೂಪಕ್ಕೆ ಬರುತ್ತದೆ. ಪ್ರತಿಯೊಂದು ಪೀಳಿಗೆಯೂ ಬದಲಾವಣೆಗಾಗಿ ಆಶಿಸಿದೆ, ಶ್ರಮಿಸಿದೆ. ಕೆಲವೊಮ್ಮೆ ಸೋತಿದೆ. ಮತ್ತೆ ಕೆಲವೊಮ್ಮೆ ಗೆದ್ದಿದೆ. ನಮ್ಮ ಪೀಳಿಗೆಯಷ್ಟು ಕ್ರಾಂತಿಕಾರಿಗಳನ್ನು ಚರಿತ್ರೆಯಲ್ಲಿ ಬೇರಾವ ಘಟ್ಟವೂ ಕಾಣಲಿಲ್ಲವೆಂಬ ಮೂರ್ಖತನವನ್ನು ಮೊದಲು ಬಿಡಬೇಕು. ಬೆಂಜಾಮಿನ್ ವಾಟೆನ್‌ಬರ್ಗ್ ಎಂಬಾತ ಒಂದೆಡೆ ಹೇಳುತ್ತಾನೆ, "ರಾಜಕೀಯದಲ್ಲಿ ಅತ್ಯಂತ ನೈಜವಾದದ್ದು ಯಾವುದೆಂದರೆ ಮತದಾರನು ಯಾವುದನ್ನು ನೈಜವೆಂದು ತೀರ್ಮಾನಿಸುತ್ತಾನೋ ಅದು," ಎಂದು. ಆ ತೀರ್ಮಾನವು ದೂರ ದೂಡಲ್ಪಡುವವರ ಪರವಾದದ್ದು ಆಗುವಂತೆ ಮಾಡುವುದು ಪ್ರಸ್ತುತ ರಾಜಕಾರಣದ ಧ್ಯೇಯವಾಗಬೇಕು. ನಮ್ಮ ಕುತ್ತಿಗೆಗೆ ನಾವೇ ರಾಗಿಕಲ್ಲು ತೂಗಿಹಾಕಿಕೊಂಡು ರಾಜಕೀಯದಲ್ಲಿ ಈಜಲು ಹೋಗುತ್ತಿರುವುದು ಇಂದಿನ ಸಂದರ್ಭ. ದುಡಿಯುವ ಜನರ ಮನಸ್ಸಿನಲ್ಲಿ ನಾಟಬೇಕಾದ ಅಂಶ ಇದೇ. ಚಿಕ್ಕ ಚಿಕ್ಕ ಸಂಧಾನಗಳು, ನ್ಯಾಯಾಲಯದ ತೀರ್ಪುಗಳು, ಆಳುವ ವರ್ಗದ ಪ್ರತಿನಿಧಿಗಳ ಹುಸಿ ಆಶ್ವಾಸನೆಗಳು, ಇವೆಲ್ಲಾ ಇರಲಿ; ಆದರೆ ಅವುಗಳಿಂದ ಅಂತಿಮ ಫಲ ದೊರೆಯುವುದಿಲ್ಲ. ನಾವು ಸೆಣಸಾಡುತ್ತಿರುವುದು ಅತಿಪ್ರಬಲವಾದ ಪ್ರಭುತ್ವದೊಡನೆ. ಅದಕ್ಕೆ ಆಂತರಿಕ ಮತ್ತು ಅಂತರರಾಷ್ಟ್ರೀಯ ಆಯಕಟ್ಟಿದೆ. ಪೊಲೀಸ್, ಮಿಲಿಟರಿ, ನ್ಯಾಯಾಂಗ, ಪಾರ್ಲಿಮೆಂಟ್ ಮುಂತಾದ ಅಂಗಗಳಿಂದ ಅದು ಪೋಷಿಸಲ್ಪಟ್ಟಿದೆ. ಅಂತಹ ಪ್ರಭುತ್ವವನ್ನು ದೂರ ದೂಡಲ್ಪಟ್ಟಿರುವವರು ತಮ್ಮದನ್ನಾಗಿಸಿಕೊಳ್ಳಬೇಕಾಗಿದೆ. ಬಹಳ ಜಟಿಲವಾದ, ಕಷ್ಟಕರವಾದ ಸವಾಲು ಇದು. ಅದನ್ನೆದುರಿಸಲು ಮುಂದಾದಾಗ ಬಹಳ ಸಣ್ಣ ಪ್ರತಿಭಟನೆಯನ್ನೂ ಪ್ರಭುತ್ವವು ಯಾವ ಮುಲಾಜೂ ಇಲ್ಲದೆ ಹೊಸಕಿಹಾಕಲು ಹವಣಿಸುತ್ತದೆ. ಹಾಗೆಂದು ದೊಡ್ಡ ಪ್ರತಿಭಟನೆಗಳನ್ನು ಮಾತ್ರವೇ ಸಂಯೋಜಿಸೋಣವೆಂದು ಕಾದು ಕುಳಿತರೆ ನಾವು ಇನ್ನೂ ದೂರಕ್ಕೆ ತಳ್ಳಲ್ಪಡುತ್ತೇವೆ. ಸಾಮೂಹಿಕ ಕ್ರಿಯೆಗೆ ಪೂರ್ವಭಾವಿಯಾಗಿ ಸಣ್ಣ ಸಣ್ಣ ಸಮೂಹಗಳು ಕಾದಾಡುತ್ತಲೇ ಇರಬೇಕು ಮತ್ತು ಇವೆ. ಅವಕ್ಕಾಗಲಿ ದೊಡ್ಡ ಸಮೂಹಕ್ಕಾಗಲಿ ಇರುವ ಅಸ್ತ್ರವೆಂದರೆ ವಿಶ್ಲೇಷಣೆ- ಪ್ರಜ್ಞೆ, ಸಂಘಟನೆ - ಹೋರಾಟ. ಸವಾಲು ಸ್ವೀಕರಿಸಲು ಈ ಆಯುಧವು ಪ್ರಖರವೆಂಬುದನ್ನು ಡಾ. ಅಂಬೇಡ್ಕರ್ ಸಹ ತಮ್ಮ ಸೂತ್ರ ನಿರೂಪಣೆಯಲ್ಲಿ ಕರಾರುವಾಕ್ಕಾಗಿ ತಿಳಿಸಿದ್ದಾರೆ: ಶಿಕ್ಷಣ- ಸಂಘಟನೆ- ಹೋರಾಟ. ಮಾರ್ಕ್ಸ್‌ವಾದಿಗಳು ಇದನ್ನೇ ವರ್ಗಹೋರಾಟವೆಂದು ಉಲ್ಲೇಖಿಸುವುದು.

ಇದನ್ನೆಲ್ಲಾ ಪರಾಮರ್ಶೆ ಮಾಡಿಕೊಳ್ಳುವಾಗ ಒಂದು ಎಚ್ಚರ ಅಗತ್ಯ. ದೂರ ದೂಡಲ್ಪಟ್ಟವರ ಬಗ್ಗೆ ಸಾಂತ್ವನದ ಮಾತುಗಳನ್ನಾಡುವವರಿಗೆ ನಮ್ಮಲ್ಲಿ ಕೊರತೆ ಇಲ್ಲ. ಆದರೆ ಕ್ರಿಯಾತ್ಮಕವಾಗಿ ಅವರು ಮಧ್ಯಪ್ರವೇಶ ಮಾಡಲು ಹಿಂಜರಿಯುತ್ತಾರೆ. ಅಂತೆಯೇ ದೂರ ದೂಡಲ್ಪಟ್ಟವರ

ಪರವಾಗಿ ಹೋರಾಟದ ಕರೆ ಕೊಡುವವರೂ ಇರುತ್ತಾರೆ. ಕರೆ ಕೊಟ್ಟ ಮೇಲೆ ಅವರ ಕೆಲಸ ಪೂರ್ತಿಯಾಯಿತೆಂದು ಅವರು ಭಾವಿಸುತ್ತಾರೇನೋ ತಿಳಿಯದು. ಅಂದರೆ, ಬೇರೆಯವರಿಂದ ಸವಾಲಿಗೆ ಪರಿಹಾರ ಸಿಗುವುದಿಲ್ಲವೆಂದರ್ಥ. ನಾವೇ ಸ್ವತಃ ಹೋರಾಟಗಳಲ್ಲಿ ಭಾಗಿಗಳಾಗದೆ ಫಲಾನುಭವಿಗಳಾಗಲು ಸಾಧ್ಯವಿಲ್ಲ. ಪರಂಪರಾನುಗತವಾಗಿ ನಮ್ಮದು ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆ. ದೋಚಿಕೊಳ್ಳುವುದು ಅದರ ಉಗ್ರ ಲಕ್ಷಣ. 'ಕೊಡು , ಕೊಡು' ಎಂದು ಮೌಲ್ಯಗಳನ್ನು ರಾಗರಾಗವಾಗಿ ಹಾಡುತ್ತಾ ಸತತವಾಗಿ ಕಿತ್ತುಕೊಳ್ಳುವುದು ನಮ್ಮ ಚರಿತ್ರೆಯಲ್ಲಿ ನಡೆದಿರುವ ಸಂಗತಿ. ಗೀತೆಯನ್ನೋ ಉಪನಿಷತ್ತನ್ನೋ ಉದ್ಧರಿಸಿ ನಿರರ್ಗಳವಾಗಿ ಉಪನ್ಯಾಸ ನೀಡುವವರು ನಮ್ಮಲ್ಲಿ ಕಾಸಿಗೊಂದು, ಕೊಸರಿಗೆರಡು, ಎಂಬ ಪ್ರಮಾಣದಲ್ಲಿ ಸಿಕ್ಕುತ್ತಾರೆ. ತ್ಯಾಗದ ಮೌಲ್ಯವನ್ನು ಉಪದೇಶಿಸಲು ಅವರಿಗೆ ಸಾರ್ವಜನಿಕ ಭಕ್ತರು ಸಾವಿರ ವರಹ ನೀಡಬೇಕು! ಭರ್ಜರಿ ಜರಿ ಸೀರೆಯುಟ್ಟು " ಈ ಭುವಿಲೋ ಮೋಕ್ಷಮು ಗಲದಾ" ಎಂದು ತಾಳ ಹಾಕಿಕೊಂಡು ಸುಶ್ರಾವ್ಯವಾಗಿ ಹಾಡುವವರ ದೇಶ ನಮ್ಮದು. " ಎಲ್ಲರೂ ಸುಖವಾಗಿರಲಿ" ಎಂದು ಸಂಸ್ಕೃತದಲ್ಲಿ ಹೇಳುತ್ತಾ ಅತ್ಯಂತ ಸ್ವಾರ್ಥದಿಂದ ನಡೆದುಕೊಳ್ಳುವವರನ್ನು ಹುಡುಕಿಕೊಂಡು ಹೋದರೆ ಆಶ್ಚರ್ಯ ಕಾದಿರುತ್ತದೆ. ಏಕೆಂದರೆ, "ಒಬ್ಬರನ್ನು ಹುಡುಕಲು ಹೊರಡಿ, ಸಾವಿರ ಜನ ಸಿಕ್ಕುತ್ತಾರೆ"ಎಂಬ ಮಾತು ಅಕ್ಷರಶಃ ಅಲ್ಲಿ ನಿಜವಾಗುತ್ತದೆ. ಎಷ್ಟೋ ರಾಜಕೀಯ ಧುರೀಣರು, ಸರ್ಕಾರಿ ಅಧಿಕಾರಿಗಳು, ಖಾಸಗಿ ಧರ್ಮರಕ್ಷಕರು, ಸಮಾಜಸೇವಾ ನಿರತರು, ಸರ್ಕಾರೇತರ ಸಂಸ್ಥೆಗಳು, ಎಲ್ಲಾ ಈ ಗುಂಪಿನಲ್ಲಿ ಸೇರಿಕೊಂಡಿರುತ್ತಾರೆ. ದೂರ ದೂಡಲ್ಪಟ್ಟಿರುವವರು ಹೋರಾಟಕ್ಕೆ ಇಳಿಯಬೇಕೆಂದರೆ ಇವರನ್ನೆಲ್ಲಾ ಕಂಡು ದಂಗಾಗಿಬಿಡಬಹುದು. ಮೂರು ಸಾವಿರ ವರ್ಷಗಳ ಹಿಂದೆ ನಮ್ಮ ದೇಶದಲ್ಲಿ ಐತರೇಯ ಬ್ರಾಹ್ಮಣ ಎಂಬ ಗ್ರಂಥ ಬಂದಿತ್ತು. ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿರುವ ಹರಿಶ್ಚಂದ್ರ-ಶುನಶ್ಶೇಪನ ಕತೆ ಅಲ್ಲಿ ಹೇಳಲಾಗಿದೆ. ಹರಿಶ್ಚಂದ್ರನಿಗೆ ಮಕ್ಕಳಿರಲಿಲ್ಲ. ಅವನ ಆಸ್ಥಾನದಲ್ಲಿದ್ದ ಪರ್ವತ- ನಾರದರು ಗಂಡು ಮನಗನನ್ನೇ ಪಡೆಯಲು ಇಚ್ಛಿಸಬೇಕೆಂದು ಸೂಚನೆ ಕೊಟ್ಟರು. ಹೆಣ್ಣು ತನ್ನನ್ನು ಹೆತ್ತವರ ಹೃದಯವನ್ನೇ ಪುಡಿ ಮಾಡಿಬಿಡುತ್ತಾಳೆಂದು ಎಚ್ಚರಿಸಿದರು (ದಾರಿಕಾ ಹೃದಯದಾರಿಕಾ ಪಿತುಃ). ವರುಣನನ್ನು ಪ್ರಾರ್ಥಿಸಿ ಹರಿಶ್ಚಂದ್ರನು ರೋಹಿತನೆಂಬ ಮಗನನ್ನು ಪಡೆದ. ಆದರೆ ವರುಣನದು ಒಂದು ಷರತ್ತಿತ್ತು. ಅವನನ್ನು ತನಗೆ ಅರ್ಪಿಸಬೇಕೆಂಬುದು ಆ ಷರತ್ತು. ಹರಿಶ್ಚಂದ್ರ ಮಗನನ್ನು ಕೊಡಲಿಲ್ಲ. ವರುಣ ಅವನನ್ನು ಪೀಡಿಸಿದ. ಕಡೆಗೆ ಒಂದು ಒಪ್ಪಂದವಾಯಿತು. ರೋಹಿತನಲ್ಲದಿದ್ದರೆ ಹೋಗಲಿ, ಬೇರೊಬ್ಬನನ್ನೇ ಆದರೂ ಸರಿ, ಅಂತೂ ಒಬ್ಬನನ್ನು ಕೊಡಬೇಕು ಎಂದು. ಹರಿಶ್ಚಂದ್ರನ ಹುಡುಕಾಟ ಆರಂಭವಾಯಿತು. ಒಂದೆಡೆ ಅಜೀಗರ್ತನೆಂಬ ವ್ಯಕ್ತಿ ಸಿಕ್ಕಿದ. ಅವನಿಗೆ ಮೂರು ಜನ ಮಕ್ಕಳು. "ನಾಯಿಬಾಲ" ಎಂದೇ ಮೂವರಿಗೂ ಹೆಸರು. ಮೊದಲಿನವನು ಶುನಃಪುಚ್ಛ, ಮಧ್ಯದವನು ಶುನಃ ಶೇಪ, ಕಡೆಯವನು ಶುನೋಲಾಂಗೂಲ. ಅವರಲ್ಲಿ ಒಬ್ಬನನ್ನು ಸಾವಿರ ವರಹಗಳಿಗೆ ಮಾರಲು ಅಜೀಗರ್ತ ಸಿದ್ಧನಿದ್ದ.

ಮೊದಲನೆಯವನನ್ನು ಮತ್ತು ಕೊನೆಯವನನ್ನು ಅಪ್ಪ- ಅಮ್ಮ ಕೊಡಲು ಇಚ್ಛಿಸಲಿಲ್ಲ. ಉಳಿದವನು ಮಧ್ಯಮ, ಶುನಃಶೇಪ. ಹರಿಶ್ಚಂದ್ರ ಅವನನ್ನು ಪಡೆದ. ಯಜ್ಞದಲ್ಲಿ ಅವನನ್ನು ವರುಣನಿಗೆ ಆಹುತಿಯಾಗಿ ನೀಡಬೇಕು. ಆದರೆ ಅವನನ್ನು ಕಂಬಕ್ಕೆ ಕಟ್ಟಲು ಯಾರೂ ಒಪ್ಪಲಿಲ್ಲ. ಅಜೀಗರ್ತ ಬಂದ. ಇನ್ನೂ ಸಾವಿರ ವರಹ ಕೊಟ್ಟರೆ ತಾನು ಆ ಕೆಲಸ ಮಾಡುವುದಾಗಿ ಹೇಳಿದ. ಅದೂ ಆಯಿತು. ಆಮೇಲೆ ಶುನಃಶೇಪನನ್ನು ವಧಿಸಬೇಕು. ಯಾರೂ ತಯಾರಿಲ್ಲ. ಮತ್ತೆ ಸಾವಿರ ವರಹ ಕೊಟ್ಟರೆ ತಾನು ಆ ಕೆಲಸ ಮಾಡುವುದಾಗಿ ಅಜೀಗರ್ತ ಹೇಳಿದ. ಹರಿಶ್ಚಂದ್ರ ಅದಕ್ಕೂ ಒಪ್ಪಿದ. ಇನ್ನೇನು ವಧಿಸಬೇಕು, ಅಷ್ಟರಲ್ಲಿ ವರುಣನೇ ಶುನಶ್ಶೇಪನನ್ನು ಕಾಪಾಡಿದ. ಏಕೆಂದರೆ ಶುನಶ್ಶೇಪ ಅವನನ್ನು ಸ್ತುತಿಸಿ ಪ್ರಾರ್ಥಿಸಿದ್ದ.

ಈ ಕತೆ ಏನು ಹೇಳುತ್ತೆ? ಯಾರನ್ನಾದರೂ ದೂರ ಮಾಡುವುದರಿಂದ ತನಗೆ ದೋಚಲು ಸಾಧ್ಯವಾಗುತ್ತದೆನ್ನುವುದಾದರೆ ಅಜೀಗರ್ತನಿಗೆ ಯಾವ ಮಮತೆಯೂ ಇಲ್ಲ, ಯಾವ ಮೌಲ್ಯವೂ ಇಲ್ಲ. ಅಜೀಗರ್ತ ಸಂಸ್ಕೃತಿ ಚೆನ್ನಾಗಿ ಬೇರು ಬಿಟ್ಟಿರುವ ಸಂಸ್ಕೃತಿಯೂ ನಮ್ಮಲ್ಲಿದೆ ಎಂದರ್ಥ. ಎರಡನೆಯದಾಗಿ, ಅಜೀಗರ್ತನನ್ನು ತಡೆಯಲು ಯಾರೂ ಮುಂದೆ ಬಾರದಂತಹ ಸಂಸ್ಕೃತಿಯೂ ನಮ್ಮಲ್ಲಿದೆ. ಯಾರನ್ನೋ ದೂರಕ್ಕೆ ದೂಡಿ ಯಾರೋ ದೋಚಿದರೆ ನಮಗೇನಂತೆ ಎಂಬ ಮೌನ ಸಂಸ್ಕೃತಿ ಇದು. ಅಂದರೆ, ಬೇರೆ ಯಾರೂ ರಕ್ಷಣೆಗೆ ಬರುವುದಿಲ್ಲ. ಮೂರನೆಯದಾಗಿ, ದೂರ ದೂಡಲ್ಪಟ್ಟವನು ಭಗವಂತನಲ್ಲಿ ಮೊರೆ ಹೋಗಿ ಪ್ರಾಣ ಉಳಿಸಿಕೊಳ್ಳಬೇಕು, ಮುಕ್ತಿ ಪಡೆಯಬೇಕು!

ಮೂರು ಸಾವಿರ ವರ್ಷಗಳಲ್ಲಿ ಭಗವಂತ ಎಷ್ಟು ಜನ ದೂರ ದೂಡಲ್ಪಟ್ಟವರನ್ನು ರಕ್ಷಿಸಿದನೋ ತಿಳಿಯದು. ಆದರೆ ಇತಿಹಾಸದ ಪುಟಗಳಲ್ಲಿ ರಮ್ಯವಾಗಿ ದಾಖಲಾಗಿರುವುದು ಒಂದು ವಿಷಯ ತಿಳಿದಿದೆ. ಅದೇನೆಂದರೆ , ದೂರ ದೂಡಲ್ಪಟ್ಟವರು ಸಂಘಟಿತರಾಗಿ ಹೋರಾಟ ನಡೆಸಿ ಪ್ರಭುತ್ವವನ್ನು ತಮ್ಮದಾಗಿಸಿಕೊಂಡಿದ್ದಾರೆ, ಎಂಬುದು.

ಆದ್ದರಿಂದ ನಮ್ಮ ಮುಂದಿರುವ ಸವಾಲು: ದೂರ ದೂರ ದೂಡಲ್ಪಟ್ಟವರು ಕೇಂದ್ರ ಬಿಂದುವನ್ನು ಸೇರಲು ಏನು ಮಾಡಬೇಕು? ಅದಕ್ಕೆ ಉತ್ತರ: ವರ್ಗ ಹೋರಾಟ. ಪಾತಕಿಗಳಿಗೆ ಅದೇ ನಮ್ಮ ಸವಾಲು.

(ಕೆಂಬಾವುಟ, ಆಗಸ್ಟ್ ೨೦೦೪)

◆

೯. ಭಯೋತ್ಪಾದನೆಯ ಕೆಲವು ಮುಖಗಳು

ಈಚೆಗೆ ಪದೇಪದೇ ಬಳಕೆಗೆ ಬರುತ್ತಿರುವ ಪದ ಭಯೋತ್ಪಾದಕತೆ. ಅದನ್ನು ಹೇಗೆ ಅರ್ಥೈಸಿದರೂ ಸರಿಯೆ, ಇದು ಸಮರ್ಥನೀಯವಲ್ಲವೆಂಬುದು ಸಾಮಾನ್ಯ ಗ್ರಹಿಕೆ. ಅದನ್ನು ಖಂಡಿಸಿ ಸುಮ್ಮನೆ ಕೂರುವುದರ ಬದಲು ಅದರ ವಿಶ್ಲೇಷಣೆಯಲ್ಲಿ ತೊಡಗಿ ಪರ್ಯಾಯಗಳನ್ನು ಹುಡುಕಿಕೊಳ್ಳಬೇಕಾದ್ದು ಅವಶ್ಯಕ.

ಮಹಾಭಾರತದ ದ್ರೌಪದಿಯ ತಂದೆ ದ್ರುಪದ. ಅವಳು ಮಗುವಾಗಿದ್ದಾಗ ರಾಜನ ಆಸ್ಥಾನದಲ್ಲಿ ಚರ್ಚೆಗಳನ್ನು ಕೇಳುತ್ತಿದ್ದಳಂತೆ. ಹಾಗೆ ಚರ್ಚೆಗಳಲ್ಲಿ ಭಾಗಿಗಳಾಗುತ್ತಿದ್ದ ವಿದ್ವಜ್ಜನರ ಪೈಕಿ ಚಾರ್ವಾಕರೂ ಇರುತ್ತಿದ್ದರೆಂದು ಮಹಾಭಾರತದಲ್ಲಿ ಉಲ್ಲೇಖವಿದೆ. ಇದೇ ಚಾರ್ವಾಕರಿಗೆ ಕುರುಕ್ಷೇತ್ರದ ಯುದ್ಧದ ಬಳಿಕ ಹಸ್ತಿನಾಪುರದಲ್ಲಿ ಸಿಕ್ಕಿದ ಮರ್ಯಾದೆ ಬೇರೆ ತೆರನಾದ್ದು. ಯುಧಿಷ್ಠಿರನು ಪುರದೊಳಗೆ ಪ್ರವೇಶಿಸುತ್ತಿದ್ದಾಗ ಸಹಸ್ರಾರು ಮಂದಿ ಅವನಿಗೆ ಸ್ವಾಗತ ಬಯಸಲು ನೆರೆದಿದ್ದರು. ಅವರಲ್ಲಿ ಒಬ್ಬ ಮುಂದೆ ಬಂದು ಧರ್ಮರಾಯನನ್ನು ಧಿಕ್ಕರಿಸಿ ಮಾತನಾಡಿದ: "ನಿನ್ನವರನ್ನೆಲ್ಲಾ ಕೊಂದು ಈಗ ನೀನು ಪಟ್ಟಕ್ಕೆ ಬರುತ್ತಿದ್ದೀಯೆ. ರಾಜನಾಗಲು ನಿನಗೆ ಅಧಿಕಾರವಿಲ್ಲ. ನಿನ್ನ ಕೈಗಳು ರಕ್ತದಿಂದ ಮಲಿನವಾಗಿವೆ." ಧರ್ಮ ಸಂಸ್ಥಾಪನೆಗಾಗಿ ಅದೆಷ್ಟೋ ಅಮಾಯಕರು ಅಸುವನ್ನು ನೀಗಿಕೊಂಡಿದ್ದುದು ಹೀಗೆ ಛೇಡಿಸಿದವನಿಗೆ ಆವೇಶ ತರಿಸಿದ್ದಿರಬೇಕು. ಆದರೆ ಜನ ಅವನನ್ನು ಸಹಿಸಲಿಲ್ಲ. "ಇವನನ್ನು ಹಿಡಿಯಿರಿ, ಕೊಚ್ಚಿಹಾಕಿ; ಬ್ರಾಹ್ಮಣ ವೇಷಧಾರಿಯಾದ ಈ ರಾಕ್ಷಸನು ನಮ್ಮಲ್ಲಿ ಗೊಂದಲ ಹುಟ್ಟಿಹಾಕುತ್ತಿದ್ದಾನೆ," ಎಂದು ಕೂಗಿದರು. ಅವನನ್ನು ಮುತ್ತಿ ಜನ ಕೊಂದುಹಾಕಿದರಂತೆ.

ವಾಸ್ತವವಾಗಿ ನಮ್ಮ ಪ್ರಾಚೀನ ಭಾರತದಲ್ಲಿ ಯಾರನ್ನಾದರೂ ತಮ್ಮ ಅಭಿಪ್ರಾಯಗಳ ಕಾರಣಕ್ಕಾಗಿ ಹೀಗೆ ಕೊಂದುಹಾಕಲಾಯಿತೆ, ಇಲ್ಲವೆ, ಎಂಬುದಕ್ಕೆ ಈ ಪ್ರಸಂಗವು ಪುರಾವೆಯಾಗಲಾರದು. ಆದರೆ ಅಸಹನೆಯ ಮನೋಭಾವಕ್ಕೆ ಇದು ಖಂಡಿತ ನಿದರ್ಶನವಾಗುತ್ತದೆ. ಅದೇ ಮಹಾಭಾರತದ ಇನ್ನೊಂದು ಪ್ರಸಂಗ ಹೀಗಿದೆ: ಯಾರೋ ಒಬ್ಬ ಜೀವನದಲ್ಲಿ ಜುಗುಪ್ಸೆಗೊಂಡು ಆತ್ಮಹತ್ಯೆ ಮಾಡಿಕೊಳ್ಳಲು ಮುಂದಾಗಿದ್ದನಂತೆ. ಆಗ ನರಿಯೊಂದು ಅವನನ್ನು ನೋಡಿ ಪ್ರಶ್ನಿಸಿತಂತೆ. ಮನುಷ್ಯ ಜನ್ಮ ಶ್ರೇಷ್ಠವಾದ್ದರಿಂದ ಹಾಗೆ

ಪ್ರಾಣ ಕಳೆದುಕೊಳ್ಳುವುದು ಉಚಿತವಲ್ಲವೆಂಬ ಉಪದೇಶ ನೀಡಿ, ಅದಕ್ಕೆ ಪೂರಕವಾಗಿ ತನ್ನದೇ ಪೂರ್ವಜನ್ಮದ ಕತೆ ಹೇಳಿತಂತೆ. ತಾನು ಮನುಷ್ಯನಾಗಿ ಜೀವಿಸುತ್ತಿದ್ದಾಗ ಅನ್ವೀಕ್ಷಿಕೀ ವಿದ್ಯೆಗೆ ಮಾರುಹೋಗಿ ಎಲ್ಲವನ್ನೂ ಪ್ರಶ್ನಿಸುವ ಮನೋಭಾವ ಬೆಳೆಸಿಕೊಂಡಿದ್ದುದರಿಂದ ದೊರೆತ ಶಿಕ್ಷೆಯ ಪರಿಣಾಮವಾಗಿ ಈಗ ನರಿಯಾಗಿ ಹುಟ್ಟಿದ್ದಿತಂತೆ. ಅಂದರೆ ತರ್ಕಬುದ್ಧಿ ಅದಕ್ಕೆ ವಿನಾಶಕಾರಿಯಾಗಿ ಪರಿಣಮಿಸಿತ್ತು.

ಈ ಎರಡೂ ಪ್ರಸಂಗಗಳಲ್ಲಿ ಸ್ಪಷ್ಟವಾಗಿ ಕಾಣುವ ಅಂಶವೆಂದರೆ ಬೌದ್ಧಿಕ ಭಯೋತ್ಪಾದಕತೆ. ಮಹಾಭಾರತದ ಕರ್ತೃವಿನ ದೃಷ್ಟಿಯಲ್ಲಿ ಸಂಸ್ಕೃತಿಯ ಪರಿಪಾಲನೆಯೆಂದರೆ ತರ್ಕ ಬೆಳೆಯಿಸದಿರುವುದು, ಯಜಮಾನರು ಹಾಕಿಕೊಟ್ಟ ಹಾದಿಯಲ್ಲಿ ಕೋಲೆಬಸವನಂತೆ ನಡೆಯುವುದು; ಯುದ್ಧವನ್ನು ತುಚ್ಛವಾಗಿ ಕಾಣಬಾರದು ಮತ್ತು ಪ್ರಶ್ನೆ ಹಾಕುವ ಮನೋಭಾವ ಬೆಳೆಸಿಕೊಳ್ಳಬಾರದು. ಇದರೊಡನೆ ತುಲನೆ ಮಾಡಿ ನೋಡಿದರೆ ಇಂದು ಮುರಳಿ ಮನೋಹರ ಜೋಶಿ ಇನ್ನೂ ತೀವ್ರವಾದ ಭಯೋತ್ಪಾದಕನಾಗಿ ತೋರಿಬರುವುದು ಸಹಜ. ಆತನ ಪ್ರಕಾರ ಇತಿಹಾಸ ತಜ್ಞರಾದ ಆರ್.ಎಸ್. ಶರ್ಮಾ ಮತ್ತಿತರರು ಬೇರೆ ಭಯೋತ್ಪಾದಕರಿಗಿಂತಲೂ ಹೆಚ್ಚು ಅಪಾಯಕಾರಿಗಳು; ಆದ್ದರಿಂದ ಅವರನ್ನು ಮರ್ದಿಸಬೇಕು. ಜೋಶಿಗೆ ರುಚಿಸುವ ಇತಿಹಾಸ ಪಠ್ಯಪುಸ್ತಕವನ್ನು ಅವರು ಬರೆಯಲಿಲ್ಲವಾದ್ದರಿಂದ ಭಯೋತ್ಪಾದಕರ ಪಟ್ಟಿಗೆ ಸೇರಿಕೊಳ್ಳುವ ಈ ವಿದ್ವಾಂಸರಿಗೆ ಜನ ಏನು ಮಾಡಬೇಕು? ಜೋಶಿ ಪ್ರಚೋದನೆಯನ್ನು ಆವಿರ್ಭಾವ ಮಾಡಿಕೊಂಡು ಅವರು ಪಾಟ್ನಾದಲ್ಲಿ ಶರ್ಮರ ಮನೆಗೆ ನುಗ್ಗಿ ದಾಂಧಲೆ ನಡೆಸಬೇಕು. ಜೋಶಿಯಂತೆ ಜವಾಬ್ದಾರಿರಹಿತ ಹೇಳಿಕೆಗಳನ್ನೂ ತೀರ್ಮಾನಗಳನ್ನೂ ಕೊಡುವವರು ಭಯೋತ್ಪಾದಕರೋ, ಅಥವಾ ದಾಖಲೆಗಳ ಆಧಾರದ ಮೇಲೆ ಪ್ರಾಚೀನ ಭಾರತದ ಲಕ್ಷಣಗಳನ್ನು ಸರಿಯಾಗಿ ಗುರುತಿಸುವವರು ಭಯೋತ್ಪಾದಕರೋ?

ನಮ್ಮ ಪ್ರಸಕ್ತ ಆರ್ಥಿಕ ಪರಿಸ್ಥಿತಿಯನ್ನು ವೀಕ್ಷಿಸಿದರೆ ಭಯೋತ್ಪಾದಕತೆಯ ಇನ್ನೊಂದು ಮುಖದ ಪರಿಚಯವಾಗುತ್ತದೆ. ಬೇರೆ ದೇಶಗಳ ಉಕ್ಕಿಗೆ ಅಮೇರಿಕಾ ಸುಂಕ ವಿಧಿಸಿ ತನ್ನ ಮಾರುಕಟ್ಟೆಯನ್ನು ನಿಯಂತ್ರಿಸಿಕೊಳ್ಳಬಹುದು; ಆದರೆ ಭಾರತದಂತಹ ದೇಶಗಳು ಅಮೆರಿಕಾದ ಸರಕುಗಳಿಗೆ ಸುಂಕ ವಿಧಿಸಿ ತಮ್ಮ ಉತ್ಪಾದನೆಗೆ ಕುಮ್ಮಕ್ಕು ಕೊಡುವುದು ವಿಶ್ವ ವ್ಯಾಪಾರ ಸಂಸ್ಥೆಯ ನಿಯಮಾವಳಿಗೆ ವಿರುದ್ಧವಾದ್ದು. ಇದು ಆರ್ಥಿಕ ಭಯೋತ್ಪಾದನೆಯಲ್ಲವೆ? ಅಥವಾ, ನಮ್ಮ ಸಾರ್ವಜನಿಕ ಸಂಪತ್ತನ್ನು ಹರಾಜಿಗಿಟ್ಟು ಖಾಸಗಿ ಲೂಟಿಕೋರರಿಗೆ ಅದನ್ನು ವರ್ಗಾಯಿಸುವುದರಲ್ಲಿ ತಮ್ಮ ಶೌರ್ಯವನ್ನು ಪ್ರದರ್ಶಿಸುವ ಅರುಣ್ ಶೌರಿ ಜನಸಮುದಾಯದ ಸಂಪತ್ತನ್ನು ಧ್ವಂಸಮಾಡುವ ಭಯೋತ್ಪಾದಕರಲ್ಲವೆ?

ನಾವು ಮನಗಾಣಬೇಕಾದ ಒಂದು ವಿಷಯವೇನೆಂದರೆ ಪದ ಅಥವಾ ಪದಗುಚ್ಛಗಳ ಪ್ರಯೋಗದಲ್ಲಿ ಕೂಡ ನಾವು ಸ್ವಂತಿಕೆಯನ್ನು ಬೆಳೆಸಿಕೊಳ್ಳುತ್ತಿಲ್ಲ ಮತ್ತು ಅದು ಹೀನಾಯವಾದ ಮಾನಸಿಕ ಸ್ಥಿತಿ. ಬೇರೆ ಯಾರೋ ತಮ್ಮ ಹಿತದ ದೃಷ್ಟಿಯಿಂದ ಹರಿಬಿಟ್ಟ ಆಶಯಗಳನ್ನು

ಇಡೀ ಮಾನವಕುಲದ ಆಶಯವೆಂಬಂತೆ ಪ್ರತಿಫಲಿಸ ಹೊರಡುವುದು ಶ್ರೇಯಸ್ಕರವಲ್ಲ. ಹಿಂದೆ ವಿಯೆಟ್ನಾಂನಲ್ಲಿ ಅಮೆರಿಕಾದ ವಿರುದ್ಧ ಹೋರಾಡುತ್ತಿದ್ದವರನ್ನು ಅಮೆರಿಕಾದ ಮಾಧ್ಯಮಗಳು 'ವಿಯೆಟ್ ಕಾಂಗ್'ಗಳೆಂದು ಕರೆದುವು; ನಮ್ಮ ಮಾಧ್ಯಮಗಳೂ ಅದೇ ಪದವನ್ನು ಬಳಸಿದುವು. ಆದರೆ ವಿಯೆಟ್ನಾಂನಲ್ಲಿ ಹೋರಾಡುತ್ತಿದ್ದವರು ಈ ಪ್ರಯೋಗವನ್ನು ಇಷ್ಟಪಡಲಿಲ್ಲವೆಂಬುದು ನಮಗೆ ಪ್ರಸ್ತುತವಾಗಲಿಲ್ಲ. ಅಂದರೆ, ಪ್ರಪಂಚವನ್ನು ಪ್ರಪಂಚದ ಆಯಾಭಾಗಗಳ ಜನರ ಕಣ್ಣಿನಿಂದ ನೋಡುವ ಬದಲು ಅಮೆರಿಕಾದ ಕಣ್ಣಿನಿಂದ ನೋಡುವ ಸಂಪ್ರದಾಯ ಬೆಳೆಯುತ್ತಿದೆ. ಅದರ ಫಲವಾಗಿ ಅಮೆರಿಕಾ ಯಾವುದನ್ನು ಮಾನವ ಹಕ್ಕು ಎನ್ನುತ್ತದೋ ಅದೇ ನಿಜವಾದ ಮಾನವ ಹಕ್ಕು ಎಂಬ ಭ್ರಾಂತಿ ಆವರಿಸುತ್ತದೆ. ಅಂತೆಯೇ, ಮುಕ್ತ ಸಮಾಜವೆಂದರೇನು? ಪ್ರಜಾಪ್ರಭುತ್ವವಾದಿ ಜೀವನವಿಧಾನ ಯಾವುದು? ಜಾಗತೀಕರಣವೆಂಬುದರ ವ್ಯಾಖ್ಯಾನವೇನು? ಭಯೋತ್ಪಾದಕತೆಯೆಂದು ಯಾವುದನ್ನು ಹೆಸರಿಸಬೇಕು?– ಇಂತಹ ಪ್ರಶ್ನೆಗಳು ಬಂದಾಗ ಅಮೆರಿಕಾದ ಸರ್ಕಾರ ಯಾವುದನ್ನು ಮಾನ್ಯ ಮಾಡುತ್ತದೋ ಅದನ್ನು ಸ್ವೀಕರಿಸುವ ತಪ್ಪು ಪರಿಪ್ರೇಕ್ಷ್ಯ ನಮ್ಮ ಮಧ್ಯೆ ಇದೆ. ಅಮೆರಿಕಾ ದೂಷಿಸಿದ್ದನ್ನು ದೂಷಿಸುವುದು, ಅದರ ಘೋಷಣೆಯನ್ನು ಮಾರ್ದನಿಸುವುದು, ಇದೇ ಸರಿಯಾದ ಕ್ರಮವೆಂಬ ಕಲ್ಪನೆಯನ್ನು ನಮ್ಮ ಮಾಧ್ಯಮಗಳೂ ಸೃಷ್ಟಿಸುತ್ತಿವೆ. ಮೂರು ಶತಮಾನಗಳ ಕಾಲ ಸ್ಥಳೀಯರ ಜಮೀನನ್ನು ತಮ್ಮದಾಗಿಸಿಕೊಂಡು ದೌರ್ಜನ್ಯ ನಡೆಸಿದವರನ್ನು ನಿರಾಯುಧರನ್ನಾಗಿಸಬೇಕೆಂದು ಜಿಂಬಾಬ್ವೆ ಸರ್ಕಾರ ತೀರ್ಮಾನಿಸಿದರೆ ಅಮೆರಿಕಾದ ಪ್ರಕಾರ ಅದು ಪ್ರಜಾಪ್ರಭುತ್ವಕ್ಕೆ ವಿರೋಧವಾದದ್ದು. ಆದರೆ ನಾವೂ ಅದೇ ಅಭಿಪ್ರಾಯ ತಳೆಯಬೇಕೆ? ನಮ್ಮ ಆಕಾಂಕ್ಷೆಗಳ ಆಧಾರದಿಂದ ತೀರ್ಮಾನ ಕೈಗೊಳ್ಳುವುದು ಉಚಿತವಲ್ಲವೆ?

ಬೇರೆ ಹಲವು ರಾಷ್ಟ್ರಗಳನ್ನು "ಪುಂಡ ಪ್ರಭುತ್ವಗಳು" ಎಂದು ಕರೆಯುವ ಅಮೆರಿಕಾ ಸರ್ಕಾರವು ಪುಂಡರಲ್ಲೇ ಅತಿಪುಂಡ ಎಂದು ಅದೇ ಅಮೆರಿಕಾದ ನೋಮ್ ಚೋಮ್‌ಸ್ಕಿ ಹೇಳುವ ಮಾತು ನಮ್ಮ ಅನೇಕ ಮಾಧ್ಯಮವೀರರಿಗೆ ಹಿತವಾಗಿ ಕಾಣುವುದಿಲ್ಲ; ಅವರಿಗೆ ನ್ಯೂಯಾರ್ಕ್ ಟೈಮ್ಸ್ ಹೇಳುವುದೇ ಪರಮಪ್ರಿಯವಾದ್ದು! "ಜನಾಂಗ ಮತ್ತು ವರ್ಗ" ಎಂಬ ಅಮೆರಿಕಾದ ಒಂದು ನಿಯತಕಾಲಿಕೆಯ ಸಂಪಾದಕ ಇಕ್ಬಾಲ್ ಅಹಮ್ಮದ್ 1988ರಲ್ಲಿ ಬೌಲ್ಡರ್ ಎಂಬಲ್ಲಿರುವ ಕೊಲರೆಡೊ ವಿಶ್ವವಿದ್ಯಾನಿಲಯದಲ್ಲಿ ಉಪನ್ಯಾಸವೊಂದನ್ನು ನೀಡಿ ಭಯೋತ್ಪಾದಕತೆಯ ಬದಲಾಗುವ ಮುಖಗಳ ಬಗ್ಗೆ ಪ್ರಸ್ತಾಪ ಮಾಡಿದ್ದರು. ಅದು ಉಪಯುಕ್ತವಾದ ಮಾಹಿತಿ ನೀಡುತ್ತದಾದ್ದರಿಂದ ಅದನ್ನು ಇಲ್ಲಿ ಸಂಗ್ರಹಿಸುವ ಪ್ರಯತ್ನ ಮಾಡಲಾಗಿದೆ.

೧೯೩೦-೪೦ರ ದಶಕದಲ್ಲಿ ಪ್ಯಾಲಿಸ್ಟೈನ್‌ನಲ್ಲಿ ಭೂಗತರಾಗಿ ಕಾರ್ಯ ನಿರ್ವಹಿಸುತ್ತಿದ್ದ ಯಹೂದ್ಯರನ್ನು ಭಯೋತ್ಪಾದಕರು ಎನ್ನಲಾಗುತ್ತಿತ್ತು. ಸುಮಾರು ಅದೇ ವೇಳೆಗೆ ಜರ್ಮನಿಯಲ್ಲಿ ನಾಜಿಗಳ ದೌರ್ಜನ್ಯಗಳನ್ನು ಕುರಿತಂತೆ ದೀರ್ಘ ವರದಿಗಳು ಬರಲಾರಂಭಿಸಿದುವು. ಆ

ಹಿನ್ನೆಲೆಯಲ್ಲಿ ಪ್ಯಾಲಿಸ್ಟೈನಿನ ಯಹೂದಿ ಝಿಯೋನಿಸ್ಟರು ಸ್ವಾತಂತ್ರ್ಯ ಹೋರಾಟಗಾರರೆಂಬ ಹೊಸ ನಾಮಧೇಯ ಪಡೆದರು. ಕಳೆದ ದಶಕದಲ್ಲಿ ಇಸ್ರೇಲಿನ ಪ್ರಧಾನಿಯಾಗಿದ್ದ ಮೆನಾಕಿ ಬೇಗಿನ್ ೧೯೪೦ರ ದಶಕದಲ್ಲಿ ಬ್ರಿಟನ್ನಿನ ಭಯೋತ್ಪಾದಕರ ಪಟ್ಟಿಯಲ್ಲಿ ಪ್ರಮುಖನಾಗಿದ್ದ. ಅವನನ್ನು ಹಿಡಿದುಕೊಟ್ಟವರಿಗೆ ಒಂದು ಲಕ್ಷ ಪೌಂಡುಗಳ ಬಹುಮಾನ ಸಹ ಘೋಷಿಸಲಾಗಿತ್ತು. ೧೯೭೦-೮೦ರ ದಶಕಗಳಲ್ಲಿ ಪ್ಯಾಲಿಸ್ಟೈನ್ ವಿಮೋಚನಾ ಸಂಸ್ಥೆಗೆ ಭಯೋತ್ಪಾದಕ ಸಂಘಟನೆಯೆಂಬ ಹೆಸರು ಬಂದು ಮೆನಾಕಿಂ ಬೇಗಿನ್ ಬ್ರಿಟನ್ನಿನ ಆಪ್ತಮಿತ್ರನಾಗಿದ್ದು ಹೇಗೆ? ಅದರ ಹಿಂದಿನ ರಾಜಕೀಯವೇನು, ಆರ್ಥಿಕ ಆಸಕ್ತಿಗಳೇನು?

ಇನ್ನೊಂದು ದೃಶ್ಯದತ್ತ ಹೊರಳೋಣ: ೧೯೮೫ರಲ್ಲಿ ಅಮೆರಿಕಾದ ಅಧ್ಯಕ್ಷ ರೀಗನ್ ಜೊತೆ ಪೇಟಾ ಧರಿಸಿದ್ದ ಕೆಲವು ಗಡ್ಡಧಾರಿಗಳು ವಾಷಿಂಗ್‌ಟನ್ನಿನ ಶ್ವೇತಭವನದಲ್ಲಿ ಚಿತ್ರ ತೆಗೆಸಿಕೊಂಡಿದ್ದುದು ಪ್ರಕಟವಾಗಿತ್ತು. ನೋಡಿದರೆ ಬಹಳ ಕ್ರುದ್ಧರಂತೆ ಕಾಣುತ್ತಿದ್ದ ಇವರನ್ನು ಶ್ವೇತಭವನಕ್ಕೆ ಸ್ವಾಗತಿಸಿ ಅಮೆರಿಕಾದ ಅಧ್ಯಕ್ಷರು ಈ ಅತಿಥಿಗಳನ್ನು ಸ್ವಾತಂತ್ರ್ಯ ಹೋರಾಟಗಾರರು ಎಂದು ಮಾಧ್ಯಮದವರಿಗೆ ಪರಿಚಯ ಮಾಡಿಕೊಟ್ಟಿದ್ದರು. ಯಾರವರು? ಆಫ್‌ಘಾನಿಸ್ತಾನದ ಮುಜಾಹಿದ್‌ಗಳು; ಆಗ "ದುಷ್ಟ ಸಾಮ್ರಾಜ್ಯ" ಎಂದು ಬಣ್ಣಿಸಲಾಗುತ್ತಿದ್ದ ಸೋವಿಯೆತ್ ಒಕ್ಕೂಟದ ವಿರುದ್ಧ ಬಂದೂಕು ಚಲಾಯಿಸಲು ಮುಂದೆ ಬಂದಿದ್ದ ಅಪ್ರತಿಮ ವೀರರು! ಹದಿಮೂರು ವರ್ಷಗಳ ನಂತರ ೧೯೯೮ರಲ್ಲಿ ಅಮೆರಿಕಾದ ಬೇರೊಬ್ಬ ಅಧ್ಯಕ್ಷ, ಒಸಾಮಾ ಮತ್ತು ಅವನ ಒಡನಾಡಿಗಳನ್ನು ಕೊಲ್ಲಲು ಕ್ಷಿಪಣಿ ಧಾಳಿ ನಡೆಸಲು ಸಜ್ಜಾಗುತ್ತಿದ್ದ. ಅದಕ್ಕೆ ಸ್ವಲ್ಪ ಮುಂಚೆ ಅದೇ ಒಸಾಮಾನನ್ನು ಜಾರ್ಜ್ ವಾಷಿಂಗ್‌ಟನ್ ಮತ್ತು ಥಾಮಸ್ ಜೆಫರ್ಸನ್ ಇಬ್ಬರ ಘನತೆಯನ್ನೂ ಮೈಗೂಡಿಸಿಕೊಂಡಿರುವವನೆಂದು ಹೊಗಳಲಾಗುತ್ತಿತ್ತು.

ಏನಿದರರ್ಥ? ಅಧಿಕೃತವಾಗಿ ಭಯೋತ್ಪಾದನೆ ಎಂಬುದೊಂದು ಸಂಕೀರ್ಣವಾದ ವಿಷಯ, ಎಂದು. ಅದರ ಮುಖ್ಯ ಲಕ್ಷಣವೆಂದರೆ ಬದಲಾಗುವಿಕೆ. ನಿನ್ನೆಯ ಭಯೋತ್ಪಾದಕ ಇಂದು ಧೀರ, ವೀರ; ಅಂತೆಯೇ ಅದರ ವ್ಯತಿರಿಕ್ತವೂ ಇದೆ. ಹೀಗೆ ಬದಲಾಗುತ್ತಿರುವ ಹಿನ್ನೆಲೆಯಲ್ಲಿ ಭಯೋತ್ಪಾದಕತೆ ಎಂದರೇನೆಂಬುದನ್ನು ನಿಷ್ಪಷ್ಟವಾಗಿ ಹೇಳಲು ಬರುವುದಿಲ್ಲ. ಇನ್ನೂ ಮುಖ್ಯವಾಗಿ, ಭಯೋತ್ಪಾದನೆ ಎಂಬುದು ಏಕೆ ಹುಟ್ಟಿಕೊಂಡಿತು, ಅದಕ್ಕೆ ಪರಿಹಾರವೇನು, ಎಂಬ ಪ್ರಶ್ನೆಗಳೂ ಇವೆ. ಅವನ್ನು ನೇರವಾಗಿ ಎದುರಿಸುವುದನ್ನು ಬಿಟ್ಟು ಭಾವುಕತೆಯನ್ನು ಹೆಚ್ಚಿಸುವಂತಹ ಹೇಳಿಕೆಗಳನ್ನು ಹೇರಳವಾಗಿ ನೀಡುವುದು ವಾಡಿಕೆಯಾಗಿದೆ. ಉದಾಹರಣೆಗೆ, ಅಮೆರಿಕಾದ ಮಾಜಿ ವಿದೇಶಾಂಗ ಸಚಿವ ಶುಲ್‌ಟ್ಸ್ ೧೯೮೪ರ ಅಕ್ಟೋಬರ್‌ನಲ್ಲಿ ಯೆಹೂದಿ ಪೂಜಾಸ್ಥಳವೊಂದರಲ್ಲಿ ಹೇಳಿದ್ದು ಇದು: ಭಯೋತ್ಪಾದನೆಯು ಆಧುನಿಕ ಬರ್ಬರತೆ. ಅದು ರಾಜಕೀಯ ಹಿಂಸೆ. ಪಾಶ್ಚಾತ್ಯ ನೈತಿಕ ಸೂತ್ರಗಳನ್ನು ಬುಡಮೇಲು ಮಾಡುತ್ತದೆ.

ಇದಾವುದೂ ಭಯೋತ್ಪಾದನೆಯ ಲಕ್ಷಣ ಪ್ರತಿಪಾದನೆ ಅಲ್ಲ; ಅದರಲ್ಲಿ ಯಾವ ಗಹನವಾದ ವಿಶ್ಲೇಷಣೆಯೂ ಇಲ್ಲ. ಅದು "ಆಧುನಿಕ" ಬರ್ಬರತೆಯಾದರೆ ಕೊಲಂಬಸ್ ನಂತರದಲ್ಲಿ

ಅಮೆರಿಕಾದಲ್ಲಿದ್ದ ಸ್ಥಳೀಯರನ್ನು ನಿರ್ನಾಮ ಮಾಡಿದ ಬರ್ಬರತೆಯನ್ನು ಏನೆಂದು ಕರೆಯಬೇಕು? ಅದು ರಾಜಕೀಯ ಹಿಂಸೆಯಾದರೆ ಪ್ರಜಾಪ್ರಭುತ್ವ ರೀತ್ಯಾ ಚುನಾಯಿತರಾದ ಅಲೆಂಡೆಯಂತಹ ರಾಷ್ಟ್ರಾಧ್ಯಕ್ಷರನ್ನು ಕೊಂದುಹಾಕಿದ ಅಮೆರಿಕಾದ ಹಿಂಸೆಗೆ ಯಾವ ಹೆಸರು ಕೊಡಬೇಕು? ಅದು ಪಾಶ್ಚಾತ್ಯ ನಾಗರಿಕತೆಗೆ ಆತಂಕ ಒಡ್ಡುತ್ತದೆಯೆನ್ನುವಾಗ ಭಾರತದಂತಹ ರಾಷ್ಟ್ರಕ್ಕೆ ಆತಂಕ ಒಡ್ಡುವವರನ್ನು ಹೇಗೆ ವಿಂಗಡಿಸಬೇಕು? ಅಥವಾ, ಬೇರೆ ನಾಗರಿಕತೆಗಳಿಗೆ ಬೆಂಕಿಯಿಟ್ಟರೆ ಪರವಾಗಿಲ್ಲ, ಪಾಶ್ಚಾತ್ಯ ನಾಗರಿಕತೆಯನ್ನು ಮಾತ್ರ ರಕ್ಷಿಸಬೇಕೆಂದು ಇದರ ಇಂಗಿತವೆ? ಮೂಲತಃ ಭಯೋತ್ಪಾದನೆಗೆ ಭೌಗೋಳಿಕ ಸೀಮಿತತೆ ಇಲ್ಲ; ಎಲ್ಲಿ ಬೇಕಾದರೂ ಬಾಂಬುಗಳನ್ನಿಟ್ಟು ಜೀವನವನ್ನು ಅಸ್ತವ್ಯಸ್ತಗೊಳಿಸಬಹುದು. ನ್ಯೂಯಾರ್ಕಿನಲ್ಲಿ ಸಿಡಿಯುವ ಬಾಂಬು ಶ್ರೀನಗರದಲ್ಲೂ ಸಿಡಿಯುತ್ತದೆ ಮತ್ತು ಶ್ರೀನಗರದಲ್ಲೂ ಒಂದು ನಾಗರಿಕತೆ ಇದೆ. ಆದರೆ ಅಮೆರಿಕಾಕ್ಕೆ ತನ್ನ ಅಂಗಳದಲ್ಲಿ ಘಟಿಸುವ ಆಪತ್ತುಗಳು ಪ್ರಮುಖವಾಗುತ್ತವೆ; ಬೇರೆಯವು ಅಷ್ಟು ಮಹತ್ವದ್ದಲ್ಲ. ಆದ್ದರಿಂದ ಅಮೆರಿಕಾವು ವಿಯೆಟ್ನಾಂನಲ್ಲಿ ನಾಗರಿಕತೆಯ ಧ್ವಂಸ ಮಾಡಿದರೆ ಅದು ಭಯೋತ್ಪಾದನೆಯಲ್ಲ; ಅಥವಾ, ಕ್ಯೂಬಾದ ಶಾಂತಿಯನ್ನು ಕದಡುವ ಲುಚ್ಚಾ ಕೆಲಸ ಮಾಡಿದರೆ ಅದೂ ಭಯೋತ್ಪಾದನೆಯಲ್ಲ!

ವಸ್ತುನಿಷ್ಠವಾದ ವಿಶ್ಲೇಷಣೆ ಮಾಡಬೇಕಾದರೆ ಮೊದಲು ಭಯೋತ್ಪಾದನೆಯ ಕಾರ್ಯ-ಕಾರಣ ಭಾವದತ್ತ ಗಮನ ಹರಿಸಬೇಕು. ೧೯೮೫ರ ಡಿಸೆಂಬರ್‌ನಲ್ಲಿ ಆಗಿನ ಯುಗೊಸ್ಲಾವಿಯಾದ ವಿದೇಶಾಂಗ ಸಚಿವ ವಾಷಿಂಗ್‌ಟನ್ನಿನಲ್ಲಿ ಅಮೆರಿಕಾದ ವಿದೇಶಾಂಗ ಕಾರ್ಯದರ್ಶಿಗೆ ಹೇಳಿದ್ದ: ಮೊದಲು ಪ್ಯಾಲಿಸ್ಟೈನಿನಲ್ಲಿ ಭಯೋತ್ಪಾದನೆಗೆ ಕಾರಣವೇನೆಂದು ತಿಳಿಯೋಣ, ಎಂದು. ಅದಕ್ಕೆ ಶುಲ್‌ಟ್ಸ್ ಮೇಜು ಕುಟ್ಟಿ ಕೆಂಪಾದ ಮತ್ತು ಅಬ್ಬರಿಸಿದ: "ಇದಕ್ಕೂ ಕಾರಣಕ್ಕೂ ಸಂಬಂಧವಿಲ್ಲ, ತಿಳಿಯಿತೆ?" ಅದು ಕಾರಣವಿಲ್ಲದೆ ಸಂಭವಿಸಿದ್ದರೆ ಯಾರೂ ಏನೂ ಮಾಡುವ ಪ್ರಮೇಯವಿಲ್ಲ; ತಾನಾಗಿಯೇ ಅದು ನಿಲ್ಲುವವರೆಗೆ ಸಂಯಮದಿಂದ ಕಾಯಬೇಕು, ಅಷ್ಟೆ! ಅಮೆರಿಕಾ ಹಾಗೆ ಮಾಡಲು ಸಿದ್ಧವಿದೆಯೆ? ಬದಲಾಗಿ, ಅದು ಯಾವ ಭಯೋತ್ಪಾದನೆಯನ್ನು ವಿರೋಧಿಸಬೇಕು ಮತ್ತು ಯಾವುದನ್ನು ಬೆಂಬಲಿಸಬೇಕು ಎಂಬುದರ ಬಗ್ಗೆ ವಿಚಿತ್ರವಾದ ಆಯ್ಕೆಯ ಸೂತ್ರವನ್ನಿರಿಸಿಕೊಂಡಿದೆ. ತಾನು ಅಧಿಕೃತವಾಗಿ ಖಂಡಿಸುವುದನ್ನು ಇಡೀ ವಿಶ್ವ ಖಂಡಿಸಬೇಕು, ತಾನು ಪ್ರಚೋದಿಸುವುದನ್ನು ಇತರರು ಮಾನ್ಯ ಮಾಡಬೇಕು! ಉದಾಹರಣೆಗೆ, ಅಮೆರಿಕಾದ ಅಧ್ಯಕ್ಷ ರೀಗನ್ ಒಮ್ಮೆ ಹೇಳಿದ್ದ: "ನಾನೊಬ್ಬ ಕಾಂಟ್ರ." ಈ ಕಾಂಟ್ರಾಗಳು ಯಾರು? ನಿಕರಾಗ್ವಾದಲ್ಲಿ ಚುನಾಯಿತ ಸರ್ಕಾರದ ವಿರುದ್ಧವಿದ್ದ ಭಯೋತ್ಪಾದಕರು. ಅಂತರರಾಷ್ಟ್ರೀಯ ನ್ಯಾಯಾಲಯವು ಅಮೆರಿಕಾವನ್ನು ಖಂಡಿಸಿ ನಿಕರಾಗ್ವಾದಲ್ಲಿ ಹಿಂಸೆ ಹರಿಯಬಿಡುವುದನ್ನು ನಿಲ್ಲಿಸಬೇಕೆಂದು ಆಜ್ಞಾಪಿಸಿತ್ತು. ತಾನು ಉಂಟುಮಾಡಿದ್ದ ಹಾನಿಗೆ ಪರಿಹಾರ ನೀಡಬೇಕೆಂದು ನ್ಯಾಯಾಲಯ ಹೇಳಿತ್ತು. ಆದರೆ ಅಮೆರಿಕಾ ಅದನ್ನು ಮಾಡಲಿಲ್ಲ.

ದೆಹಲಿಯಲ್ಲಿ ಕೂತು ಆಡಳಿತ ನಡೆಸುವ ವಾಜಪೇಯಿ ಸರ್ಕಾರದ ಸಚಿವರಿಗೆ ಇವೆಲ್ಲಾ ಜ್ಞಾಪಕಕ್ಕೆ ಬರದಿರುವುದು ನಮ್ಮ ದುರಂತ. ಆಯಾಕಾಲದಲ್ಲಿ ನಿಗದಿತವಾಗಿ ಅಮೆರಿಕಾದ ಮಿತ್ರರಾಷ್ಟ್ರವೋ ಅಥವಾ ಮಿತ್ರಕೂಟವೋ ಆಗಿದ್ದರೆ ಸಾಕು, ಅದು ಭಯೋತ್ಪಾದಕ ಎನಿಸಿಕೊಳ್ಳುವುದಿಲ್ಲ. ಇದು ಅಮೆರಿಕಾದ ಮೀಮಾಂಸಾ ಸೂತ್ರ. ಆದ್ದರಿಂದಲೇ ಪಿನೋಶೆ, ಜಿಯಾ ಉಲ್ ಹಕ್, ಪೋಲ್ ಪೋಟ್, ಸುಹಾರ್ತೋ, ವೆರ್‌ವೋರ್ಡ್, ಮೊಬುಟು, ಶೋಂಬೆ, ಸಾವಿಂಬಿ, ಮೊದಲಾದವರು ಭಯೋತ್ಪಾದಕರು ಎನಿಸಿಕೊಳ್ಳಲಿಲ್ಲ. ಆದರೆ ಇವರು ಒಬ್ಬೊಬ್ಬರೂ ಮಹಾ ಪಾತಕಿಗಳು, ಮಾನವತೆಯ ಶತ್ರುಗಳು, ಅವರವರ ರಾಷ್ಟ್ರಗಳ ದ್ರೋಹಿಗಳು. ಇವರೆಲ್ಲಾ ನಡೆಸಿರುವ ಹತ್ಯೆಗಳು ಪ್ಯಾಲಿಸ್ಟೈನ್ ವಿಮೋಚನಾ ಸಮರದ ಹೆಸರಿನಲ್ಲಿ ಸಾಯಿಸಲಾಗಿರುವವರ ಸಂಖ್ಯೆಯ ಸಾವಿರ ಪಟ್ಟು ಹೆಚ್ಚಾದುವು. ಅದಕ್ಕೆ ಹೋಲಿಸಿದರೆ ನ್ಯೂಯಾರ್ಕಿನ ವಿಶ್ವ ವಾಣಿಜ್ಯ ಕೇಂದ್ರದ ಹೆಸರಿನ ಕಟ್ಟಡದಲ್ಲಿ ಸತ್ತವರ ಸಂಖ್ಯೆ ಒಂದು ದೊಡ್ಡ ಬಕೆಟ್ಟಿನಲ್ಲಿ ಒಂದು ಚಿಕ್ಕ ಉದ್ಧರಣೆಯ ಪ್ರಮಾಣದ್ದು ಮಾತ್ರ!

ಕಳೆದ ನಾಲ್ಕೈದು ಶತಮಾನಗಳ ಇತಿಹಾಸ ನೋಡಿದರೆ ಒಂದು ಅವಹೇಳನೀಯ ಸಂಗತಿ ಗೊತ್ತಾಗುತ್ತದೆ; ಅದೇನೆಂದರೆ ನಾಗರಿಕತೆಗಳ ಧ್ವಂಸ. ಕೊಲಂಬಸ್ ನಂತರದಲ್ಲಿ ಮೆಕ್ಸಿಕೋದ ಮಾಯಾ, ಪೆರುವಿನ ಇಂಕಾ, ಚಿಲಿಯ ಅಜ್ಟೆಕ್, ಅಮೆರಿಕಾದ ಅಮೆರಿಕನ್-ಇಂಡಿಯನ್, ಕೆನಡಾದ ಕೆನೆಡಿಯನ್-ಇಂಡಿಯನ್, ನ್ಯೂಜಿಲೆಂಡಿನ ಮಾವೋರಿ, ಹಾಗೂ ಆಸ್ಟ್ರೇಲಿಯಾದ ಬುಡಕಟ್ಟುಗಳ ನಾಗರಿಕತೆಗಳು ನಾಶಮಾಡಲ್ಪಟ್ಟವು. ಆ ನಾಗರಿಕತೆಗಳ ವಿನಾಶದ ಧ್ವನಿ ಅಮೆರಿಕಾ ಪ್ರಚುರಪಡಿಸುವ ಇತಿಹಾಸದಲ್ಲಿ ಕೇಳಿಬರುವುದಿಲ್ಲ. ಆದರೆ ಅಮೆರಿಕಾ ಕಾಲದಿಂದ ಕಾಲಕ್ಕೆ ಬಣ್ಣಬಣ್ಣವಾಗಿ ನಿರ್ಮಿಸುವ ಪದಪುಂಜಗಳು ಜಗತ್ತಿನಲ್ಲೆಲ್ಲಾ ಮೆರೆಯುತ್ತವೆ. ಆದ್ದರಿಂದ ಸೋವಿಯೆತ್ ಒಕ್ಕೂಟದ ನೇತೃತ್ವದಲ್ಲಿದ್ದ ಬಣವು "ಸೈತಾನನ ಸಾಮ್ರಾಜ್ಯ" ಎನಿಸಿಕೊಂಡಿತು, ಇರಾಕ್ ಮೊದಲಾದುವು "ಪುಂಡ ರಾಜ್ಯ"ಗಳಾಗಿವೆ, "ದುಷ್ಟತನದ ಕೇಂದ್ರಬಿಂದು"ಗಳಾಗಿವೆ, ಮತ್ತು ಪ್ಯಾಲಿಸ್ಟೈನಿನ ಹೋರಾಟಗಾರರು "ಅನಾಗರಿಕ ಭಯೋತ್ಪಾದಕರು" ಎಂಬ ಹಣೆಪಟ್ಟಿ ಧರಿಸಿದ್ದಾರೆ. ನಿಕರಾಗ್ವಾದಲ್ಲಿ ಸಮೋಸಾ, ಕ್ಯೂಬಾದಲ್ಲಿ ಬಟಿಸ್ಟಾ, ವಿಯೆಟ್ನಾಂಮಿನಲ್ಲಿ ಡಿಯೆಂ, ಮುಂತಾದ ಕ್ರೂರಿಗಳನ್ನು ಅಮೆರಿಕಾ ಅಧಿಕಾರಕ್ಕೆ ತಂದಾಗ ಅದು ಕ್ರೌರ್ಯ, ದೌರ್ಜನ್ಯ, ಭಯೋತ್ಪಾದನೆ ಎನಿಸಿಕೊಳ್ಳಲಿಲ್ಲ; ಅವರೆಲ್ಲಾ ಸ್ವಾತಂತ್ರ್ಯದ ರಕ್ಷಕರೆಂಬ ಘೋಷಣೆ ಕೇಳಿಬರುತ್ತಿತ್ತು.

ಇಷ್ಟೆಲ್ಲಾ ಹೇಳಿದ್ದರ ಉದ್ದೇಶ ಇಷ್ಟೆ: ಅಮೆರಿಕಾವು ಭಯೋತ್ಪಾದನೆ ಎಂದು ಆರ್ಭಟ ಮಾಡಿದಾಗೆಲ್ಲಾ ನಾವು ಅದಕ್ಕೆ ಸ್ವರ ಕೂಡಿಸುವುದು ಅನಿವಾರ್ಯವಲ್ಲ. ಹಿಂದೆಲ್ಲಾ ನಾವು ಆ ಆರ್ಭಟಗಳನ್ನು ತಿರಸ್ಕರಿಸಿದ್ದೇವೆ ಮತ್ತು ಈಗಲೂ ತಿರಸ್ಕರಿಸುವ ಕರ್ತವ್ಯವಿದೆ. ನಿಜಕ್ಕೂ ಭಯೋತ್ಪಾದನೆ ಯಾವುದೆಂಬುದನ್ನು ಸರಿಯಾದ ವಿಧಾನದಿಂದ ತಿಳಿಯಬೇಕು ಮತ್ತು ಅದನ್ನು ಹಿಮ್ಮೆಟ್ಟಿಸಬೇಕು. ನಿರ್ದಿಷ್ಟವಾಗಿ ಭಯೋತ್ಪಾದನೆಯ ಲಕ್ಷಣಗಳನ್ನು ಗುರುತಿಸುವುದು ಇದಕ್ಕಾಗಿ

ಅತ್ಯವಶ್ಯಕ. ನಮ್ಮನ್ನು ಅಲುಗಾಡಿಸುವಂತಹ ಗಾಢವಾದ ಭೀತಿ ಯಾವುದರಿಂದ ಉಂಟಾದರೂ ಅದು ಭಯೋತ್ಪಾದನೆಯೇ ಆಗಿರುತ್ತದೆ. ಅಂತಹ ವಿಧಾನಗಳಿಂದ ವಿವಿಧ ದೇಶಗಳ ಪ್ರಭುತ್ವಗಳನ್ನು ಬೆದರಿಸುವುದು, ಬೀಳಿಸುವುದು, ಎದುರಿಸುವುದು, ಎಲ್ಲಾ ಭಯೋತ್ಪಾದನೆ ಎನಿಸಿಕೊಳ್ಳುತ್ತದೆ. ಕಾನೂನಿಗೆ ವಿರೋಧ ಅಥವಾ ಸಂವಿಧಾನ ಬಾಹಿರವಾಗಿ ಪ್ರಯೋಗಿಸುವ ಹಿಂಸೆಯನ್ನು ಸರ್ಕಾರ ಸಹ ಉಂಟುಮಾಡಬಹುದು. ಅದು ಖಾಸಗಿ ವ್ಯಕ್ತಿಯ ಅಥವಾ ಗುಂಪಿನ ಕೃತ್ಯವೇ ಆಗಿರಬೇಕೆಂದಿಲ್ಲ. ಇಲ್ಲಿ ಭಯೋತ್ಪಾದಕತೆಗೆ ಪ್ರಚೋದಕ ಕಾರಣದ ಬಗ್ಗೆ ಏನೂ ಹೇಳಿಲ್ಲ. ಉದ್ದೇಶ ಸರಿಯೇ ಅಥವಾ ಸರಿಯಲ್ಲವೇ ಎಂಬ ಭೇದ ಇಲ್ಲಿ ಗೌಣ. ನಾವು ಗಣನೆಗೆ ತೆಗೆದುಕೊಳ್ಳುವುದು ಏನಿದ್ದರೂ ಒಟ್ಟಭಿಪ್ರಾಯವನ್ನು. ಅದಕ್ಕೆ ಸಮ್ಮತಿ ಇದೆಯೆ, ಅದು ಕಾನೂನು ಬದ್ಧವೆ, ಮತ್ತು ಅದು ಸಂವಿಧಾನದ ಚೌಕಟ್ಟಿನಲ್ಲಿ ಬರುತ್ತದೆಯೆ ಎಂಬುದು ಇಲ್ಲಿ ಪ್ರಮುಖಾಂಶ. ಉದ್ದೇಶದ ಪ್ರಸ್ತಾಪವನ್ನು ಏಕೆ ಮಾಡಿಲ್ಲವೆಂದರೆ ಭಯೋತ್ಪಾದನೆಗೆ ಯಾವ ಉದ್ದೇಶವೂ ಸಮರ್ಥನೆ ನೀಡುವುದಿಲ್ಲವೆಂದು ಸೂಚಿಸುವುದಕ್ಕಾಗಿ.

ಅಯೋಧ್ಯೆಯ ರಾಮಮಂದಿರದ ಸಂದರ್ಭದಲ್ಲಿ ಉಂಟಾಗಿರುವ ಪ್ರಕ್ಷೋಭೆಯನ್ನು ಒಂದು ಉದಾಹರಣೆಯಾಗಿ ನೋಡಬಹುದು. ಒಂದು ಮಸೀದಿಯನ್ನು ಕೆಡವಿದರೆ ದೇಶದ ಸ್ವಾಭಿಮಾನಕ್ಕೆ ಇಂಬು ದೊರೆಯುತ್ತದೆ ಎಂಬ ತರ್ಕವು ವಿಸ್ತರಿಸಲ್ಪಟ್ಟರೆ ಬಹಳ ಕೇಡಿನ ಹಿಂಸಾಕೃತ್ಯಗಳನ್ನು ಸಮರ್ಥಿಸುವುದರತ್ತ ನಮ್ಮನ್ನು ಕೊಂಡೊಯ್ಯುತ್ತದೆ. ಒಂದಷ್ಟು ನಾಯಕರನ್ನು ಇಲ್ಲವಾಗಿಸಿದರೆ ಶಾಂತಿ ನೆಲೆಸುತ್ತದೆಯೆಂಬ ತರ್ಕವನ್ನು ಬೆಳೆಸಿ ಅವರನ್ನೆಲ್ಲಾ ಮುಗಿಸುವುದರಲ್ಲಿ ತಪ್ಪೇನಿದೆ? ಉದ್ದೇಶವು ಉದಾತ್ತವಾದುದು, ಏಕೆಂದರೆ ಶಾಂತಿಯೆಂಬುದು ಎಲ್ಲರ ಆಶಯ; ಆದರೆ ಉದ್ದೇಶವು ಭಯೋತ್ಪಾದನೆಯನ್ನು ಸಮರ್ಥಿಸಲಾರದು. ಅಂತೆಯೇ, ಸ್ವಾಭಿಮಾನದ ಪ್ರಕಟಣೆಗಾಗಿ ಮಸೀದಿಯನ್ನು ಕೆಡವಬೇಕೆಂಬ ಉದ್ದೇಶವೂ ಕಳಂಕಪೂರಿತವಾದದ್ದು.

ಭಯೋತ್ಪಾದನೆಯನ್ನು ಸ್ಥೂಲವಾಗಿ ಐದು ವಿಧಗಳಾಗಿ ವಿಂಗಡಿಸಬಹುದು: (ಅ) ಸರ್ಕಾರ ಹರಿಯಬಿಡುವುದು, (ಆ) ಮತಧರ್ಮಗಳು ಹುಟ್ಟಿಹಾಕುವುದು, (ಇ) ಅಪರಾಧಿಗಳು ಸೃಷ್ಟಿಸುವುದು (ಉದಾಹರಣೆ: ವೀರಪ್ಪನ್, ದಾವೂದ್ ಇಬ್ರಾಹಿಂ), (ಈ) ರಾಜಕೀಯದಿಂದ ಮೂಡಿಬರುವುದು, ಮತ್ತು (ಉ) ವ್ಯವಸ್ಥೆಯ ವಿರೋಧಿಗಳು ಸೃಷ್ಟಿಸುವಂಥದು. ಇದಾವುದೂ ಕೇವಲ ಪ್ರತ್ಯೇಕವಾಗಿ ಉಳಿಯಬೇಕೆಂಬ ನಿಯಮವಿಲ್ಲ; ಒಂದೊಂದು ಬೇರೊಂದರೊಡನೆ ಬೆರೆಯಬಹುದು. ಉದಾಹರಣೆಗೆ, ವೀರಪ್ಪನ್ ಮತ್ತು ನೆಡುಮಾರನ್ ಒಟ್ಟಾದಾಗ ಅಪರಾಧಿ ಮತ್ತು ರಾಜಕೀಯ ಆಕಾಂಕ್ಷಿ ಇಬ್ಬರೂ ಸೇರಿ ಉಂಟುಮಾಡುವ ಭಯೋತ್ಪಾದನೆ ನಮ್ಮ ಕಣ್ಣ ಮುಂದೆ ಬರುತ್ತದೆ. ಮತಧರ್ಮ ಮತ್ತು ರಾಜಕೀಯದ ಬೆರೆಯುವಿಕೆಗೆ ಗೋಧ್ರಾ ಮತ್ತು ನಂತರದ ಗುಜರಾತ್ ಹತ್ಯೆಗಳು ಉದಾಹರಣೆಯಾಗುತ್ತದೆ. ರಾಜಕೀಯ ಮತ್ತು ಸರ್ಕಾರದ ಬೆರೆಯುವಿಕೆಗೆ ಇಂದಿನ ಕಾಶ್ಮೀರ ಮತ್ತು ಒಂದು ದಶಕದ ಹಿಂದಿನ ಪಂಜಾಬ್ ನಿದರ್ಶನಗಳಾಗುತ್ತವೆ. ಇವೆಲ್ಲಾ ಭಯೋತ್ಪಾದನೆಗಳೇ. ಅಸ್ಪೃಶ್ಯತೆಯನ್ನು ಏನೇನೋ ವ್ಯಾಖ್ಯಾನ

ನೀಡಿ ಸಮರ್ಥಿಸುವುದು ಸಾಮಾಜಿಕ ಭಯೋತ್ಪಾದನೆ ಎನಿಸಿಕೊಳ್ಳುತ್ತದೆ. ನ್ಯಾಯಾಂಗವು ತನ್ನ ಅಧಿಕಾರವನ್ನು ದುರುಪಯೋಗ ಮಾಡಿಕೊಂಡರೆ ಅದು ನ್ಯಾಯಾಂಗದ ಭಯೋತ್ಪಾದಕತೆ ಆದೀತು. ಸರ್ಕಾರಿ ಭಯೋತ್ಪಾದನೆಯು ಕ್ರಮೇಣ ಖಾಸಗಿ ಭಯೋತ್ಪಾದನೆಯಾಗಿ ಪರಿವರ್ತನೆ ಹೊಂದಲು ಸಾಧ್ಯವಿದೆ. ತಾನು ಹತ್ಯೆ ಮಾಡುವ ಬದಲು ಸರ್ಕಾರವು ಖಾಸಗಿಯವರಿಗೆ ಆ ಕೆಲಸ ವಹಿಸಬಹುದು. ದಕ್ಷಿಣ ಅಮೆರಿಕಾದ ಕೆಲವು ಸರ್ಕಾರಗಳು ಮಾದಕ ದ್ರವ್ಯಗಳ ವ್ಯಾಪಾರದ ಹಿನ್ನೆಲೆಯಲ್ಲಿ ಇಂತಹ ಪದ್ಧತಿ ಅನುಸರಿಸಿರುವುದುಂಟು. ಅಮೆರಿಕಾದ ಸಿ.ಐ.ಎ. ಮಾಡುವುದೂ ಇದನ್ನೇ. ಹಿಂದೆ ಪಾಕಿಸ್ತಾನದ ಸರ್ಕಾರವು ತನ್ನ ವಿರೋಧಿಗಳ ಹತ್ಯೆಗೆ ಇಂತಹುದೇ ಸಂಚು ಹೂಡಿದ್ದಿತೆಂಬುದು ಎಲ್ಲರಿಗೂ ತಿಳಿದ ವಿಷಯ. ಅದಕ್ಕೆ ಚಾಲನೆ ನೀಡಿದ ಭುಟ್ಟೋ ಕಡೆಗೆ ತಾನೇ ನೇಣುಗಂಬವನ್ನೇರಿದ. ನೆರೆ ರಾಜ್ಯಗಳ ಮೇಲೆ ಹಲ್ಲೆ ನಡೆಸಲು ಸರ್ಕಾರಗಳು ಬೆಂಬಲ ಪಡೆಯುತ್ತಿರುವ ಖಾಸಗಿ ಭಯೋತ್ಪಾದಕರ ಪಟ್ಟಿ ಸಾಕಷ್ಟು ದೊಡ್ಡದಿರುತ್ತದೆ.

ಈಗಾಗಿರುವುದೇನೆಂದರೆ ಐದರ ಪೈಕಿ ಒಂದನ್ನು ಮಾತ್ರ ಹೀನವಾದುದೆಂದು ಗುರುತಿಸಿ ಅದರ ಬೆನ್ನು ಹತ್ತಿದ್ದೇವೆ. ಎಲ್ಲರ ಬಾಯಲ್ಲೂ ಸೆಪ್ಟೆಂಬರ್ ೧೧ರ ಘಟನೆಯ ಖಂಡನೆಯ ಮಾತು ಬರುತ್ತದೆ; ಆದರೆ ಅಮೆರಿಕಾದ ಸರ್ಕಾರದ ಲೆಕ್ಕವಿಲ್ಲದಷ್ಟು ಭಯೋತ್ಪಾದನಾ ಪ್ರಸಂಗಗಳು ಮುಚ್ಚಿಹೋಗಿವೆ. ಮತಧರ್ಮಗಳು ಉಂಟುಮಾಡುವ ಭಯೋತ್ಪಾದನೆ ಇಂದು-ನಿನ್ನೆಯದಲ್ಲ. ಹದಿನೇಳು ವರ್ಷದ ತರುಣಿ ಜೋನಳನ್ನು ಜೀವಂತ ಸುಟ್ಟಿದ್ದು ಚರ್ಚಿನ ಭಯೋತ್ಪಾದನೆ. ಈಗಲೂ ಭಾರತ, ಐರ್ಲೆಂಡ್, ಬಂಗ್ಲಾದೇಶ, ಮುಂತಾದೆಡೆಗಳಲ್ಲಿ ಮತಧರ್ಮದ ಭಯೋತ್ಪಾದನೆ ಉಗ್ರವಾಗಿಯೇ ಇದೆ. ಇದನ್ನೆಲ್ಲಾ ಗಣನೆಯಿಂದ ಹೊರಗಿಟ್ಟು, ಕೇವಲ ರಾಜಕೀಯ ಭಯೋತ್ಪಾದನೆಯೊಂದನ್ನೇ ಏಕೆ ಕೇಂದ್ರವಾಗಿಸಲಾಗಿದೆ? ಏಕೆಂದರೆ, ಈ ಶತಮಾನದಲ್ಲಿ ಮೊದಲ ಬಾರಿಗೆ ಅಮೆರಿಕಾ ಅದರ ಹಿಡುಗಿನಿಂದ ತತ್ತರಿಸಿಹೋಗಿದೆ, ಅದಕ್ಕೆ!

ಭಯೋತ್ಪಾದನೆಯ ವಿಧಗಳ ಪಟ್ಟಿಗೆ ಆರನೆಯ ಮಾದರಿಯೊಂದು ಸೇರ್ಪಡೆಯಾಗಬೇಕು: ಅದು ಆರ್ಥಿಕ ಭಯೋತ್ಪಾದನೆ. ಇದರ ಅತಿಪ್ರಮುಖ ರೂವಾರಿ ಅಮೆರಿಕಾ. ಭಾರತದಂತಹ ದೇಶಗಳ ಅಸ್ತಿತ್ವಕ್ಕೆ ಧಕ್ಕೆ ತರುವ, ಸಾರ್ವಭೌಮತ್ವವನ್ನು ಹೊಸಕಿಹಾಕುವ, ಆರ್ಥಿಕ ಭಯೋತ್ಪಾದನೆಗೆ ಅಮೆರಿಕಾ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ, ವಿಶ್ವ ಬ್ಯಾಂಕ್, ವಿಶ್ವ ವಾಣಿಜ್ಯ ಸಂಸ್ಥೆ, ಬಹುರಾಷ್ಟ್ರೀಯ ಕಂಪನಿಗಳು, ಮುಂತಾದುವನ್ನು ಬಳಸಿಕೊಳ್ಳುತ್ತದೆ. ಅದೆಲ್ಲಾ ಮಾರ್ಮಿಕವಾಗಿ ನಡೆಯದಿದ್ದರೂ ಅಭಿವೃದ್ಧಿ ಹೊಂದಬೇಕಾದ ದೇಶಗಳ ಆಳುವ ವರ್ಗಗಳು ಸ್ವಜನಹಿತವನ್ನು ಉಪೇಕ್ಷಿಸಿ ಅಮೆರಿಕಾದಂತಹ ದೇಶಗಳ ದಳ್ಳಾಳಿಗಳಾಗಿ ವರ್ತಿಸುತ್ತವೆ. ಆಯಾ ದೇಶಗಳ ಜನರಿಗೆ ಅವರದೇ ಸರ್ಕಾರಗಳು ಈ ರೀತಿಯಲ್ಲಿ ಭಯೋತ್ಪಾದಕರಾಗಿ ಪರಿಣಮಿಸಿವೆ.

ಭಯೋತ್ಪಾದಕರೆನಿಸಿಕೊಂಡಿರುವ ಜನಗಳ ಅಥವಾ ಬಣಗಳ ಮಾನಸಿಕ ಸ್ಥಿತಿ ಅರ್ಥವಾಗದಷ್ಟು ಜಟಿಲವಾದುದೇನೂ ಅಲ್ಲ. ತಮ್ಮ ಬಗೆಗಿನ ಅಸಡ್ಡೆಯನ್ನು ಬಿಟ್ಟು ತಮ್ಮ ಪರಿಸ್ಥಿತಿಗೆ ಪರಿಹಾರ ದೊರಕಿಸಿಕೊಡಬೇಕೆಂದು ಗಟ್ಟಿಯಾಗಿ ಕೂಗಿಹೇಳಲು ಅವರು

ಕಾತುರರಾಗಿರುತ್ತಾರೆ. ಆದರೆ ಕೇಳಬೇಕಾದ ಕಿವಿಗಳು ಮುಚ್ಚಿಹೋಗಿವೆ. ಹೀಗಾಗಿ ಭಯೋತ್ಪಾದನೆಯು ಕಡಿಮೆ ಸಂಖ್ಯೆಯ ಗುಂಪಿನ, ಅಳಲು ತೋಡಿಕೊಳ್ಳುವ ವಿಧಾನವಾಗಿ ಬಿಟ್ಟಿದೆ. ಆ ಜನ ಅನ್ಯಮಾರ್ಗಗಳನ್ನು ಅಂಗೀಕರಿಸುವುದಿಲ್ಲವೆಂದೇನೂ ಇಲ್ಲ; ಆದರೆ ಓಗೊಡುವವರು ವಿರಳ. ಭಗತ್ ಸಿಂಗ್ ಆಗಾಗ್ಗೆ ಇದನ್ನು ಫ್ರಾನ್ಸಿನ ಕ್ರಾಂತಿಕಾರಿ ವೆಯ್ಲ್ಯಾಂತ್‌ನ ಮಾತುಗಳಲ್ಲಿ ತಿಳಿಯಹೇಳುತ್ತಿದ್ದ. "ಕಿವುಡರಿಗೂ ಕೇಳುವಂತೆ ಹೇಳುವುದು ನಮ್ಮ ಉದ್ದೇಶ"ಎಂದು ಸೆಂಟ್ರಲ್ ಅಸೆಂಬ್ಲಿಯಲ್ಲಿ ಬಾಂಬಿನ ಜೊತೆ ಒಗೆಯಲಾಗಿದ್ದ ಕರಪತ್ರಗಳಲ್ಲಿ ಹೇಳಲಾಗಿತ್ತು. "ವೈಯಕ್ತಿಕ ಭಯೋತ್ಪಾದನೆಯು ಫಲಕಾರಿಯಲ್ಲವೆಂದು ತಿಳಿದಿದೆ" ಎಂದು ಸಹ ಆತ ಹೇಳಿದ್ದ ಮತ್ತು ಯಾರಿಗೂ ಪ್ರಾಣಹಾನಿಯಾಗದಂತೆ ಬಾಂಬ್ ಸಿಡಿಸಿದ್ದ.

ಪ್ಯಾಲಿಸ್ಟೈನ್ ಜನ ೧೯೪೮ರಲ್ಲಿ ತಮ್ಮ ದೇಶ ಕಳೆದುಕೊಂಡು ಇಪ್ಪತ್ತು ವರ್ಷ ಎಲ್ಲ ಕಡೆ ಅಹವಾಲು ಸಲ್ಲಿಸುತ್ತಾ ಬಂದರು. ವಿಶ್ವಸಂಸ್ಥೆಯೂ ಸೇರಿದಂತೆ ಯಾರೂ ಅವರ ಅಹವಾಲನ್ನು ಓದಿ ವಿಚಲಿತರಾಗಲಿಲ್ಲ, ಪ್ರತಿಕ್ರಿಯಿಸಲಿಲ್ಲ. ತಮ್ಮ ದೇಶವನ್ನು ಅಮೆರಿಕಾ ಮತ್ತು ಬ್ರಿಟನ್‌ಗಳು ಹೈಜಾಕ್ ಮಾಡಿ ಇಸ್ರೇಲಿಗೆ ಬಳುವಳಿಯಾಗಿ ಕೊಟ್ಟಿದ್ದನ್ನು ಪ್ರತಿಭಟಿಸಿ ವಿಶ್ವಕ್ಕೆ ಕೇಳಿಸುವಂತೆ ಹೇಳಲು ೧೯೬೮ ರಿಂದ ೧೯೭೫ರ ವರೆಗೆ ಪ್ಯಾಲಿಸ್ಟೈನಿನ ಹೋರಾಟಗಾರರು ವಿಮಾನಗಳನ್ನು ಹೈಜಾಕ್ ಮಾಡುವುದನ್ನು ತಮ್ಮ ಕ್ರಮವನ್ನಾಗಿಸಿಕೊಂಡರು. ಅವರನ್ನು ಪುಂಡರೆಂದು ಜರಿಯಲಾಯಿತೇ ವಿನಾ ಅವರ ಮಾತನ್ನು ಕೇಳಿಸಿಕೊಳ್ಳಲು ಯಾರೂ ತುದಿಗಾಲಲ್ಲಿ ನಿಲ್ಲಲಿಲ್ಲ. ಅಸಹಾಯಕತೆಯ ಕೋಪ, ಒಬ್ಬಂಟಿತನದ ಕೋಪ, ಎಲ್ಲಾ ಹೆಪ್ಪುಗಟ್ಟಿ ಕ್ರೋಧದ ಅಭಿವ್ಯಕ್ತಿ ಆರಂಭವಾಯಿತು. ಹೊಡೆತಕ್ಕೆ ಪ್ರತಿಹೊಡೆತ ನೀಡಬೇಕೆಂಬ ಆಕಾಂಕ್ಷೆ ಅಂಕುರಿಸಿದ್ದು ಹೀಗೆ. ಈ ಸಂಬಂಧದಲ್ಲಿ ಒಂದು ಘಟನೆಯನ್ನು ಸ್ಮರಿಸಬಹುದು: ಅಮೆರಿಕಾದ "ನ್ಯೂ ಜೆರ್ಸಿ" ಎಂಬ ಯುದ್ಧನೌಕೆ ೧೯೮೩ರಲ್ಲಿ ಬೈರೂತ್ ಮೇಲೆ ಧಾಳಿ ಮಾಡಿತ್ತು. ಅದಾದ ಕೆಲ ಸಮಯದ ನಂತರ ಅಮೆರಿಕಾದ ಟಿ.ಡಬ್ಲ್ಯು. ಎ. ವಿಮಾನವೊಂದನ್ನು ಅಪಹರಿಸಲಾಗಿತ್ತು. ಅಪಹರಣಕಾರರು ವಿಮಾನವನ್ನು ತಮ್ಮ ಹತೋಟಿಗೆ ತೆಗೆದುಕೊಂಡಾಗ "ನ್ಯೂ ಜೆರ್ಸಿ, ನ್ಯೂ ಜೆರ್ಸಿ" ಎಂದು ಕೂಗುತ್ತಿದ್ದರು. ವಿಮಾನದಲ್ಲಿ ನ್ಯೂ ಜೆರ್ಸಿಯ ಜೂಡಿ ಬ್ರೌನ್ ಎಂಬಾಕೆ ಇದ್ದವಳು ಅಪಹರಣಕಾರರು ತನ್ನನ್ನು ಬೆನ್ನಟ್ಟುತ್ತಾರೆಂದು ಹೆದರಿದಳು. ಯುದ್ಧನೌಕೆಯ ಆಕ್ರಮಣದ ವಿರುದ್ಧ ಪ್ರತೀಕಾರ ಕೈಗೊಳ್ಳಲು ವಿಮಾನವನ್ನು ಅಪಹರಿಸಲಾಗಿದ್ದಿತೆಂದು ಆಮೇಲೆ ತಿಳಿದುಬಂತು. ಭಯೋತ್ಪಾದನೆ ಹೇಗೆ ಆವಿರ್ಭವಿಸುತ್ತದೆಂಬುದಕ್ಕೆ ಇದೊಂದು ಚಿಕ್ಕ ನಿದರ್ಶನ, ಅಷ್ಟೆ. ಕ್ರಮೇಣ ಅದು ಬೆಳೆದು ಹೆಮ್ಮರವಾಗಿ ನಿಂತಾಗ ಸೆಪ್ಟೆಂಬರ್ ೧೧ರ ಘಟನೆಯಂತಹ ಸಂಗತಿಗಳು ನಮ್ಮನ್ನು ಬೆಚ್ಚಿಬೀಳಿಸುತ್ತವೆ.

ತಮ್ಮನ್ನು ನಡು ನೀರಲ್ಲಿ ಕೈ ಬಿಟ್ಟು ಮೋಸ ಮಾಡಿದರೆಂಬ ಭಾವನೆಯೂ ಕೆಲವೊಮ್ಮೆ ಭಯೋತ್ಪಾದನೆಗೆ ಜನ್ಮ ನೀಡುತ್ತದೆ. ಒಸಾಮಾ ಬಿನ್ ಲಾಡೆನ್ ಅಂಥವರು ಈ ಬಣಕ್ಕೆ ಸೇರುತ್ತಾರೆ. ಈತ ಮೊದಲಿಗೆ ಅಮೆರಿಕಾದ ಪರಮ ಮಿತ್ರನಾಗಿ ಅವರೊಡನೆ ಜಂಟಿ ಕಾರ್ಯಚರಣೆ

ಮಾಡುತ್ತಿದ್ದ. ಆಗ ಅವನನ್ನು ಶ್ರೇಷ್ಠ ಧರ್ಮಭೀರು ಎಂದು ಬಣ್ಣಿಸಲಾಗುತ್ತಿತ್ತು. ತನ್ನ ದೇಶವಾದ ಸೌದಿ ಅರೇಬಿಯಾದಲ್ಲಿ ಅಮೆರಿಕಾ ಸೈನ್ಯದ ತುಕಡಿಗಳನ್ನಿಡುವುದಕ್ಕೆ ಅವನ ವಿರೋಧವಿತ್ತು. ಅದು ಒಂದು ಮಿತ್ರರಾಷ್ಟ್ರಕ್ಕೆ ಅಮೆರಿಕಾ ಬಗೆದ ದ್ರೋಹವೆಂದು ಬಿನ್ ಲಾಡೆನ್ ಬಹಿರಂಗವಾಗಿ ಕಿಡಿಕಾರಿದ್ದ. ಅವನ ಪ್ರತಿಕ್ರಿಯೆ ಸರಿಯೋ ಅಲ್ಲವೋ ಎಂಬುದು ಬೇರೆ ವಿಚಾರ. ಆದರೆ ಅವನಲ್ಲಿ ಬದಲಾವಣೆ ಉಂಟಾದದ್ದು ಹೀಗೆ. ತಾನೇ ಬೀಜ ಬಿತ್ತಿ ಬೆಳೆಸಿದ ವಿಷವೃಕ್ಷ ಬಿನ್ ಲಾಡೆನ್ ಎಂಬುದನ್ನು ಅಮೆರಿಕಾ ಇಂದು ತನ್ನ ಜನತೆಗೆ ಹೇಳಲು ಹಿಂಜರಿಯುತ್ತದೆ; ಆದರೆ ವಿಶ್ವಕ್ಕೆಲ್ಲಾ ಅದು ತಿಳಿದಿದೆ. ಬಿನ್ ಲಾಡೆನ್ ಪ್ರಕಾರ ಅವನ ದೇಶ ಅಮೆರಿಕಾದ ಹಿಂಸೆಗೆ ಗುರಿಯಾದುದಕ್ಕೆ ಉತ್ತರ ಪ್ರತಿಹಿಂಸೆಯು ಸ್ವರೂಪದ್ದು; ಅದೇ ಭಯೋತ್ಪಾದನೆ. ತನ್ನ ದೇಶದ ಸಂಪತ್ತು ಲೂಟಿಯಾಗುತ್ತಿದೆಯೆಂದು ಇವನಿಗೆ ಕಳಕಳಿ ಇಲ್ಲ, ತನ್ನ ದೇಶದ ಜನ ಮಧ್ಯಕಾಲೀನ ಕತ್ತಲೆಯ ಕೂಪದಲ್ಲೇ ಉಳಿದಿದ್ದಾರೆಂದು ಇವನಿಗೆ ತವಕವಿಲ್ಲ; ಅಮೆರಿಕಾದ ಸೈನ್ಯದ ತುಕಡಿ ತನ್ನ ದೇಶದೊಳಕ್ಕೆ ಬಂದಿತೆಂದು ಎಲ್ಲಿಲ್ಲದ ಮುಜುಗರ ಮತ್ತು ಪ್ರತಿಹಿಂಸೆ ಅವನದು. ಬೇರೆ ದೇಶಗಳಿಗೆ ಇದೇ ಅಮೆರಿಕಾದ ಸೈನ್ಯ ನುಗ್ಗಿದಾಗ ಲಾಡೆನ್ ಬಾಯಿ ಮುಚ್ಚಿ ಕುಳಿತಿರುತ್ತಾನೆಂಬುದು ತಿಳಿದ ವಿಷಯವೇ ಆಗಿದೆ.

ಜಾಗತೀಕರಣವೆಂಬ ಘೋಷಿತ ಉದ್ದೇಶ ಇಲ್ಲದಿದ್ದಾಗಲೂ ಕೆಲವು ಬಲಿಷ್ಠ ರಾಷ್ಟ್ರಗಳು ವಿಶ್ವದ ಬೇರೆ ಬೇರೆ ರಾಷ್ಟ್ರಗಳನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಂಡಿದ್ದವು ಇಲ್ಲವೆ ಸ್ಥಳೀಯ ಛಿದ್ರಕಾರಿ ಶಕ್ತಿಗಳೊಡನೆ ಕೈಜೋಡಿಸಿ ಆ ರಾಷ್ಟ್ರಗಳ ಸಂಪತ್ತನ್ನು ತಮ್ಮದಾಗಿಸಿಕೊಂಡಿದ್ದವು. ಕಟಾಂಗ, ಬಯಾಫ್ರ, ಪೂರ್ವ ಟಿಮೋರ್, ಮುಂತಾದವು ಇದಕ್ಕೆ ಉದಾಹರಣೆಗಳು. ಆಧುನಿಕ ತಂತ್ರಜ್ಞಾನವು ಜಾಗತಿಕ ಮಟ್ಟದಲ್ಲಿ ಹೊಡೆತಕ್ಕೆ ಸಿಗುವಂತಹ ದೇಶಗಳ ಸಂಖ್ಯೆಯನ್ನು ಹೆಚ್ಚಿಸಿದೆ. ಆರ್ಥಿಕತೆಯ ಜಾಗತೀಕರಣದೊಂದಿಗೆ ಹಿಂಸೆಯ ಜಾಗತಿಕ ವ್ಯಾಪ್ತಿಯೂ ಹೆಚ್ಚಿದೆ. ಬೇರೆಲ್ಲ ಜಾಗತೀಕರಣವಾಗಬೇಕೆನ್ನುವಾಗ ಹಿಂಸೆ ಏಕೆ ಜಾಗತಿಕವಾಗಕೂಡದೆಂಬುದಕ್ಕೆ ಏನುತ್ತರವೋ ತಿಳಿಯದು. ನಾವು ಮುಖ್ಯವಾಗಿ ಅರಿತುಕೊಳ್ಳಬೇಕಾದ್ದು ಇದು: ಒಂದು ಸಮಗ್ರ ಬದಲಾವಣೆಗೆ ಪ್ರೇರಕ ಶಕ್ತಿಯಾಗಬಹುದಾದ ಸೈದ್ಧಾಂತಿಕ ಚೌಕಟ್ಟು ಇಲ್ಲದಿರುವುದು ಭಯೋತ್ಪಾದನೆಯು ತೀವ್ರವಾಗಿ ಹರಡಲು ಒಂದು ಕಾರಣವಾಗಿದೆ. ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಅಮೆರಿಕಾದ ಕೈಗೂಸು; ಅಲಿಪ್ತ ಚಳುವಳಿಗೆ ಉಸಿರು ಕಟ್ಟಿಹೋಗಿದೆ; ತೈಲ ಉತ್ಪಾದಿಸುವ ದೇಶಗಳ ಸಂಘ ಅಮೆರಿಕಾದ ಆಣತಿಯಂತೆ ನಡೆಯುವ ದೇಶಗಳಿಂದ ತುಂಬಿಹೋಗಿದೆ; ಇಸ್ಲಾಮಿ ಮತಧರ್ಮವನ್ನನುಸರಿಸುವ ದೇಶಗಳ ಸಂಘದಲ್ಲಿ ಸೌದಿ ಅರೇಬಿಯಾ ಹೇಳಿದ್ದೇ ತೀರ್ಮಾನ; ಆಫ್ರಿಕಾ ದೇಶಗಳ ಸಂಘ ತನ್ನ ಪ್ರಣಾಲಿಕೆಯನ್ನು ಬದಲಾಯಿಸಿಕೊಳ್ಳುವುದರಲ್ಲೇ ಕಾಲ ತಳ್ಳುತ್ತಿದೆ. ದಕ್ಷಿಣ ಅಮೆರಿಕಾ ದೇಶಗಳು ವಾಷಿಂಗ್‌ಟನ್ ನುಡಿಸುವ ವಾದ್ಯಕ್ಕೆ ತಕ್ಕಂತೆ ಕುಣಿಯುವುದರಲ್ಲೇ ತೃಪ್ತಿ ಹೊಂದುತ್ತಿವೆ ಮತ್ತು ಭಾರತದಂತಹ ದೇಶಗಳು ವಿಶ್ವ ವಾಣಿಜ್ಯ ಸಂಸ್ಥೆಗೆ ತಮ್ಮ

ಸಾರ್ವಭೌಮತ್ವವನ್ನು ಅಡವಾಗಿಟ್ಟಿವೆ. ಹೀಗಿರುವಾಗ ಒಂದು ಸಂಘಟಿತ, ಸೈದ್ಧಾಂತಿಕ ರೂಪುರೇಷೆಯು ಅಂತರರಾಷ್ಟ್ರೀಯ ಸಂಬಂಧಗಳನ್ನು ನಿಗದಿಗೊಳಿಸಬೇಕೆಂದು ನಿರೀಕ್ಷಿಸುವುದು ತಪ್ಪಾಗುತ್ತದೆ.

ಹತ್ತೊಂಭತ್ತನೆಯ ಶತಮಾನದ ಕೊನೆಯಲ್ಲಿ ಮಾರ್ಕ್ಸ್‌ವಾದ ಮತ್ತು ಅರಾಜಕತಾವಾದಗಳ ನಡುವೆ ಸಂಘರ್ಷವೇರ್ಪಟ್ಟಿದ್ದಾಗ ವೈಯ್ಯಕ್ತಿಕ ಭಯೋತ್ಪಾದನೆಯು ನಿರರ್ಥಕವೆಂದು ಮಾರ್ಕ್ಸ್‌ವಾದಿಗಳು ಪ್ರತಿಪಾದಿಸಿದ್ದರು. ಅವರು ಸಾಮಾಜಿಕ-ರಾಜಕೀಯ ಹೋರಾಟಕ್ಕೆ ಆದ್ಯತೆ ನೀಡಿ ಬಂಡವಾಳಶಾಹಿಯ ಹಿಂಸೆಗೆ ಉತ್ತರವಾಗಿ ಕ್ರಾಂತಿಕಾರಿ ಪ್ರತಿಹಿಂಸೆಯನ್ನು ಸಮರ್ಥಿಸುತ್ತಿದ್ದರು. ಭಯೋತ್ಪಾದನೆಯು ಕ್ರಾಂತಿಯ ಸಾಧನವಲ್ಲವೆಂಬುದು ಅವರ ನಿಷ್ಕರ್ಷೆಯಾಗಿತ್ತು. ಒಂದು ಶತಮಾನದ ನಂತರದ ಸನ್ನಿವೇಶದಲ್ಲಿ ನಾವು ನೋಡುತ್ತಿರುವುದು ಕ್ರಾಂತಿಕಾರಿ ಸಿದ್ಧಾಂತಗಳ ಬರ ಮತ್ತು ಭಯೋತ್ಪಾದನೆಯ ಹೆಚ್ಚಳ. ಇದು ಆಂತರಿಕ ಮತ್ತು ಅಂತರರಾಷ್ಟ್ರೀಯ ಸಂದರ್ಭಗಳೆರಡಕ್ಕೂ ಅನ್ವಯಿಸುವ ಮಾತು. ಯೂರೋಪಿನ ಹಲವು ದೇಶಗಳಲ್ಲಿ ಜನಾಂಗೀಯ ದ್ವೇಷವು ಹಿಂದಿನ ನಾಜೀವಾದಕ್ಕೆ ಸಮನಾದ ಚಳುವಳಿಗೆ ಹಾದಿಮಾಡಿಕೊಟ್ಟಿರುವುದು ಇದನ್ನೇ ಪುಷ್ಟೀಕರಿಸುತ್ತದೆ. ಪ್ರಜಾಪ್ರಭುತ್ವದ ಕ್ರಮಗಳ ಜಾಗದಲ್ಲಿ ಅಸಹನೆ ಬೇರು ಬಿಡುವ ಸಂದರ್ಭಗಳು ಹೆಚ್ಚುತ್ತಿವೆ. ಆಂತರಿಕ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಬಂಡವಾಳವು ತನ್ನ ಲಾಭಕೋರ ತಂತ್ರ ಮತ್ತು ದರ್ಪ ಪ್ರದರ್ಶಿಸಹೊರಟರೆ ಇಂತಹ ಪರಿಣಾಮವು ಅನಿವಾರ್ಯವೆನಿಸುತ್ತದೆ. ನಮ್ಮ ದೇಶದಲ್ಲಿ ಕಳೆದೆರಡು ದಶಕಗಳಲ್ಲಿ ಮತಧರ್ಮದ ಮೂಲಕ ಭಯೋತ್ಪಾದನೆಯನ್ನು ತೀವ್ರಗೊಳಿಸಲಾಗಿರುವುದು ಭಾರತೀಯ ಜನತಾ ಪಕ್ಷದ ಪರಿವಾರಕ್ಕೂ ಲಾಭಗಡುಕ ಬಂಡವಾಳಕ್ಕೂ ಇರುವ ನೇರ ಸಂಬಂಧವನ್ನು ಎತ್ತಿ ತೋರಿಸುತ್ತದೆ.

ಭಯೋತ್ಪಾದನೆಯನ್ನು ಎದುರಿಸಲು ಕುತಂತ್ರಗಳನ್ನು ಹೂಡಿದರೆ ಅದಕ್ಕೆ ಪ್ರತಿಯಾಗಿ ಭಯೋತ್ಪಾದಕನೂ ಕುತಂತ್ರ ಹೂಡಬಲ್ಲ. ಆದ್ದರಿಂದ ನಿಜಕ್ಕೂ ಭಯೋತ್ಪಾದನೆಯನ್ನು ಮಟ್ಟಿ ನಿಲ್ಲುವ ಉದ್ದೇಶವಿದ್ದರೆ ನಾವು ಮಾಡಬೇಕಾದ ಮೊದಲ ಕೆಲಸವೆಂದರೆ ಯಾವ ರೀತಿಯ ಭಯೋತ್ಪಾದನೆಯನ್ನೂ ಬೆಂಬಲಿಸದಿರುವುದು. ಭಜರಂಗದಳವನ್ನು ಬೆಂಬಲಿಸಿ, ಜಮಾತನ್ನು ನಿಗ್ರಹಿಸುವ ಯೋಜನೆ ಸಫಲವಾಗದಿದ್ದರೆ ಆಶ್ಚರ್ಯವಿಲ್ಲ. ಇಸ್ರೇಲಿನ ಬರ್ಬರ ಧಾಳಿಗಳನ್ನು ಬೆಂಬಲಿಸಿ ಪ್ಯಾಲಿಸ್ಟೈನಿನ ಉಗ್ರರನ್ನು ದೂಷಿಸುವುದು ಅರ್ಥವಿಲ್ಲದ ಮಾದರಿ ಎನಿಸಿಕೊಳ್ಳುತ್ತದೆ. ಕಾಬೂಲಿನಲ್ಲಿ ವಿಶ್ವ ಸಂಸ್ಥೆಯ ಕಚೇರಿಯಲ್ಲಿ ಆಶ್ರಯ ಪಡೆದಿದ್ದ ಆಫ್ಘಾನಿಸ್ತಾನದ ಮಾಜಿ ಪ್ರಧಾನಿ ನಾಜೀಬುಲ್ಲಾನನ್ನು ತಾಲಿಬಾನರು ಹೊರಗೆಳೆದು ತಂದು ನೇಣು ಹಾಕಿದಾಗ ಅಮೆರಿಕಾ ಶಾಭಾಸ್‌ಗಿರಿ ನೀಡಿತ್ತು. ಅದೇ ತಾಲಿಬಾನರು ನ್ಯೂಯಾರ್ಕಿನ ಕಟ್ಟಡಕ್ಕೆ ವಿಮಾನಗಳನ್ನು ತಂದು ಅಪ್ಪಳಿಸಿದರೆ ಅಮೆರಿಕಾ ಮೈ ಪರಚಿಕೊಳ್ಳುವುದರಲ್ಲಿ ಏನು ನ್ಯಾಯವಿದೆ? ಭಯೋತ್ಪಾದನೆಯನ್ನು ನಾವು ಬೆಂಬಲಿಸುವುದು, ಬೇರೆಯವರು ಬೆಂಬಲಿಸುವುದು, ಎಂದು ವಿಂಗಡಿಸಿ ಒಂದನ್ನು ಖಂಡಿಸಿ

ಇನ್ನೊಂದನ್ನು ಪುಷ್ಟೀಕರಿಸುವುದು ಭಯೋತ್ಪಾದನೆಯ ಉಚ್ಚಾಟನೆಯ ಮಾರ್ಗವಲ್ಲ. ಎರಡನೆಯದಾಗಿ, ನಮ್ಮ ಮಿತ್ರರಾಷ್ಟ್ರಗಳು ಆಚರಿಸುವ ಭಯೋತ್ಪಾದನೆಯೂ ಭಯೋತ್ಪಾದನೆಯೇ ಎಂಬ ನಿಲುವನ್ನು ತಾಳುವ ನೇರ ನಡವಳಿಕೆ ಎಲ್ಲ ರಾಷ್ಟ್ರಗಳಿಗೂ ಅಗತ್ಯ. ನಾನು ಬೆಳೆಸಿದ ಗೂಂಡಾ ಆದರೆ ಸಾಚಾ, ಬೇರೆ ಗೂಂಡಾಗಳು ಮಾತ್ರ ನೀಚರು ಎಂಬುದು ಹುಂಬತನವಲ್ಲ, ಅದು ಮೂರ್ಖತನ. ಆದ್ದರಿಂದ ಗುಟ್ಟಿನಲ್ಲಿ ರೂಪಿಸುವ ಷಡ್ಯಂತ್ರಗಳಿಗೆ ಅಂತರರಾಷ್ಟ್ರೀಯ ಸಂಬಂಧಗಳಲ್ಲಿ ಸ್ಥಾನವಿರಕೂಡದೆಂದರ್ಥ.

ಭಯೋತ್ಪಾದನೆಯ ಮೂಲಕಾರಣ ತಿಳಿಯದಷ್ಟು ಅಜ್ಞಾನ ನಮ್ಮನ್ನಾವರಿಸಿಲ್ಲ; ಆದರೆ ಅದನ್ನು ಗುರುತಿಸಿ ಉತ್ಪಾಟಿಸಲು ನಾವು ಸಿದ್ಧರಿಲ್ಲ. ಭಯೋತ್ಪಾದನೆ ಹುಟ್ಟಿಕೊಳ್ಳಲು ಪ್ರಬಲವಾದ ಕಾರಣವಿದ್ದರೆ, ಆ ಕಾರಣವನ್ನು ತೊಡೆದುಹಾಕದೆ ಭಯೋತ್ಪಾದನೆ ಕಮರಿಹೋಗಬೇಕೆಂದು ಆಶಿಸುವುದು ಆಸೆಯಾಗಿ ಮಾತ್ರವೇ ಉಳಿಯುತ್ತದೆ. ಸೈನ್ಯದ ಬಲದಿಂದ ಅದನ್ನು ಹಿಮ್ಮೆಟ್ಟಿಸಲು ಸಾಧ್ಯವಿಲ್ಲವೆಂಬುದಕ್ಕೆ ಕಾಶ್ಮೀರವೂ ಒಂದು ಉದಾಹರಣೆ ಆಗಬಲ್ಲದು. ಆದರೆ ನಮ್ಮ ಭಾವುಕತೆ ಅದನ್ನೊಪ್ಪಲು ಬಿಡುತ್ತಿಲ್ಲ. ಅದನ್ನು ಮೀರಿ ಚಿಂತನೆ-ಕ್ರಿಯೆಗಳಲ್ಲಿ ಪಾಲ್ಗೊಳ್ಳಬೇಕಾದ ಅವಶ್ಯಕತೆ ಇದೆ. ಭಯೋತ್ಪಾದನೆಯು ಒಂದು ರಾಜಕೀಯ ಸಮಸ್ಯೆಯೂ ಆಗಿರುವುದರಿಂದ ಅದಕ್ಕೆ ರಾಜಕೀಯ ಪರಿಹಾರ ಹುಡುಕಿಕೊಳ್ಳಬೇಕಾಗಿದೆ.

ಪ್ರಜಾಪ್ರಭುತ್ವವು ಸ್ಥಿರವಾಗಿ ನೆಲೆ ನಿಂತಿದೆ ಎನ್ನಲಾಗುವ ಅಮೆರಿಕಾದಲ್ಲಿ ನ್ಯೂಯಾರ್ಕ್ ದುರ್ಘಟನೆಯ ನಂತರ ನಡೆದದ್ದೇನು? ಜನಾಂಗೀಯ ಭಾವನೆಗಳು ಕೆರಳಿ ಅಮೆರಿಕಾದ ಸ್ವಾತಂತ್ರ್ಯವೀರರು ಭಾರತ, ಪಾಕಿಸ್ತಾನ ಮತ್ತು ಅರಬ್ ರಾಷ್ಟ್ರಗಳ ಮೂಲದವರನ್ನು ಎಲ್ಲೆಂದರಲ್ಲಿ ಹಲ್ಲೆಗೆ ಗುರಿಮಾಡಿದರು. ಅದು ಭಯೋತ್ಪಾದನೆಯಲ್ಲದೆ ಮತ್ತೇನು? ಆದರೆ ಗೋಧ್ರಾಪಾತಕದ ನಂತರದ ಗುಜರಾತ್ ಹತ್ಯೆಗಳ ಸಂದರ್ಭದಲ್ಲಿದ್ದಂತೆ ಅಮೆರಿಕಾದ ಸರ್ಕಾರ ನಿಷ್ಕ್ರಿಯವಾಗಲಿಲ್ಲ, ಮೌನ ಪ್ರಚೋದನೆ ನೀಡಲಿಲ್ಲ, ಅಥವಾ ತಾನೇ ನೇರವಾಗಿ ಹಲ್ಲೆಗಳನ್ನು ಸಂಘಟಿಸಲಿಲ್ಲ.

"ಸದ್ದಾಂನನ್ನು ಏನೇ ಆದರೂ ಇಳಿಸುತ್ತೇವೆ" ಎಂದು ಬುಷ್ ಹೇಳುವುದು ಸರಿಯಾದರೆ, "ಬುಷ್‌ನನ್ನು ಇಳಿಸುತ್ತೇನೆ" ಎಂದು ಲಾಡೆನ್ ಹೇಳುವುದರಲ್ಲಿ ಅಪರಾಧವೇನು? ಅಂತಿಮವಾಗಿ ನೋಡಿದರೆ ಭಯೋತ್ಪಾದನೆ ಎಂಬುದು ನಾವು ಯಾವ ರಾಜಕೀಯವನ್ನು ಅನುಸರಿಸುತ್ತೇವೆಂಬುದರಿಂದ ಸಂಪೂರ್ಣವಾಗಿ ಹೊರತಾದುದಲ್ಲ.

(ಕೆಂಬಾವುಟ, ಆಗಸ್ಟ್ ೨೦೦೨)

೧೦. ಮಧ್ಯಮ ವರ್ಗ - ಒಂದು ಚಿಂತನೆ

ಸಮಾಜವನ್ನು ಅರ್ಥಮಾಡಿಕೊಳ್ಳುವುದರಲ್ಲಿ, ಹೋರಾಟಗಳನ್ನು ರೂಪಿಸುವಲ್ಲಿ ಮತ್ತು ರಾಜ್ಯ ಪ್ರಭುತ್ವದ ಸ್ವರೂಪವನ್ನು ಗುರುತಿಸುವಲ್ಲಿ ವರ್ಗಗಳನ್ನು ಆಧರಿಸಿದ ವಿಶ್ಲೇಷಣೆಗೆ ಮಹತ್ವದ ಸ್ಥಾನವಿದೆ. ಮಾರ್ಕ್ಸ್‌ಗೂ ಆತನ ಬೇರೆ ಸಮಕಾಲೀನ ಸಮಾಜ ವಿಜ್ಞಾನಿಗಳಿಗೂ ಇರುವ ಮುಖ್ಯ ವ್ಯತ್ಯಾಸವೆಂದರೆ ಸಮಾಜ ವಿಕಾಸದ ಹಾದಿಯಲ್ಲಿ ವರ್ಗ ಹೋರಾಟದ ಪಾತ್ರವನ್ನು ಮಾರ್ಕ್ಸ್ ಗುರುತಿಸುವಂತೆ ಬೇರೆಯವರು ಗುರುತಿಸಿರುವುದಿಲ್ಲ. ಕಮ್ಯುನಿಸ್ಟ್ ಪ್ರಣಾಳಿಕೆಯ ಮೊದಲ ವಾಕ್ಯದಲ್ಲೇ ಮಾರ್ಕ್ಸ್ ಮತ್ತು ಏಂಗಲ್ಸ್ ಚರಿತ್ರೆಯುದ್ದಕ್ಕೂ ವರ್ಗ ಹೋರಾಟಗಳು ನಿರಂತರವಾಗಿ ಹೇಗೆ ನಡೆಯುತ್ತಾ ಬಂದಿವೆಯೆಂಬುದನ್ನು ದಾಖಲು ಮಾಡಿದ್ದಾರೆ. ಇಂತಹ ಹೋರಾಟಗಳಿಂದಾಗಿಯೇ ಸಮಾಜವು ಗುಣಾತ್ಮಕವಾಗಿ ವಿಕಾಸ ಹೊಂದುತ್ತಾ ಹೋಗುತ್ತದೆ. ಆಗೊಂದು ಈಗೊಂದು ಸುಧಾರಣೆಯಾಗಿ ಸಮಾಜ ಬದಲಾಗುವುದಕ್ಕೂ ಸಮಾಜವು ಮೂಲಭೂತವಾಗಿ ಬೇರೊಂದು ಹಂತವನ್ನು ತಲುಪುವುದಕ್ಕೂ ವ್ಯತ್ಯಾಸವಿದೆ. ಇಂತಹ ಬದಲಾವಣೆಯನ್ನು ಕ್ರಾಂತಿಕಾರಕ ಎನ್ನುತ್ತೇವೆ. ಅಂದರೆ, ಸಮಾಜದಲ್ಲಿನ ವ್ಯಕ್ತಿಗಳ ನಡುವಣ ಸಂಬಂಧಗಳಲ್ಲಿ ತೀರಾ ಹೊಸದಾದ್ದು ಏನೋ ಜನ್ಮ ತಾಳಿದೆ, ಎಂದರ್ಥ. ಆದ್ದರಿಂದಲೇ ಅದು ಗುಣಾತ್ಮಕ ಬದಲಾವಣೆ ಎನಿಸಿಕೊಳ್ಳುವುದು. ಸಾವಿರ ಜನ ಗುಲಾಮರಿದ್ದ ಕಡೆ ಆ ಸಂಖ್ಯೆ ಐನೂರಕ್ಕೆ ಇಳಿಯುವಂತಹ ಬದಲಾವಣೆಯೂ ಬದಲಾವಣೆಯೇ. ಆದರೆ ಅಲ್ಲಿ ವ್ಯವಸ್ಥೆಯ ಆಮೂಲಾಗ್ರ ಬದಲಾವಣೆ ಉಂಟಾಗಿಲ್ಲ. ಸಂಖ್ಯೆಯ ಏರಿಳಿತಗಳು ಯಾವುದೋ ಒಂದು ಹಂತವನ್ನು ತಲುಪಿ ಅದನ್ನು ಮೀರಿದಾಗ ಮಾತ್ರವೇ ಗುಣಾತ್ಮಕ ಬದಲಾವಣೆ ಉಂಟಾಗಲು ಸಾಧ್ಯ. ನೀರನ್ನು ಬಿಸಿ ಮಾಡುತ್ತಾ ಹೋದಂತೆ ಅದು ನೂರು ಡಿಗ್ರಿ ಸೆಂಟಿಗ್ರೇಡ್ ತಾಪಮಾನವನ್ನು ಮುಟ್ಟಿದಾಗ ತನ್ನ ಸ್ವರೂಪವನ್ನು ಬದಲಾಯಿಸಿಕೊಳ್ಳುತ್ತದೆ. ಅಲ್ಲಿಯವರೆಗೆ ದ್ರವವಾಗಿದ್ದ ವಸ್ತುವು ಈಗ ಅನಿಲವಾಗಿ ಮಾರ್ಪಟ್ಟಿದೆ. ಇಂತಹ ಗುಣಾತ್ಮಕ ಬದಲಾವಣೆಯು ಮಾನವ ಸಮಾಜದಲ್ಲೂ ಆಗುತ್ತದೆ. ಇತಿಹಾಸದ ಅಧ್ಯಯನ ಮಾಡಿದರೆ ಯಾವ ಯಾವ ಹಂತಗಳಲ್ಲಿ ಎಂತೆಂತಹ ಗುಣಾತ್ಮಕ ಮಾರ್ಪಾಟುಗಳು ಉಂಟಾದುವೆಂದು ತಿಳಿಯಲು ಸಾಧ್ಯ.

ಮಾರ್ಕ್ಸ್ ಮತ್ತು ಏಂಗಲ್ಸ್ ಅವರ ಪ್ರಬುದ್ಧ ಚಿಂತನೆಯಲ್ಲಿ ಮೂಡಿಬಂದ ತಿಳಿವಳಿಕೆಗಳಲ್ಲಿ 'ವರ್ಗ' ಮತ್ತು 'ವರ್ಗ ಹೋರಾಟ' ಎಂಬುವು ಅಸಾಮಾನ್ಯವಾದುವು. ಬೇರೆಯವರು ವರ್ಗ ಎಂಬ ಪದವನ್ನು ಬಳಸಿದಾಗ ಅದು ಕೇವಲ ಗುಂಪು ಎಂಬರ್ಥದಲ್ಲಿ ಬರಬಹುದು. ಆದರೆ ಮಾರ್ಕ್ಸ್‌ವಾದದಲ್ಲಿ ಅದಕ್ಕೆ ವಿಶಿಷ್ಟವಾದ ಅರ್ಥವೊಂದಿದೆ. ತರ್ಕಶಾಸ್ತ್ರದಲ್ಲಿ ಪದಾರ್ಥಗಳನ್ನು ವಿಂಗಡಿಸುವಾಗ ಪದಾರ್ಥದ ವಿಶಿಷ್ಟ ಲಕ್ಷಣಗಳ ಆಧಾರವು ಪ್ರಮುಖವಾಗಿರುತ್ತದೆ. ಒಂದು ಗೋವಿನ 'ಗೋತ್ವ' ಅದನ್ನು ಬೇರೆಲ್ಲ ಪದಾರ್ಥಗಳಿಂದ ಭಿನ್ನೈಸುತ್ತದೆ. ಗೋತ್ವ ಲಕ್ಷಣವಿರುವುವೆಲ್ಲಾ 'ಗೋ' ಎಂಬ ಹೆಸರನ್ನು ಪಡೆಯುತ್ತವೆ. ಗೋವುಗಳು ಹತ್ತೇ ಇರಬಹುದು ಅಥವಾ ಅಸಂಖ್ಯವಾಗಿರಬಹುದು ; ಆದರೆ ಲಕ್ಷಣದ ದೃಷ್ಟಿಯಿಂದ ಅವೆಲ್ಲಾ ಒಂದೇ ವರ್ಗದವು. ಹಾಗೆಯೇ ಮನುಷ್ಯ, ಮರ, ಮೇವು ಯಾವುದನ್ನು ಬೇಕಾದರೂ ವರ್ಗೀಕರಿಸಬಹುದು. ವರ್ಗಗಳ ವ್ಯಾಖ್ಯಾನವನ್ನು ನೀಡುತ್ತಾ ಲೆನಿನ್ ಹೀಗೆನ್ನುತ್ತಾರೆ: "ಅಧಿಕ ಪ್ರಮಾಣದ ವ್ಯಕ್ತಿಗಳನ್ನೊಳಗೊಂಡು ಗುಂಪುಗಳಾಗಿರುವುದು ವರ್ಗ ಎನಿಸಿಕೊಳ್ಳುತ್ತದೆ. ಚಾರಿತ್ರಿಕವಾಗಿ ಸಾಮಾಜಿಕ ಉತ್ಪಾದನೆಯು ಒಂದೊಂದು ಹಂತದಲ್ಲಿ ಒಂದೊಂದು ರೀತಿಯಲ್ಲಿರುತ್ತದೆ. ಉತ್ಪಾದನಾ ಸಾಮಗ್ರಿಗಳೊಂದಿಗೆ ವ್ಯಕ್ತಿಯ ಸಂಬಂಧ ಎಂತಹುದು ಎಂಬುದನ್ನಾಧರಿಸಿ ವರ್ಗಗಳು ಭಿನ್ನವಾಗಿರುತ್ತವೆ. ಆ ಸಂಬಂಧಗಳು ಸ್ಥಿರವಾದುವಾಗಿರಬಹುದು, ಕಾನೂನಿನಿಂದ ನಿಗದಿತವಾಗಿರಬಹುದು. ದುಡಿಮೆಯು ಸಾಮಾಜಿಕವಾಗಿ ಸಂಘಟಿತವಾದಾಗ ವ್ಯಕ್ತಿಯ ಸ್ಥಾನ ಏನಾಗಿರುತ್ತದೋ ಅದು ಅವನ ವರ್ಗವನ್ನು ಸೂಚಿಸುತ್ತದೆ. ಸಹಜವಾಗಿಯೇ ಈ ಸಂಬಂಧಗಳ ಪರಿಣಾಮವಾಗಿ ವ್ಯಕ್ತಿಗೆ ಲಭ್ಯವಾಗುವ ಸಾಮಾಜಿಕ ಸಂಪತ್ತು ಎಷ್ಟೆಂಬುದೂ ತೀರ್ಮಾನವಾಗುತ್ತದೆ; ಅಂತೆಯೇ ಸಂಪತ್ತನ್ನು ಹೇಗೆ ಕೂಡಿಸಿಕೊಳ್ಳಬಹುದೆಂಬುದು ಕೂಡ ನಿರ್ಧಾರವಾಗುತ್ತದೆ. ಜನರ ಎರಡು ಗುಂಪುಗಳಿದ್ದರೆ, ಅದರಲ್ಲಿ ಒಂದು ಇನ್ನೊಂದರ ದುಡಿಮೆಯ ಫಲವನ್ನು ತನ್ನದಾಗಿಸಿಕೊಳ್ಳುವ ಸಾಧ್ಯತೆ ಇದ್ದರೆ, ಅವನ್ನು ವರ್ಗಗಳು ಎನ್ನಬಹುದು. ಹೀಗೆ ಮಾಡಲು ಸಾಧ್ಯವಾಗುವುದು ಹೇಗೆ ? ಆಯಾ ಕಾಲದ ಸಾಮಾಜಿಕ ಆರ್ಥಿಕತೆಯು ಆ ಗುಂಪುಗಳಿಗೆ ಪ್ರತ್ಯೇಕ ಸ್ಥಾನಗಳನ್ನು ಗುರುತಿಸಿಕೊಟ್ಟಿರುತ್ತದೆ. ಅದೇ ಅವರ ವರ್ಗ ಪ್ರತ್ಯೇಕತೆ ಎನಿಸಿಕೊಳ್ಳುತ್ತದೆ."

ತಾತ್ವಿಕವಾಗಿ ವರ್ಗಗಳ ಅಸ್ತಿತ್ವ ಮತ್ತು ಸ್ಥಾನವನ್ನು ತಿಳಿಯಲು ಲೆನಿನ್ ಅವರ ಈ ವಿಷದೀಕರಣ ಸಮಗ್ರವಾಗಿಯೇ ಇದೆ. ಅದನ್ನು ಅನ್ವಯಿಸಿ ವರ್ಗರಚನೆಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರ ಪಡೆಯಬಹುದು. ಉದಾಹರಣೆಗೆ, ಈಗ ಒಂದು ಶತಮಾನದ ಹಿಂದೆ ಕಾರ್ಖಾನೆಯಲ್ಲಿ ದುಡಿಯುತ್ತಿದ್ದ ಕೂಲಿಯಾಳು ಯಾವ ವರ್ಗಕ್ಕೆ ಸೇರಿದ್ದನೋ ಅದೇ ವರ್ಗಕ್ಕೆ ಇಂದಿನ ಕಾರ್ಖಾನೆಯ ದುಡಿಮೆಗಾರ ಸೇರುತ್ತಾನೆಯೆ? ಇಂದಿನ ಕೆಲಸಗಾರನನ್ನು 'ಕೂಲಿಯಾಳು' ಎಂದು ಕರೆಯಲು ಸಾಧ್ಯವಿಲ್ಲವೆಂದು ಕೆಲವರ ಅಭಿಮತ. ಏಕೆಂದರೆ ಅವನಿಗೆ ಸಾವಿರಾರು ರೂಪಾಯಿಗಳ ವೇತನ ಇದೆ. ಬೇರೆ ಕೆಲವು ಸೌಲಭ್ಯಗಳಿವೆ. ಅವನು ಬಿಳಿಯ ಬಟ್ಟೆ ತೊಡುತ್ತಾನೆ, ಹೊಳಪಿನ ಪಾದರಕ್ಷೆ ಧರಿಸುತ್ತಾನೆ, ಸ್ಕೂಟರಿನಲ್ಲಿ ಕಾರ್ಖಾನೆಗೆ ಹೋಗುತ್ತಾನೆ, ಆದ್ದರಿಂದ

ಅವನನ್ನು ದುಡಿಯುವ ವರ್ಗಕ್ಕೆ ಸೇರಿದವನು ಎನ್ನುವುದಕ್ಕಿಂತ ಹೆಚ್ಚಾಗಿ ಮಧ್ಯಮ ವರ್ಗದವನು ಎಂದು ವಿಂಗಡಿಸುವುದು ರೂಢಿಯಲ್ಲಿದೆ.

ಇದಕ್ಕೆಲ್ಲಾ ಲೆನಿನ್ನರ ಸಮಾಧಾನ ಒಂದೇ: ಎಷ್ಟು ಗಂಟೆ ದುಡಿಯುತ್ತಾನೆ, ಯಾವ ವಾಹನ ಬಳಸುತ್ತಾನೆ, ಎಂತಹ ಉಡುಪು ಧರಿಸುತ್ತಾನೆ, ಎಷ್ಟು ಅಧಿಕಾರ ಚಲಾಯಿಸುತ್ತಾನೆ, ಎಷ್ಟು ವೇತನ ಪಡೆಯುತ್ತಾನೆ, ಎಂಬಿತ್ಯಾದಿ ಅಂಶಗಳು ಗುಣಾತ್ಮಕವಾಗಿ ಅವನನ್ನು ಬೇರೆಯವನನ್ನಾಗಿಸುವುದಿಲ್ಲ. ಕೂಲಿಯನ್ನು ವೇತನವೆಂದು ಕರೆದರೂ ಅದು ಕೂಲಿಯೇ! ಐವತ್ತು ರೂಪಾಯಿಯ ಬದಲು ಐನೂರೋ , ಐದು ಸಾವಿರವೋ ಇರಬಹುದು; ಆದರೆ ಉತ್ಪಾದನಾ ಸಂಬಂಧಗಳ ದೃಷ್ಟಿಯಿಂದ ಅವನು ಒಡೆಯನಲ್ಲ. ಅವನೂ ತನ್ನ ದುಡಿಮೆಯ ಶಕ್ತಿಯನ್ನು ಮಾರಿಕೊಂಡು ಜೀವಿಸುವವನೇ ಆಗಿದ್ದಾನೆ. ಆದರೆ ಮಾರುಕಟ್ಟೆಯಲ್ಲಿ ಆ ದುಡಿಮೆಯ ಬೆಲೆ ಜಾಸ್ತಿ, ಅಷ್ಟೆ . ಜೊತೆಗೆ ದುಡಿಮೆಯ ಸ್ವರೂಪದಲ್ಲಿಯೂ ವ್ಯತ್ಯಾಸವಿರಬಹುದು. ಕೈಗಳನ್ನು ಮತ್ತು ಯಂತ್ರಗಳನ್ನು ಬಳಸಿ ಸರಕುಗಳನ್ನು ಉತ್ಪಾದಿಸುವುದರ ಬದಲು ಮಿದುಳು ಮತ್ತು ಬೆರಳುಗಳನ್ನು ಹೆಚ್ಚಾಗಿ ಬಳಸುವ ಕೆಲಸಗಾರರು ಇರಲು ಸಾಧ್ಯ. ಯಾರದೋ ಪರವಾಗಿ ಕೆಲಸಗಾರರ ಮೇಲೆ ನಿಗಾ ಇಟ್ಟು ಉಸ್ತುವಾರಿ ನೋಡಿಕೊಳ್ಳುವ ಕೆಲಸಗಾರನೂ ಇರಬಹುದು. ಮೂಲತಃ ಇವರೆಲ್ಲರ ಲಕ್ಷಣವೂ ಒಂದೇ : ದುಡಿಮೆಯನ್ನು ಮಾರಿಕೊಂಡು ಜೀವನ ನಿರ್ವಹಿಸುವುದು.

ಒಬ್ಬ ಬಂಡವಳಿಗನಿಗೂ ಇನ್ನೊಬ್ಬ ಬಂಡವಳಿಗನಿಗೂ ಇರುವ ವ್ಯತ್ಯಾಸಕ್ಕಿಂತ ಬೇರೆಯದಲ್ಲ ಇದು. ಬಂಡವಾಳದ ಪ್ರಮಾಣದ ದೃಷ್ಟಿಯಿಂದ ಅವರು ಭಿನ್ನರಾಗುವಂತೆ ಕೂಲಿಯನ್ನು ಪಡೆಯುವ ಪ್ರಮಾಣದಲ್ಲಿ ಹೆಚ್ಚು - ಕಡಿಮೆ ಆಗಬಹುದು. ವರ್ಗದ ದೃಷ್ಟಿಯಿಂದ ಅವರೆಲ್ಲಾ ಒಂದೇ. ಆದಾಗ್ಯೂ ವೇತನದ ಆಧಾರದ ಮೇಲೆ ದುಡಿಯುವ ವರ್ಗದ ಕೆಲವರನ್ನು "ಮಧ್ಯಮ ವರ್ಗ" ಎಂದು ಪ್ರತ್ಯೇಕಿಸುವ ಪದ್ಧತಿ ಇದೆ. ವೇತನವಲ್ಲದೆ ಬೇರೆ ಕೆಲವು ಅಂಶಗಳಲ್ಲಿಯೂ ಸಾಮಾನ್ಯ ದುಡಿಮೆಗಾರರಿಗಿಂತ ಇವರು ಭಿನ್ನರಾಗಿರುವ ಸಂಭವವಿದೆ.

ಆದರೆ ಅತಿ ಮುಖ್ಯವಾದ ವಿಷಯವೆಂದರೆ ಉತ್ಪಾದನಾ ವಿಧಾನಗಳಿಗೂ ವರ್ಗಗಳಿಗೂ ನಿರಂತರ ಸಂಬಂಧವಿದೆಯೆಂಬುದು. ಎಂತಹ ಉತ್ಪಾದನಾ ಸಾಧನಗಳಿವೆಯೋ ಅದನ್ನವಲಂಬಿಸಿ ದುಡಿಮೆಯ ಸಾಮಾಜಿಕ ವಿಭಜನೆ ಉಂಟಾಗುತ್ತದೆ. ಒಂದು ಚಾರಿತ್ರಿಕ ಘಟ್ಟದಲ್ಲಿ ಲಭ್ಯವಿರುವ ಉಪಕರಣಗಳು ಒಬ್ಬ ಉತ್ಪಾದಕನಿಗೆ ಅಗತ್ಯವಿರುವ ಪೂರೈಕೆಗಳಿಗಿಂತಲೂ ಹೆಚ್ಚನ್ನು ಉತ್ಪಾದಿಸಲು ಅಸಮರ್ಥವಾದರೆ ಆ ಕಾಲದಲ್ಲಿ ಬೇರೆಯವರ ದುಡಿಮೆಯ ಫಲವನ್ನು ಕಬಳಿಸಿ ಸುಖ ಜೀವನ ನಡೆಸಲು ಯಾರಿಗೆ ತಾನೆ ಸಾಧ್ಯವಾದೀತು? ಆದ್ದರಿಂದ ಆ ಕಾಲಘಟ್ಟದಲ್ಲಿ ಎಲ್ಲರೂ ಅನಿವಾರ್ಯವಾಗಿ ದುಡಿಯಲೇ ಬೇಕು. ಬೇರೆಯವರಿಗೆ ಕೆಲಸ ಕೊಟ್ಟು ತಾನು ತೆಪ್ಪಗೆ ಕೂತು ಉಣ್ಣುವ ಸೌಭಾಗ್ಯ ಆ ಸನ್ನಿವೇಶದಲ್ಲಿ ಯಾರಿಗೂ ಇಲ್ಲ. ಅಂದರೆ, ಇಡೀ ಜನಸಮುದಾಯವು ಒಂದೇ ವರ್ಗಕ್ಕೆ ಸೇರಿದೆ ಎಂದರ್ಥ.

ಪ್ರಾಚೀನ ಭಾರತೀಯ ಸಮಾಜದಲ್ಲಿ ಪ್ರಾರಂಭಿಕ ಋಗ್ವೇದ ಕಾಲೀನ ಸಮಾಜವು ಅಂತಹುದಾಗಿತ್ತು. ವರ್ಗರಹಿತ ಜನಸಮುದಾಯಗಳನ್ನು ಆಗ್ಗೆ 'ಗಣಗಳು ' ಎಂದು ಕರೆಯುತ್ತಿದ್ದರು. ಅಲ್ಲಿ ದೈಹಿಕ ಮತ್ತು ಬೌದ್ಧಿಕ ದುಡಿಮೆಗಳಲ್ಲಿ ಅಂತರವಿರಲಿಲ್ಲ. ಒಬ್ಬ ಕವಿ, ಇನ್ನೊಬ್ಬ ಬಡಗಿ- ಆದರೆ ಇಬ್ಬರೂ ಸಮಾನರು ಮತ್ತು ಅವರು ಕವಿತ್ವವನ್ನೂ ಮಾಡುತ್ತಾರೆ, ಬಡಗಿಯ ಕೆಲಸದಲ್ಲೂ ತೊಡಗುತ್ತಾರೆ. ಕೇವಲ ಕವಿತ್ವದಲ್ಲೇ ನಿರತನಾಗುವಂತಹ 'ಬುದ್ಧಿಜೀವಿ' ಅಲ್ಲಿಲ್ಲ. ಆದ್ದರಿಂದಲೇ ಅಲ್ಲಿ ಪ್ರಾರ್ಥನೆ ಮಾಡುವಾಗ ಕೂಡ ಒಬ್ಬನು ತನಗಾಗಿ ಮಾತ್ರವೇ ಏನನ್ನೂ ಬೇಡಿಕೊಳ್ಳುವುದಿಲ್ಲ. ಅವನು ಬೇಡಿಕೊಳ್ಳುವುದು ಯಾವಾಗಲೂ ಎಲ್ಲರಿಗಾಗಿ. ಅವನ ಮತ್ತು ದೇವತೆಯ ನಡುವೆ ಪುರೋಹಿತನೆಂಬ ದಳ್ಳಾಳಿಯೂ ಆ ಕಾಲಘಟ್ಟದಲ್ಲಿ ಇನ್ನೂ ಉದಯಿಸಿಲ್ಲದಿರುವುದು ಗಮನಾರ್ಹವಾಗಿದೆ. ಅವನು ಬರಬೇಕಾದರೆ ಅವನನ್ನು ಪೋಷಿಸುವ ಒಂದು ವರ್ಗ ಬಂದಿರಬೇಕು ; ಅದಕ್ಕೆ ಪೂರ್ವಭಾವಿಯಾಗಿ ಉತ್ಪಾದನಾ ಸಾಧನೆಗಳು ಮತ್ತು ಸಂಬಂಧಗಳು ಬದಲಾಗಿರಬೇಕು.

ಈ ಸಾಧನೆಗಳು - ಸಂಬಂಧಗಳು ಸದಾ ವಿಕಸಿಸುತ್ತಲೇ ಇರುತ್ತವೆ. ಏಕೆಂದರೆ ಮನುಷ್ಯ ಸ್ವಭಾವತಃ ಹೊಸ ಹೊಸ ಆಯುಧಗಳ ನಿರ್ಮಾಪಕ. ಯಾವೊಂದು ಉಪಕರಣವೂ ಕೊನೆಯದು ಎಂಬ ಮಾತೇ ಮನುಷ್ಯನ ಅರ್ಥಕೋಶದಲ್ಲಿಲ್ಲ. ಒಂದು ಕೋಲು, ಒಂದು ಕಲ್ಲು, ಒಂದು ಖನಿಜ– ಏನು ಸಿಕ್ಕಿದರೂ ಅದನ್ನು ಕ್ರಮೇಣ ಮಾರ್ಪಡಿಸುತ್ತಲೇ ಇರುತ್ತಾನೆ. ಅದರೊಂದಿಗೆ ಅದರ ಉತ್ಪಾದನಾ ಸಾಮರ್ಥ್ಯವೂ ಹೆಚ್ಚುತ್ತಾ ಹೋಗಬಹುದು. ಅಂದರೆ, ಅವು ಉತ್ಪಾದನಾ ಶಕ್ತಿಯನ್ನು ಹೆಚ್ಚಿಸುತ್ತಾ ಹೋಗುತ್ತವೆ. ಆದರೆ ಉತ್ಪಾದನೆಗೆ ಉಪಕರಣಗಳು ಮಾತ್ರವೇ ಸಾಲದು – ಅದಕ್ಕೆ ಬೇರೆ ಸಾಮಾಗ್ರಿಯೂ ಬೇಕು . ಭತ್ತದ ಬೀಜ, ಗದ್ದೆ, ನೀರು, ಗೊಬ್ಬರ ಇವೆಲ್ಲಾ ಇದ್ದಾಗ ದುಡಿಯುವ ಕೈಗಳು ಮತ್ತು ನೇಗಿಲು ಉತ್ಪಾದನಾ ಸಾಮರ್ಥ್ಯವನ್ನು ಹೊಂದುತ್ತವೆ. ಅವಿಲ್ಲದಿದ್ದಾಗ ಇವು ನಿರುದ್ಯೋಗಿಗಳು.

ಹೀಗೆ ಉತ್ಪಾದನಾ ವಿಧಾನ ಮತ್ತು ಸಂಬಂಧಗಳು ಬೆಳೆಯುತ್ತಾ ಹೋದಂತೆ ಸಮಾಜ ರಚನೆಯಲ್ಲಿ ವೈವಿಧ್ಯಗಳು ಉಂಟಾಗುವುದು ಸ್ವಾಭಾವಿಕ. ತಾನೂ ಒಂದು ಸಲಕರಣೆ ಎಂಬ ರೀತಿಯಲ್ಲಿ ಜೀವಿಸುವ ಗುಲಾಮ, ಗುಲಾಮನಲ್ಲದಿದ್ದು ಒಡೆಯನ ಊಳಿಗದವನಾಗಿ ಹೊಟ್ಟೆ ಹೊರೆಯುವವನು, ಉತ್ಪಾದನಾ ಸಾಮಗ್ರಿಯ ರೂಪದ ಆಸ್ತಿ ಇಲ್ಲದಿದ್ದಾಗ ದುಡಿಮೆಯೊಂದೇ ಆಸ್ತಿಯಾಗಿದ್ದು ಅದನ್ನು ಕೂಲಿಗಾಗಿ ಮಾರಿ ಜೀವಿಸುವವನು, – ಇವರೆಲ್ಲಾ ಚಾರಿತ್ರಿಕವಾಗಿ ಬೇರೆ ಬೇರೆ ಹಂತಗಳಿಗೆ ಸೇರುತ್ತಾರೆ. ಅಂತೆಯೇ ಗುಲಾಮರ ಯಜಮಾನ, ಊಳಿಗದವರ ಪ್ರಭು ಮತ್ತು ಕೂಲಿಯಾಳುಗಳ ಮಾಲಿಕ ಬೇರೆ ಬೇರೆ ಹಂತದವರು – ಅಂದರೆ ಚರಿತ್ರೆಯಲ್ಲಿ ಒಂದು ಗೀರು ಹಾಕಿ ಇಲ್ಲಿಗೆ ಹಳೆಯದು ಮುಗಿಯಿತು, ಹೊಸತು ಆರಂಭವಾಯಿತು ಎನ್ನಲು ಬರುವುದಿಲ್ಲ. ಒಂದು ಕೊನೆಯಾಗುತ್ತಿರುವಾಗಲೇ ಇನ್ನೊಂದು ಹುಟ್ಟಿಕೊಳ್ಳುತ್ತದೆ. ಬಹುಕಾಲ ಎರಡೂ ಒಟ್ಟೊಟ್ಟಿಗೆ ಇರುತ್ತವೆ. ಒಂದರ ಪ್ರಭಾವ-ಪ್ರಮಾಣ ಹೆಚ್ಚು. ಇನ್ನೊಂದರದು ಕಡಿಮೆ, ಅಷ್ಟೇ.

ಸ್ಥೂಲವಾಗಿ ವರ್ಗಗಳು ಹೀಗೆ ಹುಟ್ಟಿಕೊಂಡು ಸಂಕೀರ್ಣವಾಗಿ ಬೆಳೆಯುತ್ತವಾದರೂ ಆಯಾ ಕಾಲಘಟ್ಟಗಳಲ್ಲಿ ನೇರವಾಗಿ ವಿಭಜಿತ ವರ್ಗಗಳಿಗೆ ಸೇರದೆ ಅವನ್ನು ಮೀರಿ ನಿಲ್ಲುವ ಗುಂಪುಗಳು ಇರುತ್ತವೆ. ಉದಾಹರಣೆಗೆ , ಪುರೋಹಿತ. ಅವನು ಭೂಮಾಲಿಕನಂತೆ ಯಜಮಾನ ಆಗಲಾರ; ಊಳಿಗದವನೂ ಅಲ್ಲ. ಯಜಮಾನನ ಭದ್ರತೆಗೆ ಪುರೋಹಿತನ ಕಾಣಿಕೆ ಬಹಳ ಮಹತ್ವದ್ದು. ಅವನು ರಚಿಸಿಕೊಡುವ ಬೌದ್ಧಿಕ - ಸಾಂಸ್ಕೃತಿಕ ವಾತಾವರಣವು ಯಜಮಾನ– ಪುರೋಹಿತರ ಸಮ್ಮಿಶ್ರ ಸರಕಾರ! ಅಂದಿನ ಪುರೋಹಿತನ ಜಾಗದಲ್ಲಿ ಇಂದು ನಮ್ಮ ಮಾಧ್ಯಮಗಳು, ಸರ್ಕಾರಿ ಪ್ರಚಾರ ಇಲಾಖೆಗಳು, ಶಿಕ್ಷಣ ವ್ಯವಸ್ಥೆಯ ಕೆಲವು ಅಂಗಗಳು , ಎಲ್ಲಾ ಕೆಲಸ ಮಾಡುತ್ತವೆ. ಅವುಗಳಲ್ಲಿ ಕಾರ್ಯನಿರತರಾಗಿರುವವರು ದುಡಿಮೆಯಿಂದ ಜೀವಿಸುತ್ತಾರೆ. ಆ ಅರ್ಥದಲ್ಲಿ ಅವರು ದುಡಿಯುವವರ ವರ್ಗಕ್ಕೆ ಸೇರುತ್ತಾರೆ. ಅವರ ದುಡಿಮೆಯ ಫಲದ ದೃಷ್ಟಿಯಿಂದ ನೋಡಿದರೆ ಅವರು ಆಳುವವರ ವರ್ಗದ ಕಾಲಾಳುಗಳು. ನಾವು ಮಧ್ಯಮ ವರ್ಗವೆಂದು ವರ್ಣಿಸುವ ಜನರಲ್ಲಿ ಇಂತಹ ಲಕ್ಷಣವನ್ನುಳ್ಳವರ ಸಂಖ್ಯೆ ಹಿಂದೆಂದಿಗಿಂತಲೂ ಈಗ ಜಾಸ್ತಿ ಇದೆ.

ನಮ್ಮ ಮುಂದಿರುವ ಗಂಭೀರ ಪ್ರಶ್ನೆ ಇದು : ಈವರೆಗೆ ಸಮಾಜದಲ್ಲಿ ಆಸ್ತಿಯುಳ್ಳವರು, ಆಸ್ತಿ ಇಲ್ಲದವರು ಎಂಬ ಯಾವ ವಿಭಜನೆಯ ವಸ್ತುಸ್ಥಿತಿಯನ್ನು ನಾವು ನೋಡುತ್ತಾ ಬಂದಿದ್ದೇವೋ ಅದು ಎಷ್ಟು ಕಾಲ ಹೀಗೆಯೇ ಮುಂದುವರಿಯಬೇಕು ? ಇಲ್ಲಿ ಆಸ್ತಿಯೆಂದರೆ ಮನೆ, ಬಟ್ಟೆ, ವಾಹನ, ಇತ್ಯಾದಿಗಳಲ್ಲ. ಅವು ಅಗತ್ಯ ವಸ್ತುಗಳು. ಅವುಗಳನ್ನು ಹೊಂದಿ ಬೇರೆಯವರ ದುಡಿಮೆಯ ಶಕ್ತಿಯನ್ನು ಸ್ವಂತಕ್ಕೆ ಖರೀದಿಸಲು ಬರುವುದಿಲ್ಲ. ಈ ರೀತಿಯ ಆಸ್ತಿ ಎಲ್ಲರಿಗೂ ದಕ್ಕುವಂತೆ ಮಾಡಬೇಕಾದ್ದು ತುರ್ತಿನ ಅವಶ್ಯಕತೆ. ಯಾವ ಆಸ್ತಿಯನ್ನು ಹೊಂದಿರುವುದರಿಂದ ಇತರರ ದುಡಿಮೆಯ ಶಕ್ತಿಯನ್ನು ಕೊಂಡು ನಾವು ದುಡಿಯದೆ ಸುಖ ಜೀವನ ನಡೆಸಲು ಸಾಧ್ಯವೋ ಅಂತಹ ಆಸ್ತಿ ಯಾವುದು ? ಉತ್ಪಾದನಾ ಸಾಮಗ್ರಿಗಳು : ಭೂಮಿ, ನೀರು, ಖನಿಜಗಳು, ಕಚ್ಚಾವಸ್ತುಗಳು, ಯಂತ್ರಗಳು , ಇತ್ಯಾದಿ.

ಈ ವಿಧದ ಆಸ್ತಿಯನ್ನು ಖಾಸಗಿಯಾಗಿ ಹೊಂದಿರುವುದು ಸಮಾಜದ ಎಲ್ಲರಿಗೂ ಸಾಧ್ಯವಿಲ್ಲವಾಗಿದೆ. ಅದು ಕೆಲವರಲ್ಲಿ ಅತಿಯಾಗಿ ಶೇಖರಣೆಯಾಗಿದೆ ಮತ್ತು ಬಹಳ ಜನರಲ್ಲಿ ಇಲ್ಲವೇ ಇಲ್ಲ. ಇದಕ್ಕಿರುವ ಒಂದೇ ವೈಜ್ಞಾನಿಕ ಪರಿಹಾರವೆಂದರೆ ಉತ್ಪಾದನಾ ಸಾಮಗ್ರಿಗಳನ್ನು ಸಾಮುದಾಯಿಕ ಆಸ್ತಿಯನ್ನಾಗಿ ಪರಿವರ್ತಿಸುವುದು. ಅದು ಒಬ್ಬನ ಆಸ್ತಿಯಾಗಿರುವುದರ ಬದಲು ಇಡೀ ಸಮೂಹದ ಆಸ್ತಿಯಾಗಿರುತ್ತದೆ. ಸಮಾಜವಾದದ ಮೊದಲನೆಯ ಸೂತ್ರ ಇದು. ಸಮಾಜದ ಇನ್ನೊಂದು ಮಗ್ಗಲು ನೋಡಿದರೆ ರೈತಾಪಿ ಜನರಲ್ಲಿ ಅಗಾಧವಾದ ಏರುಪೇರುಗಳಿರುವುದು ಕಾಣುತ್ತದೆ. ಒಂದು ಸ್ತರದಲ್ಲಿ ಪಾಳೆಗಾರಿಕೆಯ ಚಿಹ್ನೆಗಳು ಇನ್ನೂ ಜೀವಂತವಾಗಿದ್ದರೆ ಇನ್ನೊಂದೆಡೆ ಕೃಷಿಯನ್ನು ಆಧುನಿಕ ಉದ್ದಿಮೆಯ ರೀತಿಯಲ್ಲಿ ನಡೆಸುತ್ತಿರುವುದನ್ನು ನೋಡಬಹುದು. ಒಂದು ಕಡೆ ಜೀತದಾಳುಗಳು, ಇನ್ನೊಂದು ಕಡೆ

ಕೃಷಿಕ್ಷೇತ್ರದ ಔದ್ಯಮಿಕ ಕೂಲಿಯಾಳುಗಳು. ಅಂದರೆ ಅನಭಿವೃದ್ಧ ಮತು ಅತ್ಯಾಧುನಿಕ ಪದ್ಧತಿಗಳು ಪಕ್ಕಪಕ್ಕದಲ್ಲೇ ಅಸ್ತಿತ್ವದಲ್ಲಿವೆ. ಎರಡು ವಿಧಗಳಲ್ಲೂ ಉತ್ಪಾದನೆ ನಡೆಯುತ್ತಿರುವಾಗ ಯಾವುದು ಮೇಲುಗೈ ಸಾಧಿಸುತ್ತದೆಯೆಂಬುದು ಸ್ಪಷ್ಟವಾಗಿಯೇ ಇದೆ. ಕಡಿಮೆ ಭೂಮಿ ಹೊಂದಿರುವವರು ಮತ್ತು ಹಳೆಯ ಉಪಕರಣಗಳ ಬಳಕೆ ಮಾಡುವವರು ಕ್ರಮೇಣ ಭೂಮಿಯನ್ನು ಕಳೆದುಕೊಂಡು ನಿರ್ಗತಿಕರಾಗುತ್ತಾರೆ ; ಪಟ್ಟಣಗಳಿಗೆ ಹೋಗಿ ಕೂಲಿ -ನಾಲಿ ಮಾಡಿ ಬದುಕುತ್ತಾರೆ. ಭಾರಿ ಭೂಮಾಲಿಕರು ಇತರರ ಭೂಮಿಯನ್ನು ಕಬಳಿಸುತ್ತಾ ಹೋಗುತ್ತಾರೆ. ಇದು ಹೀಗೇ ಮುಂದುವರಿಯಬೇಕೆ?

ಇದೆಲ್ಲದರ ಹಿನ್ನೆಲೆಯಲ್ಲಿ ನಮ್ಮ ಇಂದಿನ ದುಡಿಯುವ ಜನರ ವಿಭಾಗಗಳನ್ನು ಸ್ಥೂಲವಾಗಿ ಗಮನಿಸಬಹುದು. ಸ್ವಂತ ಉದ್ಯೋಗಗಳಲ್ಲಿ ಇರುವವರನ್ನು ಬಿಟ್ಟರೆ ರೈತರು, ಔದ್ಯಮಿಕ ಕೆಲಸಗಾರರು ಮತ್ತು ಬೇರೆ ಬೇರೆ ಸೇವೆಗಳಲ್ಲಿ ಕೆಲಸ ಮಾಡುತ್ತಿರುವವರು (ಆಸ್ಪತ್ರೆ, ಶಾಲಾಕಾಲೇಜುಗಳು, ಬ್ಯಾಂಕ್, ಇನ್ಶೂರೆನ್ಸ್, ಸರ್ಕಾರಿ ಕಚೇರಿ, ಇತ್ಯಾದಿ) ಮುಖ್ಯ ವಿಭಾಗಗಳವರು ಎನ್ನಬಹುದು. ಆಡಳಿತಾತ್ಮಕ ಕೆಲಸಗಳಲ್ಲಿರುವವರು, ಹಣಕಾಸು ಸಂಸ್ಥೆಗಳಲ್ಲಿ ಕೆಲಸ ಮಾಡುವವರು, ತಂತ್ರಜ್ಞಾನದ ಕ್ಷೇತ್ರದಲ್ಲಿರುವವರು, ಇತ್ಯಾದಿಗಳೆಲ್ಲಾ ನೇರವಾಗಿ ಉತ್ಪಾದನೆಯಲ್ಲಿ ತೊಡಗಿಲ್ಲದಿದ್ದರೂ ಉತ್ಪಾದನಾ ವ್ಯವಸ್ಥೆಯು ಯಥವತ್ತಾಗಿ ಕಾರ್ಯ ನಿರ್ವಹಿಸಲು ಸಹಾಯ ಮಾಡುತ್ತಾರೆ. ಮುಖ್ಯವಾಗಿ ಇಂಥವರನ್ನೇ ಮಧ್ಯಮ ವರ್ಗದವರು ಎಂದು ಗುರುತಿಸಲಾಗುತ್ತದೆ.

ಇಂದಿಗೂ ಹಳ್ಳಿ ಮತ್ತು ದಿಲ್ಲಿಗಳ ನಡುವೆ ಅಂತರವಿರುವುದು ಎಲ್ಲರಿಗೂ ತಿಳಿದಿದೆ. ನಗರ ಪ್ರದೇಶಗಳು ತಮ್ಮ ಸುಖ ಜೀವನಕ್ಕಾಗಿ ಹಳ್ಳಿಗಳನ್ನು ಹೊಸಕಿಹಾಕುತ್ತವೆಂಬ ಮಾತು ಆಗಾಗ್ಗೆ ಕೇಳಬರುತ್ತದೆ. ಈ ವಾದದ ಪ್ರಕಾರ ನಗರಗಳು ಹಳ್ಳಿಗಳನ್ನು ಶೋಷಿಸುತ್ತವಾದ್ದರಿಂದ ಮೊದಲು ಹಳ್ಳಿ - ದಿಲ್ಲಿಗಳ ನಡುವೆ ಹೋರಾಟವಾಗಬೇಕು; ಆಮೇಲೆ ಹಳ್ಳಿಗಳಲ್ಲಿ ಆಂತರಿಕ ಹೋರಾಟ ಬೇಕಾದರೆ ಮುಂದುವರಿಸಬಹುದು. ಇದು ತೋರಿಕೆಗೆ ಬಹಳ ರುಚಿಕರ ಮಾತೆಂದು ಕಾಣುತ್ತದೆ. ಆದರೆ ವಾಸ್ತವದಲ್ಲಿ ಹೋರಾಟಕ್ಕೆ ಇವು ಕೇಂದ್ರಬಿಂದುಗಳಲ್ಲ. ನಗರಗಳಲ್ಲಿರುವವರೆಲ್ಲಾ ಶೋಷಕ ವರ್ಗಕ್ಕೆ ಸೇರುವುದಿಲ್ಲ ಮತ್ತು ಹಳ್ಳಿಯ ಜನರಲ್ಲಿ ಶೋಷಕ ವರ್ಗದವರಿಲ್ಲ ಎನ್ನುವಂತೆಯೂ ಇಲ್ಲ. ಹೇಗೆ ದೈಹಿಕ ಮತ್ತು ಬೌದ್ಧಿಕ ದುಡಿಮೆಗಳನ್ನು ಪರಸ್ಪರ ವಿರೋಧಿಗಳು ಎಂದು ಹೇಳಲಾಗುತ್ತಿತ್ತೋ ಹಾಗೆ ಇಂದು ಹಳ್ಳಿ - ದಿಲ್ಲಿಗಳ ಮಾತು ಬರುತ್ತಿದೆ. ಇದು ಕೃತ್ರಿಮವಾದ ವಿಭಜನೆಯೆಂಬುದು ಸ್ಪಷ್ಟವಾಗಿಯೇ ಇದೆ. ಆಯಾ ಗುಂಪುಗಳ ನಡುವಣ ಪ್ರಮುಖ ವ್ಯತ್ಯಾಸಗಳು ಕಡಿಮೆಯಾಗುತ್ತಿದ್ದಂತೆ ಅವುಗಳಲ್ಲಿ ಹೆಚ್ಚು ಏಕತೆ ಮೂಡುತ್ತದೆ ಮತ್ತು ತಮ್ಮ ಸಮಾನ ಸ್ವಭಾವಗಳನ್ನು ಆ ಗುಂಪುಗಳು ಗುರುತಿಸಿಕೊಳ್ಳುತ್ತವೆ.

ಬಹಳ ಸಾಧಾರಣೀಕರಿಸಿ ಹೇಳುವುದಾದರೆ ಒಟ್ಟಾರೆ ಇರುವುದು ಎರಡು ವರ್ಗಗಳು: ಲಾಭವನ್ನು ಹಾಯಾಗಿ ಹಿರಿದುಕೊಳ್ಳುವವರು ಮತ್ತು ಇತರರ ಲಾಭಕ್ಕಾಗಿ ದುಡಿಮೆಯನ್ನು

ಮಾರಿಕೊಳ್ಳುವವರು. ಇತ್ತೀಚಿನ ದಶಕಗಳಲ್ಲಿ ವೈಜ್ಞಾನಿಕ -ತಾಂತ್ರಿಕ ಕ್ರಾಂತಿಯು ವ್ಯಾಪಕವಾಗಿ ಜರುಗಿ ವರ್ಗಗಳ ಇರುವನ್ನು ಮಸುಕುಮಾಡಿವೆಯೆಂಬ ಮಾತು ಕೇಳಿಬರುತ್ತದೆ. ಆದರೆ ಅಂತಹ ಬೆಳವಣಿಗೆಯು ಉತ್ಪಾದನೆಯ ವಿಧಾನ ಮತ್ತು ಮಟ್ಟವನ್ನು ಬದಲಾಯಿಸಬಹುದೇ ವಿನಾ ಉತ್ಪಾದನಾ ಸಂಬಂಧಗಳನ್ನು ಕಡಿದುಹಾಕುವುದಿಲ್ಲ. ಬಹುರಾಷ್ಟ್ರೀಯ ಕಂಪೆನಿಯೊಂದರಲ್ಲಿ ತಾಂತ್ರಿಕ ಮುಖ್ಯಸ್ಥನಾಗಿದ್ದುಕೊಂಡು ತಿಂಗಳಿಗೆ ಲಕ್ಷ ರೂಪಾಯಿ ವೇತನ ಪಡೆಯುವವನೊಬ್ಬ "ದುಡಿಯುವ ವರ್ಗ" ಕ್ಕೆ ಸೇರುತ್ತಾನೆಯೆ? ಅವನೂ ದಿನಗೂಲಿಯಲ್ಲಿ ತಿಂಗಳಿಗೆ ಒಂದು ಸಾವಿರ ರೂಪಾಯಿ ಪಡೆಯುವವನೂ ಒಂದೇ ವರ್ಗಕ್ಕೆ ಸೇರುತ್ತಾರೆಯೇ? ಇಂತಹ ಪ್ರಶ್ನೆಗಳನ್ನು ಹಾಕಿ ವರ್ಗಗಳು ಅಳಿಸಿಹೋಗಿವೆಯೆಂದು ಸೂಚಿಸುವುದು ಸುಲಭ. ಆದರೆ ಲೆನಿನ್ ಹೇಳಿದ್ದಂತೆ ಈಗಲೂ ಉತ್ಪಾದನಾ ಸಂಬಂಧಗಳೇ ವರ್ಗ ವಿಭಜನೆಗೆ ಮೂಲ ಸೂತ್ರವಾಗಿದೆ. ಆ ಇಬ್ಬರು ಒಂದೇ ವರ್ಗಕ್ಕೆ ಸೇರಿದ್ದರೂ ಮಾನಸಿಕವಾಗಿ ಬೇರೆ ಬೇರೆ ಆಯಾಮಗಳನ್ನು ಸೃಷ್ಟಿಸಿಕೊಂಡಿರುತ್ತಾರೆ. ಸಾವಿರ ರೂಪಾಯಿ ಕೂಲಿ ಪಡೆಯುವನ ಜೊತೆಯಲ್ಲಿ ಬಾವುಟ ಹಿಡಿದು ಮೆರವಣಿಗೆ ಹೋಗಲು ಲಕ್ಷ ರೂಪಾಯಿ ವೇತನ ಪಡೆಯುವವನು ಹಿಂಜರಿಯಬಹುದು. ಅದಕ್ಕೆ ಕಾರಣ ಅವನು ಆಳುವ ವರ್ಗಕ್ಕೆ ಹತ್ತಿರವಾಗಿರುವುದು, ನಾಳಿನ ದಿನಗಳಲ್ಲಿ ತಾನೂ ಆ ವರ್ಗಕ್ಕೆ ಸೇರಿಕೊಂಡುಬಿಡುವೆನೆಂಬ ಭಾವನೆ ಇರುವುದು.

ಮಧ್ಯಮ ವರ್ಗವೆಂಬುದು ಪ್ರತ್ಯೇಕವಾದ ವರ್ಗವಾಗಲು ಅರ್ಹವಾಗಿಲ್ಲದಿದ್ದರೂ ತನ್ನದೇ ಆದ ಕೆಲವು ಭಾವನೆ ಮತ್ತು ಪ್ರತೀಕ್ಷೆಗಳನ್ನು ಅದು ಹೊಂದಿರುತ್ತದೆ. ಅಲ್ಲಿಯ ಜನಕ್ಕೆ ಎಂಥದೋ ಬಿಗುಮಾನ, ಅತ್ತ ಮೇಲಕ್ಕೆ ಹೋಗುವ ಹಂಬಲ, ಇತ್ತ ಕೆಳಕ್ಕೆ ಜಾರಿಬಿಡಬಹುದೆಂಬ ಭಯ. ಮುಖ್ಯವಾಗಿ ಈ ಗುಂಪಿನವರಲ್ಲಿ ಬಹುತೇಕ ಮಿದುಳಿನ ಕೆಲಸ ಮಾಡುವವರು. ಇದು ಸಂಪೂರ್ಣವಾಗಿ ಔದ್ಯೋಗಿಕ ಕ್ರಾಂತಿಯ ನಂತರದ ಕಾಲದಲ್ಲಿ ಹುಟ್ಟಿಕೊಂಡಿರುವುದಲ್ಲ.

ಪ್ರಾಚೀನ ಗ್ರೀಸ್ ಮತ್ತು ರೋಮ್‌ಗಳಲ್ಲಿ ಸಹ ಈ ಗುಂಪಿಗೆ ಸೇರುವಂಥವರು ಇದ್ದರು. ಈ ಬಣದ "ಬುದ್ಧಿಜೀವಿ"ಗಳು ತಲೆ ತಲಾಂತರಗಳಿಂದ ಆಳುವ ವರ್ಗಕ್ಕೆ ದಾಸೋಹ ಮಾಡಿಕೊಂಡು ಬಂದಿದ್ದಾರೆ; ಅಂತೆಯೇ ದುಡಿಯುವ ವರ್ಗದೊಡನೆ ಪೂರ್ಣವಾಗಿ ಸಮೀಕರಿಸಿಕೊಂಡು ಕ್ರಾಂತಿಕಾರಿ ಹೋರಾಟಗಳಿಗೆ ಬೆನ್ನೆಲುಬೂ ಆಗಿದ್ದಾರೆ. ಅರಿಸ್ಟಾಟಲ್‌ನಂತಹವರು ಅಂದಿನ ಗುಲಾಮಿ ಪದ್ಧತಿಯನ್ನು ತಾತ್ವಿಕವಾಗಿ ಸಮರ್ಥಿಸಿ ಆಳುವ ವರ್ಗದ ಬುನಾದಿಯನ್ನು ಭದ್ರಪಡಿಸಲು ಯತ್ನಿಸಿದ್ದರು; ಇಂದು ಅಂಥದೇ ಕೆಲಸವನ್ನು ಮಾಡಲು ವಿಶ್ವವಿದ್ಯಾನಿಲಯಗಳ ಒಳಗೆ - ಹೊರಗೆ ಮರಿ-ಅರಿಸ್ಟಾಟಲ್‌ಗಳು ತುಂಬಿ ತುಳುಕುತ್ತಿದ್ದಾರೆ. ಅದಕ್ಕೆ ಪ್ರತಿಯಾಗಿ ಚರಕ, ಚಾರ್ವಾಕ, ಮಾರ್ಕ್ಸ್‌ನಂತಹವರು ದುಡಿಯುವ ವರ್ಗದ ತಾತ್ವಿಕ ಕಹಳೆಯನ್ನು ಅದ್ಭುತವಾಗಿ ಮೊಳಗಿಸಿದ್ದಾರೆ.

ಇಂದಿನ ಒಂದು ಉದಾಹರಣೆಯನ್ನು ನೋಡುವುದಾದರೆ ಜಾಗತೀಕರಣವೆಂಬ ಭಯಂಕರ ಪ್ರಕ್ರಿಯೆಯ ಪರ ಮತ್ತು ವಿರೋಧವಾಗಿ ಕ್ರಿಯಾಶೀಲರಾಗಿರುವವರ ಸೈದ್ಧಾಂತಿಕ ನಿಲುವುಗಳನ್ನು

ಪರೀಕ್ಷಿಸಬಹುದು. ಭಾರತದಂತಹ ದೇಶಗಳಿಗೆ ಆರ್ಥಿಕ ಚೈತನ್ಯ ಮೂಡಿಸಲು ಭಗವಂತನೇ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ, ವಿಶ್ವ ಬ್ಯಾಂಕ್ ಮತ್ತು ವಿಶ್ವ ವ್ಯಾಪಾರಿ ಸಂಸ್ಥೆಗಳನ್ನು ನಿಯಾಮಕಗೊಳಿಸಿದ್ದಾನೆಂಬಂತೆ ಚೀರಾಡುವ ಮಧ್ಯಮ ವರ್ಗದ ಬುದ್ಧಿಜೀವಿಗಳು ನಮ್ಮಲ್ಲಿದ್ದಾರೆ. ಆ ಭಗವಂತನೇ ಅಮೆರಿಕಾದ ಅಧ್ಯಕ್ಷನೆಂದು ಬಾಯಿ ಬಿಟ್ಟು ಅವರು ಹೇಳುವುದಿಲ್ಲ, ಅಷ್ಟೇ.

ಆದರೆ ಈ ಭಗವಂತನು ಇತರರ ಭಾಗ (ಅಂದರೆ, ಸಂಪತ್ತು)ವನ್ನು ಹಾರಿಸಲು ಸದಾ ಚೇಷ್ಟೆ ಮಾಡುತ್ತಿರುವುದನ್ನು ಬಹಿರಂಗಗೊಳಿಸಿ ಅದನ್ನು ತಡೆಯಲು ಸಂಘಟಿತ ಪ್ರಯತ್ನದಲ್ಲಿ ತೊಡಗಿರುವ ಮಧ್ಯಮ ವರ್ಗದ ಬುದ್ಧಿಜೀವಿಗಳೂ ಇದ್ದಾರೆ. ಅಂದರೆ, ಈ ವರ್ಗಕ್ಕೆ ನಿರ್ದಿಷ್ಟವಾದ ಸ್ಥಿರ ಲಕ್ಷಣಗಳಿಲ್ಲ ಎಂದರ್ಥ. ಖಾಸಗೀಕರಣವನ್ನು ಹುಮ್ಮಸ್ಸಿನಿಂದ ಸ್ವಾಗತಿಸುವವರು ಈ ವರ್ಗದಲ್ಲಿದ್ದಾರೆ; ಆದರೆ ತಮ್ಮ ಮಕ್ಕಳನ್ನು ಶಾಲಾಕಾಲೇಜುಗಳಿಗೆ ಸೇರಿಸುವಾಗ ಖಾಸಗಿ ಸಂಸ್ಥೆಗಳನ್ನು ಆಯ್ಕೆಮಾಡಿಕೊಂಡು ಅಲ್ಲಿ ಅನ್ಯಾಯ ನಡೆಯುತ್ತಿದೆಯೆಂದು ಕೂಗೆಬ್ಬಿಸುತ್ತಾರೆ. ಆಗ ಅನ್ಯಾಯ ತಡೆಯಲು ಅವರೇ ಸ್ವತಃ ಮುಂದಾಗದೆ ಸರ್ಕಾರವು ಅದನ್ನು ಮಾಡಬೇಕೆಂದು ಗೋಗರೆಯುತ್ತಾರೆ. ಹಾಗಿದ್ದರೆ ಸರ್ಕಾರಿ ಸಂಸ್ಥೆಗಳಿಗೇ ಮಕ್ಕಳನ್ನು ಕಳಿಸಬಹುದಲ್ಲಾ ಎಂದರೆ ಅವರು ಒಪ್ಪುವುದಿಲ್ಲ. ಖಾಸಗಿ ಶಾಲೆ ಬೇಕು. ಆದರೆ ಖಾಸಗಿತನದ ಲಾಭಾಕಾಂಕ್ಷೆ ಇರಬಾರದು ಎಂಬುದು ಅವರ ಅಪೇಕ್ಷೆ. ಲಾಭವನ್ನು ದೂರವಿಟ್ಟು ವೈರಾಗ್ಯದಿಂದ ಕಾರ್ಯಪ್ರವೃತ್ತವಾಗುವ ಖಾಸಗಿತನ ಕೇವಲ ಕನಸಿನ ಮಾತೆಂಬುದು ಅವರಿಗೆ ಹಿಡಿಸುವುದಿಲ್ಲ. ಹೀಗೆ ಡೋಲಾಯಮಾನವಾದ ಮನಃಸ್ಥಿತಿ ಈ ಗುಂಪಿನಲ್ಲಿ ವಿಶೇಷವಾಗಿ ಕಾಣಬರುತ್ತದೆ. ಸಾರ್ವಜನಿಕ ವಲಯಗಳಲ್ಲಿ ಕ್ರಿಯಾಶೀಲರಾಗಿರುವ ಚಳುವಳಿಗಳ ನೇತಾರರು ಇವರ ಸಮಸ್ಯೆಗಳನ್ನು ಪರಿಹರಿಸಿಕೊಡಬೇಕು, ಸ್ವತಃ ಅವರೇ ಬೀದಿಗಿಳಿದು ಹೋರಾಟ ಮಾಡಲು ಅಷ್ಟು ಸಿದ್ಧರಿಲ್ಲ. ಚಳುವಳಿಗಳು ಇವರ ಪರವಾಗಿ ಕಾದಾಡದಿದ್ದರೆ ಅವನ್ನು ಮೂದಲಿಸುವುದರಲ್ಲಿ ಇವರೇ ಮೊದಲಿಗರು ಕೂಡ. ಎಲ್ಲರೂ ಇವರ ಸೇವೆ ಮಾಡಿ ಸುಪ್ಪತ್ತಿಗೆಯಲ್ಲಿ ಇವರಿಗೆ ಅನುಕೂಲ ಮಾಡಿಕೊಡಬೇಕೆಂಬುದು ಈ ಗುಂಪಿನ ನಿರೀಕ್ಷೆ. ಆದ್ದರಿಂದಲೇ ಈ ಗುಂಪನ್ನು "ಬಿಟ್ಟಿಸವಾರರು" ಎಂದು ಕರೆಯುವುದು ವಾಡಿಕೆಯಲ್ಲಿದೆ. ಯಾವುದೋ ಸ್ಥಳ ತಲುಪಲು ಇವರಿಗೆ ವಾಹನ ಬೇಕು, ಆದರೆ ವಾಹನಕ್ಕೆ ಬಾಡಿಗೆ ತೆರಲು ಇವರು ಸಿದ್ಧರಿಲ್ಲ. ತಮಗಾಗಿ ಅಲ್ಲದಿದ್ದರೂ ಹೇಗೂ ವಾಹನ ಹೋಗುತ್ತಿದೆಯಲ್ಲಾ, ತಮ್ಮನ್ನೂ ಕೂಡಿಸಿಕೊಂಡು ಹೋಗಲಿ ಎಂಬುದು ಈ ಗುಂಪಿನ ತರ್ಕ. ಟಿಕೆಟ್‌ಕೊಳ್ಳದೆ ಪ್ರಯಾಣಿಸುವವನ ತರ್ಕವೂ ಅದೇ. ತಾನು ಟಿಕೆಟ್ ಕೊಳ್ಳದಿದ್ದರೂ ಬಸ್ಸು ಹೋಗುತ್ತದಲ್ಲಾ, ತನ್ನಿಂದಾಗಿ ಬಸ್ಸಿಗೇನೂ ನಷ್ಟವಿಲ್ಲವಲ್ಲಾ, ಎಂಬ ಬುದ್ಧಿವಂತ ತರ್ಕ ಅದು. ಬೇರೆಯವರ ಹೆಗಲೇರಿ ತನ್ನ ಗುರಿಯನ್ನು ಸಿದ್ಧಿಸಿಕೊಳ್ಳುವುದು ಈ ಗುಂಪು ಅಪೇಕ್ಷಿಸುವ ಸುಲಭ ಮಾರ್ಗ. ಆದ್ದರಿಂದಲೇ ದುಡಿಯುವ ವರ್ಗದ ಹೋರಾಟಗಾರರು ಈ ಗುಂಪನ್ನು ಎಚ್ಚರದಿಂದ ಅರ್ಥಮಾಡಿಕೊಳ್ಳಬೇಕಾಗುತ್ತದೆ, ಸಹನೆಯಿಂದ ಅದರೊಂದಿಗೆ ವ್ಯವಹರಿಸಬೇಕಾಗುತ್ತದೆ.

ಕೆಲವೊಮ್ಮೆ ಈ ಗುಂಪು ಅಸಾಧಾರಣ ಹುಮ್ಮಸ್ಸಿನಿಂದ ಯಾವುದಾದರೂ ಚಳುವಳಿಯಲ್ಲಿ ಭಾಗವಹಿಸುತ್ತದೆ ಮತ್ತು ಅಷ್ಟೇ ಬೇಗನೆ ನಿರಾಶೆಹೊಂದಿ ಸಿನಿಕತನದಲ್ಲಿ ಮುಳುಗಿಹೋಗುತ್ತದೆ. ಅದಕ್ಕೆ ಹೋರಾಟವೆಂದರೆ ಸರಳೀಕರಿಸಿದ ಮಧ್ಯಪ್ರವೇಶ; ಎಲ್ಲಾ ಒಮ್ಮೆಗೇ ಫಲ ದೊರೆಯಬೇಕು, ಇಲ್ಲದಿದ್ದರೆ ನಾಯಕತ್ವವನ್ನು ದೂಷಿಸಿ, ಮುಖ ದಪ್ಪ ಮಾಡಿಕೊಂಡು ಮೂಲೆಯಲ್ಲಿ ಕುಳಿತುಬಿಡುತ್ತದೆ. ಉಗ್ರವಾದ ಒಂದು ಹೋರಾಟವು ಎಲ್ಲ ಬದಲಾವಣೆಗಳನ್ನೂ ತಂದುಬಿಡುತ್ತದೆಂಬ ಭ್ರಮೆಯಿರುವ ಈ ಗುಂಪಿಗೆ ಆಳುವ ವರ್ಗದ ಭದ್ರಕೋಟೆಯ ನಿಜಸ್ವರೂಪದ ಪರಿಚಯ ಸಾಕಷ್ಟಿಲ್ಲ. ಜನರ ನಡುವೆ ಹೋಗಿ, ಅವರ ಪ್ರಜ್ಞೆಯ ಆಳವನ್ನು ಅರಿತು, ಅದನ್ನು ಹರಿತಗೊಳಿಸಿ, ಹೋರಾಟದಲ್ಲಿ ಧುಮುಕಿಸಿ, ಕ್ರಮೇಣ ಅವರನ್ನು ಕ್ರಾಂತಿಯ ಹಾದಿಗೆ ಕರೆದೊಯ್ಯುವ, ಅವರೊಡನೆ ಸಾಗುವ ಮನೋಭಾವ ಈ ಗುಂಪಿಗಿಲ್ಲ. ಜನರ ಪರವಾಗಿ ತಾನೊಮ್ಮೆ ಬಂದೂಕು ಹಿಡಿದುಬಿಟ್ಟರೆ ಸಮಸ್ಯೆಗಳೆಲ್ಲಾ ಪರಿಹಾರವಾಗುತ್ತವೆಂಬ ಸ್ವ-ವೈಭವೀಕರಣದ ಗುಂಗಿನಲ್ಲಿ ಈ ಗುಂಪು ನಕ್ಸಲೀಯ ಬಣಕ್ಕೆ ನುಗ್ಗಬಹುದು, ಆರೆಸ್ಸೆಸ್ ಶಾಖೆಗೂ ಪದಾರ್ಪಣ ಮಾಡಬಹುದು. ಒಮ್ಮೆ ಭಾಗವಹಿಸಿ ಪೆಟ್ಟುತಿಂದರೆ ಸಿನಿಕತನದಲ್ಲಿ ಮುಳುಗಿ, ಮತ್ತೆ ಮೇಲೇಳದೆ ಕೇವಲ ಸ್ವಾರ್ಥದ ಮುದ್ದೆಯಾಗಿಬಿಡುವುದು ಈ ಗುಂಪಿನ ಸ್ವಭಾವ.

ಇಷ್ಟೆಲ್ಲಾ ಹೇಳಿದರೆ ಈ ಗುಂಪು ಯಾವುದೇ ಚಳುವಳಿಗೆ ಅನಗತ್ಯವಾದ ಭಾರವೆಂಬ ಭಾವನೆ ಬರಬಹುದು. ವಸ್ತುಸ್ಥಿತಿ ಹಾಗಿಲ್ಲ. ಯಾವ ವರ್ಗವನ್ನೂ ಹಾಗೆ ಏಕಪ್ರಕಾರವಾಗಿರುವ ಅಥವಾ ಸಮಗ್ರವಾಗಿ ಒಂದು ಗುಣವುಳ್ಳ ವಿಭಾಗವೆಂದು ಹೇಳಲಾಗುವುದಿಲ್ಲ. ವೇದಾಂತದ ಬ್ರಹ್ಮನಿಗೆ ಮಾತ್ರ ಅಂತಹ ನಿರಪೇಕ್ಷ ಗುಣಗಳನ್ನು ಆರೋಪಿಸಬಹುದು. ಬೇರೆ ಕಡೆಗಳಲ್ಲಿ ಸಾಪೇಕ್ಷತ್ವವೇ ನಿಜವಾದ ಗುಣ. ಆದ್ದರಿಂದ ಮಧ್ಯಮ ವರ್ಗವು ಸರ್ವವಿಧಗಳಲ್ಲೂ ಭಾರವೇ ಎಂಬುದು ಸರಿಯಾದ ತಿಳಿವಳಿಕೆಯಲ್ಲ. ಅನುಭವವೂ ಇದನ್ನು ತೋರಿಸಿಕೊಡುತ್ತದೆ.

ಹೊಸ ವೈಜ್ಞಾನಿಕ-ತಾಂತ್ರಿಕ ಆವಿಷ್ಕಾರಗಳಿಗೆ ಈ ವರ್ಗದ ಕಾಣಿಕೆ ಅಮೂಲ್ಯವಾದ್ದು. ಅಂತೆಯೇ ಆರ್ಥಿಕತೆಯ ಅನಿಷ್ಟ ಉಪದ್ರವಗಳ ವಿರೋಧಕ್ಕೆ ಕೂಡ ಈ ವರ್ಗವು ಗಮನಾರ್ಹವಾದ ಕಾಣಿಕೆ ನೀಡುತ್ತದೆ. ಆದ್ದರಿಂದ ಸಮಾಜವು ಅಪೇಕ್ಷಿಸುವ ಸರ್ವಾಂಗೀಣ ಬದಲಾವಣೆಗೆ ಈ ವರ್ಗವೂ ಕೈಗೂಡಿಸಿದಾಗ ಮಾತ್ರ ಫಲ ದೊರೆಯಬಹುದು. ನೇರವಾಗಿ ಸಂಪತ್ತನ್ನು ಸೃಷ್ಟಿಸುವವರ ಜೊತೆ ಈ ವರ್ಗ ಸೇರಿಕೊಂಡಾಗ ಅದು ಅಜೇಯ ಸೈನ್ಯವಾಗುತ್ತದೆ. ಅದಕ್ಕೆ ಪೂರ್ವಭಾವಿಯಾಗಿ ಈ ಎರಡೂ ಬಣಗಳ ಪ್ರಜ್ಞಾವಂತಿಕೆಯಲ್ಲಿ ಮಾರ್ಪಾಟು ಅವಶ್ಯಕವಾಗಿರುತ್ತದೆ, ಅಷ್ಟೆ. ಈಗಂತೂ ವಿಶ್ವದ ಅನೇಕ ಮೂಲೆಗಳ ವಿದ್ಯಮಾನಗಳನ್ನು ನೋಡಿದರೆ ಅವುಗಳ ಹೊಡೆತವನ್ನು ಚೆನ್ನಾಗಿ ಅನುಭವಿಸಿರುವುದು ಮಧ್ಯಮ ವರ್ಗವೆಂಬುದು ತಿಳಿಯುತ್ತದೆ. ಆದ್ದರಿಂದ ದುಡಿಯುವ ಜನರ ವಿಶಿಷ್ಟ ಆಕಾಂಕ್ಷೆಗಳನ್ನು ಈ ವರ್ಗ ಮೂದಲಿಸಿ ತಳ್ಳಿಹಾಕುವಂತಿಲ್ಲ. ಉದಾಹರಣೆಗೆ ಪೂರ್ವ ಏಷ್ಯಾದಲ್ಲಿ (ಮಲಯೇಷ್ಯ, ಥೈಲೆಂಡ್, ಸಿಂಗಪುರ್ ಇತ್ಯಾದಿ) ಇತ್ತೀಚೆಗೆ ಹಣಕಾಸಿನ ಅವ್ಯವಸ್ಥೆಯಲ್ಲಿ ನಲುಗಿಹೋದ ಮಧ್ಯಮ ವರ್ಗ

ಉದಾರೀಕರಣದ ವಿಷಫಲವನ್ನು ಉಂಡಿದೆ. ಅದಕ್ಕೆ ಅಮೆರಿಕಾ, ವಿಶ್ವ ವ್ಯಾಪರ ಸಂಸ್ಥೆ ಇತ್ಯಾದಿಗಳು ಎಷ್ಟು ಕಾರಣರೆಂದು ಈಗ ಈ ವರ್ಗಕ್ಕೆ ಅರಿವಾಗಿದೆ. ಮೆಕ್ಸಿಕೋ, ಬ್ರೆಜಿಲ್, ಮುಂತಾದೆಡೆಗಳಲ್ಲೂ ಇದೇ ಅನುಭವ. ನಾಳೆ ಭಾರತದಲ್ಲಿ ಅಂತಹುದೇ ಪರಿಣಾಮವಾಗುವುದರಲ್ಲಿ ಸಂದೇಹವಿಲ್ಲ. ವಾಜಪೇಯಿ-ಯಶವಂತ ಸಿನ್ಹಾ-ಜಸವಂತ ಸಿಂಗ್-ಮನಮೋಹನ ಸಿಂಗ್-ಚಿದಂಬರಂ ಮುಂತಾದವರ ದುಷ್ಟಕೂಟ ಭಾವನಾತ್ಮಕವಾಗಿ ಬೊಗಳೆ ಹೊಡೆಯುತ್ತಾ ದೇಶವನ್ನು ಅಮೆರಿಕದ ಅಡಿಯಾಳಾಗಿಸಲು ಎಲ್ಲ ಹೊಲಸು ಕಾರ್ಯಕ್ರಮಗಳನ್ನೂ ಜಾರಿಗೆ ತಂದಿದೆ. ಸಣ್ಣ ಉದ್ದಿಮೆಗಳು ಮುಚ್ಚಿಹೋಗುತ್ತಿವೆ. ಸಾರ್ವಜನಿಕ ವಲಯದ ದೊಡ್ಡ ಉದ್ದಿಮೆಗಳಿಗೆ ಉರುಲು ಹಾಕಲಾಗುತ್ತಿದೆ. ಸಾರ್ವಜನಿಕ ಖಜಾನೆಯನ್ನು ಲೂಟಿಮಾಡಿ ಸ್ವದೇಶಿ ಮತ್ತು ವಿದೇಶಿ ಖಾಸಗಿ ಮಾಲಿಕರನ್ನು ಕೊಬ್ಬಿಸಲಾಗುತ್ತಿದೆ. ಉದ್ಯೋಗಗಳು ಕಡಿಮೆಯಾಗುತ್ತಿವೆ, ಸ್ಥಳೀಯ ಉತ್ಪಾದನೆ ಕುಂಠಿತವಾಗುತ್ತಿದೆ. ವಸಾಹತು ದೌರ್ಜನ್ಯಗಳು ಹೊಸ ರೀತಿಯಲ್ಲಿ ನಮ್ಮಲ್ಲಿ ಮನೆ ಮಾಡಿಕೊಳ್ಳುತ್ತಿವೆ, ಕೆಲಸಗಾರರ ಹಕ್ಕೊತ್ತಾಯಗಳನ್ನು ಮಾನ್ಯ ಮಾಡುತ್ತಿಲ್ಲ, ಪ್ರತಿಭಟಿಸಿದರೆ ಮನೆಗೆ ಕಳಿಸಲಾಗುತ್ತಿದೆ. ಇದೆಲ್ಲಾ ದುಡಿಯುವ ವರ್ಗಕ್ಕೆ ಮಾತ್ರವೇ ಪೆಟ್ಟು ತಿನ್ನಿಸುವುದಿಲ್ಲ. ಮಧ್ಯಮ ವರ್ಗವೂ ಅದರ ಪ್ರಭಾವಕ್ಕೆ ಸಿಲುಕಿ ಆದರಿಂದ ಹೊರಬರಲು ದುಡಿಯುವ ಜನರ ಜೊತೆ ನೇರಸಂಪರ್ಕ ಕಲ್ಪಿಸಿಕೊಳ್ಳಬೇಕಾಗುತ್ತದೆ. ಸುಳ್ಳು ಕನಸುಗಳ ತೆಕ್ಕೆಯಲ್ಲಿ ಬಿದ್ದು ಇದರ ಕಠೋರ ಪರಿಣಾಮಗಳನ್ನು ಮಧ್ಯಮ ವರ್ಗ ಇನ್ನೂ ಮನದಟ್ಟು ಮಾಡಿಕೊಂಡಿಲ್ಲ. ಇನ್ನೂ ಬಹುಕಾಲ ಅದೇ ಅವಸ್ಥೆಯಲ್ಲಿ ಉಳಿಯಲಾಗದು. ಈ ಸುಳ್ಳು ಕನಸುಗಳನ್ನು ಸೃಷ್ಟಿಸಿಕೊಟ್ಟಿದ್ದು ಯಾರು? ಆಳುವ ವರ್ಗವು ಇದೇ ಮಧ್ಯಮ ವರ್ಗದ ಸಹಾಯದಿಂದ ಅದನ್ನು ಮಾಡಿದ್ದಲ್ಲವೆ? ಮಾಧ್ಯಮಗಳು, ಸಾಂಸ್ಕೃತಿಕ ಅಪರಚನೆಗಳು, ಕೊಳ್ಳುಬಾಕ ಪ್ರವೃತ್ತಿಯ ಪ್ರವರ್ಧಮಾನ, ಪೊಳ್ಳು ತತ್ವಶಾಸ್ತ್ರ ಇವೆಲ್ಲಾ ಆ ಕನಸಿಗೆ ಪೂರಕವಾದುವು. ಇಂತಹ ರಟ್ಟಿನ ಮನೆ ಕುಸಿಯಲು ಎಷ್ಟು ಕಾಲ ಹಿಡಿಸುತ್ತದೆ? ಆದರಿಂದ ಮಧ್ಯಮ ವರ್ಗದೊಡನೆ ದುಡಿಯುವ ವರ್ಗ ಮತ್ತು ಅದರ ಪ್ರಾತಿನಿಧಿಕ ರಾಜಕೀಯ ಪಕ್ಷವಾದ ಕಮ್ಯುನಿಸ್ಟ್ ಪಕ್ಷ ಕೂಡಲೆ ಸಂವಾದವನ್ನೇರ್ಪಡಿಸಿಕೊಂಡು ಸಹಕಾರ್ಯಾಚರಣೆಯ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳಬೇಕಾಗಿದೆ. ಇನ್ನೊಂದಂಶವನ್ನು ನೆನಪಿನಲ್ಲಿಡಬೇಕು. ಅಗಾಧವಾದ ಮಧ್ಯಮ ವರ್ಗವನ್ನು ಬೆಳೆಸಿದರೆ ದುಡಿಯುವ ವರ್ಗದ ಆಕಾಂಕ್ಷೆಯಾದ ಕ್ರಾಂತಿಯನ್ನು ಹೊಸಕಿ ಹಾಕಿಬಿಡಬಹುದೆಂಬ ಭಾವನೆ ಈಗಾಗಲೆ ಅರ್ಧ ಶತಮಾನಕ್ಕೂ ಹೆಚ್ಚು ಕಾಲ ಪ್ರಚಾರಕ್ಕೆ ಬಂದಿದೆ. ಅದೇ ಉದ್ದೇಶವೆಂದು ಘೋಷಿಸದಿದ್ದರೂ ಅಂತಹ ಪರಿಣಾಮಕ್ಕಾಗಿ ಬಂಡವಾಳಶಾಹಿಯು ಸದಾ ಕಾತುರವಾಗಿದೆ.

ನಮ್ಮಲ್ಲಿ ಹಬ್ಬಿರುವ ವಿದೇಶಿ ಕಂಪೆನಿಗಳು, ಹತ್ತಾರು ಸರ್ಕಾರೇತರ ಸ್ವಯಂಸೇವಾ ಸಂಸ್ಥೆಗಳು, ಅಮೆರಿಕಾದ ಅಗತ್ಯವನ್ನು ಪೂರೈಸುತ್ತಿರುವ ಕಂಪ್ಯೂಟರ್ ಅಂಗಡಿಗಳು, ಇವು ಭಾಗಶಃ ಮಧ್ಯಮ ವರ್ಗದ ವಿಸ್ತರಣೆಗೆ ಇಂಬು ನೀಡಿವೆ. ಆದರೆ ಕ್ರಾಂತಿಯನ್ನು ದೂರಮಾಡುವ

ಈ ಯೋಜನೆಯು ತಿರುಗೇಟು ಹೊಡೆಯಬಹುದು ಕೂಡ. ಏಕೆಂದರೆ ಈ ವರ್ಗದ ನಿರಾಶೆಗಳು ಫ್ಯಾಸಿಸ್ಟ್ ಶಕ್ತಿಯ ಬೆಳವಣಿಗೆಗೆ ಫಲವತ್ತಾದ ಭೂಮಿ. ಹಿಟ್ಲರನ ಚರಿತ್ರೆ ಇದನ್ನೇ ತೋರಿಸಿಕೊಡುತ್ತದೆ. ನಮ್ಮಲ್ಲಿಯೂ ಅನ್ಯಮತ ದ್ವೇಷ, ಇಟ್ಟಿಗೆ ಸಂಗ್ರಹ, ಧರ್ಮಸಂಸತ್ತು, ರಥಯಾತ್ರೆ, ಚರ್ಚುಗಳ ಧ್ವಂಸ, ಇವಕ್ಕೆಲ್ಲಾ ಮೂಲದ್ರವ್ಯ ಒದಗಿಸುವುದು ಈ ವರ್ಗದ ಮತಿಹೀನ ವಿಭಾಗವೇ ಆಗಿದೆ.

ಅಮೆರಿಕಾದ ಧೃತರಾಷ್ಟ್ರಾಲಿಂಗನಕ್ಕೆ ನಮ್ಮ ದೇಶವನ್ನು ಇಂದು ತಳ್ಳುತ್ತಿರುವ ವಾಜಪೇಯಿ-ಫರ್ನಾಂಡಿಸ್-ಜಸವಂತಸಿಂಗ್ ಮುಂತಾದವರು ಈ ಬೆಳವಣಿಗೆಯನ್ನು ತಿರಸ್ಕರಿಸುವುದಿಲ್ಲ, ತಡೆಯುವುದೂ ಇಲ್ಲ. ಅದನ್ನು ಮಾಡಬೇಕಾದ್ದು ದುಡಿಯುವ ವರ್ಗ ಮತ್ತು ಕಮ್ಯುನಿಸ್ಟ್ ಪಕ್ಷ. ಮಧ್ಯಮ ವರ್ಗವೆಂದು ಒಂದು ಬೃಹತ್ ಜನಸ್ತೋಮವನ್ನು ಮೂಗುಮುರಿದು ದೂರವಿಡುವುದು ಸರ್ವಥಾ ಸಾಧ್ಯವಿಲ್ಲ. ಎಂದಿದ್ದರೂ ತಾಂತ್ರಿಕವಾಗಿ ಸಹ ಆ ವರ್ಗವೂ ದುಡಿಯುವ ವರ್ಗದ ಒಂದು ಭಾಗವೇ ಆಗಿದೆ. ಸಹಕಾರ್ಯಾಚರಣೆಯು ಇದನ್ನು ಗಟ್ಟಿಗೊಳಿಸಿ ನಮ್ಮ ಆರ್ಥಿಕ ಸ್ವಾಂತಂತ್ರ್ಯ ಮತ್ತು ಸ್ವಾವಲಂಬನೆಗೆ ಹಾದಿ ತೋರಿಸುತ್ತದೆ.

(ಕೆಂಬಾವುಟ, ಆಗಸ್ಟ್ ೧೯೯೯)

೧೧. ಏಸುಕ್ರಿಸ್ತ- ಕ್ರಾಂತಿಕಾರಕ ಪುರುಷ

ಹುಟ್ಟಿನಿಂದಲೆ ಸ್ಥಾನಮಾನಗಳು ತೀರ್ಮಾನವಾಗುತ್ತದೆಂಬ ನೆಲೆಯಿಂದ ಸರ್ವಸ್ವವನ್ನೂ ನೋಡುವುದು ಹಿಂದು ಧರ್ಮದ ಅನುಯಾಯಿಗಳಲ್ಲಿ ಆಗಿಬಂದಿರುವ ಪದ್ಧತಿ. ಅವರ ಪ್ರಕಾರ ಯಾವುದೂ ಆಕಸ್ಮಿಕವಲ್ಲ. ಎಲ್ಲ ದೈವನಿಯಾಮಕ. ಆದ್ದರಿಂದ ಯಾವ ಶ್ರೇಷ್ಠ ಅಥವಾ ಕನಿಷ್ಟ ಸ್ಥಾನಕ್ಕೂ ಮನುಷ್ಯ ಮತ್ತು ಸಮಾಜ ಕಾರಣವಲ್ಲ. ದೇವರ ಕಲ್ಪನೆಗೆ ಎದುರಾಗಿ ಹುಲುಮಾನವ ಏತರವನು! ಪ್ರಜ್ಞಾಪೂರ್ವಕ ಆಯ್ಕೆಗಿಂತ ಹುಟ್ಟು ಹೆಚ್ಚಿನ ಪ್ರಭಾವ ಬೀರುವುದು ಅಸಹಜವೆನಿಸಿದರೂ ಅದನ್ನು ಪ್ರಮುಖವಾಗಿಸುವ ಪ್ರವೃತ್ತಿ ನಮ್ಮಲ್ಲಿ ಬಹಳ ಕಾಲದಿಂದ ನಡೆದುಬಂದಿದೆ. ಹಿಂದು ಧರ್ಮ ಅತಿ ಶ್ರೇಷ್ಠವಾದುದು, ಅನಾದಿಯಾದುದು, ಅದನ್ನು ಯಾರೂ ಅಳಿಸಿಹಾಕಲಾರರು, ಎಂದು ಹೇಳುತ್ತಲೇ ಆ ಧರ್ಮಕ್ಕೆ ಎಲ್ಲಿಂದಲೋ ಆಘಾತ ಉಂಟಾಗುತ್ತದೆಂಬ ಭಯ ಕೆಲವರನ್ನು ಪೀಡಿಸುತ್ತದೆ. ಅವರಿಗೆ ಮತಾಂತರ ಒಂದು ದೊಡ್ಡ ಪಿಡುಗಾಗಿ ಕಾಣುವುದು ಈ ಕಾರಣದಿಂದ. 'ಯಥೇಚ್ಛಸಿ ತಥಾ ಕುರು' (ನಿನಗೆ ಯಾವುದು ಸರಿಕಾಣುತ್ತದೋ ಅದನ್ನು ಮಾಡು) ಎಂಬ ಗೀತಾವಾಕ್ಯವನ್ನು ಹೆಮ್ಮೆಯಿಂದ ಉದ್ಧರಿಸುವ ಜನರೇ ಸ್ವತಂತ್ರ ಆಯ್ಕೆಯನ್ನು ದೂಷಿಸುತ್ತಾರೆ, ಅದು ಅನಾಹುತಕ್ಕೆ ದಾರಿಯಾಗುತ್ತದೆಂದು ಕಂಪಿಸುತ್ತಾರೆ. ಅಲ್ಲದೆ, ಬೇರೆ ಮತಕ್ಕೆ ಹೋಗುವ ವ್ಯಕ್ತಿಗೆ ಪ್ರೇರಣೆಗಳು ಎಂಥವು ಎಂಬ ಪ್ರಶ್ನೆ ಅವರಿಗೆ ರುಚಿಸುವುದಿಲ್ಲ.

ಇವರ ಕತೆ ಹೀಗಾದರೆ ಪೋಪನ ಕತೆ ಇದಕ್ಕಿಂತ ಹೆಚ್ಚು ಶ್ರೇಯಸ್ಕರವಾಗೇನೂ ಇಲ್ಲ. ಇತಿಹಾಸದಲ್ಲಿ ಪೋಪುಗಳ ಮೂಗಿನಡಿ ಘಟಿಸಿರುವ ದಾರುಣ ಘಟನೆಗಳ ಪಟ್ಟಿ ಮಾಡಿದರೆ ಅವರ ಪಾಪಕೂಪಗಳು ಎಷ್ಟು ತುಂಬಿವೆ ಮತ್ತು ಎಷ್ಟು ಕಪ್ಪಾಗಿವೆ ಎಂಬುದು ತಿಳಿಯುತ್ತದೆ. ಹದಿನೇಳರ ಹರೆಯದ ಜೋನಳನ್ನು ಹಾಗೂ ಪಾದ್ರಿಯಾಗಿದ್ದುಕೊಂಡೇ ಮತಧರ್ಮದ ಮೌಢ್ಯವನ್ನು ಪ್ರಶ್ನಿಸಿದ ಬ್ರೂನೋನನ್ನು ಜೀವಂತ ಸುಟ್ಟುಹಾಕಿದ ಅಪಕೀರ್ತಿ ಪೋಪನ ಸಾಮ್ರಾಜ್ಯಕ್ಕೆ ಯಾವಾಗಲೂ ಅಂಟಿಕೊಂಡಿರುತ್ತದೆ. ರೈತರ ಪರವಾಗಿ ಹೋರಾಡಿದ ಪಾದ್ರಿ ಥಾಮಸ್ ಮುನ್ಸರ್‌ನನ್ನು ಕೊಂದ ರಣಕೈಗಳು ಚರ್ಚಿನವು.

ಆ ಮಾರ್ಗವನ್ನು ಚಾಚೂ ತಪ್ಪದೆ ಪಾಲಿಸುತ್ತಿರುವ ಪೋಪ್ ಇಂದಿನ ಪೋಪ್ ಪಾಲ್. ಚಿಲಿಯಲ್ಲಿ ಪಿನೋಶೆಯು ಪೈಶಾಚಿಕ ಹತ್ಯೆಗಳನ್ನು ಎಸಗಿದಾಗ ಈತನ ಗಂಟಲು ಮುಚ್ಚಿಹೋಗಿತ್ತು; ಈಗ ಸ್ಪೇನಿನ ಸರ್ಕಾರ ಆ ದುರುಳನನ್ನು ವಿಚಾರಣೆಗೆ ಗುರಿಮಾಡಬೇಕೆಂದು ಆಗ್ರಹಪಡಿಸಿದರೆ ಪೋಪನ ಅಂತಃಕರಣ ಕರಗುತ್ತದೆ. ಮಾನವೀಯ ದೃಷ್ಟಿಯಿಂದ ಪಿನೋಶೆಯನ್ನು ಬಿಟ್ಟುಬಿಡಿ, ಎಂದು ಉಪದೇಶಿಸುತ್ತಾರೆ ಈ ದೈವೀಪುರುಷರು. ಇಂತಹ ಹತ್ತಾರು ಬೇರೆ ಉದಾಹರಣೆಗಳನ್ನು ನೀಡಬಹುದು. ಆದರೆ ಅಗತ್ಯವಿಲ್ಲ. ಮನುಷ್ಯರಲ್ಲಿ ಕೆಲವರನ್ನು ಅಸ್ಪೃಶ್ಯರು, ಕೆಳಜಾತಿಯವರು, ಎಂದು ವರ್ಗೀಕರಿಸಿದ ಹಿಂದು ಧರ್ಮದ ಕ್ರೌರ್ಯ ಮತ್ತು ಪೋಪ್ ಸಾಮ್ರಾಜ್ಯದ ದೌರ್ಜನ್ಯ, ಒಂದನ್ನೊಂದು ಮೀರಿಸುವಂತಿವೆ. ಚರ್ಚಿನ ದುರ್ನಡತೆಗಳನ್ನು ಖಂಡಿಸಿದ ಮಿಲ್ಟನ್ ಆಗಲಿ, ಟಾಲ್‌ಸ್ಟಾಯ್ ಆಗಲಿ ಕ್ರೈಸ್ತಧರ್ಮದ ಅಧಿಕೃತ ವಕ್ತಾರರಿಗೆ ಹಿಡಿಸಲಿಲ್ಲ. ಬೊಜ್ಜು ಬೆಳೆಸಿಕೊಂಡು ಸುಖಲೋಲುಪರಾಗಿ ಉನ್ಮತ್ತರಾಗಿರುವ ಈ ಪಾದ್ರಿಗಳು ಜನರಿಗೆ ಹಾದಿ ತೋರಿಸುವ ಸಾಮರ್ಥ್ಯ ಎಲ್ಲಿ ಹೊಂದಿದ್ದಾರೆ, ಎಂದು ಮಿಲ್ಟನ್ ಉಗ್ರವಾಗಿ ನುಡಿದಿದ್ದ. ಹಿಂದು ಧರ್ಮದ ಜಗದ್ಗುರುಗಳಿಗೂ ಅನ್ವಯವಾಗುವ ಮಾತು ಇದು.

ಐತಿಹಾಸಿಕ ಯೇಸು

ಪೋಪನ ಸಾಮ್ರಾಜ್ಯವನ್ನು 'ಪುಣ್ಯ ರಾಜ್ಯ' (ಹೋಲಿ ಸೀ) ಎಂದು ಕರೆಯುವ ರೂಢಿಯಿದೆ. ಯೇಸುವಿನ ಪ್ರಾತಿನಿಧಿಕ ಸಂಸ್ಥೆಯೆಂಬ ಕಾರಣಕ್ಕೆ ಆ ಹೆಸರು ಬಂದಿದೆ. ಚರಿತ್ರೆಯ ಪುಟಗಳಲ್ಲಿ ಶೋಭಿಸುವ ಯೇಸುವಿಗೂ ಪೋಪನ ಸಾಮ್ರಾಜ್ಯದಲ್ಲಿ ಪೂಜಿಸಲಾಗುವ ಯೇಸುವಿಗೂ ವ್ಯತ್ಯಾಸವಿದೆ. ಚರಿತ್ರೆಯಲ್ಲಿ ಅವನು ದೀನದಲಿತರ ಹೋರಾಟಗಳ ಮುಂಚೂಣಿಯಲ್ಲಿದ್ದವನೆಂದು ದೈವತ್ವಕ್ಕೆ ಏರಿಸಲ್ಪಟ್ಟವನು; ಪೋಪನ ಸಾಮ್ರಾಜ್ಯದಲ್ಲಿ ಅವನು ಭಗವಂತನ ಸಂದೇಶ ತಂದವನೆಂದು ಹಿರಿಯ ಪಟ್ಟಕ್ಕೇರಿಸಲ್ಪಟ್ಟಿರುವವನು. (ಅವನು ಕೆಲಕಾಲ ಕಾಶ್ಮೀರಕ್ಕೆ ಬಂದು ತಂಗಿದ್ದುದರಿಂದ ಶ್ರೇಷ್ಠ ಧಾರ್ಮಿಕ ಗುರುವಾಗಲು ಸಾಧ್ಯವಾಯಿತೆಂದು ಹೇಳುವ ಕೆಲವು ಹಿಂದು ಧರ್ಮದ ರಂಜಕ ಇತಿಹಾಸಕಾರರಿಗೇನೂ ಕಡಿಮೆಯಿಲ್ಲ. ಆದರೆ ಅದನ್ನು ಅವರು ಸಹ ಗಂಭೀರವಾಗಿ ತೆಗೆದುಕೊಳ್ಳುವಷ್ಟು ಮೂರ್ಖರಾಗಿರುವುದಿಲ್ಲವೆನಿಸುತ್ತದೆ). ಯೇಸುವು ತಾನೇನಾಗಬೇಕೆಂದು ಬಯಸಿದ್ದುದಕ್ಕಿಂತಲೂ ಮಾನವ ಸಮಾಜ ಏನಾಗಬೇಕೆಂದು ತೀವ್ರವಾಗಿ ಭಾವಿಸಿದ್ದು ಹೆಚ್ಚು ಮುಖ್ಯ. ಅವನು ಶಿಲುಬೆಗೇರಿ ಹುತಾತ್ಮನಾದ್ದು ಅದಕ್ಕಾಗಿ.

ಯೇಸುವಿನ ಕನಸನ್ನು ತಮ್ಮದಾಗಿಸಿಕೊಂಡ ಮಹಾತ್ಮರು ಅನೇಕ ಕಾಲಘಟ್ಟಗಳಲ್ಲಿ ಪೋಪನ ಸಾಮ್ರಾಜ್ಯದ ಕೆಂಗಣ್ಣಿಗೆ ಬಿದ್ದು ಭಸ್ಮವಾಗಿದ್ದಾರೆ. ಅವರು ಪರಿಭಾವಿಸಿದ ಸಾಮಾಜಿಕ ಆದರ್ಶಗಳು ಭಗವಂತನ ಸಾಮ್ರಾಜ್ಯವೆಂಬುದರ ಸ್ತುತಿ ಮಾಡುವ ಚರ್ಚ್ ಎಂಬ ಮಹಾಸಂಸ್ಥೆಗೆ ಎಷ್ಟೋ ಬಾರಿ ನಡುಕ ಹುಟ್ಟಿಸಿವೆ. ಸಾಮಾನ್ಯವಾಗಿ ಎಲ್ಲ ದೇವದೂತರೂ ಭಗವಂತನ ಸಾಮ್ರಾಜ್ಯವು ಭವಿಷ್ಯದಲ್ಲಿ ನಿರ್ಮಾಣವಾಗಬೇಕಾದ್ದೆಂದು ಬಗೆಯುವವರೇ ಹೊರತು ಈಗಾಗಲೆ ಪೋಪನ ನೇತೃತ್ವದಲ್ಲಿ ಅಸ್ತಿತ್ವಕ್ಕೆ ಬಂದಿದೆಯೆಂದು ಭ್ರಮಿಸುವುದಿಲ್ಲ. ಮೊದಲಿಗೆ 'ಭಗವಂತನ

ಸಾಮ್ರಾಜ್ಯ'ದ ಮಾತನ್ನಾಡಿದವರಿಗೆ ಅದರ ಭೌಗೋಳಿಕ ವ್ಯಾಪ್ತಿ ಸ್ಪಷ್ಟವಾಗಿತ್ತು. ಅದು ಪ್ಯಾಲಿಸ್ಟೈನ್. ಜನರು ಯಾರೆಂದು ಅವರಿಗೆ ತಿಳಿದಿತ್ತು. ಅಲ್ಲಿನ ಯೆಹೂದ್ಯರೇ ಅವರು. ನಿರೀಕ್ಷಿಸಲಾಗಿದ್ದ ಸಾಮ್ರಾಜ್ಯವು ನೈತಿಕ ತಳಹದಿ ಉಳ್ಳದ್ದು; ಪರಸ್ಪರರನ್ನು ಪ್ರಾಮಾಣಿಕವಾಗಿ, ಸಮಾನತೆಯಿಂದ ಕಾಣುವಂತಹ ಜನಸಮೂಹದ್ದು.

ಜೂಡಿಯಾ ಪರಂಪರೆ

ಒಂದು ಕುತೂಹಲದ ಸಂಗತಿಯೆಂದರೆ ಜೂಡಿಯಾ ಪರಂಪರೆಯಲ್ಲಿ ದೇವದೂತರು ಕ್ರಾಂತಿಕಾರಿಗಳು ಮತ್ತು ಪಾದ್ರಿಗಳು ಪ್ರತಿಗಾಮಿಗಳು. ದೇವದೂತರು ಅತಿ ಕೆಳವರ್ಗದ, ವಿಶೇಷತಃ ರೈತಾಪಿ ಕುಟುಂಬಗಳ ಜನ. ಯೂರೋಪಿನ ಸಾಂಸ್ಕೃತಿಕ ಇತಿಹಾಸದಲ್ಲಿ ಪ್ರತಿಭಟನೆಯ ಕಾಣಿಕೆ ಇವರದು. ಮನುಷ್ಯರನ್ನು ಆಹುತಿ ಕೊಡುವ ಸಂಪ್ರದಾಯವನ್ನು ನಿಲ್ಲಿಸಿದವರು ಅವರು. ಜೆಹೋವಾ ದೇವತೆಯ ಬಾಯಲ್ಲೇ ಆಮೋಸ್ ಎಂಬ ದೇವದೂತನು ಶೋಷಕರ ಪಾತಕಗಳನ್ನು ಖಂಡಿಸುವ ಮಾತುಗಳನ್ನಾಡಿಸಿದ್ದಾನೆ. ತಮ್ಮ ಗಂಡಂದಿರೊಡನೆ ಮದ್ಯಪಾನ ಮಾಡುತ್ತಾ ಕಾಲ ನೂಕುವ ಸಿರಿವಂತ ಹೆಂಗಸರನ್ನು ದನಗಳೆಂದು ಸಹ ಅವನು ಜರಿದಿದ್ದಾನೆ. ದೇವತೆಗೆಂದು ತಂದ ಹುರಿದ ಮಾಂಸವನ್ನು ತಾವೇ ಬೊಕ್ಕಿಬಿಡುತ್ತಾರೆಂದು ಪೂಜಾರಿಗಳನ್ನು ದೂಷಿಸಿಸಿದ್ದಾನೆ. ಈ ಪದ್ಧತಿ ಮುಂದುವರಿಯುತ್ತಿದ್ದಂತೆ, ಯೆಹೂದ್ಯ ಪ್ರಭುತ್ವವು ನುಚ್ಚುನೂರಾಗಿ ರೋಮಿನ ಆಡಳಿತ ಜಾರಿಗೆ ಬಂತು. ಅದೂ ಬೇಗನೆ ಭಗ್ನವಾದೀತೆಂಬ ಆಶಯವನ್ನು ಯೆಹೂದ್ಯರು ಹೊಂದಿದ್ದರು. ಅವರನ್ನು ಅಧೀನದಲ್ಲಿಟ್ಟುಕೊಳ್ಳುವುದು ರೋಮಿನ ಆಧಿಪತ್ಯಕ್ಕೆ ಸುಲಭವಾಗೇನೂ ಇರಲಿಲ್ಲ. ರೋಮನ್ನರನ್ನು ಬಗ್ಗುಬಡಿಯಲು ಒಬ್ಬ ನೇತಾರನನ್ನು ಕಳಿಸಿಕೊಡಲು ದೇವರು ವಿಳಂಬ ಮಾಡುವುದಿಲ್ಲವೆಂಬ ಆಸೆಯನ್ನವರು ಹೊತ್ತಿದ್ದರು. ಟೈಬೀರಿಯಸ್ ಎಂಬುವನ ಪ್ರಭುತ್ವ ರೋಮಿನಲ್ಲಿ ಜಾರಿಯಲ್ಲಿದ್ದಾಗ ಒಬ್ಬ ಬಡಗಿಯ ಮನೆಯಲ್ಲಿ ಆ ರಕ್ಷಕ ಹುಟ್ಟಿಬಂದು ತನ್ನ ಜನರನ್ನು ಉದ್ಧಾರ ಮಾಡಲು ಶ್ರಮಿಸಿದ್ದರಿಂದ ಅವನಿಗೆ ಮಾನವ ಕೋಟಿಯ ಉದ್ಧಾರಕನೆಂಬ ಬಿರುದು ಅಂಟಿಕೊಂಡಿತು.

ಈ ಮಗುವಿನ ಕತೆ ಮೋಹಕವಾದ್ದು. ಜನರ ಸಂಕಷ್ಟದ ಸಮಯದಲ್ಲಿ ಅವರಲ್ಲಿದ್ದ ಆಕಾಂಕ್ಷೆಗಳನ್ನೆಲ್ಲಾ ಈ ಮಗುವಿನ ಮೂಲಕ ಭಾವುಕತೆಯಿಂದ ಪೂರೈಸಿಕೊಂಡರು. ಮಗು ಹುಟ್ಟಿದಾಗ ಏನೆಲ್ಲಾ ಸಿರಿ ತೋರಿಬಂತು! ರಾಜರು ಸಹ ಬಂದು ಮಗುವಿಗೆ ತಲೆಬಾಗಿದರು!! ಅವರೂ ತಲೆಬಾಗುವಂತಾಗಲಿ ಎಂಬ ಜನರ ಆಸೆಯು ಕತೆಯಲ್ಲಿ ನಡೆದೇಹೋಯಿತು. ಈ ಮಗುವು ಮುಂದೆ ಪ್ರಭುತ್ವದ ವಿರೋಧಿಯಾಗಿ ಬೆಳೆದದ್ದರಿಂದ ನಂತರದ ಕಾಲದಲ್ಲಿ ಮಗುವಿನ ವೈಭವವನ್ನು ಹುಮ್ಮಸ್ಸಿನಿಂದ ಆಲಂಕಾರಿಕವಾಗಿ ಚಿತ್ರಿಸಲಾಯಿತು. ಅವನ ಜನರನ್ನು ಬಂಧನದಿಂದ ಮುಕ್ತರನ್ನಾಗಿಸಲು ಪಣತೊಟ್ಟು ಹೋರಾಡಿದ ಈ ವೀರ ಮುಂದೆ ದೈವದ ಪಟ್ಟಕ್ಕೇರಿದ.

ರೋಮ್ ಚಕ್ರಾಧಿಪತ್ಯದ ಪ್ರತಿನಿಧಿಯಾಗಿ ಪೋಂಟಿಯಸ್ ಪೈಲೆಟ್ ಪ್ಯಾಲಿಸ್ಟೈನಿನಲ್ಲಿದ್ದ. ಅವನನ್ನು ಕ್ರಿ.ಶ. ೨೬ರಲ್ಲಿ ಹಿಂದಕ್ಕೆ ಕರೆಸಿಕೊಳ್ಳಲಾಯಿತು. ಯೇಸುವಿನ ನೇತೃತ್ವದಲ್ಲಿ ಅವನ ವಿರುದ್ಧ ಬೃಹತ್ತಾದ ಬಂಡಾಯ ನಡೆದದ್ದು ಅದಕ್ಕೆ ಆರು ವರ್ಷ ಮುಂಚೆ. ಇಂತಹ ಒಂದು ಬಂಡಾಯದ ನಾಯಕನನ್ನಾಗಿ ಯೇಸುವನ್ನು ಚಿತ್ರಿಸಿಕೊಳ್ಳುವುದು ಬಹಳ ಜನಕ್ಕೆ ಕಷ್ಟ. ಆದರೆ ಕ್ರೈಸ್ತ ಧರ್ಮದ ಒಡಂಬಡಿಕೆಯಲ್ಲಿ ಇದಕ್ಕೆ ಸಾಕಷ್ಟು ಪುರಾವೆಗಳು ಲಭ್ಯವಿವೆ. ಸಾಕ್ರೆಟೀಸಿನಂತಹ ಐತಿಹಾಸಿಕ ಪುರುಷನ ಬಗ್ಗೆ ಖಚಿತವಾದಿ ಮಾಹಿತಿ ದೊರಕುವಷ್ಟು ಯೇಸುವಿನ ಬಗ್ಗೆ ದೊರೆಯದು. ಏಕೆಂದರೆ ಅವನ ಬಗ್ಗೆ ಬರೆದ ನಾಲ್ವರು ಶಿಷ್ಯರು ಆಗಲೇ ಒಂದು ಪರಂಪರೆಯನ್ನು ದಾಖಲಿಸುವವರಾಗಿದ್ದರು; ಯೇಸುವಿನ ಮರಣದ ಸುಮಾರು ಎಪ್ಪತ್ತು ವರ್ಷಗಳ ನಂತರ ಬರೆದವರು ಅವರು. ಆ ವೇಳೆಗಾಗಲೆ ಜೆರೂಸಲೆಂನ್ನು ಧ್ವಂಸಮಾಡಲಾಗಿತ್ತು. ಟೈಟಸ್ ಎಂಬುವನ ನಾಯಕತ್ವದಲ್ಲಿ ರೋಮಿನ ಸೈನ್ಯ ಎಸಗಿದ ದುಷ್ಕೃತ್ಯ ಅದು. ಮುಂದೆ ಹಾಗಾಗುತ್ತದೆಂದು ಯೇಸುವಿನ ಬಾಯಲ್ಲಿ ಅವನ ಶಿಷ್ಯವರ್ಗ ಹೇಳಿಸಿರುವುದು ಆಶ್ಚರ್ಯದ ವಿಷಯವಲ್ಲ. ಅವರ ಸಮಕಾಲೀನ ರಾಜಕೀಯದ ಅಗತ್ಯವನ್ನು ಪೂರೈಸಲು ಎಪ್ಪತ್ತು ವರ್ಷಗಳ ಹಿಂದಿನ ಯೇಸುವಿನ ಬಾಯಿಂದ ಅದನ್ನು ಹೊರಡಿಸಿದ್ದಾರೆ.

ರೋಮ್ ಚಕ್ರಾಧಿಪತ್ಯದ ಪರವಾಗಿ ಸುವಾರ್ತೆಗಳು

ಸೋಜಿಗದ ಅಂಶವೆಂದರೆ ಸುವಾರ್ತೆಗಳಲ್ಲಿ ಯೆಹೂದಿ ವಿರೋಧವಾದ, ಆದರೆ ರೋಮ್ ಪರವಾದ, ಅನೇಕ ಸಂಗತಿಗಳು ಕಂಡುಬರುತ್ತವೆ. ಉದಾಹರಣೆಗೆ, ಪೀಟರ್ ತನಗೆ ಯೆಸು ಯಾರೆಂಬುದು ತಿಳಿದಿಲ್ಲವೆಂದು ಹೇಳುತ್ತಾನೆ (ಮ್ಯಾತ್ಯೂ ೨೬. ೬೯-೭೫, ಮಾರ್ಕ್ ೧೪. ೬೬-೭೨ ಇತ್ಯಾದಿ). ಯೇಸುವನ್ನು ದಸ್ತಗಿರಿ ಮಾಡುವಾಗಿನ ಸಂದರ್ಭ ಅದು. ಅಲ್ಲದೆ ದುರಹಂಕಾರಿ ಪೈಲೇಟನನ್ನು ಮೃದುಸ್ವಭಾವದವನೆಂದು ಚಿತ್ರಿಸಲಾಗಿದೆ. ಜೀಸಸ್‌ಗೆ ಮರಣದಂಡನೆ ಆಗುವ ಮೊದಲು ಯೆಹೂದ್ಯರ ಆಗ್ರಹದಂತೆ ಬರಬ್ಬಸ್‌ನನ್ನು ಬಿಡುಗಡೆ ಮಾಡಲು ಅವನು ಒಪ್ಪಿದ್ದುದಾಗಿ ಹೇಳಲಾಗಿದೆ (ಮ್ಯಾತ್ಯೂ: ೨೭. ೧೫-೧೬ ಇತ್ಯಾದಿ). ಹಾಗೆ ನೋಡಿದರೆ ರೋಮಿನ ವಿರುದ್ಧದ ಕಾರ್ಯಾಚರಣೆಯಲ್ಲಿ ಬರಬ್ಬಸನ ಪಾತ್ರ ಹಿರಿದು. ಜಾನ್ ಮತ್ತು ಜೂಡಾಸ್ ಸಹ ರೋಮನ್ನರನ್ನು ಉಚ್ಚಾಟಿಸಲು ಶ್ರಮಿಸಿದ್ದರು. ಜಾನ್ ಬಂದ ಮೇಲೆ ಎಲ್ಲೆಲ್ಲೂ ಗಲಾಟೆ ಆರಂಭವಾಗಿ ಭಗವಂತನ ಸಾಮ್ರಾಜ್ಯ ಹತ್ತಿರವಾಗಿರುವಂತೆ ಕಾಣುತ್ತಿದೆ. (ಲೂಕ್ ೧೬. ೧೬. ಇತ್ಯಾದಿ), ಎಂಬ ಮಾತು ಆತನ ನಾಯಕತ್ವಕ್ಕೆ ಕುರುಹಾಗಿದೆ. ಇದು ಪರಲೋಕಕ್ಕೆ ಸಂಬಂಧಿಸಿದ ಮಾತಲ್ಲ, ಇಹಲೋಕದ ಗುಲಾಮಗಿರಿಯಿಂದ ಮುಕ್ತವಾಗಬೇಕೆಂಬ ತವಕದ ಸೂಚನೆ. ಲೂಕನ ಸುವಾರ್ತೆಯ ೨೨ನೆಯ ಅಧ್ಯಾಯದಲ್ಲಿ ಒಂದು ಕ್ರಾಂತಿಕಾರಿ ಪಡೆಯ ರಚನೆ, ಅವರ ಬಂಡಾಯದ ಮೊದಲು ಸಾಮೂಹಿಕವಾಗಿ ಉಂಡದ್ದು, ಮುಂತಾದ ವಿವರಗಳು ದೊರೆಯುತ್ತವೆ. ಅಲ್ಲಿ ಸೇರಿದ್ದವರಲ್ಲಿ ಒಬ್ಬ ರೋಮಿನ ಪರವಾಗಿ ಪಿತೂರಿ ನಡೆಸುವವನಿದ್ದನೆಂದು ಬಂಡಾಯದ ನಾಯಕ ಹೇಳುತ್ತಾನೆ. ಬಂಡಾಯಗಾರರು

ಮೂಕವಿಸ್ಮಿತರಾಗುತ್ತಾರೆ. ವೈಯಕ್ತಿಕ ಆಸೆಗಳನ್ನು ಬದಿಗಿಟ್ಟು ಸಮುದಾಯದ ಒಳಿತಿಗಾಗಿ ಕೆಲಸ ಮಾಡುವುದೇ ಕ್ರಾಂತಿಕಾರಿಯ ಕರ್ತವ್ಯವೆಂಬ ಮಾತೂ ಇಲ್ಲಿ ಬರುತ್ತದೆ (೧೬. ೨೬-೨೭). ಮೇಲಾಗಿ, ಯೇಸುವಿನ ಒಡನಾಡಿಗಳು ಬಂಡಾಯಕ್ಕೆ ಸಜ್ಜಾಗಿಲ್ಲದಿದ್ದ ಪಕ್ಷದಲ್ಲಿ ಜೂಡಾಸನು ಏನನ್ನು ಬಹಿರಂಗಗೊಳಿಸಿ ವಿಶ್ವಾಸಘಾತುಕತನವನ್ನು ಪ್ರದರ್ಶಿಸಲು ಸಾಧ್ಯವಿತ್ತು? ಯೇಸುವನ್ನು ಹಿಡಿಯ ಬಂದವರಿಗೆ ಅವನನ್ನು ಬೊಟ್ಟುಮಾಡಿ ತೋರಿಸಿದ್ದು ಜೂಡಾಸನ ವಿಶ್ವಾಸಘಾತುಕತೆ ಎಂಬ ರೀತಿಯಲ್ಲಿ ಸುವಾರ್ತೆಗಳ ಕೆಲವು ವಾಕ್ಯಗಳಿವೆ. ಅವನ್ನು ಪದಶಃ ತೆಗೆದುಕೊಳ್ಳುವುದು ಅಪಾರ್ಥವಾಗುತ್ತದೆ. ಏಕೆಂದರೆ ರೋಮಿನ ಗುಪ್ತದಳಗಳಿಗೆಲ್ಲಾ ಯೇಸು ಚೆನ್ನಾಗಿ ಗೊತ್ತಿದ್ದವನು. ಅವನು ಊರೊಳಕ್ಕೆ ಬಂದಾಗ ಜನರು ಎಲ್ಲೆಲ್ಲೂ ನಿಂತು ಸಂಭ್ರಮದಿಂದ ಅವನನ್ನು ಬರಮಾಡಿಕೊಂಡಿದ್ದರು, "ನನಗೆ ಮುಕ್ತಿ ದೊರಕಿಸಿಕೊಡು" (ಹೊಸಾನ್ನಾ) ಎಂದು ಜಯಘೋಷ ಮಾಡಿದ್ದರು. ಅಂತಹವನ ಗುರುತಿಲ್ಲದ ಗುಪ್ತದಳ ಎಂತಹ ಗುಪ್ತದಳವಾದೀತು! ಜೂಡಾಸನು ಬಂಡಾಯದ ಸಮಾಚಾರವನ್ನು ರೋಮಿನ ದಳಗಳಿಗೆ ತಿಳಿಸಿದ್ದೇ ಅವನ ನಿಜವಾದ ವಿಶ್ವಾಸಘಾತುಕತನ. ಬರಬ್ಬಸನ ಸಂದರ್ಭದಲ್ಲಿ ಬರುವ ಮಾತುಗಳು ಬಂಡಾಯದ ಸ್ಪಷ್ಟಚಿತ್ರವನ್ನು ಕೊಡುತ್ತವೆ. "ಬಂಡೆದ್ದು ಕೆಲವರನ್ನು ಕೊಂದಿದ್ದುದರಿಂದ ಇತರ ಕೆಲವರೊಡನೆ ಬರಬ್ಬಸ್ ದಸ್ತಗಿರಿಯಾಗಿದ್ದ" ಎನ್ನುತ್ತದೆ ಮಾರ್ಕನ ಸುವಾರ್ತೆ (೧೫.೭). ಅದನ್ನೇ ಲೂಕನ ಸುವಾರ್ತೆಯೂ ಹೇಳುತ್ತದೆ (೨೩.೧೯). ನಗರದ ಶ್ರೀಮಂತರನ್ನುಳಿದು ಇತರರೆಲ್ಲಾ ರೋಮಿನ ವಿರೋಧಿಗಳೇ ಆಗಿದ್ದರು.

ಸುವಾರ್ತೆಗಳ ತೀವ್ರಗಾಮಿತನ

ಶೋಷಣೆಯನ್ನು ಉಗ್ರವಾಗಿ ಖಂಡಿಸುವುದಲ್ಲದೆ ಇಡೀ ಸಾಮಾಜಿಕ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಬದಲಾಯಿಸಬೇಕೆಂಬ ಆಶಯವನ್ನು ಸುವಾರ್ತೆಗಳು ವ್ಯಾಪಕವಾಗಿ ಪ್ರಕಟಿಸುತ್ತವೆ. "ಕಡೆಯುವವರು ಮೊದಲಿಗರಾಗುತ್ತಾರೆ; ಭೂಮಾತೆಯ ಸಂಪತ್ತಿನ ಉತ್ತರಾಧಿಕಾರಿಗಳು ಅವರು." ಜೊತೆಗೆ "ಪೂಜಾಸ್ಥಾನದಿಂದ ಬಡ್ಡಿಗೆ ಸಾಲ ಕೊಡುವವರನ್ನು ಹೊರದೂಡಲಾಯಿತು," ಎಂಬ ಮಾತನ್ನು ಗಮನಿಸಿ. ರೋಮಿನ ಆಡಳಿತದೊಡನೆ ಕೈಗೂಡಿಸಿದವರು "ಸತ್ತವರ ಮೂಳೆಗಳನ್ನು ತುಂಬಿಕೊಂಡಿರುವ ಪೇಲವ ಗೋರಿಗಳು." ಕಾನೂನಿನ ಮಾತನ್ನೇ ಆಡುತ್ತಾ ವಿಜೃಂಭಿಸುವವರು (ಅಂದರೆ, ರೋಮಿನ ಹಿಡಿತವನ್ನು ಸಮರ್ಥಿಸುವವರು) "ನೊಣವನ್ನು ಹಿಸುಕಿಹಾಕುತ್ತಾರೆ, ಆದರೆ ಒಂಟೆಯನ್ನು ನುಂಗುತ್ತಾರೆ." (ಇದು ನಮ್ಮ ಸಮಕಾಲೀನ ಕಾನೂನು ವ್ಯವಸ್ಥೆಗೆ ಹಿಡಿದ ಕನ್ನಡಿಯೇ ಎಂಬಂತಿದೆ. ಬಹುರಾಷ್ಟ್ರೀಯ ಕಂಪನಿಗಳ ಸಮರ್ಥನೆ, ಬೀಡಿ ಅಂಗಡಿಯವನ ಉಚ್ಚಾಟನೆ!!)

ಇನ್ನೊಂದು ಪ್ರಸಂಗ ಹೀಗಿದೆ: ರೋಮನ್ನರಿಗೆ ತೆರಿಗೆ ಕೊಡಬೇಕೋ, ಎಂಬ ಪ್ರಶ್ನೆಯನ್ನು ಜೀಸಸ್‌ಗೆ ಹಾಕಲಾಗಿದೆ. "ಅದಾವ ನಾಣ್ಯವನ್ನು ಕೊಡಲಾಗುತ್ತದೆಯೋ ಅದನ್ನು ತೋರಿಸಿ," ಎನ್ನುತ್ತಾನೆ ಅವನು. ತಕ್ಷಣ ಪ್ರಶ್ನೆ ಹಾಕಿದವನು ಒಂದು ರೋಮನ್ ನಾಣ್ಯವನ್ನು (ದೆನಾರಿಯಸ್) ತೋರಿಸುತ್ತಾನೆ! ಯೆಹೂದಿ ನಾಣ್ಯ ಅವನಲ್ಲಿಲ್ಲ. ರೋಮನ್ನರ ಬಾಲಬಡುಕನಲ್ಲದವನಾಗಿದ್ದರೆ

ಅವನ ಬಳಿ 'ದೆನಾರಿಯಸ್' ಎಲ್ಲಿರುತ್ತಿತ್ತು! "ಸೀಸರನಿಗೆ ಸಲ್ಲಬೇಕಾದ್ದನ್ನು ಅವನಿಗೆ ಕೊಡಿ, ಆದರೆ ನಮ್ಮ ದೇಶಕ್ಕೆ ಸೇರಬೇಕಾದ ಸ್ವಾತಂತ್ರ್ಯವನ್ನು ಅದಕ್ಕೆ ಕೊಡಿ," ಎನ್ನುತ್ತಾನೆ ಯೇಸು.

ಇನ್ನೊಂದು ಪ್ರಸಂಗದಲ್ಲಿ ಶ್ರೀಮಂತ ಯುವಕನೊಬ್ಬನಿದ್ದಾನೆ. ಅವನನ್ನು ಕಂಡೊಡನೆ ಯೇಸುವಿಗೆ ಅಭಿಮಾನ ಉಕ್ಕುತ್ತದೆ. ಅವನು ಸನ್ನಡತೆಗೆ ಹೆಸರಾಗಿದ್ದ ಯುವಕ. "ಅಮರ ಜೀವನಕ್ಕಾಗಿ ನಾನಿನ್ನೇನು ಮಾಡಬೇಕು?" ಎನ್ನುತ್ತಾನವನು. ಜೀಸಸ್ ಹೇಳಿದ : "ನಿನ್ನ ಆಸ್ತಿಯನ್ನೆಲ್ಲಾ ಮಾರಿಕೊಂಡು ನಮ್ಮ ಚಳುವಳಿಯಲ್ಲಿ ಸೇರಿಕೊ." ಆ ಯುವಕನಿಗೆ ಅದು ಸಾಧ್ಯವಲ್ಲ. ಅವನ ವರ್ಗದಿಂದ ಹೊರಬರಲು ಅವನಲ್ಲಿ ಮಾನಸಿಕ ಸಿದ್ಧತೆ ಇಲ್ಲ. ಸಾಮಾಜಿಕ ಸುಧಾರಣೆಯ ಕ್ರಿಯೆಯಲ್ಲಿ ಅವನು ಭಾಗವಹಿಸಲಾರ. ಸಪ್ಪೆ ಮೋರೆ ಮಾಡಿಕೊಂಡು ಅವನು ಹೊರಟುಹೋಗುತ್ತಾನೆ. ಆಗಲೇ ಯೇಸು ಹೇಳಿದ್ದು: "ಒಂಟೆಯು ಸೂಜಿಯ ಕಂಡಿಯಲ್ಲಿ ತೂರಿಬರಬಹುದು, ಶ್ರೀಮಂತನಿಗೆ ಭಗವಂತನ ಸಾಮ್ರಾಜ್ಯದಲ್ಲಿ ಪ್ರವೇಶವಿಲ್ಲ," ಎಂದು. ಅಂದರೆ ತಾನು ನಿರ್ಮಿಸುತ್ತಿದ್ದ ಹೊಸಪದ್ಧತಿಯ ಸಮಾಜಕ್ಕೆ ಶ್ರೀಮಂತರ ಬೆಂಬಲವಿಲ್ಲ, ಎಂದರ್ಥ. ಆ ನೂತನ ಸಮಸಮಾಜವೇ 'ಭಗವಂತನ ಸಾಮ್ರಾಜ್ಯ'. ಜೆರೂಸಲೆಂ ನಗರದೊಳಕ್ಕೆ ಪ್ರವೇಶಿಸಲು ಇದ್ದ ಹಾದಿಗಳಲ್ಲಿ "ಸೂಜಿಯ ಕಂಡಿ" ಎಂಬ ಹೆಸರಿನ ಕಿರಿದಾದ ಹಾದಿಯೊಂದು ಇದ್ದಿತಂತೆ. ಅದರ ಮೂಲಕ ಒಂಟೆಯೊಂದು ಕಷ್ಟಪಟ್ಟು ಪ್ರವೇಶಿಸಬಹುದಿದ್ದಿತೇನೋ! ಯೇಸು ಹಾಗೆಂದಾಗ ಶಿಷ್ಯಕೋಟಿ ಕೇಳಿತು: "ಶ್ರೀಮಂತರಿಗೆ ಮುಕ್ತಿ ಇಲ್ಲವೆಂದಾದರೆ ಅದು ಇರುವುದು ಯಾರಿಗೆ?" ಅದಕ್ಕೆ ಯೇಸುವಿನ ಉತ್ತರ: "ತನಗೆ ತಾನು ಅದನ್ನು ಪಡೆದುಕೊಳ್ಳಲು ಯಾರಿಗೂ ಸಾಧ್ಯವಿಲ್ಲ. ಏನಿದ್ದರೂ ಬೇರೆಯವರೊಡನೆ ಬೆರೆತು ಪಡೆದುಕೊಳ್ಳಬೇಕು, ಅಷ್ಟೆ." - ಏನಿದರರ್ಥ? ವೈಯಕ್ತಿಕ ಬಿಡುಗಡೆ ಎಂಬುದು ಮರೀಚಿಕೆ, ಅದು ಇಡೀ ಸಮುದಾಯದ ಬಿಡುಗಡೆಯೇ ಆಗಬೇಕು, ಎಂದು.

ಯೇಸುವಿನ ಮಾತನ್ನು ಕೇಳಿ ಶಿಷ್ಯರೆಲ್ಲಾ ತಮ್ಮೊಳಗೆ ಲೆಕ್ಕಾಚಾರ ಮಾಡಿಕೊಳ್ಳಲಾರಂಭಿಸಿದರು: ನಾವು ಏನೇನು ಬಿಟ್ಟಿದ್ದೇವೆ, ನಮಗೆ ದೊರೆಯುವ ಫಲ ಎಷ್ಟರಮಟ್ಟಿನದು, ಎಂದು. ಆಗ ಯೇಸು ನುಡಿದ: "ಮನೆ, ಮಠ, ಸೋದರರು, ಭೂಮಿ, ಕಾಣಿ, ಎಲ್ಲವನ್ನೂ ಬಿಟ್ಟು ನೀವೆಲ್ಲಾ ನನ್ನೊಡನೆ ಸೇರಿದ್ದೀರಿ, ಸುವಾರ್ತೆಗಾಗಿ ಮುಡಿಪಾಗಿ ಬಂದಿದ್ದೀರಿ. ಇಷ್ಟನ್ನು ತಿಳಿಯಿರಿ: ಹೀಗೆ ಬಂದಿರುವ ನಿಮಗಾರಿಗೂ ಇದೇ ಜೀವನದಲ್ಲಿ ಇದರ ನೂರುಪಟ್ಟು ಸಿಗದಿರುವುದಿಲ್ಲ. ಆದರೆ ಅದಕ್ಕಾಗಿ ಕಿರುಕುಳಗಳನ್ನು ನೀವು ಸಹಿಸಬೇಕಾಗುತ್ತದೆ. ಆಮೇಲೆ ಅಮರವಾದ ಜೀವನ. ಈಗ ಮೊದಲಿನಲ್ಲಿರುವವರು ಆಮೇಲೆ ಕೊನೆಯವರಾಗುತ್ತಾರೆ, ಕೊನೆಯಲ್ಲಿರುವವರು ಮೊದಲಿಗರಾಗುತ್ತಾರೆ" (ಮಾರ್ಕ್ : ೧೦. ೨೮-೩೧).

ಹಲವು ಶತಮಾನಗಳಿಂದ ಪೋಪನ ಸಾಮ್ರಾಜ್ಯದಲ್ಲಿ ಪರಲೋಕದ ಮಹಿಮೆಯನ್ನು ಕೊಂಡಾಡುತ್ತಾ ಬರಲಾಗಿದೆ. ಆದರೆ ಯೇಸು ಯತ್ನಿಸಿದ್ದು ಇದೇ ಜೀವನದಲ್ಲಿ ಹೊಸ

ಸಮಾಜವನ್ನು ನಿರ್ಮಿಸುವುದಕ್ಕೆ. ಫಲವು ಪರಲೋಕದಲ್ಲಿ ದೊರಕುವುದಲ್ಲ; ಇಲ್ಲಿ, ಈಗ, ಅದು ದೊರೆಯಬೇಕು. ಸಮತೆ ಮತ್ತು ಭ್ರಾತೃತ್ವಗಳೇ ಆ ಫಲ.

ಇದಕ್ಕಾಗಿ ಹೋರಾಡುವಾಗ ರೋಮಿನ ಚಕ್ರಾಧಿಪತ್ಯದ ದೈತ್ಯಶಕ್ತಿಯ ಅರಿವು ಯೇಸುವಿಗಿರಲಿಲ್ಲವೆ? ಖಂಡಿತವಾಗಿಯೂ ಇತ್ತು. ಪ್ಯಾಲಿಸ್ಟೈನ್ ಆ ಚಕ್ರಾಧಿಪತ್ಯದ ಒಂದು ಅಂಚಿಗಿತ್ತು. ಆದ್ದರಿಂದ ಅದನ್ನು ಮುರಿದು ಸ್ವತಂತ್ರವಾಗಲು ಹೆಚ್ಚಿನ ಸಾಧ್ಯತೆಯನ್ನು ಯೇಸು ಕಂಡುಕೊಂಡ. ಜಾನ್, ಬರಬ್ಬಸ್ ಮುಂತಾದವರೂ ಅಂತಹ ಕನಸುಗಾರರೇ ಆಗಿದ್ದರು. ಆದರೆ ಸೋಲುಂಟಾದಾಗ ಅವರ ಅನುಯಾಯಿಗಳು ಆ ಕನಸಿನ ಸ್ವತಂತ್ರರಾಜ್ಯದ ನೈತಿಕ ಆಯಾಮಗಳನ್ನು ಮರೆಯಲಿಲ್ಲ; ಅದನ್ನು ದಾಖಲಿಸಿದರು, ಜೀವನದಲ್ಲಿ ಅಳವಡಿಸಿಕೊಳ್ಳಲು ಯತ್ನಿಸಿದರು. ದೇವತಾಶಾಸ್ತ್ರದ ವ್ಯಾಖ್ಯಾನಕಾರರು ಕ್ರೈಸ್ತಧರ್ಮದ ತಿರುಳನ್ನು ಎಷ್ಟು ಕಿವಿಚಿದ್ದರೂ ಅದರ ಮಹತ್ವದ ಭಾಗವಾದ ನೂತನ ಸಾಮಾಜಿಕ ವ್ಯವಸ್ಥೆಯ ಕಲ್ಪನೆಯು ಮಸುಕಾಗಿಲ್ಲ.

ಜನತಾ ಆಂದೋಳನ

ಮೊದಲಿಂದಲೂ ರೈತಾಪಿ ಜನ, ಕಂಗಾಲಾಗಿದ್ದ ಜನ, ಸಾಮಾನ್ಯ ಜನ, ಯೇಸುವಿನೊಡನಿದ್ದರು. ಅದೇ ಅವನ ಚಳುವಳಿಯ ಯಶಸ್ಸು. ಅವರು ಪೋಂಟಿಯಸ್ ಪೈಲೇಟ್‌ಗೆ ಹೇಳಿದರು: "ಇಡೀ ಜೂಡಿಯಾದಲ್ಲಿ ಅವನ ಮಾತುಗಳು ಜನರಲ್ಲಿ ಅಸಮಾಧಾನದ ಹೊಗೆಯನ್ನು ಎಬ್ಬಿಸಿವೆ. ಅವರ ಮೇಲೆ ಹೇರಲಾಗಿರುವ ಹೊರೆಯನ್ನು ಅವರು ಕಿತ್ತೊಗೆಯಲು ಹಾತೊರೆಯುತ್ತಿದ್ದಾರೆ. ಮೊದಲು ಅದು ಗೆಲಿಲೀಯಲ್ಲಿ ಆರಂಭವಾದ್ದು ಈಗ ಈ ನಗರದವರೆಗೆ ಹಬ್ಬಿದೆ" (ಲೂಕ್: ೨೩.೫). ತಾನೊಬ್ಬನೇ ಅಸಾಧಾರಣ ದೈವೀಶಕ್ತಿಯಿಂದ ಜನರನ್ನು ಉದ್ಧರಿಸಲು ಶಕ್ತನೆಂಬ ಭ್ರಮೆ ಯೇಸುವಿಗಿರಲಿಲ್ಲ. ಜನರನ್ನು ಮುಟ್ಟಿದರೆ ಮಾತ್ರ ಅದು ಶಕ್ಯವೆಂಬ ಅರಿವು ಅವನಿಗಿದ್ದಿತು. ಅವರ ವರ್ಗದ ಹಿತವೇನೆಂದು ಅವರೇ ತಿಳಿಯದಿದ್ದರೆ ಅವರಿಗೆ ಬಿಡುಗಡೆ ಎಲ್ಲಿಂದ ದೊರಕೀತು ಎಂಬ ಪ್ರಜ್ಞೆ ಅವನಲ್ಲಿತ್ತು. "ನೀವು ಸತ್ಯವನ್ನು ಅರಿತುಕೊಳ್ಳುತ್ತೀರಿ, ಆ ಸತ್ಯವು ನಿಮ್ಮನ್ನು ಬಂಧನದಿಂದ ಮುಕ್ತರನ್ನಾಗಿಸುತ್ತದೆ," ಎಂದ ಯೇಸು.

ಬಂಡಾಯದ ದಿನ ಹತ್ತಿರ ಬರುತ್ತಿದ್ದಂತೆ ಅವನಲ್ಲಿ ದುಗುಡವೂ ಹೆಚ್ಚಾಗುತ್ತಿತ್ತು. ತಾನಲ್ಲದೆ ಬೇರೆಯವರೊಬ್ಬರು ನಾಯಕತ್ವ ವಹಿಸುವಂತಿದ್ದರೆ ಈ ದುಗುಡ ಕಡಿಮೆಯಾಗಬಹುದಿತ್ತಲ್ಲಾ, ಎಂದೂ ಅಂದುಕೊಂಡ. ಗೇತ್ಸಮೇನ್ ಎಂಬಲ್ಲಿ ಈ ವಿಚಾರ ಅವನ ಮನಸ್ಸಿನಲ್ಲಿ ಹಾದುಹೋಯಿತು. ಅಷ್ಟರಲ್ಲಿ ಜನಜಂಗುಳಿ ಕಾಣಿಸಿತು. ಸೈನಿಕರೂ ಹಿಂದೆಯೇ ಬಂದರು. ಅವನನ್ನು ದಸ್ತಗಿರಿ ಮಾಡಿದರು. ಆಮೇಲೆ ಚಿರಪರಿಚಿತವಾದ ಪ್ರಹಸನಗಳು: ಕಾನೂನು ಕಟ್ಟಳೆ, ವಿಚಾರಣೆ, ಅವನನ್ನು ನಿಂದಿಸುವಂತಹ ಪ್ರಶ್ನೆಗಳು, ಅದಕ್ಕೆ ವಿಚಾರಣೆ, ಮತ್ತೆ ಅವನನ್ನು ನಿಂದಿಸುವಂತಹ ಪ್ರಶ್ನೆಗಳು, ಅದಕ್ಕೆ ಮೌನದ ಅಥವಾ ವ್ಯಂಗ್ಯದ ಉತ್ತರ, ಮುಳ್ಳಿನ ಕಿರೀಟದ ಧಾರಣೆ, ಶಿಲುಬೆಯನ್ನು ಹೊತ್ತು ಸಾಗಲು ನಿಶ್ಶಕ್ತಿ, ಕಡೆಗೆ ದಾರುಣವಾದ ಮರಣ. ಶಿಲುಬೆಗೇರಿದಾಗ ಆತನೆಂದ : "ಅಯ್ಯೋ ಭಗವಂತ, ನನ್ನನ್ನೇಕೆ ಕೈಬಿಟ್ಟೆ? ಹೇಗೂ ಇರಲಿ, ಅವರನ್ನು ಕ್ಷಮಿಸು; ಅವರೇನು ಮಾಡುತ್ತಿದ್ದಾರೆಂದು ಅವರು ತಿಳಿಯರು."

ತನ್ನೆಲ್ಲಾ ಆಕಾಂಕ್ಷೆಗಳೂ ಭಗ್ನವಾಗಿಹೋದುವೇ ಎಂಬ ಆತಂಕ ಅವನನ್ನು ಬಾಧಿಸುತ್ತಿದ್ದಿರಬೇಕು. ಎಷ್ಟೆಲ್ಲಾ ಆಸೆಗಳು, ಎಷ್ಟೆಲ್ಲಾ ಸಾಧ್ಯತೆಗಳು, ಎಷ್ಟೆಲ್ಲಾ ಜನ! ಇನ್ನು ಮುಂದೆ ಜನರು ಏನನ್ನು ಆತುಕೊಳ್ಳಬೇಕು? ಭದ್ರವಾಗಿ ಕಟ್ಟಲಾಗಿದ್ದ ಕೋಟೆಗೆ ಲಗ್ಗೆಯಿಟ್ಟ ದುರ್ಮಾರ್ಗಿಗಳು ಕೋಟೆಯೇ ಇಲ್ಲದಾಗ ಇನ್ನೆಷ್ಟು ದಾಂಧಲೆ, ಅನಾಹುತ, ನಡೆಸಬಹುದು! ಈ ರೋಮಿನ ಆಧಿಪತ್ಯಕ್ಕೆ, ಜನರ ನೋವಿಗೆ, ಕೊನೆಯಿದೆಯೇ? "ಸಸ್ಯವನ್ನು ಹಸಿರಾಗಿರುವಾಗಲೇ ಹೀಗೆ ಸುಟ್ಟುಹಾಕುವವರಿಗೆ ಅದು ಒಣಗಿದ್ದಾಗ ಏನು ತಾನೇ ಮಾಡಲು ಸಾಧ್ಯವಿಲ್ಲ?" ಎಂದು ಆತನು ಶಿಲುಬೆಯನ್ನು ಹೊತ್ತು ನಡೆಯುತ್ತಿದ್ದಾಗ ಉದ್ಗರಿಸಿದ. ಅವನನ್ನು ಶಿಲುಬೆಗೇರಿಸಿದರು. ಅದರಡಿ ಒಕ್ಕಣೆ ಕಾಣಿಸಿಕೊಂಡಿತು: "ಯೆಹೂದ್ಯರ ರಾಜ ಇಲ್ಲಿದ್ದಾನೆ." ಜನಮನದ ಆಳದಲ್ಲಿ ಯೇಸು ಮನೆಮಾಡಿಕೊಂಡಿದ್ದುದು ಹಾಗೆ. ಅವನನ್ನು ಗೇಲಿ ಮಾಡಲು ಧೂರ್ತ ಪೈಲೇಟ್ ಹಾಗೆ ಬರೆಯಿಸಿದ್ದ. ಆದರೆ ಅವನ ಮಾತುಗಳು ಯಥಾಸ್ಥಿತಿಯ ಪ್ರತಿಫಲನವೇ ಆಗಿದ್ದವು. ಹಾಗಾಗಬೇಕೆಂಬುದೇ ಅವನ ಆಶಯ; ಆದ್ದರಿಂದಲೇ ಈಗಲೂ ಅವನು ಜೀವಂತನಾಗಿರಲು ಶಕ್ಯವಿದೆ.

ಅವನ ಶವವನ್ನು ಪೈಲೇಟನ ಭಂಟರು ಹೂತು ಹೋದರು. ಯೇಸುವಿನ ಅನುಯಾಯಿಗಳು, ಅಭಿಮಾನಿಗಳು ಅವನನ್ನು ಪೈಲೇಟಿನ ಪ್ರಪಂಚದಲ್ಲಿ ಬಿಡಲು ಸಿದ್ಧರಿರಲಿಲ್ಲ. ಅವನು ಅವರವನು, ಅವರೊಡನೆ ಇರಬೇಕಾದವನು, ಅವರ ಏಳಿಗೆಗಾಗಿ ಪ್ರಾಣ ಕೊಟ್ಟಿದ್ದವನು. ಆದ್ದರಿಂದ ಹೊಂಚುಹಾಕುತ್ತಿದ್ದು ಸಮಯ ಸಿಕ್ಕಾಗ ಅವನ ಶವವನ್ನು ಹೊರತೆಗೆದುಕೊಂಡು ಹೋದರು. ಯಾವ ಗುಡಿಸಿಲಿಗೆ ತೆಗೆದುಕೊಂಡು ಹೋದರೋ ಬಲ್ಲವರಾರು! ಅದನ್ನು ಅಲ್ಲಿ ಏನು ಮಾಡಿಕೊಂಡರೋ ಕಂಡವರಾರು! ಅಂತೂ ಪೈಲೇಟಿನ ಜನ ಬೆಚ್ಚಿದರು. ಇದೇನು ಕೌತುಕವೆಂಬು ಹೌಹಾರಿದರು. ಸಾಮಾನ್ಯ ಜನರಲ್ಲಿ ಒಂದು ಐತಿಹ್ಯವು ಪ್ರಚಲಿತವಾಯಿತು : ಹೂಳಲ್ಪಟ್ಟ ಮೂರನೆಯ ದಿನ ಯೇಸುಸ್ವಾಮಿಯು ಎದ್ದು ಹೊರಬಂದ, ನಮ್ಮ ಹೃದಯಗಳಲ್ಲಿ ಸೇರಿಕೊಂಡ, ಎಂದು. ಅದನ್ನೇ ಪುನರುತ್ಥಾನವೆಂದು ಕ್ರೈಸ್ತಧರ್ಮದವರು ಆಚರಿಸುವ ಪದ್ಧತಿ ಇದೆ. ಆದರೆ ಅವರಲ್ಲಿ ಎಷ್ಟು ಮಂದಿಯ ಹೃದಯಗಳಲ್ಲಿ ಯೇಸು ನೆಲೆಸಿದ್ದಾನೆ? ನಮ್ಮ ಕಠೋರ ವ್ಯವಸ್ಥೆಯು ಯೇಸು ಜೀವಿಸಿದ್ದ ಕಾಲದ ಅವನ ನಾಡಿನ ವ್ಯವಸ್ಥೆಗಿಂತಲೂ ಮೌಲಿಕವಾಗಿ ಎಷ್ಟು ಭಿನ್ನ? ಒಂದು ಕಥೆಯ ಮುಖಾಂತರ ಯೇಸು ಒಂದು ಸಂದೇಶ ನೀಡಿದ್ದುದನ್ನು ಅವನ ಸಹಚರರು ಎಂದೆಂದಿಗೂ ಸ್ಮರಿಸಿಕೊಳ್ಳುತ್ತಿದ್ದರು. ಅದು ಗೆದರೀನ್‌ನ ಕತೆ, ಅಲ್ಲಿಯ ಹಂದಿಗಳ ಕತೆ. ರೋಮಿನ ದುಷ್ಟ ಚಕ್ರಾಧಿಪತ್ಯದ ಹಂದಿಗಳನ್ನು ಸಮುದ್ರದೊಳಗೆ ಒಗೆಯುವುದೆಂತು, ಎಂಬುದನ್ನು ವಿವೇಚಿಸುವ ಕತೆ ಅದು (ಮ್ಯಾತ್ಯೂ: ೮.೨೮-೩೨).

ಆ ಕತೆಯಿಂದ ಇಂದಿನ ಪ್ರಪಂಚ ಕಲಿಯಬೇಕಾದ್ದು ಬಹಳಷ್ಟಿದೆ. ಅದನ್ನು ಕಲಿತರೆ ಯೇಸುವನ್ನು ಜೀವಂತವಾಗಿಟ್ಟಂತೆ ಆಗುತ್ತದೆ. ಇಲ್ಲದಿದ್ದರೆ ಪೋಪ್ ಹಾಗೂ ಇತರ

ಮತಧರ್ಮಗಳ ಜಗದ್ಗುರುಗಳಂತೆ ಅವನೂ ಜಡ್ಡುಕಟ್ಟಿ ಹೋಗುತ್ತಾನೆ. ಅವನ ಕಾಲದ ಹಂದಿಗಳಿಗಿಂತ ಭೀಕರವೂ ಬಲಿಷ್ಠವೂ ಆದ ಹಂದಿಗಳು ಜಗತ್ತನ್ನು ಆವರಿಸಿಕೊಂಡು ಕತ್ತಲೆಯನ್ನು ಸೃಷ್ಟಿಸಿವೆ. ಸುಮ್ಮನೆ "ಕರುಣಾಳು ಬಾ, ಬೆಳಕೆ, ಮುಸುಕಿದೀ ಮಬ್ಬಿನಲಿ, ಕೈಹಿಡಿದು ನಡೆಸೆನ್ನನು" ಎಂದರೆ ಬೆಳಕು ಬರುವುದಿಲ್ಲ. ನಾವೇ ಬೆಳಕನ್ನು ತಂದುಕೊಳ್ಳಬೇಕು. ಅದಕ್ಕೆ ಯೇಸುವಿನ ಜೀವನ ಒಂದು ನಿದರ್ಶನವಷ್ಟೆ.

(ಹೊಸತು, ಡಿಸೆಂಬರ್ ೧೯೯೯)

◆

೧೨. ಬಸವ-ಅಂಬೆಡ್ಕರ್: ಪೂಜೆಯೋ, ವಿಶ್ಲೇಷಣೆ-ಹೋರಾಟವೋ?

ಬಸವ, ಅಂಬೇಡ್ಕರ್ ಇಬ್ಬರೂ ನಿರ್ದಿಷ್ಟವಾದ ಜೀವನಸೂತ್ರಗಳನ್ನು ನಿರೂಪಣೆ ಮಾಡಿದವರು. ಚಾರಿತ್ರಿಕವಾಗಿ ಅವರು ಬೇರೆ ಬೇರೆ ಶತಮಾನಗಳಿಗೆ ಸೇರಿದವರು; ಆದ್ದರಿಂದ ಅವರಿಗೆ ಎದುರಾದ ಸನ್ನಿವೇಶಗಳು ಬೇರೆ ಬೇರೆ. ಹೀಗಾಗಿ ಅವರ ಮಧ್ಯೆ ತುಲನೆ ಅಸಮರ್ಪಕ ಎಂಬುದು ಅಷ್ಟೇನೂ ಸರಿಯಲ್ಲ;ಏಕೆಂದರೆ ಇವರು ಕಾಲಘಟ್ಟದ ದೃಷ್ಟಿಯಿಂದ ವಿವಿಧ ಹಂತಗಳಿಗೆ ಸೇರಿದವರಾದರೂ, ಸಾಮಾಜಿಕ ರಚನೆಯ ಮಟ್ಟಿಗೆ ಹೇಳುವುದಾದರೆ ಒಂದೇ ವಿಧವಾದ ಸಂದರ್ಭವನ್ನು ಎದುರಿಸಿದವರು.

ನಾವು ಚರಿತ್ರೆಯನ್ನು ತಿಳಿದಿರುವ ವಿಧಾನದಲ್ಲೇ ಕೊರತೆ ಇದೆ. ಕೆಲವರ ಮನಸ್ಸಿಗೆ ಘಾಸಿ ಉಂಟಾಗುತ್ತದೆಂಬ ಕಾರಣಕ್ಕೆ ಭೂತಕಾಲವನ್ನು ವೈಭವೀಕರಿಸಿ, ಸಮಕಾಲೀನ ಘಟನೆಗಳ ಬಗ್ಗೆ ಹತಾಶೆ ಪ್ರಕಟಿಸುವುದು ನಮಗೆ ಸುಲಭದ ಮಾರ್ಗವಾಗಿದೆ. ನಮ್ಮ ಮಾರುಕಟ್ಟೆಯನ್ನು ಪರದೇಶದವರ ಹಿಡಿತಕ್ಕೆ ಬಿಟ್ಟುಕೊಡುವುದರಲ್ಲಿ ತೋರಿಸುವ ಉದಾರನೀತಿಯನ್ನು ನಮ್ಮ ಚರಿತ್ರೆಯ ವ್ಯಾಸಂಗಕ್ಕೆ ಅಗತ್ಯವಾಗುವಂತೆ ಬಳಸಿಕೊಳ್ಳುವುದು ನಮಗಿನ್ನೂ ಸಾಧ್ಯವಾಗಿಲ್ಲ.

ಶ್ರೇಣೀಕೃತ ಸಮಾಜವು ಜನ ಸಮುದಾಯದ ವಿಕಾಸಕ್ಕೆ ಅನುವು ಮಾಡಿಕೊಡುವುದಿಲ್ಲ. ಇದೊಂದು ಅತಿ ಸಾಮಾನ್ಯ ತಿಳುವಳಿಕೆಯ ಅಂಶ. ಇದನ್ನು ಕಡೆಗಣಿಸಿ ಪ್ರಾಚೀನ ಇತಿಹಾಸದಲ್ಲಿ ಸುವರ್ಣಯುಗವನ್ನು ಕಂಡುಹಿಡಿಯುವ ಪ್ರವೃತ್ತಿ ನಮ್ಮಲ್ಲಿದೆ. ಪ್ರತಿಭಟನೆಯ ಹರಿಕಾರನಾದ ಬುದ್ಧನನ್ನು ಶ್ಲಾಘಿಸುತ್ತಲೇ, ಅವನು ಕಾಣದಿದ್ದ ಸುವರ್ಣಯುಗವನ್ನು ನಮ್ಮ ಖೋಟಾ ಇತಿಹಾಸಕಾರರು ಕಾಣುತ್ತಾ ಬಂದಿದ್ದಾರೆ. ವಾಸ್ತವದಿಂದ ಹೇಗಾದರೂ ದೂರವಾಗುವ ಬಯಕೆ ಇದು.

ಜಾತಿ ವ್ಯವಸ್ಥೆಯ ವಿರುದ್ಧ ಸಿಡಿದೆದ್ದವರ ಪೈಕಿ ಬಸವ-ಅಂಬೇಡ್ಕರರು ಪ್ರಮುಖರು. ಆದರೆ ಇಂದು ಇವರು ಮಠಾಧಿಪತಿಗಳಾಗಿದ್ದಾರೆ. ಅವರನ್ನು ಹಾಗೆ ಪುರಸ್ಕರಿಸುವುದೇ ಹೆಚ್ಚು ಅನುಕೂಲಕರವೋ ಏನೋ! ಪಂಥಪ್ರಭೃತಿಗಳಾಗಿ ಇವರು ಶೋಭಿಸುತ್ತಾರೆಂಬುದು ಆಯಾ ಪಂಥಗಳವರ ಅಭಿಮತ; ಆದರೆ ನಿಜಕ್ಕೂ ಅದು ಶೋಭೆಯಲ್ಲ, ಕ್ಷೋಭೆ.

ಜಾತಿ ವ್ಯವಸ್ಥೆಯು ಎಷ್ಟೇ ಕ್ಷುದ್ರವಾಗಿದ್ದರೂ, ಅದು ನಮ್ಮ ಸಮಾಜದಲ್ಲಿ ಹಲವು ಶತಮಾನಗಳಿಂದ ಅತ್ಯಂತ ಭದ್ರವಾಗಿ ನೆಲೆಯೂರಿ ನಿಂತಿದೆ. ಅದನ್ನು ಸಮರ್ಥಿಸಿದ್ದು ಧರ್ಮಶಾಸ್ತ್ರಕಾರರಾದರೆ, ಅದರಿಂದ ವ್ಯಾಕುಲರಾದ ಸಮಾಜಚಿಂತಕರು ಹತ್ತಾರು ನೆಲೆಗಳಿಂದ ಬಂದವರು. ಚರಕ, ಆರ್ಯಭಟ, ಕಬೀರ ಮುಂತಾದವರ ಹಿನ್ನೆಲೆ ಇದನ್ನು ಸಾಬೀತು ಪಡಿಸುತ್ತದೆ.

ಬಸವಣ್ಣನವರು ತಮ್ಮ ಕಾಲದ ವಸ್ತುಸ್ಥಿತಿಯನ್ನು ಆಮೂಲಾಗ್ರವಾಗಿ ಬದಲಾಯಿಸಬೇಕೆಂಬ ಆಕಾಂಕ್ಷೆಯಲ್ಲಿ ಎಷ್ಟು ಲೀನವಾಗಿದ್ದರೆಂದರೆ, ಅವರ ಚಿಂತನೆ ಒಂದಷ್ಟು ಶತಮಾನಗಳ ಕಾಲ ಮುಂದೆ ಹೋಗಿಬಿಟ್ಟಿತ್ತು; ಅವರ ಸುಸಂಸ್ಕೃತ ಮನಸ್ಸಿಗೆ ಅಂದಿನ ಕುತ್ಸಿತ ವ್ಯವಸ್ಥೆಯ ಆಚರಣೆ - ಆಡಂಬರಗಳು ಸರ್ವಥಾ ಅರ್ಥಹೀನವಾಗಿ ಕಂಡವು. ಬಸವಣ್ಣನವರ ಪ್ರಯತ್ನಗಳು ಮೂರ್ತವಾದವು. ಸಮಾಜ ಬದಲಾವಣೆಗೆ ಪೂರಕವಾದ ಚಿಂತನೆ ಅವರ ಕಾರ್ಯಗಳಲ್ಲಿ ಕಂಡುಬರುತ್ತದೆ. ಅವರ ಕಾಲದಲ್ಲಿ ಕೂಡ, ಅವರ ಅನುಯಾಯಿಗಳ ಮಾನಸಿಕ ಸಿದ್ಧತೆಗೂ ಮತ್ತು ಸ್ವತಃ ಅವರ ಆಳವಾದ ಆಕಾಂಕ್ಷೆಗಳಿಗೂ ಅಗಾಧವಾದ ಅಂತರವಿತ್ತು. ಚಿಂತನೆಯಲ್ಲಿ ಸಹಮತ ವ್ಯಕ್ತಪಡಿಸಿದ್ದವರು, ಕ್ರಿಯೆಯಲ್ಲಿ ಅಷ್ಟೇ ನಿಷ್ಠೆಯನ್ನು ತೋರಲು ಶಕ್ತರಿರಲಿಲ್ಲ. ಅವರಿನ್ನೂ ಬಸವಣ್ಣನವರಷ್ಟು ಮುಕ್ತ ಮನಸ್ಸಿನವರಾಗಿರಲಿಲ್ಲ. ದಾಸೋಹದ ಭಾಗ್ಯ ಪಡೆದವರಾಗಲಿ, ಇತರ ಶರಣರಾಗಲಿ ಬಸವಣ್ಣನವರ ಭಂಡಾರವನ್ನು ಮೆಚ್ಚಿದ್ದೇ ಹೆಚ್ಚು. ಶರಣರ ಬಳಗದ ಹೊರಗೆ ಕಂಡುಬಂದ ಛಾಯೆ, ಪ್ರತಿರೋಧ ಒಳಗೂ ದಟ್ಟವಾಗಿತ್ತು. ಬಸವಣ್ಣನವರ ಮೊದಲ ದೊಡ್ಡ ಪ್ರಯೋಗಕ್ಕೆ ಕಂಡುಬಂದ ಉಗ್ರ ಪ್ರತಿಕ್ರಿಯೆಗೆ ಇದು ಕಾರಣ. ಸೈದ್ಧಾಂತಿಕ ನಿಲುವನ್ನು ಸ್ವೀಕರಿಸಿದ್ದವರೆಲ್ಲಾ ಪ್ರಾಯೋಗಿಕ ಕ್ರಿಯೆಗೆ ಸಿದ್ಧರಿರಲಿಲ್ಲ. ಅವರ ಹಿಂದಿನ ಪ್ರಜ್ಞೆ - ಸಂಸ್ಕಾರಗಳು ಅವರಿಂದ ಇನ್ನೂ ದೂರವಾಗಿರಲಿಲ್ಲ.

ಯಾವುದೇ ದೊಡ್ಡ ಚಳವಳಿಯು ಕೇವಲ ಒಂದು ಘಟನೆಯಿಂದ ಜೀವ ತಾಳುವುದಿಲ್ಲ ಅಥವಾ ಕ್ಷೀಣಿಸುವುದಿಲ್ಲ. ಒಂದೊಂದಾಗಿ ಶೇಖರವಾದ ಭಾವನೆಗಳು ಆಸ್ಫೋಟಿಸಿದಾಗ ಚಳವಳಿ ಬೆಳೆಯುತ್ತದೆ, ಇಲ್ಲವೇ ಕುಬ್ಜವಾಗುತ್ತದೆ. 'ಚಳವಳಿಗೆ ಬಲವಾದ ಕಬ್ಬಿಣದ ಚೌಕಟ್ಟು ಹಾಕಿದ ಹಾಗೆ ಈ ಮದುವೆ' ಎಂದು ಕೇತಗ ಚಂದಲೆಯರ ಮದುವೆಯನ್ನು ಪ್ರಶಂಸಿಸಲಾಗಿತ್ತು. ಹರಳಯ್ಯ- ಮಧುವಯ್ಯರುಗಳು ಅದಕ್ಕೆ ಸಂಪೂರ್ಣವಾಗಿ ಬೆಂಬಲ ನೀಡಿದ್ದಾಗ್ಯೂ ಅದನ್ನು ವಿರೋಧಿಸಿ ದಾಂಧಲೆ ನಡೆಸುವವರು ಒಳಗೆ ಮತ್ತು ಹೊರಗೆ ಹೇರಳವಾಗಿದ್ದರು. ಆದ್ದರಿಂದಲೇ ಅದು "ಹೊಲೆಯ ಬ್ರಾಹ್ಮಣಿಯನ್ನು ಮದುವೆಯಾದರೇನಂತೆ, ಹೆಂಡದ ಮಡಕೆಯ ಹೊರಗೆ ತೊಳೆದಂತೆ" ಎಂಬ ಪ್ರಸಂಗವಾಗಿ ಕೆಲವು ಕುಹಕಿಗಳಿಗೆ ಕಂಡುಬಂತು. ಶರಣರಾಗುವುದಕ್ಕಿಂತಲೂ ಸಂಪ್ರದಾಯ ಶರಣರಾಗುವುದು ಅವರಿಗೆ ಬೇಕಿತ್ತು ಮತ್ತು ಅದು ಹೆಚ್ಚು ಸುಲಭವಿತ್ತು.

ಬಸವಣ್ಣನವರ ಶ್ರೇಷ್ಠತೆಯು ಈ ಸೋಲಿನಲ್ಲೂ ಎದ್ದು ಕಾಣುತ್ತದೆ. ಏಕೆಂದರೆ ಅವರಿಗೆ ವಿಚಾರವು ಕೇವಲ ವಿಚಾರವಾಗಿರಲಿಲ್ಲ. ಅದು ಪ್ರಯತ್ನಕ್ಕೆ ಅಥವಾ ಕ್ರಿಯೆಗೆ ಪ್ರೇರಕವಾಗಿತ್ತು. ಹುಟ್ಟಿನಿಂದಲೇ ಏನನ್ನೂ ನಿರ್ಧರಿಸಬಾರದೆಂಬ ಮೂಲಭೂತ ಆಶಯವನ್ನು ಹೊತ್ತ

ಬಸವಣ್ಣನವರ ಸಮಕಾಲೀನ ಅನುಯಾಯಿಗಳು ಯಾರು, ಎಲ್ಲಿದ್ದಾರೆ, ಎಂಬ ಸಂಶೋಧನೆ ನಡೆಯಬೇಕಾದ ಭಯಂಕರ ವಾತಾವರಣ ನಮ್ಮದು. ಆದ್ದರಿಂದಲೇ ಅವರ ಜಯಂತಿಯು ವಿರೋಧಾಭಾಸಗಳ ಆಗರವಾಗಿದೆ. ಅವರನ್ನು ಹೊಗಳುತ್ತಲೇ ಅವರ ಚಿಂತನೆ, ಕ್ರಿಯೆಗಳಿಗೆ ಚೂರಿ ಹಾಕುವುದು ಕ್ರೌರ್ಯವಲ್ಲದೆ ಮತ್ತೇನು?

ಅಂಬೇಡ್ಕರರನ್ನು ಆರಾಧಿಸುವವರೆಲ್ಲಾ ಅವರಿಗೆ ಅಪಚಾರ ಮಾಡುತ್ತಿದ್ದಾರೆ ಎಂದು ಹೇಳುವುದು ಅಸಹನೆಯ ಮಾತಾಗುತ್ತದೆ. ಕೆಲವರಾದರೂ ಹಾಗೆ ನಡೆದುಕೊಳ್ಳುತ್ತಾರೆಂಬುದು ಸುಳ್ಳಲ್ಲ. ಸ್ವಂತದ ದುಡಿಮೆಯಿಂದ ಗಳಿಸಿಲ್ಲದ ಐಶ್ವರ್ಯದ ಮದದಲ್ಲಿ ಯಾರೋ ಕೆಲವು ಪಾನಮತ್ತರು ಅಂಬೇಡ್ಕರರ ಶಿಲಾಮೂರ್ತಿಗೆ ಮದ್ಯಾಭಿಷೇಕ ಮಾಡಿದರೆ ಕೆಲವರಿಗೆ ಅಸಹ್ಯವೆನಿಸುವುದು ಸಹಜ. ಆದರೆ ಕೋಪಗೊಳ್ಳುವುದು ಯಾರ ಮೇಲೆ ಮತ್ತು ಯಾವುದರ ಮೇಲೆ?

ಕಲ್ಲಿನ ವಿಗ್ರಹಕ್ಕೆ ಮದ್ಯಾಭಿಷೇಕ ಮಾಡುವಷ್ಟು ಹಣವನ್ನು ತುಂಬಿಕೊಂಡಿರುವವರು ಸರ್ಕಾರದ ವಿಶೇಷ ಸವಲತ್ತುಗಳನ್ನು ಪಡೆಯಲು ಅರ್ಹರೆ? ಇಂದು ಅನಕ್ಷರಸ್ಥ ಕುಟುಂಬದಿಂದ ಬಂದು ಮೊದಲ ಪೀಳಿಗೆಯ ವಿದ್ಯಾರ್ಥಿಯಾಗುವವರಿಗೆ ನೀಡುವ ಸೌಲಭ್ಯವನ್ನು ಇಪ್ಪತ್ತು ವರ್ಷ ಮಂತ್ರಿಯಾಗಿದ್ದವರ ಮಕ್ಕಳಿಗೂ ಕೊಡಬೇಕೆ? ಸ್ವಯಮಿಚ್ಛೆಯಿಂದ ಈವರೆಗೆ ಯಾರೂ ಅಂತಹ ಸೌಲಭ್ಯಗಳನ್ನು ನಿರಾಕರಿಸಿಲ್ಲವೇಕೆ? ಪ್ರಾಥಮಿಕ ಶಾಲೆಯ ವ್ಯಾಸಂಗವನ್ನೇ ಮುಗಿಸಲು ಸಾಧ್ಯವಿಲ್ಲದವರಿಗೆ, ಉನ್ನತ ಮಟ್ಟಗಳಲ್ಲಿ ನೀಡಲಾಗುವ ಎಷ್ಟೋ ಸವಲತ್ತುಗಳನ್ನು ಪಡೆಯಲು ಹೇಗೆ ಸಾಧ್ಯವಾಗುತ್ತದೆ? ಅವರು ಸ್ವಲ್ಪ ಮೇಲಕ್ಕೆ ಬರಲು ವಸತಿ ಶಾಲೆಗಳನ್ನು ತೆಗೆಯಬೇಕಾದ್ದು ಅತ್ಯಗತ್ಯವಲ್ಲವೆ? ಹೀಗೆ ಎಷ್ಟೋ ಪ್ರಶ್ನೆಗಳನ್ನು ಎತ್ತಬಹುದು. ಅವು ಯಾವುವೂ ಅಪ್ರಾಸಂಗಿಕವಲ್ಲ, ಅಸಮಂಜಸವಲ್ಲ. ಆದರೆ ಅವನ್ನು ಕೇಳಲು ಅವಕಾಶ ಎಲ್ಲಿದೆ ಮತ್ತು ಕೇಳಿಸಿಕೊಳ್ಳಲು ಸಹನೆ ಎಲ್ಲಿದೆ?

ಕೇವಲ ಅಂಬೇಡ್ಕರ್ ಶಿಲಾಮೂರ್ತಿಗಳನ್ನು ನಿಲ್ಲಿಸುವುದೇ ಏಕಮಾತ್ರ ಕಾರ್ಯಕ್ರಮವಾದಾಗ ಅಂಬೇಡ್ಕರ್ ಹಮ್ಮಿಕೊಂಡಿದ್ದ ಚಿಂತನೆ, ವಿಶ್ಲೇಷಣೆ ಮತ್ತು ಕ್ರಿಯೆಗಳು ದೂರವೇ ಉಳಿಯುತ್ತವೆ. ಅಲ್ಲದೆ, ಪದೇ ಪದೇ ಮನುವಾದಿಗಳೆಂದು ಸಂಪ್ರದಾಯ ಮೂಢರನ್ನು ತೆಗಳುತ್ತಲೇ, ಅವರದೇ ತೆಕ್ಕೆಯಲ್ಲಿ ಸಿಲುಕಿಹಾಕಿಕೊಳ್ಳುವ ಅನರ್ಥ ರಾಜಕೀಯ ಬೆಳೆಯುತ್ತದೆ. ಅಂಬೇಡ್ಕರರನ್ನು 'ಆಧುನಿಕ ಮನು' ಎಂದು ಬಣ್ಣಿಸುವ ಅಂಬೇಡ್ಕರ್‌ವಾದಿಗಳು ನಮ್ಮಲ್ಲಿದ್ದಾರೆಂದರೆ ಅದಕ್ಕಿಂತಲೂ ವಿಕೃತವಾದ ಪ್ರಹಸನ ಇನ್ನೊಂದಿಲ್ಲ. ನಮ್ಮ 'ಸಂವಿಧಾನ ಶಿಲ್ಪಿ'ಗಳಾರೂ ವೈಯಕ್ತಿಕವಾಗಿ ಸಂವಿಧಾನ ರಚಿಸಿದವರಲ್ಲ. ಅದನ್ನು ಮಾಡಲು ಒಂದು ಸಭೆ ಇತ್ತು. ಅದರಲ್ಲಿ ಜನಸಮೂಹದಿಂದ ಆಯ್ಕೆಗೊಳ್ಳದಿದ್ದವರು ಬೇಕಾದಷ್ಟು ಮಂದಿ ಇದ್ದರು. ಆ ಸಭೆಯಲ್ಲಿದ್ದವರೆಲ್ಲಾ ಅಂಬೇಡ್ಕರರ ಹಿನ್ನೆಲೆಯನ್ನು ಹೊಂದಿದ್ದವರಲ್ಲ. ಉತ್ಪಾದನಾ ಸಾಮಗ್ರಿಗಳ ಖಾಸಗಿ ಒಡೆತನ ಈಗಿರುವಂತೆ ಇರುವುದಕ್ಕೆ ಅದೂ ಒಂದು ಕಾರಣ. ಅದನ್ನು

ಜನಪರವಾಗಿ ಮಾರ್ಪಡಿಸುವುದು ಅಂಬೇಡ್ಕರ್ ಚಿಂತನೆಯ ಮೊಟ್ಟಮೊದಲ ಮೆಟ್ಟಿಲಾಗಬೇಕಿತ್ತು. ಆದರೆ ಹಾಗಾಗಲಿಲ್ಲ.

ಮಹಾರಾಷ್ಟ್ರದ ಮಹಾಡ್‌ನಲ್ಲಿ ತಮ್ಮ ರಾಜಕೀಯ ಹೋರಾಟವನ್ನು ಆರಂಭಿಸುತ್ತಾ ಮಾರ್ಚ್ ಮತ್ತು ಡಿಸೆಂಬರ್ 1927ರಲ್ಲಿ ಅಂಬೇಡ್ಕರ್ ಎರಡು ಸಮಾವೇಶಗಳನ್ನು ಆಯೋಜಿಸಿದ್ದರು. ಎರಡನೆಯ ಸಮಾವೇಶದಲ್ಲಿ ಹದಿನೈದು ಸಾವಿರ ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡುವಾಗ ಇದ್ದ ಹಿನ್ನೆಲೆಯೇನೆಂದರೆ ಸಿವಿಲ್ ಕೋರ್ಟ್ ಚೌದಾರ್ ಕಲ್ಯಾಣಿಯನ್ನು ಖಾಸಗಿ ಆಸ್ತಿಯೆಂದು ಘೋಷಿಸಿತ್ತು. ಅಲ್ಲಿಯ ನೀರನ್ನು ನಾಯಿಗಳು, ಹಂದಿಗಳು ಮುಟ್ಟಬಹುದಿತ್ತು. ಆದರೆ ಮಹಾರರು ಮುಟ್ಟುವಂತಿರಲಿಲ್ಲ. ಅದಕ್ಕೆ ಪರಿಹಾರವೇನೆಂಬ ಪ್ರಶ್ನೆಗೆ ಉತ್ತರಿಸುತ್ತಾ ಅಂಬೇಡ್ಕರ್ ಭಾವನಾತ್ಮಕ ಪರಿಹಾರಗಳ ಅಸಮರ್ಪಕತೆಯನ್ನು ಒತ್ತಿ ಹೇಳಿದರು. ಅಸ್ಪೃಶ್ಯತಾ ನಿವಾರಣೆಗಾಗಿ ಚಳವಳಿ, ಅಂತರ್ಜಾತೀಯ ಭೋಜನ ಕೂಟಗಳು, ಇತ್ಯಾದಿಗಳು ಅಂತಿಮ ಪರಿಹಾರ ನೀಡಲಾರವು; ಬದಲಾಗಿ ಹಿಂದೂ ಸಮಾಜದ ಆಮೂಲಾಗ್ರ ಬದಲಾವಣೆಗಾಗಿ ಎರಡು ಮೂಲಸ್ತಂಭಗಳಿವೆ. ಸಮಾನತೆ ಮತ್ತು ಜಾತಿರಾಹಿತ್ಯ ಆ ಎರಡು ಕಂಬಗಳು. ಸಮಾನತೆಯು ಭಾವನಾತ್ಮಕವಾದುದಷ್ಟೇ ಅಲ್ಲ; ಅದರ ಕೆಳಗೆ ಆರ್ಥಿಕ ತಳಹದಿ ಇದೆಯೆಂದು ಅವರು ಪ್ರತಿಪಾದಿಸಿದರು. ಅಂಬೇಡ್ಕರ್ ಸಿದ್ಧಾಂತದ ಚೌಕಟ್ಟಿನಲ್ಲಿ ನಡೆಯುವ ಹೋರಾಟಗಳಲ್ಲಿ ಇದಕ್ಕೆ ಆದ್ಯತೆ ದೊರೆಯಬೇಕಾಗಿದೆ.

ಜಾತಿ ಸಮ್ಮೇಳನಗಳಲ್ಲಿ ಅವುಗಳ ವ್ಯವಸ್ಥಾಪಕರು ಅಂಬೇಡ್ಕರರ ಭಾವಚಿತ್ರವನ್ನೂ ಇಟ್ಟು ಅವರ ಸ್ಮರಣೆ ಮಾಡಿ ಪಾವನರಾಗುತ್ತಾರೆ. ಅಂದರೆ, ಅವರ ಚಿಂತನೆ ಮತ್ತು ಕ್ರಿಯಾಪಥಗಳಿಗಿಂತಲೂ ಅವರ ನಾಮಸ್ಮರಣೆ ಹೆಚ್ಚು ಪ್ರಾಶಸ್ತ್ಯ ಪಡೆಯುತ್ತಿದೆ. ಮಾನವೀಯತೆಯ ನಿಟ್ಟಿನಲ್ಲಿ ಮಾನವ ಆಕಾಂಕ್ಷೆಗಳನ್ನು ಪೂರೈಸಲು ಮಾನವರಾಗಿ ಹೋರಾಟ ಮಾಡುವ ಹಾದಿಯನ್ನು ತುಳಿದಿದ್ದ ಅಂಬೇಡ್ಕರ್, ಇಂದು ಕೆಲವರಿಗೆ ಅವತಾರ ಪುರುಷರಾಗಿ ಕಾಣುತ್ತಾರೆ; ಪುನೀತರನ್ನಾಗಿಸುವ ಅತಿಮಾನವರಾಗಿ ಕಾಣುತ್ತಾರೆ. ಒಬ್ಬ ಹೋರಾಟಗಾರನನ್ನು ಅಲಕ್ಷಿಸಲು ಇದಕ್ಕಿಂದ ಉತ್ತಮವಾದ ಮಾರ್ಗ ಇರಬಹುದೆ?

"ನಾನು ಹಿಂದುವಾಗಿ ಹುಟ್ಟಿರುವೆ, ಆದರೆ ಹಿಂದುವಾಗಿ ಸಾಯುವುದಿಲ್ಲ" ಎಂದು ಘೋಷಿಸಿದ್ದ ಅಂಬೇಡ್ಕರ್ ಹಿಂದೂ ಧರ್ಮದ ಕೆಲವು ಅಸಹ್ಯವಾದ ಅವಲಕ್ಷಣಗಳನ್ನು ಗುರುತಿಸಿದ್ದರು. ವಿಪರ್ಯಾಸವೆಂದರೆ ಇಂದು ಕೆಲವು ಕಟ್ಟಾ ಮತೀಯವಾದಿಗಳು ಅಂಬೇಡ್ಕರರ ಹೆಸರು ಗುಣುಗುಣಿಸುತ್ತಾ ಓಟಿನ ರಾಜಕೀಯ ನಡೆಸ ಹೊರಟಿದ್ದಾರೆ. ಇನ್ನೊಂದೆಡೆ ಬೌದ್ಧ ಧರ್ಮವನ್ನು ಸ್ವೀಕರಿಸಿದರೆ ಅನಿಷ್ಟಗಳೆಲ್ಲಾ ತೊಲಗಿದಂತೆ ಎಂಬ ಸುಳ್ಳು ಕಲ್ಪನೆಯನ್ನು ಪ್ರಚುರಪಡಿಸಲಾಗುತ್ತಿದೆ. (ನವ ಬೌದ್ಧ ರಾಜಕಾರಣಿ ಮುಂದಾಳುಗಳ ಮರಣವನ್ನು 'ಮಹಾಪರಿನಿರ್ವಾಣ' ಎಂದು ಬಣ್ಣಿಸುವ ಬಾಲಿಶತನವನ್ನು ಈ ಸಂಬಂಧದಲ್ಲಿಗಮನಿಸಬಹುದು). ಬೌದ್ಧ ಗ್ರಂಥಗಳಲ್ಲಿ ಒಂದಾದ ವಿನಯ ಪಿಟಕದ ಮಹಾವಗ್ಗ

ಎಂಬ ಭಾಗದಲ್ಲಿ ಹೊಸದಾಗಿ ಬೌದ್ಧ ಧರ್ಮಕ್ಕೆ ಸೇರಿದವರ ಹಿನ್ನೆಲೆಗಳನ್ನು ಸುದೀರ್ಘವಾಗಿ ವಿವರಿಸಲಾಗಿದೆ. ಅವರೆಲ್ಲಾ ಹಿಂದಿನವರಾಗಿ ಉಳಿಯಲಿಲ್ಲವಾದ್ದರಿಂದ ಮತ್ತು ಹೊಸ ಧರ್ಮದಲ್ಲಿ ಪೂರ್ಣ ನಿಷ್ಠೆ ಇರಿಸಿಕೊಂಡದ್ದರಿಂದ ಬದಲಾದ ಜನರೆನಿಸಿಕೊಂಡರು. ಇದು ಇಂದಿನ ನವಬೌದ್ಧರಿಗೆ ಯಾವ ಪ್ರಮಾಣದಲ್ಲಿ ಅನ್ವಯವಾಗುತ್ತದೆಂಬುದನ್ನು ವಿಚಾರ ಮಾಡುವ ಅಗತ್ಯವಿದೆ.

ಅಂಬೇಡ್ಕರರಿಗೆ ಬಸವಣ್ಣನ ಗತಿ ಬಾರದಿರಬೇಕಾದರೆ ಏಪ್ರಿಲ್ ತಿಂಗಳ ಆಚರಣೆಯು ಪೂಜೆಯ ಸ್ವರೂಪ ಪಡೆಯದೆ, ವಿಶ್ಲೇಷಣೆ ಮತ್ತು ಹೋರಾಟಗಳ ಲಕ್ಷಣವನ್ನು ಮೈಗೂಡಿಸಿಕೊಳ್ಳಬೇಕಾಗುತ್ತದೆ. ಬಸವಣ್ಣನವರಿಗೆ ಸಿದ್ಧಿಸದಿದ್ದ ಆಕಾಂಕ್ಷೆ ಆಗ ಮಾತ್ರವೇ ಅಂಬೇಡ್ಕರರಿಗೆ ಸಿದ್ಧಿಸುವ ಸಾಧ್ಯತೆ ಇರುತ್ತದೆ.

(ಮುಕ್ತ ಸಮಾಜವಾದಿ ಮಾತುಕತೆ, ಜೂನ್ ೧೯೯೯)

೧೩. ಇ.ಎಂ.ಎಸ್. – ರಾಜಕೀಯದಲ್ಲಿ ಒಬ್ಬ ಸುಸಂಸ್ಕೃತ

ಭಾರತದ ರಾಜಕೀಯ ಸಂದರ್ಭದಲ್ಲಿ ಒಬ್ಬ ವ್ಯಕ್ತಿ ಎಪ್ಪತ್ತು ವರ್ಷಗಳ ಕಾಲ ಸಾರ್ವಜನಿಕ ಜೀವನದಲ್ಲಿದ್ದು ಒಂದೇ ಒಂದು ಅವ್ಯವಹಾರದ ಆಪಾದನೆಗೂ ಒಳಗಾಗದೆ, ನಿಷ್ಠಾವಂತನಾಗಿ ತನ್ನ ಪಕ್ಷದ ಹಾಗೂ ಜನತೆಯ ಹಿತಕ್ಕಾಗಿ ತ್ರಿಕರಣ ಶುದ್ಧವಾಗಿ ದುಡಿಯುವುದೆಂದರೆ ಅದು ಅಸಾಮಾನ್ಯ ಹೆಗ್ಗಳಿಕೆ ಎನ್ನಬೇಕು. 1998ರ ಮಾರ್ಚ್ 19 ರಂದು ಗತಿಸಿದ ಇ.ಎಂ.ಎಸ್. ನಂಬೂದಿರಿಪಾದ್ ಅಂತಹ ಹಿರಿಯ ಚೇತನ. ದೊಡ್ಡ ಜಮೀನ್ದಾರ ಮನೆತನದವರಾಗಿ ಸಕಲ ಸಂಪತ್ತನ್ನೂ ಅನುಭವಿಸುತ್ತಾ ಜೀವನ ಕಳೆಯಬಹುದಾಗಿದ್ದಂತಹ ಈ ತ್ಯಾಗಿ ಮತ್ತು ದಿಟ್ಟ ಹೋರಾಟಗಾರ ಹಾಗೆ ಮಾಡಿದ್ದಿದ್ದರೆ ಲೋಕಕ್ಕೆ ಪರಿಚಿತನಾಗಿರುತ್ತಿರಲಿಲ್ಲ. ಕೇವಲ ಅಪ್ರಸ್ತುತನಾಗಿರುತ್ತಿದ್ದ. ತನ್ನದೆಂಬುದೇನನ್ನೂ ಇಟ್ಟುಕೊಳ್ಳದೆ ಕೊನೆಗೆ ತಾನು ದುಡಿದ ಪಕ್ಷದ ವತಿಯಿಂದ ವಾಸಕ್ಕೆಂದು ಕೊಡಲಾಗಿದ್ದ ಮನೆಯಲ್ಲಿ ಜೀವಿಸಿದ ಇ.ಎಂ.ಎಸ್. ನಮ್ಮ ಸುತ್ತಣ ಪ್ರಕೃತದಲ್ಲಿರುವ ವಾತಾವರಣಕ್ಕೆ ಹೊರತಾದವರು. ಸರಕು ಆರಾಧನಾ ಸಂಸ್ಕೃತಿ ಅಹಸ್ಯವೆನಿಸುವಷ್ಟು ಬೆಳೆದು ನಿಂತಿರುವ ಇಂದಿನ ಬಾಚಿಕೊಳ್ಳುವ ಪ್ರವೃತ್ತಿಯ ನಡುವೆ ಅತಿ ಅಪರೂಪವಾಗಿ ಸಿಗುವಂತಹವರು ಇವರು. ಜಮೀನು, ಮನೆ, ಪೆಟ್ರೋಲ್ ಬಂಕ್, ಹವಾಲಾ ಹಣ ಮುಂತಾದವಕ್ಕಾಗಿ ಬಾಯಿಬಿಡುವ ವಿದ್ವಾಂಸರು, ರಾಜಕಾರಣಿಗಳು ತುಂಬಿರುವ ನಮ್ಮ ಸಂದರ್ಭದಲ್ಲಿ ಬರಿ ಹೋರಾಟದ ಘಳಿಗೆಗಳಷ್ಟನ್ನೇ ತುಂಬುಕೈಗಳಿಂದ ಬಾಚಿಕೊಂಡ ಈತ ಅಸಾಧಾರಣವೆನಿಸುವವರು.

ಕಾರ್ಲ್ ಮಾರ್ಕ್ಸ್ ಗತಿಸಿದಾಗ ಆತನ ಸಹಚರ ಏಂಗಲ್ಸ್ ಹೇಳಿದ್ದರು: "ಒಂದು ಅದ್ಭುತ ಚೇತನ ನಮ್ಮಿಂದ ದೂರವಾಗಿದೆ. ಅಮೋಘ ಚಿಂತನೆಗೆ ಹೆಸರಾಗಿದ್ದ ಆತ ಗತಿಸಿದ್ದರಿಂದ ದುಡಿಯುವ ಜನ ಒಬ್ಬ ಪರಮಮಿತ್ರನನ್ನು ಕಳೆದು ಕೊಂಡಿದ್ದಾರೆ." ಈ ಮಾತು ಇ.ಎಂ.ಎಸ್. ಬಗೆಗೂ ಅನ್ವರ್ಥವಾದುದು. ಇಂದು ನಮ್ಮ ದೇಶದ ಯಾವ ಪಕ್ಷದಲ್ಲೂ ಇಷ್ಟು ಎತ್ತರದ ವ್ಯಕ್ತಿ ಇನ್ನೊಬ್ಬರಿಲ್ಲ. ದೈಹಿಕವಾಗಿ ಸ್ವಲ್ಪ ಕುಬ್ಜನಂತೆ ಕಾಣುತ್ತಿದ್ದ ಅವರು ಸಂಪನ್ನತೆಯಲ್ಲಿ ಎಣೆಯಿಲ್ಲದಷ್ಟು ಎತ್ತರದವರು: ಕ್ರಿಯಾಶೀಲತೆ ಎಂಬುದು ಅವರ ಇನ್ನೊಂದು ಹೆಸರು. ಧ್ಯೇಯನಿಷ್ಠೆಯಂತೂ ಪ್ರಶ್ನಾತೀತವೇ.

ಪಾಂಡಿತ್ಯದ ದೃಷ್ಟಿಯಿಂದ ನೋಡಿದರೆ ಇವರಿಗೆ ಆಳವಾದ ಪ್ರವೇಶವಿಲ್ಲದ ಕ್ಷೇತ್ರವೇ ವಿರಳ. ಅರ್ಥಶಾಸ್ತ್ರ, ಸಮಾಜ ವಿಜ್ಞಾನ, ಭಾರತೀಯ ದರ್ಶನ, ಸಾಹಿತ್ಯ, ಇತಿಹಾಸ, ಮಾರ್ಕ್ಸ್‌ವಾದ, ವಿಜ್ಞಾನದ ಇತಿಹಾಸ, ಹೀಗೆ ಹತ್ತಾರು ವಿಷಯಗಳಲ್ಲಿ ವಿಶಾಲವಾದ ವಿದ್ವತ್ತು ಅವರದಾಗಿತ್ತು. ಬೇರೆ ಬೇರೆ ವಿಷಯಗಳಿಗೆ ಸಂಬಂಧಿಸಿದ ಅವರ ನೂರಕ್ಕೂ ಹೆಚ್ಚು ಗ್ರಂಥಗಳು ಯಾವುದೇ ಸಂಶೋಧಕ ಪ್ರಾಧ್ಯಾಪಕನಿಗೆ ಹೆಮ್ಮೆ ಮತ್ತು ಕೀರ್ತಿ ತರುವಂತಹವು. ತತ್ತ್ವಶಾಸ್ತ್ರ, ಕಾವ್ಯ ಮೀಮಾಂಸೆ, ಸಾಹಿತ್ಯದಲ್ಲಿ ಮೌಲ್ಯಗಳ ಸ್ಥಾನ ಮುಂತಾದವನ್ನು ಕುರಿತಂತೆ ಅವರು ಮಾಡಿರುವ ಕೃಷಿ ಅಮೋಘವಾದದ್ದು, ಸಾಧನೆ ಅಪೂರ್ವವಾದದ್ದು.

1978 ಅಥವಾ 79 ರಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ಅವರನ್ನು ಉಪನ್ಯಾಸ ನೀಡಲು ಆಹ್ವಾನಿಸಲಾಗಿತ್ತು. ಆಗ್ಗೆ ಪ್ರಾಚಾರ್ಯರಾಗಿದ್ದ ಮಾನ್ಯ ಟಿ. ರಮೇಶನ್ ಅವರು ಪ್ರಾಸ್ತಾವಿಕವಾಗಿ ಹೇಳಿದರು: 'ಹಿಂದೊಮ್ಮೆ ಕೋಲಾರದ ಕಾಲೇಜಿಗೆ ನಿಮ್ಮನ್ನು ಆಹ್ವಾನಿಸಬೇಕೆಂದಿದ್ದೆವು. ಸರ್ಕಾರಿ ವಲಯಗಳಲ್ಲಿ ವಿರೋಧ ವ್ಯಕ್ತವಾದ್ದರಿಂದ ಕರೆಸಲಾಗಲಿಲ್ಲವೆಂದು ಬೇಸರವಾಯಿತು. ಈಗ ನಿಮ್ಮನ್ನು ಕರೆಸಿಕೊಳ್ಳಲು ಸಾಧ್ಯವಾದದ್ದು ಹರ್ಷವನ್ನುಂಟುಮಾಡಿದೆ.' ಇದಕ್ಕೆ ಇ.ಎಂ.ಎಸ್. ಹೇಗೆ ಪ್ರತಿಕ್ರಿಯಿಸುತ್ತಾರೋ ಎಂಬ ಕುತೂಹಲ ನಮಗೆ.

'ಹೌದು, ನಾವೀಗ ದೊಡ್ಡವರಾಗಿದ್ದೇವೆ. ಯಾರೂ ನಮ್ಮನ್ನು ಕಡೆಗಣಿಸಲಾರರು. ನಮ್ಮ ಹೋರಾಟದ ರಾಜಕೀಯ ನಮಗೆ ಈ ಸ್ಥಾನವನ್ನು ಕಲ್ಪಿಸಿಕೊಟ್ಟಿದೆ. ವಿದ್ಯಾಸಂಸ್ಥೆಗಳಲ್ಲೂ ನಮ್ಮ ಅಭಿಪ್ರಾಯ ಮಂಡನೆಗೆ ಅವಕಾಶ ನೀಡಬೇಕಾದ್ದು ಅನಿವಾರ್ಯ' ಇತ್ಯಾದಿಯಾಗಿ ಹೇಳುತ್ತಾರೆಂದು ನಾವು ಕೆಲವರು ನಿರೀಕ್ಷಿಸಿದ್ದೆವು. ಅವರು ಹೇಳಿದ್ದೇ ಬೇರೆ: 'ವಿಶ್ವವಿದ್ಯಾನಿಲಯದ ಬಂಧುಗಳನ್ನುದ್ದೇಶಿಸಿ ಮಾತನಾಡುವುದು ನನಗೂ ಸಂತೋಷವೇ. ಅಂದರೆ ವ್ಯವಸ್ಥೆಯೊಡನೆ ರಾಜಿ ಮಾಡಿಕೊಂಡಿದ್ದೇವೆಂದು ಅದರರ್ಥವಲ್ಲ.'

ಅದು ಆ ಧೀಮಂತ ನಾಯಕನ ಚಿಂತನಾ ಪದ್ಧತಿ ಮತ್ತು ವ್ಯಕ್ತಿತ್ವದ ಅವಿಭಾಜ್ಯ ಅಂಗ. ಮಾರ್ಕ್ಸ್‌ವಾದಿಗಳ ಬಗ್ಗೆ ಏನೋ ಔದಾರ್ಯ ತೋರುತ್ತೇವೆಂದು ಬಗೆಯುವ ಶಿಷ್ಟರಿಗೆ, ತಜ್ಞರಿಗೆ, ಇ.ಎಂ.ಎಸ್. ತಮ್ಮ ಇಂಗಿತವನ್ನು ಬಹಿರಂಗಪಡಿಸಿದ್ದರು. ಅಂದರೆ ಪ್ರೊಫೆಸರ್ ರಮೇಶನ್ ಹಾಗೆ ವರ್ತಿಸಿದ್ದರೆಂದಲ್ಲ. ಯಾವುದೋ ಕಿಂಚಿತ್ ಲಾಭಕ್ಕೆ, ಆಮಿಷಕ್ಕೆ ಬಲಿಯಾಗಿ ಮಾರ್ಕ್ಸ್‌ವಾದದ ಸೋಗಲಾಡಿತನವನ್ನು ಬೇಗನೆ ಕಳಚಿಹಾಕುವ ಕೆಲವು 'ಬುದ್ಧಿಜೀವಿ'ಗಳಿಗೆ ಇದು ಅವರ ಕಿವಿ ಮಾತಾಗಿತ್ತು. ಎಂತೆಂತಹ ಹಿರಿಯ ವಿದ್ವಾಂಸರು ಎಷ್ಟು ಚಿಕ್ಕ ತೃಪ್ತಿಗಳಿಗಾಗಿ ಹಾತೊರೆದು ತಮ್ಮ ಜೀವನ ಮೌಲ್ಯಗಳನ್ನು ಕಸಕ್ಕಿಂತ ಕಡೆಯಾಗಿ ಕಾಣುತ್ತಾರೆಂಬುದು ಇ.ಎಂ.ಎಸ್. ಅವರ ಅನುಭವಕ್ಕೆ ಬಂದಿತ್ತು. ಸ್ವತಃ ಅವರನ್ನು ಹೊಗಳುತ್ತಿದ್ದ ಕೆಲವರು ದೇಶದ ಕೆಲವು ಭಾಗಗಳಲ್ಲಿ ಹೀಗೆ ಮಾಡಿದ್ದುದುಂಟು. ತತ್ವನಿಷ್ಠೆಯನ್ನು ಮಾಪನ ಮಾಡಲು ಅವರ ಸೂತ್ರ ಇದೇ: ಎಲ್ಲೆಲ್ಲಿ ಎಷ್ಟೆಷ್ಟು ರಾಜಿ ಮಾಡಿಕೊಳ್ಳಲು ಈತ (ಅಥವಾ ಈತನ ಪಕ್ಷ ಸಿದ್ಧವಾಗಿದ್ದಾನೆ (ಅಥವಾ ಸಿದ್ಧವಾಗಿದೆ)ಮತ್ತು ಯಾವ ದೊಡ್ಡ ಲಾಭಕ್ಕಾಗಿ?

ಯಾವುದೇ ಸಾರ್ವಜನಿಕ ಸಭೆಯಲ್ಲಾಗಲಿ, ಅಂತರರಾಷ್ಟ್ರೀಯ ವಿದ್ವದ್ಗೋಷ್ಠಿಯಲ್ಲಾಗಲಿ ಒಂದೇ ರೀತಿಯ ಸಮಚಿತ್ತದಿಂದ ತನ್ನ ನಂಬಿಕೆಗಳನ್ನು, ಹಾದಿಯನ್ನು ಬಿಚ್ಚಿಡಬಲ್ಲ ಸ್ಥೈರ್ಯ ಉಳಿಸಿಕೊಂಡಿರಲು ಇ.ಎಂ.ಎಸ್. ಅವರಿಗೆ ಸಾಧ್ಯವಾದದ್ದು ಅವರ ದಾರ್ಶನಿಕ ಶ್ರದ್ಧೆಯಿಂದಾಗಿ, ಜನತೆಯೊಡನೆ ಏಕೀಭವಿಸಿಕೊಂಡಿದ್ದುದರ ಪರಿಣಾಮದಿಂದಾಗಿ. ಜೂನ್ 1909ರಲ್ಲಿ ಜನ್ಮತಾಳಿ ತಮ್ಮ ಮೂವತ್ತನೆಯ ವಯಸ್ಸಿನಲ್ಲಿ ಮೊದಲ ಬಾರಿಗೆ ಮದ್ರಾಸ್ ಶಾಸನ ಸಭೆಗೆ ಚುನಾಯಿತರಾದ ಇ.ಎಂ.ಎಸ್. ಸಾರ್ವಜನಿಕ ಜೀವನವನ್ನು ಪ್ರವೇಶಿಸಿದ್ದು 1923ರ ಅಂತ್ಯದಲ್ಲಿ; ಅದೂ ಸಂಪ್ರದಾಯಸ್ಥ ನಂಬೂದಿರಿಗಳ ಸಭೆಯಲ್ಲಿ. 'ಯೋಗಕ್ಷೇಮ ಸಭಾ' ಎಂಬುದನ್ನು ಈ ಜನ ಸ್ಥಾಪಿಸಿಕೊಂಡಿದ್ದರು. ತಮ್ಮ 'ರಕ್ಷಣೆ' (ಅಂದರೆ, ಅಂತಸ್ತು, ಜೀವನ ಸೌಲಭ್ಯ, ಇತ್ಯಾದಿ) ಅವರ ಉದ್ದೇಶವಾಗಿತ್ತು. ಹುಚ್ಚು ಡಾಂಭಿಕತೆಯ ವಿರೋಧಕ್ಕೆ ಇದೊಂದು ಅವಕಾಶ ಯುವಕ ನಂಬೂದಿರಿಪಾದರಿಗೆ. ತಮ್ಮ ಆತ್ಮಕಥನದಲ್ಲಿ ಇದನ್ನು ಪ್ರಸ್ತಾಪಿಸುವ ಇ.ಎಂ.ಎಸ್., ಯಾವ ನಾಟಕೀಯತೆಯೂ ಇಲ್ಲದೆ ಇದೊಂದು ಸಾಮಾನ್ಯ ಪ್ರಸಂಗವಾಗಿದ್ದಿತೆಂಬಂತೆ ನಮೂದಿಸಿದ್ದಾರೆ. ಆದರೆ ನಿಜಕ್ಕೂ ಅದೊಂದು ರೋಮಾಂಚಕಾರಿ ಸನ್ನಿವೇಶ. ನೂರಾರು ಕಟ್ಟಾ ಸಂಪ್ರದಾಯಸ್ಥರ ನಡುವೆ ಎಳ್ಳಷ್ಟೂ ಅಂಜದೆ ಸಹಜವಾಗಿ ತನ್ನ ವಾದವನ್ನು ಮಂಡಿಸಿದ ಇ.ಎಂ.ಎಸ್. ಯಾರಿಗೂ ಘಾಸಿಯೇ ಆಗಲಿಲ್ಲವೇನೋ ಎಂಬಂತೆ ನಿರಾವೇಶದಿಂದ ಮಾತನಾಡಿದರು. ನೆರೆದಿದ್ದವರಿಗೆ ಅಚ್ಚರಿ: 'ಎಲಾ ಇವನ, ನಮ್ಮ ಮಧ್ಯೆ ಬಂದು ನಮ್ಮನ್ನೇ ಚುಚ್ಚುತ್ತಿದ್ದಾನಲ್ಲಾ!' ಎಂದು. ಯಾವುದೇ ಸನ್ನಿವೇಶದಲ್ಲೂ ತನ್ನ ಅಭಿಪ್ರಾಯವನ್ನು ಭಾವೋದ್ರೇಕವಿಲ್ಲದೆ, ಆದರೆ ಹರಿತವಾಗಿ, ಪ್ರತಿಪಾದಿಸುವುದು ಅಂದಿನಿಂದ ಕೂಡಿಬಂದ ಜಾಯಮಾನ ಇವರಿಗೆ. ಮುಖ ನೋಡಿ ಮಣೆ ಹಾಕುವ ಗೋಜಿಗೆ ಹೋಗದ, ಹಂಗಿಲ್ಲದ, ಸ್ವತಂತ್ರ ಬೌದ್ಧಿಕ ವ್ಯಾಪಾರ ಅವರದು. ಮುಂದೆ ಅನೇಕ ಬಾರಿ ಅವರು ಪ್ರಕರ್ಷವಾದ ಸೈದ್ಧಾಂತಿಕ ಸಂವಾದಗಳಲ್ಲಿ ಭಾಗಿಯಾದಾಗಲೂ ಇದೇ ಲಕ್ಷಣವನ್ನು ಉಳಿಸಿಕೊಂಡಿದ್ದು ಅವರ ಹಿರಿಮೆ. ಅವರು ಬರೆದ ಎಷ್ಟೋ ಸೈದ್ಧಾಂತಿಕ ಲೇಖನಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಹ ಚರ್ಚೆಗೆ ಗ್ರಾಸವಾದುವು: ಇ.ಎಂ.ಎಸ್. ಎಂದೂ ವಿಚಲಿತರಾಗಲಿಲ್ಲ. ಅವರ ಪ್ರಜ್ಞೆ, ಅಂತಃಕರಣ ಏನು ನುಡಿಯಿತೋ ಅದೇ ಅವರ ಪಟ್ಟು. ದಾಕ್ಷಿಣ್ಯ- ಗರ್ವಗಳು ಅವರನ್ನು ಮುಟ್ಟುವಂತಿರಲಿಲ್ಲ. ಅವರನ್ನು ಎಷ್ಟೇ ತೀಕ್ಷ್ಣವಾಗಿ ಟೀಕಿಸಿದರೂ ಇ.ಎಂ.ಎಸ್. ಅದರಿಂದ ವೈಯಕ್ತಿಕವಾಗಿ ಮುನಿಸಿಕೊಳ್ಳುತ್ತಿರಲಿಲ್ಲವೆಂದು ಪಕ್ಷದಲ್ಲಿ ಅವರೊಡನೆ ಕೆಲಸ ಮಾಡಿರುವವರು ಸಂಭ್ರಮದಿಂದ ನೆನೆಯುತ್ತಾರೆ.

ಭಾರತ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ 1962-63ರಲ್ಲಿ ಕೆಲಸ ನಿರ್ವಹಿಸಿದ ಇ.ಎಂ.ಎಸ್. ನಂತರ ಹದಿನಾರು ವರ್ಷಗಳ ಕಾಲ ವಿಭಜಿತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿಯಾಗಿದ್ದರು. ಅದಕ್ಕೂ ಬಹುಹಿಂದೆ ಕೇರಳದಲ್ಲಿ ಕಾಂಗ್ರೆಸ್

ಸಮಾಜವಾದಿ ಪಕ್ಷದ ಸ್ಥಾಪಕರು (1934), ಕೇರಳ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿ (1937), ಸತ್ಯಾಗ್ರಹ ಚಳವಳಿಯ ಕಾರ್ಯಕರ್ತ (1932-34) ಹೀಗೆ ಅನೇಕ ಸ್ಥಾನಗಳು ಅವರದ್ದಾಗಿತ್ತು. ಆರೇಳು ಬಾರಿ ಕಾರಾಗೃಹ ವಾಸ, ಹಲವು ವರ್ಷಗಳ ಕಾಲ ಭೂಗತ ಜೀವನ, ಎಷ್ಟೋ ವೇಳೆ ನಿರ್ಗತಿಕನಂತೆ ದಿನಗಳನ್ನು ಕಳೆಯುವ ಅನಿವಾರ್ಯತೆ, ಇವನ್ನೆಲ್ಲಾ ಇ.ಎಂ.ಎಸ್. ಅನುಭವಿಸಿ ಜೀವನವನ್ನು ಹಸನುಗೊಳಿಸಿಕೊಂಡರು. 1957ರಲ್ಲಿ ಅವರು ಕೇರಳದ ಮುಖ್ಯಮಂತ್ರಿಯಾಗಿ ಚುನಾಯಿತರಾದದ್ದನ್ನು ಸಾಮಾನ್ಯವಾಗಿ ಒಂದು ದಾಖಲೆಯೆಂದು ಪರಿಗಣಿಸುವುದುಂಟು: ಚುನಾವಣೆಯ ಪ್ರಕ್ರಿಯೆಯಲ್ಲಿ ಆಯ್ಕೆಗೊಂಡ ಮೊದಲ ಕಮ್ಯುನಿಸ್ಟ್ ಮುಖ್ಯಮಂತ್ರಿಯೆಂಬುದು ಆ ದಾಖಲೆ. ಹಾಗೆ ನೋಡಿದರೆ ಅದು ನಿಜವಲ್ಲ. ಮೂವತ್ತರ ದಶಕದಲ್ಲಿ ಸ್ಪೇನಿನ ಉತ್ತರ ಪ್ರಾಂತ್ಯವೊಂದರಲ್ಲಿ ಪ್ರಜಾಪ್ರಭುತ್ವವಾದಿ ನೆಲೆಯಲ್ಲಿ ಕಮ್ಯುನಿಸ್ಟರು ಚುನಾಯಿತರಾಗಿದ್ದರು. ಆದರೆ ಅವರಿಗೆ ಅಧಿಕಾರ ಬಿಟ್ಟುಕೊಡಲಿಲ್ಲ. ಪ್ರಜಾತಂತ್ರಕ್ಕಾಗಿ ಯುದ್ಧ ನಡೆಯಿತು. ಆಮೇಲೆ ಫ್ರಾಂಕೋ ಎಂಬ ಫ್ಯಾಸಿಸ್ಟ್ ದಮನಕಾರಿ ಅಧಿಕಾರಕ್ಕೆ ಬಂದು ನಲವತ್ತು ವರ್ಷಗಳ ಕಾಲ ಜಾಗತಿಕ ಪ್ರಜಾಪ್ರಭುತ್ವ ಪ್ರೇಮಿಗಳ ಮುದ್ದಿನ ಕೂಸಾಗಿ ಮೆರೆದ! ಇ.ಎಂ.ಎಸ್. ಅಧಿಕಾರಕ್ಕೇನೋ ಬಂದರು. ಅತ್ಯಂತ ಪರಿಣಾಮಕಾರಿ ಭೂಸುಧಾರಣೆಗಳನ್ನು ಜಾರಿಗೆ ತಂದರು, ಶಿಕ್ಷಣ ಕ್ಷೇತ್ರದಲ್ಲಿ ಆಮೂಲಾಗ್ರ ಪರಿವರ್ತನೆಗಾಗಿ ಯತ್ನಿಸಿದರು; ಆದರೆ ಸ್ಥಾಪಿತ ಹಿತಾಸಕ್ತಿಗಳು ಹಾಗೂ ಅಂಧ ಮತಧರ್ಮೀಯರು ಜೊತೆಯಾಗಿ 'ವಿಮೋಚನಾ ಸಮರ'ವನ್ನು ನಡೆಸಿ ದೆಹಲಿಯ ಕಾಂಗ್ರೆಸ್ ನಾಯಕರ ಕುತಂತ್ರಕ್ಕೆ ಕುಮ್ಮಕ್ಕು ನೀಡಿ ಇ.ಎಂ.ಎಸ್ ಸರ್ಕಾರವನ್ನು ಉರುಳಿಸಿದರು. ನಮ್ಮ ಗಣರಾಜ್ಯದಲ್ಲಿ ಕೇಂದ್ರವು ರಾಜ್ಯಗಳಲ್ಲಿ ಹೇಗೆ ದಾಂಧಲೆ ಎಬ್ಬಿಸಿ ಸಂವಿಧಾನ ಸೂತ್ರಗಳ ಛಾಯೆಯಲ್ಲಿಯೇ ಸರ್ಕಾರಗಳನ್ನು ಬುಡಮೇಲು ಮಾಡಬಹುದೆಂಬುದಕ್ಕೆ ಅದು ಮೊದಲ ನಿದರ್ಶನವಾಯಿತು. ಹಲವು ದಶಕಗಳ ಕಾಲ ಪಿ. ಕೃಷ್ಣ ಪಿಳ್ಳೈ ಮತ್ತು ದಾಮೋದರನ್ ಅಂತಹವರೊಡನೆ ರಾಜಕೀಯದಲ್ಲಿ ಭಾಗವಹಿಸಿದ್ದ ಇ.ಎಂ.ಎಸ್. ಇದರಿಂದ ನಿರ್ವಿಣ್ಣರಾಗಲಿಲ್ಲ. ತಮ್ಮ ಕ್ರಾಂತಿಕಾರಿ ಪಕ್ಷದ ಚಟುವಟಿಕೆಗಳನ್ನು ಮುಂದುವರಿಸಿದರು. ಪದೇ ಪದೇ ಅಧಿಕಾರಕ್ಕೆ ಇಲ್ಲವೆ ವಿರೋಧ ಪಕ್ಷದ ನಾಯಕತ್ವಕ್ಕೆ ಹಿಂದಿರುಗಿದರು. ಜನಸಮುದಾಯದೊಂದಿಗಿನ ಅವರ ನಿಕಟ ಸಂಬಂಧ ಯಾವಾಗಲೂ ಸುತರಾಂ ಕಡಿದುಬೀಳಲಿಲ್ಲವೆಂಬುದು ಅವರ ಕಾರ್ಯತತ್ಪರತೆಯ ಸೂಚಕವಾಗಿ ಸದಾ ಉಳಿಯುತ್ತದೆ.

ಇ.ಎಂ.ಎಸ್. ಅವರ ಜೀವನ ಕತೆಯಲ್ಲಿ ಸಾಂಪ್ರದಾಯಿಕ ಡಂಭಾಚಾರಗಳ ವಿರುದ್ಧ ಸಿಡಿದೇಳುವುದು ಆಗಾಗ್ಗೆ ನಡೆಯುತ್ತಲೇ ಇತ್ತು. ಅವರ ಗುರುಗಳೊಡನೆ ಒಮ್ಮೆ ರಾಮೇಶ್ವರಕ್ಕೆ ಯಾತ್ರೆ ಹೋದಾಗ ಅಲ್ಲಿಯ ಕಂದಾಚಾರಗಳಿಂದ ರೋಸಿಹೋಗಿ ಜುಗುಪ್ಸೆ ಹೊಂದಿದ್ದು ಅವರಿಗೆ ಮರೆಯಲಾಗದ ಕೆಟ್ಟ ಅನುಭವವಾಗಿತ್ತು. "ನನ್ನ ಜೀವನದ ಅಮೂಲ್ಯ ಭಾಗದಲ್ಲಿ ಹಲವು ವರ್ಷಗಳು ವ್ಯರ್ಥವಾದ್ದು ಸದಾ ವ್ಯಥೆಗೆ ಕಾರಣವಾಗಿದೆ. ಅದು ವೇದಪಠಣವನ್ನು ಕಲಿಯಲು ವ್ಯಯಿಸಿದ ಕಾಲ. ಯಾಂತ್ರಿಕವಾಗಿ ಏನನ್ನೋ ಉಚ್ಚರಿಸಲು ಅಷ್ಟು ಸಮಯ ಮತ್ತು ಶ್ರಮ

ದಂಡವಾಗುತ್ತದಲ್ಲ! ಹೋಗಲಿ ಎಂದರೆ, ನಮಗೆ ಕಲಿಸಿದ ವೇದಭಾಗಗಳ ಅರ್ಥವನ್ನಾದರೂ ಹೇಳಿಕೊಡಬಹುದಾಗಿತ್ತು; ಅದನ್ನೂ ಮಾಡಲಿಲ್ಲ. ಅದರ ಅರ್ಥ ತಿಳಿಯಲು ನಾನು ಉಪಕ್ರಮಿಸಿದ್ದು ಎಷ್ಟೋ ವರ್ಷಗಳ ನಂತರ,'' ಎನ್ನುತ್ತಾರೆ ಇ.ಎಂ.ಎಸ್. ಅರ್ಥವಿಲ್ಲದ ಬೌದ್ಧಿಕ ಕಸರತ್ತಿಗೆ ಎಂದೂ ಮನ್ನಣೆ ನೀಡಲಿಲ್ಲ ಈ ಪ್ರಾಯೋಗಿಕ ವಿದ್ವಾಂಸ. ಆ ಜಡ್ಡುತನದಿಂದ ಹೊರಗೆ ಬಂದು ಜೀವಂತ ಜನರ ಆಶೋತ್ತರಗಳ ಪ್ರತಿನಿಧಿಯಾಗಿ ವಿಕಾಸಹೊಂದಿದ್ದು ಅವರ ಜೀವನದ ಒಂದು ಮೈಲಿಗಲ್ಲು. "ದೇವರು - ದೆವ್ವಗಳ ರಾಜ್ಯದಿಂದ ಮನುಷ್ಯರ ಲೋಕಕ್ಕೆ ನನ್ನ ಪಯಣ ಸಾಗಿತು. ಆಗ ಕ್ರಮಿಸಿದ ಹಾದಿ ನನಗೆ ಬಹಳ ಪ್ರಮುಖವಾಗಿ ಕಂಡುಬಂತು,'' ಎನ್ನುತ್ತಾರೆ ಇ.ಎಂ.ಎಸ್.

ಮಾರ್ಕ್ಸ್‌ವಾದವನ್ನು ಅಂಗೀಕರಿಸಿದ ಇ.ಎಂ.ಎಸ್. ಯಾಂತ್ರಿಕ ಚಿಂತನಾ ಶೈಲಿಗೆ ಶರಣಾಗಲಿಲ್ಲ. ತಮ್ಮ ನಿರಂತರ ವಸ್ತುಸ್ಥಿತಿಯ ಅರ್ಥೈಸುವಿಕೆಗೆ ಈ ವೈಜ್ಞಾನಿಕ ಸಮಾಜವಾದಿ ಚಿಂತನೆಯನ್ನು ಸಾಧನವನ್ನಾಗಿ ಮಾಡಿಕೊಂಡ ಇ.ಎಂ.ಎಸ್. ಅವರ ಬುದ್ಧಿಮತ್ತೆ ಹಾಗೂ ಸ್ವಂತಿಕೆ ಅವರ ಅನೇಕ ಕೃತಿಗಳಲ್ಲಿ ಮೂಡಿಬಂದಿವೆ. ವಿಶೇಷತಃ "ಕೇರಳ- ನಿನ್ನೆ, ಇಂದು ಮತ್ತು ನಾಳೆ" ಎಂಬ ಅವರ ಕೃತಿಯನ್ನು ಗಮನಿಸಬಹುದು. ಒಬ್ಬ ಸಮಾಜ ವಿಜ್ಞಾನಿ, ಇತಿಹಾಸತಜ್ಞ ಮತ್ತು ಬದಲಾವಣೆಯ ಹರಿಕಾರ ಅಧ್ಯಯನದಲ್ಲಿ ಹೇಗೆ ತೊಡಗುತ್ತಾನೆಂಬುದಕ್ಕೆ ಈ ಕೃತಿ ಉತ್ತಮ ನಿದರ್ಶನವಾಗಿದೆ. ನಮ್ಮ ದೇಶದ ಎಲ್ಲ ರಾಜ್ಯಗಳ ಬಗೆಗೂ ಅಂತಹ ಉನ್ನತಮಟ್ಟದ ಅಧ್ಯಯನದ ಅವಶ್ಯಕತೆ ಇಂದಿಗೂ ಇನ್ನೂ ತೀರಿಲ್ಲ.

ಮಾರ್ಕ್ಸ್‌ವಾದಿ ದೃಷ್ಟಿಕೋನವೆಂದರೆ ಪ್ರತಿಮೆಗಳ ಭಂಜನವಲ್ಲವೆಂಬುದನ್ನು ಇ.ಎಂ.ಎಸ್. ತಮ್ಮೆಲ್ಲ ಕೃತಿಗಳಲ್ಲೂ ಸ್ಪಷ್ಟಪಡಿಸಿದ್ದಾರೆ. ಗಾಂಧೀಜಿಯವರ ಬಗೆಗಿನ ಅವರ ವಿಶ್ಲೇಷಣೆ, ಸ್ವಾತಂತ್ರ್ಯ ಹೋರಾಟದ ಚರಿತ್ರೆ, ಕಮ್ಯೂನಿಸಂ ಮತ್ತು ಮಾನವಿಕ ಮೌಲ್ಯಗಳು, ಸಾಹಿತ್ಯ ಹಾಗೂ ಸೈದ್ಧಾಂತಿಕ ನೆಲೆ, ಮುಂತಾದ ಅವರ ಹಲವು ಕೃತಿಗಳು ಉತ್ಕೃಷ್ಟವಾದುವೆಂದು ಸರ್ವ ಮಾನ್ಯವಾಗಿವೆ. ಎಲ್ಲೋ ಒಬ್ಬ ಅರುಂಧತಿ ರಾಯ್ ಅಪಸ್ವರದ ಉದ್ಗಾರವನ್ನೆತ್ತಿ ಇ.ಎಂ.ಎಸ್. ಅವರ ಕೌಟುಂಬಿಕ ತಾಣವು ಪಂಚತಾರಾ ಹೋಟೆಲ್ ಆಗಿದೆ, ಅಲ್ಲಿ ಮಾಜಿ ಕಮ್ಯುನಿಸ್ಟರು ಬಿಳಿತೊಗಲಿನ ಗ್ರಾಹಕ - ಅತಿಥಿಗಳಿಗೆ ಪರಿಚಾರಕರಾಗಿ ಸಂತಸದಿಂದಿದ್ದಾರೆ, ಎಂಬಿತ್ಯಾದಿ ಮಾತುಗಳನ್ನಾಡಿ ಶ್ಲಾಘನೆಯ ಮಾತುಗಳನ್ನು ಪಡೆಯಬಹುದೇನೋ, ಅಷ್ಟೇ. ಅಂತರರಾಷ್ಟ್ರೀಯ ಬೌದ್ಧಿಕ ವಲಯಗಳಿಗೆ ಅದು ಮಸಾಲೆಯಂತೆ ತೋರಬಹುದಾದರೂ, ಇ.ಎಂ.ಎಸ್. ಅವರ ನಿಜಜೀವನವು ಯಾವಾಗಲೂ ತೆರೆದ ಪುಸ್ತಕವೇ.

ಜಯಪ್ರಕಾಶ ನಾರಾಯಣರ 'ಸಂಪೂರ್ಣ ಕ್ರಾಂತಿ' ಚಳವಳಿಯಲ್ಲಿ ತೊಡಗಿದಾಗ ಪಕ್ಷದ ಬಾವುಟ ತರಕೂಡದೆಂಬ ನಿರ್ಬಂಧವಿತ್ತು. ಕಾಂಗ್ರೆಸ್‌ನ ಸರ್ವಾಧಿಕಾರಿ ದಬ್ಬಾಳಿಕೆಯನ್ನು ಎದುರಿಸುವುದು ಮುಖ್ಯವೆಂದು ತಿಳಿದ ಇ.ಎಂ.ಎಸ್. ಆಗ್ಗೆ ಒಂದು ಪತ್ರಿಕಾ ಸಂದರ್ಶನದಲ್ಲಿ

ಹೇಳಿದ್ದರು: "ಅಗತ್ಯ ಬಿದ್ದರೆ ನಾವು ಲಂಗೋಟಿಯಲ್ಲೇ ಬೇಕಾದರೂ ಹೋಗಲು ಸಿದ್ಧ." ತುರ್ತು ಪರಿಸ್ಥಿತಿಯ ನಂತರ 1982ರಲ್ಲಿ ಸಹ ಇ.ಎಂ.ಎಸ್. ಇದೇ ಸರ್ವಾಧಿಕಾರಿ ಆಡಳಿತವನ್ನು ಕಿತ್ತೊಗೆಯಲು ಮತೀಯ ಭಾರತೀಯ ಜನತಾ ಪಕ್ಷದ ಜೊತೆ ಕೈಜೋಡಿಸಲು ತಾವು ಸಿದ್ಧವೆಂದು ಹೇಳಿದ್ದುದನ್ನು ಪ್ರಸ್ತುತ ಲೇಖಕ ಪ್ರತಿಭಟಿಸಿದಾಗ ಸೈದ್ಧಾಂತಿಕ ತಿಳಿವಳಿಕೆ ನೀಡಲು ಇ.ಎಂ.ಎಸ್. ಮುಂದಾಗಿದ್ದರು. ಮತೀಯ ಶಕ್ತಿಗಳು ಉಸಿರು ಕಟ್ಟಿಸುವ ವಾತಾವರಣವನ್ನು ನಿರ್ಮಿಸುತ್ತವೆಂದು ಅವರು ಯಾವಾಗಲೂ ಎಚ್ಚರ ವಹಿಸಿ ಜಂಟಿ ಕಾರ್ಯಾಚರಣೆ, ಜನತಾ ಹೋರಾಟಗಳೇ ಅದಕ್ಕೆ ಸಿದ್ಧೌಷಧಿಯೆಂದು ಪ್ರತಿಪಾದಿಸುತ್ತಿದ್ದರು. ಚರಿತ್ರೆಯ ವಿಪರ್ಯಾಸವೆಂದರೆ ಇದೇ ಮಾರ್ಚ್ 19 ರಂದು ದೆಹಲಿಯಲ್ಲಿ ಒಂದು ಘಟನೆ ಮತ್ತು ತಿರುವನಂತಪುರದಲ್ಲಿ ಇನ್ನೊಂದು ಜರುಗಿಹೋದವು. ಮಾರ್ಚ್ 19 ರಂದು ದೆಹಲಿಯಲ್ಲಿ ಭಾರತೀಯ ಜನತಾ ಪಕ್ಷ ಕೇಂದ್ರದ ಅಧಿಕಾರ ಗದ್ದುಗೆ ಏರುತ್ತಿದ್ದಂತೆ ತಿರುವನಂತಪುರದಲ್ಲಿ ಇ.ಎಂ.ಎಸ್. ಚರಿತ್ರೆಯ ಪುಟಗಳಲ್ಲಿ ಲೀನವಾದದ್ದು ವಿಪರ್ಯಾಸ. ಮಾರ್ಕ್ಸ್‌ವಾದವನ್ನು ಅಂಗೀಕರಿಸಿ ಕ್ರಿಯಾಶೀಲರಾದ ಇ.ಎಂ.ಎಸ್. ಸ್ವಾತಂತ್ರ್ಯೋತ್ತರ ಭಾರತದ ರಾಜಕೀಯದಲ್ಲಿ ಒಂದು ಅದ್ಭುತ ಚೇತನ. ಅವರು ಬರೆದು ಮುಗಿಸದೆ ಬಿಟ್ಟ ಲೇಖನಗಳ ಸಾರಾಂಶವು ಮಾರ್ಚ್ 19ರ ಹಿನ್ನೆಲೆ, ಪರಿಣಾಮ ಮತ್ತು ಕರ್ತವ್ಯಗಳನ್ನು ಕುರಿತಾದುದಾಗಿದ್ದವು.

1973ರಲ್ಲಿ ಇ.ಎಂ.ಎಸ್. ಭಾರತೀಯ ದರ್ಶನಗಳ ಬಗ್ಗೆ ಮೈಸೂರಿನ ಪುರಭವನದಲ್ಲಿ ಉಪನ್ಯಾಸವೊಂದನ್ನು ನೀಡುತ್ತಾ ಶಂಕರಾಚಾರ್ಯರನ್ನು ಕಟುವಾಗಿ ಟೀಕಿಸಿದರು. ಪ್ರಾಧ್ಯಾಪಕರೊಬ್ಬರು ಕೋಪಗೊಂಡು ಸಭಾತ್ಯಾಗ ಮಾಡಿದರು ಕೂಡ. ಆದರೆ ಶಾಂತಚಿತ್ತರಾಗಿಯೇ ಇ.ಎಂ.ಎಸ್. ತಮ್ಮ ಅಭಿಪ್ರಾಯದ ಸಮರ್ಥನೆಗೆ ಶಂಕರರ ಅನೇಕ ವಾಕ್ಯಗಳನ್ನುದ್ಧರಿಸಿ ಯಾರೂ ಖಿನ್ನರಾಗಬಾರದೆಂದು ವಿನಂತಿಸಿಕೊಂಡರು. ಈಚೆಗೆ ಒಂದು ಪಾಕ್ಷಿಕದಲ್ಲಿ ಅದೇ ಅಭಿಪ್ರಾಯ ವ್ಯಕ್ತಪಡಿಸಿದಾಗ ಓದುಗರು ತೀವ್ರವಾಗಿ ಇ.ಎಂ.ಎಸ್. ಅವರನ್ನು ಟೀಕಿಸಿದರೆ ಅವರು ಖ್ಯಾತ ವಿಜ್ಞಾನಿ ಪ್ರಫುಲ್ಲ ಚಂದ್ರ ರೇ ಅವರ ಕೆಲವು ವಾಕ್ಯಗಳನ್ನು ಮುಂದುಮಾಡಿ, ಪರಾಮರ್ಶೆ ಮಾಡಿಕೊಳ್ಳಬೇಕೆಂದು ಅದೇ ಓದುಗರನ್ನು ಕೇಳಿಕೊಂಡರು. ವ್ಯಗ್ರಸ್ವಭಾವ ಅವರದಲ್ಲವೆಂಬುದಕ್ಕೆ ಇವು ಚಿಕ್ಕ ಉದಾಹರಣೆಗಳಷ್ಟೆ.

ಅದೇ 1973ರಲ್ಲಿ ಮದ್ರಾಸಿನಲ್ಲೊಂದು ರಾಷ್ಟ್ರೀಯ ಸಮಾವೇಶವಿತ್ತು. ಸಾಂಸ್ಕೃತಿಕ ಕ್ಷೇತ್ರದ ಕಾರ್ಯಾಚರಣೆಯ ಬಗ್ಗೆ ಒಂದು ಗೋಷ್ಠಿಯಲ್ಲಿ ಇ.ಎಂ.ಎಸ್. ಮಾತನಾಡಿದರು. ಆಮೇಲೆ ಚರ್ಚೆಯಲ್ಲಿ ಕೆಲವರು "ಕ್ರಾಂತಿಯ ನಂತರ ಹೀಗೆ ಮಾಡಬೇಕು, ಹಾಗೆ ಮಾಡಬೇಕು" ಎಂದು ಗಂಭೀರವಾಗಿ ಏನೇನೋ ಹೇಳಹೊರಟರು. ಆಗ ಇ.ಎಂ.ಎಸ್. ನುಡಿದರು: "ನೋಡಿ, ಕ್ರಾಂತಿಯ ನಂತರ ಏನು ಮಾಡಬೇಕೋ ಅದನ್ನು ಆಗಿನವರು ತೀರ್ಮಾನಿಸಿಕೊಳ್ಳುತ್ತಾರೆ. ಈಗ ನಾವು, ನೀವು ಏನು ಮಾಡಬೇಕೆಂಬುದನ್ನು ಗಮನಿಸೋಣವೆ?" ಭವಿಷ್ಯತ್ತಿನ ಕನಸಿನಲ್ಲಿ ವರ್ತಮಾನದ ಸವಾಲುಗಳನ್ನು ಮರೆಯಬಾರದೆಂಬುದು ಅವರ ಸೂಚನೆಯಾಗಿತ್ತು.

ಸಮಾಜದಲ್ಲಿ ಗುಣಾತ್ಮಕ ಪರಿವರ್ತನೆಯ ನಂತರ ಹೊಸ ದ್ವಂದ್ವಗಳು ಹೇಗೆ ಉದ್ಭವಿಸುತ್ತವೋ ಅದನ್ನು ಈಗಲೇ ತೀರ್ಮಾನಿಸಲು ನಾವು ಯಾರು? ಈಗಿನದರೊಡನೆ ರಾಜಿ ಮಾಡಿಕೊಂಡು ನಾಳಿನ ಕನಸು ಕಾಣುವುದರಲ್ಲಿ ಅರ್ಥವೇನಿದೆ?

ನಮ್ಮ ಸ್ವಾತಂತ್ರ್ಯೋತ್ತರ ರಾಜಕೀಯದಲ್ಲಿ ಅತ್ಯಂತ ಸುಸಂಸ್ಕೃತ ಮೇಧಾವಿ ಇ.ಎಂ.ಎಸ್. ಪತ್ರಕರ್ತರು ಅವರನ್ನೊಮ್ಮೆ ಕೇಳಿದರು: "ನೀವು ಯಾವಾಗಲೂ ಉಗ್ಗುತ್ತೀರಾ?" ಉತ್ತರ: "ಇಲ್ಲ, ಇಲ್ಲ: ಮಾತನಾಡುವಾಗ ಮಾತ್ರ." ಅಂದರೆ, ಕಾರ್ಯಪ್ರವೃತ್ತರಾದಾಗ ಯಾವ ಪ್ರತಿಬಂಧಕಗಳೂ ಅವರಿಗೆ ಅಡ್ಡಿಯಾಗಿ ತೋರುತ್ತಿರಲಿಲ್ಲ. ಅಂತಹ ಉನ್ನತ ಆದರ್ಶಗಳ ಸಾಂದ್ರ ಕ್ರಿಯಾವಂತನನ್ನು ಕೊಟ್ಟಿದ್ದು ಭಾರತದ ಕಮ್ಯುನಿಸ್ಟ್ ಚಳವಳಿಯ ಒಂದು ಹೆಮ್ಮೆಯ ಗಳಿಕೆ. "ಸುಸಂಸ್ಕೃತರೇ, ನೀವು ಯಾರ ಕಡೆಗಿದ್ದೀರಿ?" ಎಂಬ ಪ್ರಶ್ನೆ ಬಹಳ ಹಳೆಯದು. ಇ.ಎಂ.ಎಸ್. ಅವರ ಉತ್ತರವೂ ಅಷ್ಟೇ ಹಳೆಯದು. ಅವರು ಜನರೊಟ್ಟಿಗಿದ್ದರು. ದೌರ್ಜನ್ಯಕ್ಕೆ ಗುರಿಯಾದವರೊಡನಿದ್ದರು. ಮಾನವತೆಯಲ್ಲಿ ಒಲವಿದ್ದವರ ಕಡೆಗಿದ್ದರು. ವಯಸ್ಸಿನಲ್ಲಿ ಇವರಿಗಿಂತ ಹಿರಿಯರಾದ ಎ.ಕೆ. ಗೋಪಾಲನ್ ಹಲವು ಬಾರಿ ಇ.ಎಂ.ಎಸ್. ಅವರ ಮಾರ್ಗದರ್ಶನದಲ್ಲಿ ತಾವು ಬೆಳೆದಿದ್ದೆಂದು ಹರ್ಷದಿಂದ ಹೇಳಿದ್ದಾರೆ. ತಮ್ಮ ಜೀವನದ ಕಥೆಯ ಪ್ರಸ್ತಾವನೆಯಲ್ಲಿ ಎ.ಕೆ.ಜಿ. ಹೇಳುತ್ತಾರೆ: "ದೀರ್ಘಕಾಲದ ರಾಜಕೀಯ ಜೀವನದಲ್ಲಿ ನಾನು ಮಾಡಿದ್ದೆಲ್ಲವೂ ಸರಿಯೆಂಬ ಅಹಂಕಾರ ನನಗಿಲ್ಲ. ತಪ್ಪುಗಳು ಖಂಡಿತವಾಗಿಯೂ ಆಗಿರಬಹುದು. ಆದರೆ ನನಗೆ ಒಂದು ಸಂತೃಪ್ತಿಯಿದೆ. ತಪ್ಪೆಂದು ನನಗೆ ತಿಳಿದ ಯಾವುದೇ ದಾರಿಯನ್ನೂ ನಾನು ಕ್ರಮಿಸಿಲ್ಲ."

- ಎಷ್ಟು ಮಂದಿ ರಾಜಕಾರಣಿಗಳು ಇದನ್ನು ಅಂತಃಕರಣ ಶುದ್ಧಿಯಾಗಿ ಹೇಳಬಲ್ಲರು? ಅವರ ಪೈಕಿ ಮೊದಲಿಗರಾಗಿ ಇ.ಎಂ.ಎಸ್. ಎಂದೆಂದಿಗೂ ಶೋಭಿಸುತ್ತಾರೆ. ಆ ಪಟ್ಟಿ ಉದ್ದವಾಗುತ್ತಲೇ ಇರಲೆಂಬುದು ಅವರ ಆಶಯವಾಗಿತ್ತು. ಅವರ ಪ್ರೇರಣೆ ಮತ್ತು ನಿದರ್ಶನಗಳು ಆ ಆಶಯದ ಪೂರೈಕೆಗೆ ಇಂಬು ಕೊಡುತ್ತವೆಂಬುದು ನಿಸ್ಸಂದೇಹ.

(ಪ್ರಜಾವಾಣಿ ೨೯-೩-೧೯೯೮)

◆

Bangalore

30.12.2008

To

Sri. G. Ramakrishna. Sir,

Sir, I am herewith returning your Book "Yugadarsini" "[illegible]" after xeroxing it.

I am highly moved by your kind co-operation by sending your book for xeroxing.

I thank you very much.

Yours faithfully,

[illegible]

ಡಾ. ಜಿ. ರಾಮಕೃಷ್ಣ ಅವರು ನಮ್ಮ ನಡುವಿನ ಹಿರಿಯ ಚಿಂತಕರು. ಅವರು ಸಾಹಿತ್ಯ, ಸಂಸ್ಕೃತಿ, ರಾಜಕಾರಣದ ಹಲವು ನೆಲೆಗಳನ್ನು ಕುರಿತು ಕಳೆದ ನಾಲ್ಕು ದಶಕಗಳಿಗೂ ಮೀರಿ ಚಿಂತಿಸುತ್ತಿದ್ದಾರೆ. ಸಾತ್ವಿಕ ಪ್ರತಿಭಟನೆ ಮತ್ತು ಪ್ರಬುದ್ಧ ವೈಚಾರಿಕತೆಯು ಅವರ ಬರೆಹಗಳ ಮೂಲನಾಡಿಯಾಗಿರುವುದು ಸಂಸ್ಕೃತಿಯ ಸೌಭಾಗ್ಯವೇ ಸರಿ. 'ಕುವೆಂಪು ನೂರರ ನಮನ' ಮಾಲಿಕೆಕ್ಕಾಗಿ ಅಂದು ಅರ್ಥಪೂರ್ಣ ಕಟ್ಟೊಂದನ್ನು ನೀಡಿದ್ದಾರೆ. ಇಲ್ಲಿಯ ಬರೆಹಗಳು ಧರ್ಮ, ಮತಧರ್ಮ ರಾಜಕೀಯ ಅಪರಾಧೀಕರಣಗಳ ಬಗೆಗೆ ಆಳವಾದ ಚಿಂತನಾತ್ಮಕ ಬರೆಹಗಳನ್ನು ಒಳಗೊಂಡಿವೆ. ಇವು ಕೇವಲ ಬರೆಹಗಳಲ್ಲ. ಈ ಬರೆಹಗಳ ಹಿಂದೆ ಆಳವಾದ ತಾತ್ವಿಕತೆ ನೆಲೆಯೂರಿದೆ.'.

ಶ್ರೀ ರಾಮಲಿಂಗಪ್ಪ ಟಿ. ಬೇಗೂರು

ಸಿವಿಜಿ ಪಬ್ಲಿಕೇಷನ್ಸ್

ISBN 81-89344-80-3 Rs. 100